# ಅಧ್ಯಾಪಕ ಪತ್ಯ

# TEACHER TEXT

## ಕನ್ನಡ – ಭಾಷೆ

## KANNADA - LANGUAGE

### ತರಗತಿ

### XII

ಕೇರಳ ಸರಕಾರ
ಸಾರ್ವಜನಿಕ ಶಿಕ್ಷಣ ಇಲಾಖೆ

ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಸಮಿತಿ (SCERT) ಕೇರಳ
2015

***Prepared by* :**

**State Council of Educational Research and Training (SCERT)**

Poojappura, Thiruvananthapuram 695 012, Kerala

*Website* : www.scertkerala.gov.in
*E-mail* : scertkerala@gmail.com
Phone : 0471-2341883, Fax : 0471-2341869

Typesetting and Layout : SCERT
Printed at : SCERT, Kerala

© Department of Education, Government of Kerala

# ಮುನ್ನುಡಿ

ಆತ್ಮೀಯ ಅಧ್ಯಾಪಕರೇ,

ಭಾಷಾ ತರಗತಿಯಲ್ಲಿ ಮಕ್ಕಳು ಬಹಳಷ್ಟು ಸಾಮರ್ಥ್ಯಗಳನ್ನು ಗಳಿಸಬೇಕಲ್ಲವೇ?
ಈ ಉದ್ದೇಶಕ್ಕಾಗಿಯೇ ಪಠ್ಯಪುಸ್ತಕ ಮತ್ತು ಅಧ್ಯಾಪಕ ಪಠ್ಯ ತಯಾರಿಸಲಾಗಿದೆ. ಪಠ್ಯಪುಸ್ತಕದಲ್ಲಿ ಸೂಚಿಸಿದಂತೆ ಭಾಷಾ ಸಾಮರ್ಥ್ಯಗಳನ್ನು ಬೆಳೆಸಿಕೊಳ್ಳಲು ಅನುಕೂಲವಾಗುವಂತೆ ಕನ್ನಡ ಪಠ್ಯಪುಸ್ತಕವನ್ನು ರಚಿಸಲಾಗಿದೆ. ಪಠ್ಯಪುಸ್ತಕದಲ್ಲಿ ಹೇಳಿದ ಕಲಿಕಾ ಸಾಧನೆಗಳನ್ನು ಪೂರೈಸಲು ಸಾಧ್ಯವಾಗುವಂತೆ ಮಕ್ಕಳಿಗೆ ನೆರವಾಗುವುದು ಅಧ್ಯಾಪಕರ ಜವಾಬ್ದಾರಿಯಲ್ಲವೇ? ಈ ನಿಟ್ಟಿನಲ್ಲಿ ಭಾಷಾ ಕಲಿಕೆಗೆ ಸಹಾಯವಾಗುವಂತೆ ಪ್ರಕೃತ ಕೈಪಿಡಿಯನ್ನು ರೂಪಿಸಲಾಗಿದೆ. ಇದರಲ್ಲಿ ನೀಡಿರುವ ನಿರ್ದೇಶಗಳು, ಸೂಚನೆಗಳು, ಚಟುವಟಿಕೆಗಳು, ಉದಾಹರಣೆಗಳು, ಮಾದರಿ ಎಲ್ಲವೂ ಅಧ್ಯಾಪಕರ ಸಹಾಯಕ್ಕಾಗಿ ರೂಪುಗೊಂಡವು ಎಂಬುದನ್ನು ಪರಿಗಣಿಸಿ ಬೋಧನ ಪ್ರಕ್ರಿಯೆಯನ್ನು ಫಲಪ್ರದವಾಗಿಸಲು ನೀವೆಲ್ಲರೂ ಶ್ರಮಿಸುವಿರೆಂದು ಭಾವಿಸುತ್ತೇನೆ.
ನಿಮ್ಮ ಅಧ್ಯಾಪನ ಪ್ರಕ್ರಿಯೆಯಲ್ಲಿ ಮಕ್ಕಳು ಪರಿಪೂರ್ಣ ಜ್ಞಾನ ಸಂಪನ್ನರಾಗಲು ಈ ಕೈಪಿಡಿಯು ಸಹಕಾರಿಯಾಗಲಿ.

ಶುಭಾಶಯಗಳೊಂದಿಗೆ,

**ಡಾ। ಎಸ್. ರವೀಂದ್ರನ್ ನಾಯರ್**
ನಿರ್ದೇಶಕರು
ಎಸ್.ಸಿ.ಇ.ಆರ್.ಟಿ., ಕೇರಳ

# TEACHER TEXT DEVELOPMENT TEAM

## KANNADA - LANGUAGE
## STANDARD XII

**Participants**

Baby S., HSST (Jr.) Kannada, GHSS Kasaragod

Narayana Rao, HSST (Jr.) Kannada, GHSS Paivalike Nagar

Preetham A.K., HSST (Jr.) Kannada, BARHSS Bovikana

Pushpalatha , HSST (Jr.) Kannada, BEMHSS Kasaragod

Ravikumar K., HSST (Jr.) Kannada, GHSS Kumbla

Sathish Kumar K, HSST (Jr.) Kannada, GHSS Mangalpady

Shahul Hameed K., HSST (Jr.) Kannada, GVHSS Mulleria

Sharmila K, HSST (Jr.) Kannada, GHSS Padre

**Experts**

Dr. Srikrishna Bhat, Rtd. Professor, Govt. College, Kasaragod.

Dr. K. Kamalaksha, Rtd. Lecturer, Kannada Dept., Govt. College, Kasaragod.

**Academic Co-ordinator**

Dr. Faisal Mavulladathil, Research Officer, SCERT, Thiruvananthapuram

---

ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಸಮಿತಿ (SCERT) ಕೇರಳ
ವಿದ್ಯಾಭವನ, ಪೂಜಪ್ಪುರ, ತಿರುವನಂತಪುರಂ 695012

# ಅನುಕ್ರಮಣಿಕೆ


ಸಾಮಾನ್ಯ ಸಮೀಪನ 7–31

ಮೌಲ್ಯನಿರ್ಣಯ ಸಮೀಪನ 42–62

1. **ಸಿರಿಬೆಳಸು** 63–94
   - ಊರ್ಮಿಳಾ – ಕಯ್ಯಾರ ಕಿಞ್ಞಣ್ಣ ರೈ
   - ಕೆರೆಯ ದಡದಲ್ಲಿ – ಕೆ.ಪಿ. ಪೂರ್ಣಚಂದ್ರ ತೇಜಸ್ವಿ
   - ಅವರವರ ದಾರಿ – ಜಿ.ಎಸ್. ಶಿವರುದ್ರಪ್ಪ
   - ನೆರೆ – ತಗಳಿ ಶಿವಶಂಕರ ಪಿಳ್ಳೆ
2. **ನವಪಲ್ಲವ** 95–118
   - ಅಪ್ಪನೂ ಒಲೆಯುರಿಯೂ – ರೂಪ ಹಾಸನ
   - ತಾಯಿ – ಡಾ. ಯು.ಆರ್. ಅನಂತಮೂರ್ತಿ
   - ಸಾವಿರಾರು ನದಿಗಳು – ಡಾ. ಸಿದ್ದಲಿಂಗಯ್ಯ
   - ನೀರವ ರಾತ್ರಿಯ ಮಾಯಾಲೋಕ – ನೇಮಿಚಂದ್ರ
3. **ಸಂಸ್ಕೃತಿ ಸುಮ** 119–140
   - ಜಾಲಿಯ ಮರದಂತೆ – ಪುರಂದರದಾಸರು
   - ನಡೆವುದೊಂದೇ ಭೂಮಿ – ಸರ್ವಜ್ಞ
   - ಸುಬ್ಬಣ್ಣ – ಡಾ. ಮಾಸ್ತಿ ವೆಂಕಟೇಶ ಅಯ್ಯಂಗಾರ್
4. **ಬೆಳ್ಳಿತೆರೆ** 141–162
   - ಬಣ್ಣದ ಲೋಕ – ಸಂಗ್ರಹ
   - ಆಗದು ಎಂದು... – ಆರ್.ಎನ್. ಜಯಗೋಪಾಲ್
   - ಬೂತಯ್ಯನ ಮಗ ಅಯ್ಯು – ಡಿ.ಎನ್. ಸುರೇಶ್
5. **ನುಡಿಸಿರಿ** 163–206
   - ನಾಡಸಿರಿ – ನಂಜುಂಡ ಕವಿ
   - ಸಕ್ಕರೆಗುಪ್ಪಂ ಸರಿಮಾಳ್ಪರೇ – ಪುಲಿಗೆರೆ ಸೋಮನಾಥ
   - ತರುಣ ಸೂರ್ಯಂ ಕತ್ತಲೆಯನೆ ಪೊಕ್ಕಂತಾಯ್ತು – ರಾಘವಾಂಕ
   - ಗುರುವಚನಮಲಂಘನೀಯಂ – ರನ್ನ

# ಪಠ್ಯಕ್ರಮ

## ಕಾವ್ಯಭಾಗ

| | | |
|---|---|---|
| ಹಳೆಗನ್ನಡ ಕಾಲದ ಕಾವ್ಯದಿಂದ ಆಯ್ದಭಾಗ | – | 1 |
| ನಡುಗನ್ನಡ ಕಾಲದ ಕಾವ್ಯಗಳಿಂದ ಆಯ್ದಭಾಗ | – | 3 |
| ಕೀರ್ತನೆ | – | 1 |
| ಸರ್ವಜ್ಞನ ತ್ರಿಪದಿಗಳು | – | 1 |
| ಆಧುನಿಕ ಕವಿತೆಗಳು | – | 5 |

## ಗದ್ಯಭಾಗ

| | | |
|---|---|---|
| ಕಥೆ | – | 2 |
| ಕಾದಂಬರಿಯ ಭಾಗ | – | 1 |
| ವೈಜ್ಞಾನಿಕ ಲೇಖನ | – | 1 |
| ಪರಿಸರ ಲೇಖನ | – | 1 |
| ಪ್ರಬಂಧಗಳು | – | 2 |

# ಕೇರಳ ಶಾಲಾ ಪಠ್ಯಕ್ರಮ 2013
# ಸಾಮಾನ್ಯ ಸಮೀಪನಗಳು

## 1.1 ಪೀಠಿಕೆ

ಸಾಮಾಜಿಕ ಬದುಕಿನ ಗುಣಮಟ್ಟದ ಹಿನ್ನೆಲೆಯಲ್ಲಿ ಹೇಳುವುದಾದರೆ ಕೇರಳವು ದೇಶಕ್ಕೆ ಮಾದರಿಯಾಗಿದೆ. ಸಾರ್ವಜನಿಕ ಶಿಕ್ಷಣದ ವ್ಯಾಪಕತೆ, ಸಾರ್ವಜನಿಕ ಆರೋಗ್ಯದ ಗುಣಮಟ್ಟ ಎಂಬಿವುಗಳೇ ಕೇರಳದ ಈ ಸಾಧನೆಗೆ ಪ್ರಧಾನ ಕಾರಣಗಳಾಗಿವೆ. ಸಮಾಜದ ಎಲ್ಲ ವರ್ಗಗಳ ಮಕ್ಕಳನ್ನು ಶಾಲೆಗೆ ಕಳುಹಿಸಲು ಸಾಧ್ಯವಾಗಿದ್ದರೂ, ಎಲ್ಲರಿಗೂ ಗುಣಮಟ್ಟದ ಶಿಕ್ಷಣ ಎಂಬುದು ಕೇರಳದ ಶಿಕ್ಷಣ ಕ್ಷೇತ್ರವು ಇದಿರಿಸುವ ಅತಿ ದೊಡ್ಡ ಸವಾಲಾಗಿದೆ. 1986 ರ ರಾಷ್ಟ್ರೀಯ ಶಿಕ್ಷಣ ನೀತಿಯ ಅಂಗವಾಗಿ ಶೈಕ್ಷಣಿಕ ಗುಣಮಟ್ಟವನ್ನು ಕಾಪಾಡಿಕೊಳ್ಳಲು ಮೂಲಭೂತ ಸೌಕರ್ಯಗಳ ಅಭಿವೃದ್ಧಿ ಹಾಗೂ ಅಧ್ಯಾಪಕ ತರಬೇತಿ ಕಾರ್ಯಕ್ರಮಗಳನ್ನು ಆಯೋಜಿಸಲಾಗಿತ್ತು. ಇದರೊಂದಿಗೆ ಪಠ್ಯಕ್ರಮವನ್ನು ಶಿಶುಕೇಂದ್ರಿತ, ಚಟುವಟಿಕೆ ಆಧಾರಿತ, ಪ್ರಕ್ರಿಯಾತ್ಮಕ ಹಾಗೂ ಕಾಲೋಚಿತವಾಗಿ ಪರಿಷ್ಕರಿಸುವ ಪ್ರಯತ್ನಗಳಾಗಿವೆ. ಇದರ ಪರಿಣಾಮವಾಗಿ ತರಗತಿಗಳಲ್ಲಿ ಜ್ಞಾನ ನಿರ್ಮಾಣ ಪ್ರಕ್ರಿಯೆಗಳು ನಡೆಯಬೇಕು ಎಂಬ ತಿಳುವಳಿಕೆ ಮೂಡಿತು. ಇದರಂತೆ ಮಗುವನ್ನು ಶೈಕ್ಷಣಿಕ ಪ್ರಕ್ರಿಯೆಗಳ ಕೇಂದ್ರಸ್ಥಾನದಲ್ಲಿ ಇರಿಸುವ ಚಟುವಟಿಕೆಗಳಿಗೆ ನಾಂದಿ ಹಾಡಲು ನಮಗೆ ಸಾಧ್ಯವಾಗಬೇಕು.

ಬದುಕಿನ ಎಲ್ಲಾ ಕ್ಷೇತ್ರಗಳೂ ಪ್ರತಿ ಕ್ಷಣ ಬದಲಾಗುತ್ತಿವೆ. ಅಧ್ಯಾಪನ ಶಾಸ್ತ್ರ, ಅಧ್ಯಯನ ಮನಶ್ಶಾಸ್ತ್ರ ಮೊದಲಾದ ವಿಷಯಗಳ ಹೊಸ ಸಂಶೋಧನೆಗಳು ಮತ್ತು ಪ್ರಾಯೋಗಿಕವಾದ ಅನುಭವಗಳು ಉತ್ತಮ ರೀತಿಯ ಕಲಿಕೋಪಕರಣಗಳ ನಿರ್ಮಾಣ ಹಾಗೂ ಕಲಿಕಾನುಭವಗಳ ವಿನಿಮಯ ಮತ್ತು ಮೌಲ್ಯಮಾಪನವನ್ನು ನಡೆಸಲು ನಮ್ಮನ್ನು ಪ್ರೇರೇಪಿಸಿವೆ. ಎಲ್ಲಾ ವರ್ಗಗಳ ಮಕ್ಕಳ ಕಲಿಕೆಯ ಪ್ರಗತಿಯನ್ನು ನಾವು ಗುರಿಯಾಗಿರಿಸಿಕೊಂಡಿದ್ದೇವೆ.

“ವಿಭಿನ್ನವಾದ ಸಾಮಾಜಿಕ, ಆರ್ಥಿಕ ಹಿನ್ನೆಲೆಯುಳ್ಳ, ವಿಭಿನ್ನ ದೈಹಿಕ, ಮಾನಸಿಕ, ಬೌದ್ಧಿಕ ಸಾಮರ್ಥ್ಯಗಳಿರುವ ಎಲ್ಲ ಮಕ್ಕಳಿಗೆ ಕಲಿಯಲು ಹಾಗೂ ಶಾಲಾ ಕಲಿಕೆಯಲ್ಲಿ ಉತ್ತೀರ್ಣರಾಗಲು ಸಾಧ್ಯವೆಂದು ದೃಢಪಡಿಸಬೇಕು. ಲಿಂಗ, ಜಾತಿ, ಭಾಷೆ, ಸಂಸ್ಕೃತಿ, ಧರ್ಮ, ವಿಭಿನ್ನ ಸಾಮರ್ಥ್ಯಗಳೇ ಮೊದಲಾದ ಕಾರಣಗಳಿಂದ ಉಂಟಾಗುವ ಸಮಸ್ಯೆಗಳನ್ನು ಮೀರಲು ಕೇವಲ ಯೋಜನೆಗಳು ಮತ್ತು ಶಿಕ್ಷಣ ನೀತಿಗಳು ಮಾತ್ರ ಸಾಲವು. ಎಳೆಯ ಪ್ರಾಯದಿಂದಲೇ ಯೋಗ್ಯವಾದ ಕಲಿಕಾ ಗುರಿಗಳನ್ನೂ, ಅಧ್ಯಾಪನ ರೀತಿಗಳನ್ನೂ ಆರಿಸಿ ರೂಪಿಸಬೇಕಾಗಿದೆ.” (**NCF** 2005, ಪು.27)

- ವಿಭಿನ್ನ ಸಾಮಾಜಿಕ ಮತ್ತು ಆರ್ಥಿಕ ಹಿನ್ನೆಲೆಯುಳ್ಳವರು.
- ವಿಭಿನ್ನ ದೈಹಿಕ, ಮಾನಸಿಕ ಮತ್ತು ಬೌದ್ಧಿಕ ಸಾಮರ್ಥ್ಯವುಳ್ಳವರು.

ಹೀಗೆ ಎಲ್ಲಾ ವರ್ಗಗಳಿಗೆ ಸೇರಿದವರಿಗೆ ಕಲಿಕಾ ಸಾಧನೆಯನ್ನು ಗಳಿಸಲು ಶಿಕ್ಷಣ ಪ್ರಕ್ರಿಯೆಯ ಎಲ್ಲಾ ವಲಯಗಳಲ್ಲಿ ಸೂಕ್ಷ್ಮವೂ ಶಾಸ್ತ್ರೀಯವೂ ಆಗಿರುವ ಧೋರಣೆಗಳನ್ನು ಸ್ವೀಕರಿಸಬೇಕಾದುದು ನಮ್ಮ ದೃಷ್ಟಿಕೋನವಾಗಬೇಕು ಎಂದು ಎನ್.ಸಿ.ಎಫ್. ನಿರ್ದೇಶಿಸುತ್ತದೆ. ಕಾಲೋಚಿತವಾಗಿ ಪಠ್ಯಕ್ರಮವನ್ನು ನವೀಕರಿಸುವುದು ಮತ್ತು ಈ ವ್ಯವಸ್ಥೆಯನ್ನು ಕ್ರಿಯಾತ್ಮಕವಾಗಿಸುವುದರಿಂದ ಮಾತ್ರ ಈ ಗುರಿಯನ್ನು ಸಾಧಿಸ ಬಹುದು. ಈ ದೃಷ್ಟಿಕೋನದ ಹಿನ್ನೆಲೆಯಲ್ಲಿ ಈಗ ಪಠ್ಯಕ್ರಮವನ್ನು ಪರಿಷ್ಕರಿಸಲಾಗುತ್ತಿದೆ. ಶೈಕ್ಷಣಿಕ ಪ್ರಕ್ರಿಯೆಗಳಲ್ಲಿ ನಿರಂತರವಾಗಿ ತೊಡಗಿಸಿಕೊಂಡಿರುವ ಎಲ್ಲರ ಅನುಭವ, ಸಂಶೋಧನೆ ಹಾಗೂ ಅಧ್ಯಯನ ಶೋಧಗಳನ್ನು ಬಳಸಿಕೊಂಡು ಇದನ್ನು ಮಾಡಲಾಗುವುದು. ಸಮರ್ಪಕತೆಯಿಂದ ಮತ್ತಷ್ಟು ಸಮರ್ಪಕತೆಗೆ ಎಂಬ ವೈಜ್ಞಾನಿಕ ಸಮೀಪನವನ್ನು ಇಲ್ಲಿ ಸ್ವೀಕರಿಸಲಾಗುವುದು.

## 1.2 ಪಠ್ಯಕ್ರಮ ಪರಿಷ್ಕರಣೆಯ ಅಗತ್ಯ

ಕಳೆದ ಐದು ವರ್ಷಗಳಲ್ಲಿ ಶಿಕ್ಷಣ ಕ್ಷೇತ್ರದಲ್ಲಿ ಅನೇಕ ಹೊಸ ಆಶಯಗಳು ಮೂಡಿಬಂದಿವೆ. ಭಾರತದಲ್ಲಿ 2009 ರಲ್ಲಿ ಜ್ಯಾರಿಗೆ ಬಂದ ವಿದ್ಯಾಭ್ಯಾಸ ಹಕ್ಕು ಕಾಯಿದೆಯಿಂದ ಶಿಕ್ಷಣವು ಮಕ್ಕಳ ಹಕ್ಕಾಗಿ ಬದಲಾಗಿದೆ. ಹಕ್ಕು ಆಧಾರಿತ ವಿದ್ಯಾಲಯ (Right based Educational Institution) ಎಂಬ ಗುರಿಯನ್ನು ಸಾಧಿಸಲು ನಮ್ಮ ಪಠ್ಯಕ್ರಮವನ್ನು ಅಂತಾರಾಷ್ಟ್ರೀಯ ಗುಣಮಟ್ಟಕ್ಕೆ ಏರಿಸಬೇಕಾಗಿದೆ. ಅಂತಾರಾಷ್ಟ್ರೀಯ ಗುಣಮಟ್ಟ ಎಂಬುದು ಯಾವುದೇ ಒಂದು ದೇಶದ ಗುಣಮಟ್ಟವಲ್ಲ. ಇದು ಒಂದು ಪ್ರತ್ಯೇಕ ಹಂತವನ್ನು ದಾಟುವ ಮಗು ಜಗತ್ತಿನ ಯಾವುದೇ ಪ್ರದೇಶದಲ್ಲಿದ್ದರೂ ಆರ್ಜಿಸಬೇಕಾದ ಜ್ಞಾನ ಮತ್ತು ಅನುಭವಗಳ ಒಟ್ಟು ಮೊತ್ತವಾಗಿದೆ. ಜಾಗತಿಕ ಮಟ್ಟದಲ್ಲಿ ಜ್ಯಾರಿಗೊಂಡಿರುವ ಉತ್ತಮ ಅಧ್ಯಯನ, ಅಧ್ಯಾಪನ ಮಾದರಿಗಳು ಕೇರಳದ ಮಕ್ಕಳಿಗೂ ಸಿಗಬೇಕಾದುದು ಅಗತ್ಯ.

# ಹೈಯರ್ ಸೆಕೆಂಡರಿ ಪಠ್ಯಕ್ರಮ –2013

## ಸಾಮಾನ್ಯ ಸಮೀಪನಗಳು

ನವೋತ್ಥಾನದ ಹಿನ್ನೆಲೆ, ಉಚಿತ ಹಾಗೂ ಸಾರ್ವತ್ರಿಕವಾದ ಸಾರ್ವಜನಿಕ ಶಿಕ್ಷಣದ ಮೂಲಕ ಕೇರಳವು ಜ್ಞಾನ ಸಂಪನ್ನ ಸಮಾಜವಾಗಿ ಬದಲಾಯಿತು. ರಚನಾತ್ಮಕ ಗುಣಮಟ್ಟದ ಶಿಕ್ಷಣವನ್ನು ಪಾಲ್ಗೊಳ್ಳುವಿಕೆಯ ಮೂಲಕ ಖಾತರಿಗೊಳಿಸುವಿಕೆಯಲ್ಲಿ ಯಶಸ್ವಿಯಾಗಿದ್ದೇವೆ. ಈ ರೀತಿಯ ಪಾಲ್ಗೊಳ್ಳುವಿಕೆ ಕೇರಳದ ಶಿಕ್ಷಣ ಕ್ಷೇತ್ರವನ್ನು ಅಂತರಾಷ್ಟ್ರೀಯ ಮಟ್ಟದಲ್ಲಿ ಮನ್ನಣೆಗೆ ಪಾತ್ರವಾಗಿಸಿತು.

20ನೇ ಶತಮಾನದ ಮೊದಲ ದಶಕಗಳಲ್ಲೇ ಸಮಾಜದ ಎಲ್ಲ ವಿಭಾಗದ ಮಕ್ಕಳನ್ನು ವಿದ್ಯಾಲಯಗಳಿಗೆ ತಲುಪಿಸಲು ನಮ್ಮಿಂದ ಸಾಧ್ಯವಾಯಿತು. ಸಾರ್ವತ್ರಿಕ ಉಚಿತ ಶಿಕ್ಷಣನ್ನು ಒದಗಿಸಲು ಅಗತ್ಯದ ಪ್ರಯತ್ನಗಳನ್ನು ಎಲ್ಲಾ ಹಂತಗಳಲ್ಲೂ ನಡೆಸಲಾಗಿದೆ. ಸರಕಾರದ ಪಾಲ್ಗೊಳ್ಳುವಿಕೆ, ಮಿಶನರಿಗಳ ಚಟುವಟಿಕೆಗಳು, ಸಮಾಜ ಸುಧಾರಣಾ ಚಳುವಳಿಗಳು ಮೊದಲಾದವು ಸಾಮಾನ್ಯ ವಿದ್ಯಾಭ್ಯಾಸದ ಅಭಿವೃದ್ಧಿಗೆ ಕೊಡುಗೆಯನ್ನು ನೀಡಿವೆ. ಸ್ವಾತಂತ್ರ್ಯ ಲಭಿಸಿದ ಬಳಿಕ ಜ್ಯಾರಿಗೊಂಡ ಡಾ. ರಾಧಾಕೃಷ್ಣ ಕಮಿಷನ್ ವರದಿಯಿಂದ ತೊಡಗಿ 2005ರ ರಾಷ್ಟ್ರೀಯ ಪಠ್ಯಕ್ರಮದ ಚೌಕಟ್ಟಿನವರೆಗೆ ರಾಷ್ಟ್ರೀಯ ಅಧ್ಯಯನ ವರದಿಗಳು ಹಾಗೂ ಸಮೀಪನಗಳು ಕೇರಳದಲ್ಲಿ ಪಠ್ಯಕ್ರಮದ ಪರಿಷ್ಕಾರದ ಪ್ರಯತ್ನಗಳ ಮೇಲೆ ಪ್ರಭಾವ ಬೀರಿವೆ.

ಡಾ. ಲಕ್ಷ್ಮಣಸ್ವಾಮಿ ಮುದಲಿಯಾರ್ ಅಧ್ಯಕ್ಷರಾದ ಸೆಕೆಂಡರಿ ವಿದ್ಯಾಭ್ಯಾಸ ಆಯೋಗ ಸಮಿತಿ ಸೆಕೆಂಡರಿ ವಲಯದ ಪ್ರಾಧಾನ್ಯವನ್ನು ವಿಸ್ತಾರವಾಗಿ ಪ್ರತಿಪಾದಿಸಿದೆ. ಡಾ.ಡಿ.ಎಸ್. ಕೊಠಾರಿ ಅಧ್ಯಕ್ಷರಾಗಿದ್ದ ಆಯೋಗವು ಸಮರ್ಪಿಸಿದ “ವಿದ್ಯಾಭ್ಯಾಸ ಹಾಗೂ ರಾಷ್ಟ್ರೀಯ ಅಭಿವೃದ್ಧಿ” ಎಂಬ ವರದಿಯು ಪ್ರಾಥಮಿಕ ವಿದ್ಯಾಭ್ಯಾಸ ಮಟ್ಟದಿಂದ ತೊಡಗಿ ಉನ್ನತ ವಿದ್ಯಾಭ್ಯಾಸದ ಹಂತದ ವರೆಗಿನ ವಿವಿಧ ಘಟ್ಟಗಳನ್ನು ಅಧ್ಯಯನಕ್ಕೆ ಒಳಪಡಿಸಿತು. ಈ ಆಯೋಗವು 10+2+3 ಎಂಬ ರೀತಿಯನ್ನು ಪ್ರಥಮ ಬಾರಿಗೆ ಮುಂದಿಟ್ಟಿತು. 1986ರ ರಾಷ್ಟ್ರೀಯ ವಿದ್ಯಾಭ್ಯಾಸ ನೀತಿಯು ಇದನ್ನು ಅಂಗೀಕರಿಸಿತು. ಇದರ ಆಧಾರದಲ್ಲಿ ಕೇರಳದಲ್ಲಿ ಹೈಯರ್ ಸೆಕೆಂಡರಿ ವಿದ್ಯಾಭ್ಯಾಸವು ಜ್ಯಾರಿಗೊಂಡಿತು. ಅಧ್ಯಾಪಕ ಕೇಂದ್ರಿತ ರೀತಿಗಿಂತ ಭಿನ್ನವಾದ ವಿದ್ಯಾರ್ಥಿ ಕೇಂದ್ರಿತ ಹಾಗೂ ಚಟುವಟಿಕಾಧಾರಿತ ಪಠ್ಯಕ್ರಮಕ್ಕೆ 1990ರಲ್ಲಿ ನಾಂದಿ ಹಾಡಲಾಯಿತು.

# 2005ರ ರಾಷ್ಟ್ರೀಯ ಪಠ್ಯಕ್ರಮದ ಚೌಕಟ್ಟು
## (National Curriculum Framework -2005)

ಭಾರತದ ವಿದ್ಯಾಭ್ಯಾಸ ಕ್ಷೇತ್ರದಲ್ಲಿ ಅನೇಕ ಬದಲಾವಣೆಗೆ ತಳಹದಿಯನ್ನು ಹಾಕಿತು. ಇದರ ಆಧಾರದಲ್ಲಿ ವಿವಿಧ ವಿಷಯಗಳಲ್ಲಿ NCERT ಯು ಪಠ್ಯಕ್ರಮಗಳನ್ನು ಸಿದ್ಧಪಡಿಸಿತು. ಕೇರಳದಲ್ಲಿ KCF 2007ನ್ನು ರೂಪಿಸಿ ಪ್ರೌಢ ಶಾಲಾ ಹಂತದವರೆಗೆ ಪಠ್ಯಕ್ರಮದ ಪರಿಷ್ಕರಣೆಯನ್ನು ನಡೆಸಲಾಯಿತು. 2009ರ ವಿದ್ಯಾಭ್ಯಾಸ ಹಕ್ಕು ಕಾಯ್ದೆ, ಹೈಯರ್ ಸೆಕೆಂಡರಿಗೆ ಸಂಬಂಧಿಸಿದ ಪ್ರೊ. ಪಿ.ಒ.ಜೆ. ಲಬ್ಬ ಸಮಿತಿಯ ವರದಿ ಮತ್ತು ಪಠ್ಯಕ್ರಮ ಪರಿಷ್ಕರಣೆಗೆ ಸಂಬಂಧಿಸಿ ಸರಕಾರ ನಿಯೋಗಿಸಿದ ಡಾ. ಪಿ.ಕೆ. ಅಬ್ದುಲ್ ಅಝೀಜ್ ಸಮಿತಿಯ ವರದಿಗಳು ಪಠ್ಯಕ್ರಮ ಪರಿಷ್ಕರಣೆ ಅತ್ಯಗತ್ಯ ಎಂದು ಸೂಚಿಸಿದವು.

ಹೈಯರ್ ಸೆಕೆಂಡರಿಯ ಆರಂಭವು ಕೇರಳದ ವಿದ್ಯಾಭ್ಯಾಸ ಚರಿತ್ರೆಯಲ್ಲಿ ಮಹತ್ವದ ಹಂತವಾಗಿರುತ್ತದೆ. ಹಿಂದೆ ಜ್ಯಾರಿಯಲ್ಲಿದ್ದ ಪ್ರಿ.ಡಿಗ್ರಿ ವ್ಯಾಸಂಗವನ್ನು ಉನ್ನತ ಶಿಕ್ಷಣ ಇಲಾಖೆಯಿಂದ ಬೇರ್ಪಡಿಸಿ ಸಾರ್ವಜನಿಕ ಸಾರ್ವತ್ರಿಕ ವಿದ್ಯಾಭ್ಯಾಸ ಇಲಾಖೆಯ ಅಂಗವಾಗಿ ಸೇರ್ಪಡೆಗೊಳಿಸಿದುದರ ಮೂಲಕ ಹೈಯರ್ ಸೆಕೆಂಡರಿ ವಿದ್ಯಾಭ್ಯಾಸವು ಜನಪ್ರಿಯವಾಯಿತು, ವಿಸ್ತಾರವಾಯಿತು. ಎಲ್ಲಡೆಗೆ ವ್ಯಾಪಿಸಿತು.

1990ರಲ್ಲಿ ಕೇರಳದಲ್ಲಿ ಹೈಯರ್ ಸೆಕೆಂಡರಿಯ ನಿರ್ದೇಶನಾಲಯದ ರೂಪೀಕರಣವಾಯಿತು. 31 ಸರಕಾರಿ ಪ್ರೌಢ ಶಾಲೆಗಳನ್ನು ಹೈಯರ್ ಸೆಕೆಂಡರಿಯನ್ನಾಗಿ ಭಡ್ತಿಗೊಳಿಸಲಾಯಿತು. ಕಲ್ಲಿಕೋಟೆ ವಿಶ್ವವಿದ್ಯಾನಿಲಯದಲ್ಲಿ ಜ್ಯಾರಿಯಲ್ಲಿದ್ದ ಪ್ರಿಡಿಗ್ರಿ ಪಠ್ಯಕ್ರಮದ ಭಾಷಾ ಪಠ್ಯ ಪುಸ್ತಕ ಹಾಗೂ NCERTಯ ವಿಷಯ ಪಠ್ಯಪುಸ್ತಕಗಳನ್ನು ಕೇರಳದ ಹೈಯರ್ ಸೆಕೆಂಡರಿ ವಿದ್ಯಾಭ್ಯಾಸ ಮಟ್ಟದಲ್ಲಿ ಬಳಸಲಾಯಿತು.

1990ರಲ್ಲಿ ಬೋಧನೆ ಹಾಗೂ ಕಲಿಕೆಯಲ್ಲಿ ಸಮಗ್ರವಾದ ಬದಲಾವಣೆಯೊಂದಿಗೆ ಹೊಸ ಪಠ್ಯಕ್ರಮವು ಪ್ರಾಥಮಿಕ ಹಂತದಲ್ಲಿ ಜ್ಯಾರಿಗೊಂಡಿತು. ಚಟುವಟಿಕೆ ಆಧಾರಿತ, ಪ್ರಕ್ರಿಯಾಧಾರಿತ, ಪ್ರಯೋಗಾಧಾರಿತ ಹಾಗೂ ವಿದ್ಯಾರ್ಥಿ ಕೇಂದ್ರಿತವಾದ ಈ ಪರಿಕಲ್ಪನೆಗೆ ಅನುಗುಣವಾಗಿ ನಿರಂತರ ಮೌಲ್ಯಮಾಪನದ ವಿಧಾನ ಹಾಗೂ ಗ್ರೇಡಿಂಗ್ ಪದ್ಧತಿಯನ್ನು ಜ್ಯಾರಿಗೊಳಿಸಲಾಯಿತು. ಮುಂದೆ ಹೈಯರ್ ಸೆಕೆಂಡರಿಯಲ್ಲೂ ಈ ವಿಧಾನವು ಜ್ಯಾರಿಗೆ ಬಂದಿತು. ಆದರೆ ಹೈಯರ್ ಸೆಕೆಂಡರಿಯಲ್ಲಿ ಸಮಗ್ರವಾದ ಪಠ್ಯ ಪರಿಷ್ಕರಣೆ ನಡೆದಿರಲಿಲ್ಲ. SCERTಯ ನೇತೃತ್ವದಲ್ಲಿ ಕೆಲವು ವಿಷಯಗಳಿಗೆ ಪಠ್ಯಪುಸ್ತಕಗಳು ಹಾಗೂ ಎಲ್ಲಾ ವಿಷಯಗಳಿಗೆ ಸಂಪನ್ಮೂಲ ಪಠ್ಯಗಳು ಮತ್ತು ಎಜ್ಯುಮೇಟ್ (Edumate) ಗಳನ್ನು ಸಿದ್ಧಪಡಿಸಲಾಯಿತು.

2007ರಲ್ಲಿ ಜ್ಯಾರಿಗೊಳಿಸಿದ ಏಕಗವಾಕ್ಷ (Single window) ವಿಧಾನವು ಹೈಯರ್ ಸೆಕೆಂಡರಿಯ ಪ್ರವೇಶಾತಿಯನ್ನು ಕಾರ್ಯದಕ್ಷಗೊಳಿಸಿತು. ಇ–ಗವರ್‌ನೆನ್ಸ್ (e-governance) ಅಂಗವಾಗಿ ಪರೀಕ್ಷೆ ನಡೆಸುವುದು, ಪಠ್ಯಪುಸ್ತಕಗಳ ಪೂರೈಕೆ (Text book indent), ಸ್ಕಾಲರ್‌ಶಿಪ್‌ಗಳು, ಆನ್‌ಲೈನ್ ಟ್ರಾನ್ಸ್‌ಫರ್ (online transfer) ಮೊದಲಾದ ರೀತಿಗಳನ್ನು ಅನುಸರಿಸಿ ಹೈಯರ್ ಸೆಕೆಂಡರಿಯನ್ನು ಹೆಚ್ಚು

ಪಾರದರ್ಶಕಗೊಳಿಸಲಾಯಿತು.

ವಿವಿಧ ರೀತಿಯ ನೂತನ ವಿಷಯಗಳನ್ನು ಆಯ್ಕೆ ಮಾಡುವ ಅವಕಾಶವನ್ನು ಕೇರಳದ ಹೈಯರ್ ಸೆಕೆಂಡರಿ ವಿದ್ಯಾಭ್ಯಾಸ ಪದ್ಧತಿಯು ನೀಡುತ್ತಿದೆ. 2005ರ ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು ಮುಂದಿರಿಸಿದ ವಿಷಯಗಳಿಗಿಂತ ಹೊರತಾಗಿ ವೈವಿಧ್ಯಮಯ ವಿಷಯಗಳನ್ನು ಕೇರಳದ ಪಠ್ಯ ಕ್ರಮವು ನೀಡುತ್ತದೆ ಎಂಬುದು ಹೆಮ್ಮೆಯ ವಿಷಯ. ಕಲಿಕೆಯಲ್ಲಿ ಇಂಗ್ಲೀಷನ್ನು ಪ್ರಥಮ ಭಾಷೆಯಾಗಿಯೂ, ದ್ವಿತೀಯ ಭಾಷೆಯಾಗಿ 12 ಐಚ್ಛಿಕ  ಭಾಷೆಗಳಲ್ಲಿ ಒಂದನ್ನು ಆಯ್ಕೆ ಮಾಡುವ ಅವಕಾಶವೂ ವಿದ್ಯಾರ್ಥಿಗಳಿಗೆ ಲಭಿಸುತ್ತಿದೆ. ವಿಜ್ಞಾನ ವಿಷಯದಲ್ಲಿ 10, ವಾಣಿಜ್ಯ ವಿಷಯದಲ್ಲಿ 4, ಮಾನವಿಕ ವಿಷಯಗಳಲ್ಲಿ 32 ಒಳಗೊಂಡು ಒಟ್ಟು 46 ವಿಷಯಗಳ ಒಕ್ಕೂಟ (Combination) ಗಳಿವೆ. ಕಲೆಯ ಅಧ್ಯಯನಕ್ಕೆ ಪ್ರತ್ಯೇಕವಾದ ವಿದ್ಯಾಲಯಗಳಿವೆ.

ಹೈಯರ್ ಸೆಕೆಂಡರಿ ಮಟ್ಟದಲ್ಲಿ ಗುಣಮಟ್ಟದ ವಿದ್ಯಾಭ್ಯಾಸವನ್ನು ಖಾತರಿಗೊಳಿಸಲು ಸಮಗ್ರ ಅಧ್ಯಾಪಕ ತರಬೇತಿ ಕಾರ್ಯಕ್ರಮಗಳನ್ನು ಸರಕಾರವು ನಡೆಸುತ್ತಿದೆ. ಕಲಿಕೆ ಹಾಗೂ ಬೋಧನೆಯ ಪ್ರಕ್ರಿಯೆಯಲ್ಲಿ ಇಂದು ಎದುರಾಗುತ್ತಿರುವ ಸಮಸ್ಯೆಗಳನ್ನು ಚರ್ಚಿಸಲು, ಕಲಿಕಾ ಚಟುವಟಿಕೆಗಳನ್ನು ಆಯೋಜಿಸಲು, ವಿಷಯಾಧರಿತ ಅಧ್ಯಾಪಕರ ಒಕ್ಕೂಟಗಳು ನೆರವಾಗುತ್ತಿವೆ.

## ಪಠ್ಯಕ್ರಮದ ಪರಿಷ್ಕರಣೆಯ ಮಹತ್ವ

ಜ್ಞಾನದ ಕ್ಷೇತ್ರವು ನಿರಂತರ ಬದಲಾವಣೆಗೆ ಒಳಗಾಗುತ್ತಿದೆ. ಈ ಬದಲಾವಣೆಗಳನ್ನು ಹೀರಿ ಅಂತರ್ಗತಗೊಳಿಸಿಕೊಂಡರೆ ಮಾತ್ರ ಪಠ್ಯಕ್ರಮಕ್ಕೆ ಸಮಕಾಲೀನ ಪ್ರಸ್ತುತತೆಗನುಗುಣವಾಗಿ ಮುಂದೆ ಸಾಗಲು ಸಾಧ್ಯವಾಗುವುದು. ಈ ಬದಲಾವಣೆಯು ಕೇರಳದ ಶಾಲೆಗಳ ಪಠ್ಯಕ್ರಮವು ಭಾರತದ ಇತರ ರಾಜ್ಯಗಳ ಪಠ್ಯ ಕ್ರಮಗಳಿಗಿಂತ ಭಿನ್ನವಾಗಿಸಿತು.

ಹೈಯರ್ ಸೆಕೆಂಡರಿಯಲ್ಲಿ ಚಟುವಟಿಕೆ ಆಧಾರಿತ ಕಲಿಕಾ ರೀತಿ ಈಗಾಗಲೇ ಜ್ಯಾರಿಗೊಂಡಿದ್ದರೂ ಪಠ್ಯಕ್ರಮದ ಸಮಗ್ರವಾದ ಪರಿಷ್ಕರಣೆ ಇದುವರೆಗೆ ನಡೆದಿಲ್ಲ. ಪ್ರಸ್ತುತ ಚಾಲ್ತಿಯಲ್ಲಿರುವ ಪಠ್ಯಕ್ರಮದ ಪರಿಷ್ಕರಣೆಯು ಸಮಕಾಲೀನ ಬದಲಾವಣೆಗಳಿಗೆ ಸ್ಪಂದಿಸುತ್ತದೆ ಮತ್ತು ಹೈಯರ್ ಸೆಕೆಂಡರಿ ವಿದ್ಯಾರ್ಥಿಗಳ ಮನೋಭಾವವನ್ನು ಗಣನೆಗೆ ತೆಗೆದುಕೊಳ್ಳುತ್ತದೆ. ಉನ್ನತ ವ್ಯಾಸಂಗಕ್ಕಿರುವ ಮೆಟ್ಟಿಲು ಎಂಬ ನಿಟ್ಟಿನಲ್ಲಿ ಹೈಯರ್ ಸೆಕೆಂಡರಿ ಪಠ್ಯಕ್ರಮವನ್ನು ಅಂತರಾಷ್ಟ್ರೀಯ ಮಟ್ಟಕ್ಕೆ ತಲುಪಿಸಬೇಕಾಗಿದೆ. ಅಂತರಾಷ್ಟ್ರೀಯ ಮಟ್ಟವೆಂದರೆ ಕೇವಲ ಒಂದು ನಿರ್ದಿಷ್ಟ ರಾಷ್ಟ್ರದ ವಿದ್ಯಾಭ್ಯಾಸದ ಮಟ್ಟವಲ್ಲ. ಹೈಯರ್ ಸೆಕೆಂಡರಿ ವಿದ್ಯಾಭ್ಯಾಸವನ್ನು ಪೂರೈಸಿದ ವಿದ್ಯಾರ್ಥಿಗೆ ಪ್ರಪಂಚದ ಯಾವುದೇ ಭಾಗದಲ್ಲೂ ಜೀವನವನ್ನು ಮುನ್ನಡೆಸಲು ಬೇಕಾದ ಸಾಮರ್ಥ್ಯವನ್ನು ನೀಡುವುದೇ ಇದರ ಉದ್ದೇಶವಾಗಿದೆ. ಅದು ಅಸ್ತಿತ್ವಕ್ಕೆ ಬೇಕಾಗಿ ವಿದ್ಯಾರ್ಥಿಯು ಆರ್ಜಿಸಬೇಕಾದ ಎಲ್ಲ ಅನುಭವಗಳ ಹಾಗೂ ಜ್ಞಾನದ ಮೊತ್ತವಾಗಿದೆ.

ಜಾಗತಿಕ ಮಟ್ಟದಲ್ಲಿ ಸ್ವೀಕೃತವಾದ ಶ್ರೇಷ್ಠ ಬೋಧನೆ ಹಾಗೂ ಕಲಿಕೆಯ ಮಾದರಿಗಳು ಕೇರಳದ ವಿದ್ಯಾರ್ಥಿಗಳಿಗೆ ಒದಗಿಸಬಹುದಾದ ಅಗತ್ಯವನ್ನು ಇದು ಸಾಬೀತುಗೊಳಿಸುತ್ತದೆ. ಆ ದಿಸೆಯಲ್ಲಿ ಸಾಗುವ ಪ್ರಯತ್ನ ಎಂಬಂತೆ ಸಮಗ್ರವಾದ ಪಠ್ಯಕ್ರಮ ಪರಿಷ್ಕರಣೆಯನ್ನು ರೂಪಿಸಲಾಗಿದೆ. ಪಠ್ಯಕ್ರಮಗಳನ್ನು ಕಾಲೋಚಿತವಾಗಿ ಪರಿಷ್ಕರಿಸಬೇಕಾದುದು ಅತ್ಯಗತ್ಯವೆಂದು ಪಠ್ಯಕ್ರಮಕ್ಕೆ ಸಂಬಂಧಪಟ್ಟ ಸರಕಾರವು ನಿಯೋಜಿಸಿದ ಉನ್ನತ ಸಮಿತಿಯು ಒತ್ತಿ ಹೇಳಿದೆ. ಅಲ್ಲದೆ, ವಿದ್ಯಾಭ್ಯಾಸ ಹಕ್ಕು ನಿಯಮದ ಪಠ್ಯಕ್ರಮ, ಮೌಲ್ಯಮಾಪನ ಎಂಬಿವುಗಳಿಗೆ ಸಂಬಂಧಿಸಿದ ಕಾಯ್ದೆಯನ್ನು ಪಠ್ಯಕ್ರಮದ ಪರಿಷ್ಕರಣೆಯಲ್ಲಿ ಅಗತ್ಯವಾಗಿ ಪರಿಗಣಿಸಬೇಕಾಗಿದೆ.

> ಐದು ವರ್ಷಗಳಿಗೆ ಮಿಗಿಲಾಗಿ ಜಾರಿಯಲ್ಲಿರುವ ಪಠ್ಯಕ್ರಮ ಹಾಗೂ ಪಠ್ಯ ಪುಸ್ತಕಗಳನ್ನು ತುರ್ತಾಗಿ ಎಸ್.ಸಿ.ಇ.ಆರ್.ಟಿ. (SCERT) ಯ ನೇತೃತ್ವದಲ್ಲಿ ಪರಿಷ್ಕರಿಸಬೇಕು.
>
> – ಪ್ರೊ. ಪಿ.ಒ.ಜೆ. ಲಬ್ಬ ಸಮಿತಿ

> ಜ್ಞಾನ ಸಂಪನ್ನ ಸಮಾಜ ಎಂಬ ನೆಲೆಯಲ್ಲಿ ಆಯಾ ಕಾಲದ ವಿವಿಧ ಸವಾಲುಗಳನ್ನು ಎದುರಿಸಲು ಪಠ್ಯಕ್ರಮವನ್ನು ಪುನರ್ ನಿರ್ಮಿಸಿ ಆಮೂಲಗ್ರವಾಗಿ ಪರಿಷ್ಕರಿಸಬೇಕಾದುದು ಅತ್ಯಗತ್ಯವಾಗಿದೆ.
>
> – ಡಾ. ಪಿ.ಎ. ಅಬ್ದುಲ್ ಅಝೀಜ್ ಸಮಿತಿ

# ಕಡ್ಡಾಯ ಶಿಕ್ಷಣ ಹಕ್ಕು ಕಾಯಿದೆ 2009

## ಸೆಕ್ಷನ್ –29 (ಅಧ್ಯಾಯ 5)

## ಪಠ್ಯಕ್ರಮ ಹಾಗೂ ಮೌಲ್ಯನಿರ್ಣಯ ಸೂಚಕಗಳು

1) ಪ್ರಾಥಮಿಕ ಶಿಕ್ಷಣದ ಪಠ್ಯಕ್ರಮ ಹಾಗೂ ಮೌಲ್ಯ ನಿರ್ಣಯ ವಿಧಾನಗಳನ್ನು ಆಯಾ ಸರಕಾರದ ಅಧಿಸೂಚನೆಯ ಮೂಲಕ ಸೂಚಿಸಲಾಗುವ ಒಂದು ಶೈಕ್ಷಣಿಕ ಅಧಿಕಾರ ಸ್ಥಾನದ ಮೂಲಕ ಪ್ರತಿಪಾದಿಸಬೇಕು.

2) ಶೈಕ್ಷಣಿಕ ಅಧಿಕಾರ ಸ್ಥಾನ 1 ನೇ ಉಪವಿಭಾಗದ ಪ್ರಕಾರ ಪಠ್ಯಕ್ರಮ ಹಾಗೂ ಮೌಲ್ಯ ನಿರ್ಣಯ ವಿಧಾನವನ್ನು ಪ್ರತಿಪಾದಿಸುವಾಗ ಕೆಳಗಿನ ಅಂಶಗಳನ್ನು ಪರಿಗಣಿಸಬೇಕಾಗಿದೆ.

   a) ಸಂವಿಧಾನದಲ್ಲಿ ಹೇಳಲಾದ ಮೌಲ್ಯಗಳ ಹೊಂದಿಕೆ.

   b) ಮಗುವಿನ ಸರ್ವತೋಮುಖವಾದ ಬೆಳವಣಿಗೆ.

   c) ಮಗುವಿನ ಜ್ಞಾನ, ಸಾಮರ್ಥ್ಯ, ಕೌಶಲ್ಯಗಳನ್ನು ಕ್ರಮೇಣ ಹೆಚ್ಚಿಸುವುದು.

   d) ದೈಹಿಕ ಹಾಗೂ ಮಾನಸಿಕ ಸಾಮರ್ಥ್ಯಗಳ ಸಂಪೂರ್ಣ ಬೆಳವಣಿಗೆ.

   e) ಮಗುವಿಗೆ ಇಷ್ಟವಾದ, ಶಿಶು ಕೇಂದ್ರಿತವಾದ ಚಟುವಟಿಕೆಗಳಿರುವ ಕಲಿಕೆ.

   f) ಕಲಿಕೆಯ ಮಾಧ್ಯಮವನ್ನು ಮಗುವಿನ ಮಾತೃಭಾಷೆಯಲ್ಲಿಯೇ ನೀಡುವುದನ್ನು ಆದಷ್ಟು ಪ್ರಾಯೋಗಿಕಗೊಳಿಸಬೇಕು.

   g) ಭಯ, ಮಾನಸಿಕ ಒತ್ತಡ ಉಂಟಾಗುವ ಸ್ಥಿತಿ, ಆತಂಕ ಇವುಗಳಿಂದ ಮಗುವನ್ನು ಮುಕ್ತಗೊಳಿಸಿ, ಸ್ವತಂತ್ರವಾಗಿ ಅಭಿಪ್ರಾಯ ಪ್ರಕಟಿಸಲು ಮಗುವಿಗೆ ಸಹಾಯ ನೀಡುವುದು.

   h) ಮಗುವಿನ ಜ್ಞಾನಗ್ರಹಣ ಮತ್ತು ಅದನ್ನು ಪ್ರಯೋಗಿಸುವ ಸಾಮರ್ಥ್ಯದ ಸಮಗ್ರ ಮತ್ತು ನಿರಂತರ ಮೌಲ್ಯಮಾಪನ.

## ಉಚಿತ ಹಾಗೂ ಕಡ್ಡಾಯ ಶಿಕ್ಷಣಕ್ಕಿರುವ ಮಕ್ಕಳ ಹಕ್ಕು ಕೇರಳದ ಕಾನೂನುಗಳು ಹಾಗೂ ಪರಿಚ್ಛೇದಗಳು 2011 ಶೈಕ್ಷಣಿಕ ಅಧಿಕಾರಿಗಳು

1. 29ನೇ ಪರಿಚ್ಛೇದದ ಪ್ರಕಾರ ರಾಜ್ಯ ಶಿಕ್ಷಣ ಸಂಶೋಧನಾ ಮತ್ತು ತರಬೇತಿ ಸಮಿತಿ (SCERT) ಶೈಕ್ಷಣಿಕ ಅಧಿಕಾರಗಳನ್ನು ನೀಡಲಾಗಿದೆ.
2. (1) ನೇ ಉಪಪರಿಚ್ಛೇದದ ಅಡಿಯಲ್ಲಿ ಪ್ರಕಟಿಸಿರುವ ಪ್ರಕಾರ ಶೈಕ್ಷಣಿಕ ಅಧಿಕಾರವನ್ನು ಹೊಂದಿರುವ ಸಂಸ್ಥೆಯು ಪಾಠ್ಯಕ್ರಮ, ಮೌಲ್ಯಮಾಪನ ಸೂಚಕ ತಯಾರಿಸುವಾಗ ಈ ಕಾನೂನಿನ 29ನೇ ಪರಿಚ್ಛೇದದ (2)ನೇ ಉಪಪರಿಚ್ಛೇದದ ಅಂಶ(a) ಯಿಂದ (f) ವರೆಗಿನ ನಿಬಂಧನೆಗಳಿಗೆ ಭಾದಕವಾಗದಂತೆ;

(a)ಸಕಾಲಿಕವೂ ಪ್ರಾಯಕ್ಕನುಗುಣವೂ ಆಗಿರುವ ಪಠ್ಯಕ್ರಮ ಮತ್ತು ಪಾಠ ಪುಸ್ತಕಗಳಿಗೆ ಮೂಲಭೂತ ವಾದ ಜೀವನ ನೈಪುಣ್ಯವನ್ನು ರೂಢಿಸಿಕೊಳ್ಳಲು ಅಗತ್ಯವಾದ ಕಲಿಕಾ ಸಾಮಾಗ್ರಿಗಳೂ ಒಳಗೊಂಡಂತೆ ಇತರ ಕಲಿಕಾ ಸಾಮಾಗ್ರಿಗಳಿಗೆ ರೂಪು ನೀಡುವುದು;

(b) ಒಂದರಿಂದ ಎಂಟರವರೆಗಿನ ತರಗತಿಗಳಲ್ಲಿ ಪ್ರತಿಯೊಂದು ವಿಷಯಕ್ಕೂ ಅಗತ್ಯವಾದ ಕನಿಷ್ಠ ಕಲಿಕಾ ಪರಿಣಾಮಗಳನ್ನು ನಿರ್ಣಯಿಸಬೇಕಲ್ಲದೆ ಮಕ್ಕಳಿಗಾಗಿ ಮೌಲಿಕವಾದ ಸೂಚಕಗಳನ್ನು ವಿಕಾಸಗೊಳಿಸಿ ಮಕ್ಕಳ ಕಲಿಕಾಪರಿಣಾಮಕ್ಕಾಗಿ ಅಧ್ಯಾಪಕರ ಜವಾಬ್ದಾರಿಯ ಮಾನದಂಡಗಳಿಗೆ ರೂಪು ನೀಡುವುದು;

(c)ಕಲಿಕೆ ಮತ್ತು ಬೋಧನೆಯ ಪರಿಣಾಮಗಳ ಆಧಾರದಲ್ಲಿ ಸೇವಾಕಾಲದ ಅಧ್ಯಾಪಕ ತರಬೇತಿ ಸಾಮಗ್ರಿಗಳನ್ನು ಅಭಿವೃದ್ಧಿಪಡಿಸುವುದು;

(d)1995ರ ನ್ಯೂನತೆಗಳಿರುವ ವ್ಯಕ್ತಿಗಳಿಗಾಗಿರುವ (ಸಮಾನ ಹಕ್ಕುಗಳು, ಹಕ್ಕುಗಳ ಸಂರಕ್ಷಣೆ ಹಾಗೂ ಪೂರ್ಣ ಭಾಗವಹಿಸುವಿಕೆ) ನಿಯಮಗಳಿಗನುಸಾರವಾಗಿ ನ್ಯೂನತೆಗಳಿರುವ ಮಕ್ಕಳಿಗೆ ಶಿಕ್ಷಣವನ್ನು ನೀಡುವುದಕ್ಕಾಗಿ ಅಧ್ಯಾಪಕರಿಗೆ ಸೇವಾಪೂರ್ವ ಮತ್ತು ಸೇವಾ ಕಾಲದ ತರಬೇತಿ ಕಾರ್ಯಕ್ರಮಗಳಿಗೆ ರೂಪು ನೀಡುವುದು:

(e)ನಿರಂತರವೂ ಸಮಗ್ರವೂ ಆದ ಮೌಲ್ಯಮಾಪನವನ್ನು ಜಾರಿಗೆ ತರುವುದಕ್ಕಾಗಿ ಅಗತ್ಯವಾದ ಸೂಚನೆ ಗಳನ್ನೂ ಮಾಹಿತಿಗಳನ್ನೂ ತಯಾರಿಸುವುದು.

(f) ಶೈಕ್ಷಣಿಕ ಧೋರಣೆಗಳು ಹಾಗೂ ಕಾರ್ಯಕ್ರಮಗಳು, ಪಠ್ಯಕ್ರಮ, ಭೋಧನೆಯ ಮೂಲಕ ಮಕ್ಕಳ ಮೇಲಾಗುವ ಪರಿಣಾಮ ಇತ್ಯಾದಿಗಳ ಕುರಿತು ಸಂಶೋಧನೆಗಳನ್ನೂ ಅಧ್ಯಯನಗಳನ್ನೂ ಕೈಗೊಳ್ಳುವುದು ಮತ್ತು ಅದನ್ನು ಜಾರಿಗೊಳಿಸುವುದು.

ಶಿಕ್ಷಣ ಹಕ್ಕು ಕಾಯ್ದೆಯ ಹಿನ್ನೆಲೆಯಲ್ಲಿ ನಿರಂತರ ಹಾಗೂ ಸಮಗ್ರವಾದ ಮೌಲ್ಯಮಾಪನವು ಸಾಂವಿಧಾನಿಕ ಬಾಧ್ಯತೆಯಾಗಿದೆ. ಇದನ್ನು ಗಮನದಲ್ಲಿರಿಸಿಕೊಂಡು ಪಠ್ಯಕ್ರಮವನ್ನು ಪರಿಷ್ಕರಿಸಬೇಕು. ಈ ಹಿನ್ನೆಲೆಯಲ್ಲಿ ಪಾಠಪುಸ್ತಕ ಪರಿಷ್ಕರಣೆಯನ್ನು ನಾವು ಕಾಣಬೇಕು.

**ಕೇರಳ ಶಾಲಾ ಪಠ್ಯಕ್ರಮದ (2013) ವೈಶಿಷ್ಟ್ಯಗಳನ್ನು ನೋಡೋಣ.**

1) ವಿದ್ಯಾರ್ಥಿ ಕೇಂದ್ರಿತ, ಪ್ರಕ್ರಿಯಾತ್ಮಕ, ಚಟುವಟಿಕೆ ಪ್ರಧಾನ, ಮೌಲ್ಯಾಧಾರಿತ ಪಠ್ಯಕ್ರಮ.
2) ಬೌದ್ಧಿಕ ಹಂತದಲ್ಲಿ, ಪ್ರಕ್ರಿಯೆಗಳ ಹಂತದಲ್ಲಿ, ಮನೋಭಾವ ಹಂತದಲ್ಲಿ ಹಾಗೂ ಮೌಲ್ಯಗಳ ಹಂತದಲ್ಲಿ ಮಗುವಿನ ಕಲಿಕಾ ಸಾಧನೆಗಳಿಗೆ ಒತ್ತು ನೀಡಲಾಗಿದೆ.
3) ಜ್ಞಾನ ನಿರ್ಮಾಣ ಎಂಬ ತಾತ್ವಿಕ ನೆಲೆಗಟ್ಟಿನಲ್ಲಿರುವ ಪಠ್ಯಕ್ರಮ.
4) ವಿನಿಮಯ ಪ್ರಕ್ರಿಯೆಯಲ್ಲಿ ವೈವಿಧ್ಯಪೂರ್ಣವೂ ಯೋಗ್ಯವೂ ಆದ ಅಧ್ಯಾಪನ ತಂತ್ರಗಳನ್ನು ಸ್ವೀಕರಿಸಿ ಉಪಯೋಗಿಸಲು ಅಧ್ಯಾಪಕರಿಗೆ ಸ್ವಾತಂತ್ರ್ಯವಿದೆ.
5) ಕಲಿಕಾಸಾಧನೆ, ಮಕ್ಕಳ ವಿಭಿನ್ನ ಗುಣಮಟ್ಟ ಇವುಗಳನ್ನು ತಿಳಿದು ವಿವಿಧ ಕಲಿಕಾ ವಿಧಾನಗಳನ್ನು ಅನುಷ್ಠಾನಗೊಳಿಸುವುದು. ಕಂಡು ಹಿಡಿಯುವ ಕಲಿಕೆ, ಆಶಯಗ್ರಹಣ ರೀತಿ, ಹೊಸ ಚಿಂತನೆಗಳು, ಯೋಚಿಸುವ ಸಾಮರ್ಥ್ಯವನ್ನು ಬೆಳೆಸುವುದು. ಸಹಕಾರ ಕಲಿಕೆ, ಸಹವರ್ತಿ ಕಲಿಕೆ, ಚಿಂತನೆಗಳ ಪ್ರತಿಫಲನ, ವೈಯಕ್ತಿಕ ಮತ್ತು ಗುಂಪಿನ ಅವಕಾಶಗಳನ್ನು ಒದಗಿಸುವುದು ಮೊದಲಾದ ವಿಧಾನಗಳನ್ನು ಪರಿಗಣಿಸುವುದು.
6) ಉಚಿತ ಸಾರ್ವಜನಿಕ ಶಿಕ್ಷಣ ಎಂಬ ಹಾಗೆ ಎಲ್ಲ ಮಕ್ಕಳ ಕಲಿಕಾ ಸಾಧನೆಗೆ ಪ್ರಾಧಾನ್ಯ ನೀಡಬೇಕು.
7) ಪ್ರಿ–ಪ್ರೈಮರಿಯಿಂದ ಹೈಯರ್ ಸೆಕಂಡರಿ ವರೆಗೆ ಸಮಗ್ರವಾದ ಪಠ್ಯಕ್ರಮ.
8) ಪ್ರತಿಯೊಂದು ತರಗತಿಗೂ ವಿವಿಧ ವಿಷಯಗಳ ಹೂರಣವನ್ನು ರಾಷ್ಟ್ರೀಯ ಮಟ್ಟದ ವಿಷಯಗಳ ಹೂರಣದೊಂದಿಗೆ ಏಕೀಕರಿಸಿ, ಕೇರಳದ ಪಾಠಪುಸ್ತಕಗಳನ್ನು ತಯಾರಿಸಲಾಗುವುದು.
9) ರಾಷ್ಟ್ರೀಯ ಮಟ್ಟದಲ್ಲಿರುವಂತೆ ಒಂದು ಮತ್ತು ಎರಡನೇ ತರಗತಿಗಳಿಗೆ ಮಾತೃಭಾಷೆ(ಪರಿಸರ ಅಧ್ಯಯನದೊಂದಿಗೆ) ಗಣಿತ ಮತ್ತು ಇಂಗ್ಲಿಷ್ ಎಂಬ ಮೂರು ಪಾಠಪುಸ್ತಕಗಳನ್ನು ಸಿದ್ಧಪಡಿಸಲಾಗುವುದು.
10) ಒಂದರಿಂದ ನಾಲ್ಕನೇ ತರಗತಿಯವರೆಗಿನ ಇಂಗ್ಲಿಷ್ ಮಾಧ್ಯಮ ಪಾಠಪುಸ್ತಕಗಳನ್ನು ಸಿದ್ಧಪಡಿಸಲಾಗುವುದು.
11) ಶಾಸ್ತ್ರೀಯ ಭಾಷೆ ಹಾಗೂ ಮಾತೃಭಾಷೆ ಎಂಬ ನೆಲೆಯಲ್ಲಿ ಕನ್ನಡ ಭಾಷಾ ಕಲಿಕೆಗೆ ವಿಶೇಷವಾದ ಪ್ರಾಧಾನ್ಯ ನೀಡಲಾಗುವುದು.
12) ಪ್ರಿ–ಪ್ರೈಮರಿ ಶಿಕ್ಷಣಕ್ಕಾಗಿ ಏಕೀಕೃತ ಪಠ್ಯಕ್ರಮವನ್ನು ರೂಪಿಸಿ, ಔಪಚಾರಿಕ ಶಿಕ್ಷಣದ ಅಂಗವಾಗಿ ಬದಲಾಯಿಸಲು ನಿರ್ದೇಶಿಸಲಾಗುವುದು.
13) ಮಾಹಿತಿ ತಂತ್ರಜ್ಞಾನವನ್ನು (ICT) ಒಂದು ಪಠ್ಯವಿಷಯ ಎನ್ನುವುದಕ್ಕಿಂತ ಪಠ್ಯವಿಷಯಗಳನ್ನು ಸಂವಹನಮಾಡುವ ಮಾಧ್ಯಮವಾಗಿ ಬಳಸಬೇಕು.

14) ವಿಶೇಷವಾದ ಪರಿಗಣನೆಗೆ ಅರ್ಹರಾದ ಮಕ್ಕಳಿಗೆ ವಿಭಿನ್ನ ಹಾಗೂ ನೂತನವಾದ ಕಲಿಕಾ ತಂತ್ರಗಳನ್ನು ಆವಿಷ್ಕರಿಸಿ ಅನುಷ್ಠಾನಗೊಳಿಸುವುದು ಮತ್ತು ವಿಭಿನ್ನವಾದ ಮೌಲ್ಯಮಾಪನ ಚಟುವಟಿಕೆಗಳನ್ನು ಆವಿಷ್ಕರಿಸಿ ಅನುಷ್ಠಾನಗೊಳಿಸುವುದು.

15) ಕಲಿಕಾ ಸಾಧನೆಗಳನ್ನು ಅವಲಂಬಿಸಿದ ಸಮಗ್ರ ಮತ್ತು ನಿರಂತರವಾದ ಮೌಲ್ಯ ಮಾಪನ (**CCE**) ನಡೆಸಬೇಕು.

16) ಆರೋಗ್ಯ ಮತ್ತು ಕ್ರೀಡಾ ಶಿಕ್ಷಣ, ಕಲೆಯ ಶಿಕ್ಷಣ, ವೃತ್ತಿ ಪರಿಚಯ ಇವುಗಳನ್ನು ಕಡ್ಡಾಯ ಪಠ್ಯವಿಷಯಗಳಾಗಿ ಪರಿಗಣಿಸಲಾಗಿದೆ.

17) ಹೈಯರ್ ಸೆಕಂಡರಿ ವಿಭಾಗದಲ್ಲಿ ಕಾಲಾನುಸಾರಿಯಾಗಿ ಪಾಠ ಪುಸ್ತಕಗಳನ್ನು ಸಿದ್ಧಪಡಿಸಬೇಕು.

18) ರಾಷ್ಟ್ರೀಯ ಶಿಕ್ಷಣ ನಿಯಮದ ಬೆಳಕಿನಲ್ಲಿ ಹಕ್ಕು ಆಧಾರಿತ ಶಿಕ್ಷಣಕ್ಕೆ ಒತ್ತು ನೀಡಬೇಕು.

19) ಪ್ರತಿಯೊಬ್ಬ ಅಧ್ಯಾಪಕನೂ ಓರ್ವ ಸಹರಕ್ಷಕ (Mentor)ನ ಸ್ಥಾನಕ್ಕೇರಿ, ಬೇಕಾದ ಕಾಳಜಿಯನ್ನು, ರಕ್ಷಣೆಯನ್ನು ಶಾಲೆಯಲ್ಲಿ ಮತ್ತು ತರಗತಿಯಲ್ಲಿ ಮಗುವಿಗೆ ಒದಗಿಸಬೇಕು.

20) ಅಧ್ಯಾಪಕರು ಪಾಲಿಸಬೇಕಾದ ವೃತ್ತಿ ನೀತಿ ಸಂಹಿತೆಗೆ (Code of Professional Ethics for School Teacher) ಒತ್ತು ನೀಡಲಾಗುವುದು.

21) 21ನೇ ಶತಮಾನದ ಕಲಿಕಾ ನೈಪುಣ್ಯಗಳು (21st Century Learning skills) ಕಾಲೋಚಿತವಾಗಿ ಗಳಿಸಿಕೊಳ್ಳುವುದಕ್ಕೆ ಯೋಗ್ಯವಾಗಿವೆ.

22. ಮಾನವೀಯ ಮೌಲ್ಯಗಳನ್ನು ಒಳಗೊಂಡ ತಲೆಮಾರನ್ನು ಸೃಷ್ಟಿಸಲು ಸಮರ್ಥವಾಗಿದೆ.

23. ಸಮಾನ ಅವಕಾಶ ಮತ್ತು ಸಮಾನತೆ (Equity and Equality) ಲಭಿಸುವ ಶಿಕ್ಷಣ ವ್ಯವಸ್ಥೆಗೆ ಹೊಂದಿಕೊಂಡಿದೆ.

ಸಹಜವಾದ ಕಲಿಕೆ, ಕಲಿಯುವ ಮಕ್ಕಳ ಬೌದ್ಧಿಕ, ಮಾನಸಿಕ ಬೆಳವಣಿಗೆಯನ್ನು ದೃಷ್ಟಿಯಲ್ಲಿರಿಸಿಕೊಂಡು ತಲೆ, ಹೃದಯ, ಹಸ್ತ ಸಮನ್ವಯಗೊಂಡ ಪಠ್ಯಕ್ರಮ (Curriculum for the harmony of head, Heart and Hand) ಎಂಬ ಕಾಣ್ಕೆಯೊಂದಿಗೆ ಪಠ್ಯಕ್ರಮವನ್ನು ನಾವು ಮಾಡಬೇಕು.

ಹಾಗಾದರೆ ಪಠ್ಯಕ್ರಮ ಸಮೀಪನ ಹೇಗಿರಬೇಕು? ಅದರ ಸೈದ್ಧಾಂತಿಕ ಮತ್ತು ಪ್ರಾಯೋಗಿಕವಾದ ಅಡಿಪಾಯ ಹೇಗಿರಬೇಕು?

## 1.3 ಪಠ್ಯಕ್ರಮ ಸಮೀಪನ

ಪಂಚೇಂದ್ರಿಯಗಳನ್ನು ಬಳಸಿ ಸುತ್ತುಮುತ್ತಲಿನ ಪರಿಸರದಿಂದ ಕಲಿಯಲಿರುವ ಸಹಜ ಸಾಮರ್ಥ್ಯಗಳೊಂದಿಗೆ ಮಗು ಹುಟ್ಟುತ್ತದೆ. ಜಗತ್ತನ್ನು ಹೊಸ ರೀತಿಯಲ್ಲಿ ನೋಡಲು, ಅರ್ಥಮಾಡಲು,

ವ್ಯವಹರಿಸಲು, ಮೌಲ್ಯಮಾಪನ ಮಾಡಲು ಶಾಲೆಯ ಶಿಕ್ಷಣದ ಮೂಲಕ ಮಗುವಿಗೆ ಸಾಧ್ಯವಾಗಬೇಕು. ತನ್ನ ಮುಂದಿರುವ ಸಮಸ್ಯೆಗಳನ್ನು ಎದುರಿಸಿ, ಆ ಸಮಸ್ಯೆಗಳನ್ನು ಪರಿಹರಿಸಿಕೊಂಡು ಕಲಿಕೆ ನಡೆಯುತ್ತದೆ. ಪಠ್ಯಕ್ರಮ ವಿನಿಮಯ ಸಮೀಪನದ ಲಕ್ಷಣಗಳು ಯಾವುವು?

- ಚಟುವಟಿಕೆ ಆಧಾರಿತವಾದುದು.
- ಪ್ರಕ್ರಿಯೆಗಳಿಂದ ಕೂಡಿದ್ದು.
- ಕಲಿಕೆಯನ್ನು ಗಟ್ಟಿಗೊಳಿಸುವುದು.
- ಕಲಿಕಾ ಸಾಧನೆಗಳನ್ನು ಸಫಲಗೊಳಿಸಲು ಸಮರ್ಥವಾದುದು.
- ಪರಿಸರ ಆಧಾರಿತವಾದುದು.
- ವಿಕಾಸದ ವಲಯಗಳನ್ನು ಪರಿಗಣಿಸುವುದು.
- ವಿದ್ಯಾರ್ಥಿಯ ಸ್ವಭಾವಕ್ಕೆ ಅನುಗುಣವಾದುದು.
- ಕಲಿಕೆಯೊಂದಿಗೆ ಮೌಲ್ಯ ನಿರ್ಣಯವೂ ಜತೆಯಾಗಿರುವುದು.

ಜ್ಞಾನನಿರ್ಮಾಣ ಆಧಾರಿತವಾದ ಕಲಿಕಾ ರೀತಿಯು ಪಠ್ಯಕ್ರಮಕ್ಕೆ ಆಧಾರವಾಗಿದೆ. ವಿದ್ಯಾರ್ಥಿಯ ಆರ್ಜಿತ ಜ್ಞಾನ ಮತ್ತು ಆಶಯ ಪರಿಸರವನ್ನು ಪರಿಗಣಿಸಿಕೊಂಡು ಪ್ರಯೋಜನಕಾರಿಯಾದ ಕಲಿಕಾ ಚಟುವಟಿಕೆಗಳನ್ನು ಏರ್ಪಡಿಸುವುದರಿಂದ ಸಹಜ ಜ್ಞಾನವನ್ನು ರೂಪಿಸಲು ಸಾಧ್ಯ ಎಂಬುದು ಈ ದೃಷ್ಟಿಕೋನದ ವೈಶಿಷ್ಟ್ಯ.

### ಕಲಿಕಾನುಭವಗಳು

ಬದುಕಿನ ವಿಭಿನ್ನ ಹಿನ್ನೆಲೆಗಳಿಂದ ಬರುವ ವಿದ್ಯಾರ್ಥಿಗಳ ಆರ್ಜಿತ ಜ್ಞಾನ, ಸಾಮರ್ಥ್ಯ, ಆಸಕ್ತಿ ಇವುಗಳು ವಿಭಿನ್ನವಾಗಿರುವವಲ್ಲವೇ. ಈ ವೈಶಿಷ್ಟ್ಯವನ್ನು ಪರಿಗಣಿಸಿಕೊಂಡು ವ್ಯಕ್ತಿ ಭಿನ್ನತೆಯನ್ನೂ ಬಹುಮುಖ

ಮಕ್ಕಳು ತೊಡಗಿಕೊಂಡಿರುವ ಜ್ಞಾನ ನಿರ್ಮಾಣ ಪ್ರಕ್ರಿಯೆಯಲ್ಲಿ ಅಧ್ಯಾಪಕರು ಸಕ್ರಿಯವಾಗಿ ಭಾಗವಹಿಸಿದರೆ, ಅದು ಮಕ್ಕಳ ತಿಳುವಳಿಕೆಯನ್ನು ಗಟ್ಟಿಗೊಳಿಸಲು ಸಹಾಯಕವಾಗುವುದು. ಕಲಿಕೆಯಲ್ಲಿ ತೊಡಗಿಸಿಕೊಂಡಿರುವ ಮಕ್ಕಳು ತಮ್ಮ ಜ್ಞಾನವನ್ನು ತಾವೇ ನಿರ್ಮಿಸಿಕೊಳ್ಳುತ್ತಾರೆ. ತಾವು ಶಾಲೆಯಲ್ಲಿ ಕಲಿತಿರುವುದನ್ನು ಹೊರಗಿನ ವಿಷಯಗಳೊಂದಿಗೆ ಅನ್ವಯಿಸಿ ಪ್ರಶ್ನೆಗಳನ್ನು ಕೇಳುವಂತೆ ಪ್ರೋತ್ಸಾಹಿಸಬೇಕು. ಬಾಯಿಪಾಠ ಹೊಡೆದು ಒಂದೇ ಒಂದು ಸರಿಯಾದ ಉತ್ತರವನ್ನು ಕಂಡುಕೊಳ್ಳುವುದಕ್ಕಿಂತ, ತಮ್ಮದೇ ವಾಕ್ಯಗಳಲ್ಲಿ ಸ್ವತಂತ್ರವಾಗಿ ಉತ್ತರವನ್ನು ಹೇಳುವಂತೆ ಪ್ರೋತ್ಸಾಹಿಸಬೇಕು. ಇವುಗಳೆಲ್ಲಾ ತಮ್ಮ ಜ್ಞಾನವನ್ನು ವಿಸ್ತರಿಸುವ ಮಕ್ಕಳಿಗೆ ಸಹಾಯ ಮಾಡುವ ಪ್ರಧಾನ ಹೆಜ್ಜೆಗಳಾಗಿವೆ. ಬೌದ್ಧಿಕವಾದ ಊಹೆ ಅರ್ಥವತ್ತಾದ ಒಂದು ಬೋಧನ ಕ್ರಮವಾಗಿದೆ. ಇದನ್ನು ಪ್ರೋತ್ಸಾಹಿಸಬೇಕು. ಹಲವಾರು ಬಾರಿ ತಮ್ಮ ದೈನಂದಿನ ಅನುಭವಗಳಿಂದ ಅಥವಾ ಮಾಧ್ಯಮ ಸಂಪರ್ಕದಿಂದ ಮಕ್ಕಳ ಮನಸ್ಸಿನಲ್ಲಿ ಕೆಲವು ಆಶಯಗಳು ರೂಪುಗೊಂಡಿರಬಹುದು. ಆದರೆ ಅಧ್ಯಾಪಕರು ನಿರೀಕ್ಷಿಸುವ ಮಾತುಗಳಲ್ಲಿ ಅವುಗಳನ್ನು ಅವರಿಗೆ ಪ್ರಕಟಿಸಲು ಸಾಧ್ಯವಾಗದು. ತಿಳಿದಿರುವುದು ಮತ್ತು ತಿಳಿಯದಿರುವುದರ ಮಧ್ಯೆ ಹೊಸ ಜ್ಞಾನದ ಸೃಷ್ಟಿಯಾಗುತ್ತದೆ. ಶಾಲೆಯ ಹೊರಗೆ ಮನೆ ಅಥವಾ ಸಮಾಜದಲ್ಲಿ ಬೆಳೆಸುವ ಕರಕೌಶಲ್ಯದ ರೂಪದಲ್ಲಿ ಇಂತಹ ಜ್ಞಾನ ಸೃಷ್ಟಿಯಾಗುವುದು. ಇಂತಹ ಎಲ್ಲ ತಿಳುವಳಿಕೆಗಳನ್ನು ಗೌರವಿಸಬೇಕು. ತಿಳುವಳಿಕೆ ಮತ್ತು ಸಂವೇದನಶೀಲತೆಯಿರುವ ಅಧ್ಯಾಪಕರು ಈ ಕುರಿತು ಪ್ರಜ್ಞಾವಂತರಾಗಿರುತ್ತಾರೆ. ಮಕ್ಕಳ ವಿಕಾಸ ಸಾಧ್ಯತೆಯನ್ನು ಮನಗಂಡು, ಚಟುವಟಿಕೆಗಳನ್ನು ಒದಗಿಸಿ ಹಾಗೂ ಪ್ರಶ್ನೆಗಳನ್ನು ಕೇಳಿ ಅವರನ್ನು ಮುನ್ನಡೆಸಲು ಅಧ್ಯಾಪಕರಿಗೆ ಸಾಧ್ಯ.

ಅನ್ವೇಷಣೆ, ನಿರೀಕ್ಷಣೆ, ಪ್ರಶ್ನೆಗಳನ್ನು ಕೇಳುವುದು, ಚರ್ಚಾಕೂಟಗಳು ಇವುಗಳ ಮೂಲಕ ಸಿದ್ಧಾಂತ ರೂಪೀಕರಣ ಮತ್ತು ಆಶಯ ಸೃಷ್ಟಿಗಳಾಗುತ್ತವೆ. ಇವುಗಳು ಸಕ್ರಿಯ ಭಾಗವಹಿಸುವಿಕೆಯ ಭಾಗವಾಗಿವೆ. ಶಾಲೆಗಳು ಪ್ರಶ್ನೆಗಳನ್ನು ಕೇಳುವುದಕ್ಕೂ ಚರ್ಚಿಸುವುದಕ್ಕೂ ಶೋಧಿಸುವುದಕ್ಕೂ ವಿಶ್ಲೇಷಿಸುವುದಕ್ಕೂ ನಿಗಮನವನ್ನು ಕಂಡುಕೊಳ್ಳಲೂ ಅವಕಾಶವನ್ನು ಒದಗಿಸಬೇಕು.

ಎನ್.ಸಿ.ಎಫ್. 2005 ಪುಟ. 41,42

ವಾದ ಬುದ್ಧಿಮತ್ತೆಯನ್ನೂ ಗಮನದಲ್ಲಿರಿಸಿಕೊಂಡು ಕಲಿಕೆಯ ಅನುಭವಗಳನ್ನು ರೂಪಿಸಬೇಕಾದುದು ಮುಖ್ಯವಾಗಿದೆ.

**ಕಲಿಕಾ ಪರಿಸರ**

ವಿದ್ಯಾರ್ಥಿಯ ಆಸಕ್ತಿ ಹಾಗೂ ಬೆಳವಣಿಗೆಯನ್ನು ದೃಷ್ಟಿಯಲ್ಲಿರಿಸಿಕೊಂಡು, ವೈವಿಧ್ಯಪೂರ್ಣ ಕಲಿಕಾ ಚಟುವಟಿಕೆಗಳಲ್ಲಿ ಭಾಗಿಯಾಗಲು ಅನುಕೂಲವಾಗುವಂತೆ ತರಗತಿಗಳನ್ನು ಸಿದ್ಧಪಡಿಸಬೇಕು. ವಿದ್ಯಾರ್ಥಿ ಕೇಂದ್ರಿತ ಕಲಿಕಾ ಚಟುವಟಿಕೆಗಳಿಗೆ ಸಹಾಯಕವಾಗುವಂತೆ ಚಟುವಟಿಕೆ ಆಧಾರಿತ ಕಲಿಕೆಯನ್ನು ಹೇಗೆ ಮಾಡಬೇಕೆಂದು ನಾವು ತಿಳಿದುಕೊಂಡೆವಲ್ಲವೇ?

**ಕಲಿಕಾ ಪ್ರಕ್ರಿಯೆ**

- ಪ್ರತಿಯೊಬ್ಬ ವಿದ್ಯಾರ್ಥಿಯೂ ತನ್ನ ಅನುಭವಗಳ ಆಧಾರದಲ್ಲಿ ಜ್ಞಾನ ನಿರ್ಮಾಣ (Knowledge Construction) ಮಾಡುವನು.
- ಜ್ಞಾನ ನಿರ್ಮಾಣವನ್ನು ವೈಯುಕ್ತಿಕ ಮತ್ತು ಸಾಮಾಜಿಕ ಹಂತಗಳಲ್ಲಿ ಮಾಡಬೇಕು.
- ವಿವಿಧ ಕಲಿಕಾ ಶೈಲಿಗಳನ್ನು (Learning Style) ಪರಿಗಣಿಸಿಕೊಂಡು ವಿವಿಧ ಇಂದ್ರಿಯಾನುಭವಗಳನ್ನು (Multisensory Experiences) ನೀಡುವ ಮೂಲಕ ಕಲಿಕೆಯನ್ನು ಯಶಸ್ವಿಗೊಳಿಸಬಹುದು.
- ಕಲಿಕಾನುಭವಗಳನ್ನು ಸಕ್ರೀಯವಾಗಿ (spiralling) ಮಂಡಿಸುವ ಮೂಲಕ ಕಲಿಕೆಯು ಸಾಕಷ್ಟು ಫಲಕಾರಿಯಾಗುತ್ತದೆ.
- ಕಲಿಕಾ ಚಟುವಟಿಕೆಗಳಿಗೆ ಯೋಗ್ಯವಾದ ನಮನೀಯತೆ (Flexibility), ಹೊಂದಾಣಿಕೆ (Adaptations), ಕಲಿಕಾ ಚಟುವಟಿಕೆಗಳ ಆಯ್ಕೆ (Selection) ಇವುಗಳನ್ನು ನಡೆಸುವ ಮೂಲಕ ವಿಭಿನ್ನ ಅಭಿರುಚಿಯ ಕಲಿಕೆಯ ಆಸಕ್ತರನ್ನು ಪರಿಗಣಿಸಬಹುದು.
- ಸಾಕಷ್ಟು ಕಲಿಕಾನುಭವಗಳು ಪ್ರತಿಯೊಬ್ಬ ವಿದ್ಯಾರ್ಥಿಗೆ ದೊರಕಿದಾಗಲೇ ಕಲಿಕಾ ಸಾಧನೆ (Learning outcome) ದೃಢವಾಗುವುದು.
- ಕಲಿಕೆ ಮತ್ತು ಮೌಲ್ಯನಿರ್ಣಯ ಪ್ರಕ್ರಿಯೆಗಳು ನಿರಂತರವಾಗಿ ನಡೆಯಬೇಕಾಗಿರುವುದು.
- ವಿಷಯಾಧಾರಿತ ವಸ್ತು, ವಿದ್ಯಾರ್ಥಿಯ ಕಲಿಕೆಯ ಅಗತ್ಯ ಇವುಗಳನ್ನು ಹೊಂದಿಕೊಂಡು ವಿವಿಧ ಕಲಿಕಾ ಬೋಧನ ತಂತ್ರಗಳನ್ನು ಬಳಸಿಕೊಂಡರೆ ಎಲ್ಲರಿಗೂ ಕಲಿಕಾ ಸಾಧನೆ (Learning Outcome) ಯನ್ನು ಗಳಿಸಿಕೊಳ್ಳಲು ಸಾಧ್ಯ.
- ಪ್ರತಿಯೊಂದು ಮಗುವಿನ ಸಮಗ್ರ ಪ್ರಗತಿಯನ್ನು (Allround development) ಉದ್ದೇಶ ವಾಗಿರಿಸಿಕೊಂಡು ಕಲಿಕಾ ಪ್ರಕ್ರಿಯೆಗಳನ್ನು ನಿರ್ಧರಿಸಬೇಕು.

### 1.4 ಕಲಿಕಾ ಸಾಧನೆಗಳು (Learning Outcomes)

ವಿವಿಧ ವಿಷಯಗಳಿಗೆ ಸಂಬಂಧಿಸಿದಂತೆ ನೀಡಲಾಗುವ ಕಲಿಕಾ ಚಟುವಟಿಕೆಗಳ ಫಲವಾಗಿ ಜ್ಞಾನ, ಕೌಶಲ್ಯ, ಮನೋಭಾವ, ಮೌಲ್ಯಗಳು ಮಗುವಿನಲ್ಲಿ ರೂಪುಗೊಳ್ಳುತ್ತವೆ. ಇವುಗಳಲ್ಲಿ ಕೆಲವನ್ನು ಸ್ವಲ್ಪ ಕಾಲದಲ್ಲಿ

ಸಂಪಾದಿಸಬಹುದು ಮತ್ತು ಕೆಲವಕ್ಕೆ ದೀರ್ಘಕಾಲ ಬೇಕಾಗುವುದು. ಹೀಗೆ ಮಗುವಿನಲ್ಲಿ ಉಂಟಾಗುವ ಬದಲಾವಣೆಗಳನ್ನು ನಮಗೆ ಮುಂಚಿತವಾಗಿ ನಿರ್ಧರಿಸಲು ಸಾಧ್ಯವಿದೆ. ಪಠ್ಯಕ್ರಮವನ್ನು ಸಿದ್ಧಪಡಿಸುವಾಗ ಶಾಲಾ ಶಿಕ್ಷಣದ ವಿವಿಧ ಹಂತಗಳಲ್ಲಿ ಮಗು ಸಾಧಿಸಬೇಕಾದ ಗುರಿಗಳನ್ನು ನಾವು ಕಲಿಕಾ ಸಾಧನೆಗಳೆಂದು ಹೇಳುತ್ತೇವೆ. ಕೆಲವು ಕಲಿಕಾ ಚಟುವಟಿಕೆಗಳ ಸರಣಿಯ ಮೂಲಕ ಪ್ರತಿಯೊಂದು ಘಟಕದಲ್ಲಿಯೂ ವಿದ್ಯಾರ್ಥಿ ಸಾಧಿಸುವ ಕಲಿಕಾ ಸಾಧನೆಗಳು ವಿಕಾಸಗೊಂಡು ತರಗತಿಯ ಕೊನೆಯಲ್ಲಿ ಗಳಿಸುವ ಕಲಿಕಾ ಸಾಧನೆಗಳಾಗುತ್ತವೆ. ಅನಂತರ ನಿಗದಿತ ಶಿಕ್ಷಣ ಕಾಲಾವಧಿಯ ಕಲಿಕಾ ಸಾಧನೆಗಳಾಗಿ ಅವು ಬೆಳೆಯುತ್ತವೆ. ಕಲಿಕಾ ಸಾಧನೆಗಳನ್ನು ನಿರೀಕ್ಷಣೆ ಮಾಡಲೂ (observable) ಅಳೆಯಲೂ (measurable) ಸಾಧ್ಯವಿರುವುದು ಅದರ ವೈಶಿಷ್ಟ್ಯವಾಗಿದೆ. ಪ್ರತಿಯೊಂದು ಘಟಕದ, ತರಗತಿಯ, ಅವಧಿಯ ಕೊನೆಯಲ್ಲಿ ಮಗು ಗಳಿಸಬೇಕಾದ ಜ್ಞಾನ ಕೌಶಲ್ಯ, ಮೌಲ್ಯ, ಮನೋಭಾವಗಳನ್ನು ಗಳಿಸಲಾಗಿದೆಯೇ ಎಂದು ಮೌಲ್ಯಮಾಪನ ಮಾಡಲು ಕಲಿಕಾಸಾಧನೆಗಳ ವಿಶ್ಲೇಷಣೆಯಿಂದ ಸಾಧ್ಯ. ಪಠ್ಯಕ್ರಮದ ಸರಿಯಾದ ವಿನಿಮಯದ ಮೂಲಕ ಎಲ್ಲ ಮಕ್ಕಳ ಕಲಿಕಾ ಸಾಧನೆಗಳನ್ನು ದೃಢಪಡಿಸಲು ನಮಗೆ ಸಾಧ್ಯವಾಗಬೇಕು.

ಕಲಿಕಾ ಸಾಧನೆಗಳ ವೈಶಿಷ್ಟ್ಯಗಳನ್ನು ಹೀಗೆ ಸಂಗ್ರಹಿಸಬಹುದು.

- ವಿಷಯನಿಷ್ಠವಾದ ಕಲಿಕೆಯ ಮೂಲಕ ವಿದ್ಯಾರ್ಥಿ ಗಳಿಸಿಕೊಳ್ಳಬೇಕಾದ ಜ್ಞಾನ (knowledge), ಕೌಶಲ್ಯ (skills), ಮನೋಭಾವ ಮತ್ತು ಮೌಲ್ಯ (attitude and value)ಗಳನ್ನು ಕಲಿಕಾ ಸಾಧನೆ ಒಳಗೊಂಡಿರುತ್ತದೆ.
- ಕಲಿಕಾ ಸಾಧನೆಗಳನ್ನು ನಿರೀಕ್ಷಣೆ ಮಾಡಲೂ, ಅಳೆಯಲೂ ಸಾಧ್ಯವಿದೆ.
- ಹ್ರಸ್ವ ಮತ್ತು ದೀರ್ಘಕಾಲದಲ್ಲಿ ಗಳಿಸುವ ವಿಭಿನ್ನ ಕಲಿಕಾ ಸಾಧನೆಗಳಿವೆ.

## 1.5 ಕಲಿಕಾ ಸಂಪನ್ಮೂಲಗಳು ಮತ್ತು ಕಲಿಕಾ ವ್ಯವಸ್ಥೆಗಳು

ಪಠ್ಯಕ್ರಮವನ್ನು ವಿನಿಮಯ ಮಾಡಲು ಬಳಸುವ ವಿವಿಧ ಘಟಕಗಳೇ ಕಲಿಕಾ ಸಂಪನ್ಮೂಲಗಳು. ಕಲಿಕಾ ಪ್ರಕ್ರಿಯೆಯ ಪೂರ್ಣತೆಗೆ ಕಲಿಕಾ ಸಂಪನ್ಮೂಲಗಳನ್ನು ಉಪಯೋಗಿಸಿಯೇ ತೀರಬೇಕು.

- ಗ್ರಂಥಾಲಯ
- ಪ್ರಯೋಗಾಲಯ (ಭಾಷೆ, ಗಣಿತ, ವಿಜ್ಞಾನ)
- ಕಲಿಕೋಪಕರಣಗಳು
- ಡಿಸ್‌ಪ್ಲೇ ಫಲಕಗಳು
- ಕಂಪ್ಯೂಟರ್ ಲ್ಯಾಬ್
- ಬಹುಮಾಧ್ಯಮ ಉಪಕರಣಗಳು

ಇದರ ಹೊರತಾಗಿ ಮಕ್ಕಳ ಕಲಿಕಾ ಸಾಮರ್ಥ್ಯವನ್ನು ಪ್ರಕಟಿಸುವ ಅನೇಕ ವೇದಿಕೆಗಳು ಶಾಲೆಗಳಲ್ಲಿವೆಯಲ್ಲವೇ? ಇವುಗಳನ್ನು ಕಲಿಕಾ ಸಾಧನೆಗಳನ್ನು ಗಳಿಸಿಕೊಳ್ಳಲು ಬಳಸಿಕೊಳ್ಳಬಹುದು.

- ಬಾಲಸಭೆ
- ಅಸೆಂಬ್ಲಿ
- ಕ್ಲಬ್‌ಗಳು
- ಚರ್ಚಾ ಕೂಟಗಳು
- ಶೈಕ್ಷಣಿಕ ಪ್ರವಾಸಗಳು
- ಸ್ವಯಂ ಸೇವಾ ಸಂಸ್ಥೆಗಳು (SPC, NSS, Scout, NCC)
- ಮಕ್ಕಳ ಪರಿಪೂರ್ಣವಾದ ಬೆಳವಣಿಗೆಗೆ ಇಂತಹ ಘಟಕಗಳು ಅತಿ ಅಗತ್ಯವಾಗಿವೆ.

## 1.6 ಕಲೆ ಮತ್ತು ವೃತ್ತಿಪರಿಚಯ ಕಲಿಕೆ

### ಕಲೆಯ ಕಲಿಕೆ

ಸೃಜನಶೀಲತೆ, ನಿರೀಕ್ಷಣ ಸಾಮರ್ಥ್ಯ ಮತ್ತು ಬುದ್ಧಿಮತ್ತೆಯನ್ನು ಮಕ್ಕಳಲ್ಲಿ ಬೆಳೆಸಲು ಕಲೆಯ ಕಲಿಕೆ ಅತಿ ಅಗತ್ಯವಾಗಿದೆ. ಹೊಸ ಪಠ್ಯಕ್ರಮದಲ್ಲಿ ಸಾಮಾನ್ಯ ವಿಷಯಗಳೊಂದಿಗೆ ಕಲೆಯ ಕಲಿಕೆಗೂ ಮಹತ್ವವನ್ನು ನೀಡಲಾಗಿದೆ. ಶಾಲಾ ಪಠ್ಯಕ್ರಮದಲ್ಲಿ ಕಲೆಯ ಕಲಿಕೆಯ ವ್ಯಾಪ್ತಿಯಲ್ಲಿ ಸಂಗೀತ, ನೃತ್ಯ, ಚಿತ್ರರಚನೆ, ಶಿಲ್ಪರಚನೆ, ನಾಟಕ, ಸಿನಿಮಾ ಮೊದಲಾದ ಪ್ರಕಾರಗಳನ್ನು ಸೇರಿಸಿಕೊಳ್ಳಲಾಗಿದೆ. ಮಕ್ಕಳ ಪ್ರತಿಭೆಗಳನ್ನು ಗುರುತಿಸಿ, ಪ್ರೋತ್ಸಾಹವನ್ನು ನೀಡುವುದು ಅಗತ್ಯವಾಗಿದೆ. ಕಲೆಯ ಕಲಿಕೆಯ ಸಾಮಾನ್ಯ ಉದ್ದೇಶಗಳು.

- ವಿದ್ಯಾರ್ಥಿಯ ಸಹಜವಾದ ಕಲೆಯ ಅಭಿರುಚಿಗಳನ್ನು ಪ್ರೋತ್ಸಾಹಿಸುವುದು.
- ವಿವಿಧ ಕಲೆಗಳನ್ನು ತಿಳಿದುಕೊಂಡು, ಮಕ್ಕಳ ಅಭಿರುಚಿಗೆ ಹೊಂದಿಕೊಂಡು ಕಲೆಗಳನ್ನು ಅಭ್ಯಾಸ ಮಾಡಲು ಅವಕಾಶಗಳನ್ನು ಒದಗಿಸುವುದು.
- ವಿವಿಧ ಕಲೆಗಳನ್ನು ಆಸ್ವಾದಿಸಿ, ಕಲೆಯ ಸೌಂದರ್ಯವನ್ನು ತಿಳಿದುಕೊಳ್ಳುವುದು.
- ಕಲೆಯ ಆಸ್ವಾದನೆ ಮಾಡಿ ಸಮಾಜ ಜೀವನದಲ್ಲಿ ಮಾನವೀಯ ದೃಷ್ಟಿಕೋನಗಳನ್ನು ಮೂಡಿಸುವುದು.
- ಸಾಂಸ್ಕೃತಿಕ ವೈವಿಧ್ಯವನ್ನು ಅರಿತುಕೊಂಡು ಸಂಸ್ಕೃತಿ ಪ್ರೇಮವನ್ನು ಬೆಳಸುವುದು.
- ಕಲೆಯ ಸತ್ವವನ್ನು ಅರಿತುಕೊಂಡು ಹೊಸ ಚಿಂತನೆಗಳನ್ನು ಮಾಡುವುದು ಮತ್ತು ಸಾಮಾಜಿಕ ಚಟುವಟಿಕೆಗಳಲ್ಲಿ ತೊಡಗಿಸುವುದು.
- ಕಲೆಯನ್ನು ಬಳಸಿ ಇತರ ವಿಷಯಗಳ ಕಲಿಕೆಯನ್ನು ಫಲಪ್ರದಗೊಳಿಸುವುದು (Art applied learning)
- ಬಹುಮುಖವಾದ ಬೌದ್ಧಿಕ ವಿಕಾಸದ ಸಾಧ್ಯತೆಗಳನ್ನು ಉತ್ತಮ ಪಡಿಸುವುದು.
- ವಿಭಿನ್ನ ಕೌಶಲ್ಯಗಳಿರುವ ವಿದ್ಯಾರ್ಥಿಗಳನ್ನು ಕಲಿಕಾ ಚಟುವಟಿಕೆಗಳಿಗೆ ಆಕರ್ಷಿಸುವುದು.
- ಮಕ್ಕಳ ಆಸ್ವಾದನೆಯ ಮಟ್ಟವನ್ನು ಉತ್ತಮಪಡಿಸುವುದು.

### ವೃತ್ತಿ ಪರಿಚಯ

ಭಾವನಾತ್ಮಕ ಮತ್ತು ವಿಜ್ಞಾನ ಕ್ಷೇತ್ರಗಳ ಸಮನ್ವಯ ಹಾಗೂ ಪ್ರಗತಿಗಾಗಿ ವೃತ್ತಿ ಪರಿಚಯ ಶಿಕ್ಷಣ ಅನಿವಾರ್ಯವಾಗಿದೆ. ಪ್ರತಿಯೊಂದು ವೃತ್ತಿ ಪರಿಚಯ ತರಗತಿಯ ಅಡಿಪಾಯವು ಮಾನವ ಸಂಪನ್ಮೂಲದ ಪ್ರಗತಿಯಾಗಬೇಕು. ಎಲ್ಲ ಪ್ರಜೆಗಳ ಸಾಮರ್ಥ್ಯಗಳನ್ನೂ, ಕೌಶಲ್ಯಗಳನ್ನೂ ರಾಷ್ಟ್ರ ನಿರ್ಮಾಣಕ್ಕಾಗಿ ಬಳಸುವಂತೆ ಬೆಳೆಸುವುದೇ ಮಾನವ ಸಂಪನ್ಮೂಲ ಪ್ರಗತಿಯ ಉದ್ದೇಶವಾಗಿದೆ. ವೃತ್ತಿಯಲ್ಲಿ ಆಸಕ್ತಿ ಮೂಡಿಸುವುದು, ವ್ಯಕ್ತಿಗಳನ್ನು ಹೊಸ ವೃತ್ತಿ ಸಂಸ್ಕೃತಿಯ ವಕ್ತಾರರನ್ನಾಗಿ ಮಾಡುವುದು ವೃತ್ತಿ ಕಲಿಕೆಯ ಪ್ರಮುಖ ಉದ್ದೇಶಗಳಾಗಿವೆ.

- ಮಾನವ ಸಂಪನ್ಮೂಲದ ಅಭಿವೃದ್ಧಿ
- ರಾಷ್ಟ್ರೀಯ ಅಭಿವೃದ್ಧಿ
- ವೃತ್ತಿ ಸನ್ನದ್ಧತೆ
- ಉತ್ಪಾದನ ವಲಯದಲ್ಲಿ ಸ್ವಾಯತ್ತತೆ
- ಸಂತುಲಿತ ವ್ಯಕ್ತಿತ್ವ ವಿಕಾಸ
- ಮೌಲ್ಯ ಹಾಗೂ ಮನೋಭಾವಗಳ ಬೆಳವಣಿಗೆ

ಕಲೆ ಮತ್ತು ವೃತ್ತಿ ಕಲಿಕೆಗೆ ಪ್ರಾಧಾನ್ಯವನ್ನು ನೀಡಿ ಪಠ್ಯಕ್ರಮವನ್ನು ರೂಪಿಸಬೇಕು. ಇವುಗಳ ಸಾಧ್ಯತೆಗಳನ್ನು ಉಳಿಸಿಕೊಂಡು ವಿಭಿನ್ನ ವಿಷಯಗಳೊಂದಿಗೆ ವಿನಿಮಯ ಮಾಡುವುದು ಅಗತ್ಯವಾಗಿದೆ.

## 1.7 ಆರೋಗ್ಯ ಮತ್ತು ಕ್ರೀಡಾ ಶಿಕ್ಷಣ

ಪ್ರಾಥಮಿಕ ಶಾಲಾ ಹಂತವು ಮಕ್ಕಳ ದೈಹಿಕ, ಮಾನಸಿಕ ಬೆಳವಣಿಗೆಯ ಮುಖ್ಯ ಹಂತವಾಗಿದೆ. ಆದುದರಿಂದ ಈ ಹಂತದಲ್ಲಿ ಎಲ್ಲ ಮಕ್ಕಳಿಗೆ ಆರೋಗ್ಯ ಮತ್ತು ಕ್ರೀಡಾ ಶಿಕ್ಷಣದ ಅನುಭವಗಳು ಲಭಿಸುತ್ತವೆ ಎಂಬುದನ್ನು ದೃಢಗೊಳಿಸಬೇಕು. ಮಗುವಿನ ಆರೋಗ್ಯ ಮತ್ತು ಕ್ರೀಡಾ ಮನೋಭಾವವನ್ನು ಪೋಷಿಸುವುದು, ಆರೋಗ್ಯಕರ ಜೀವನ ಶೈಲಿಯನ್ನು ರೂಪಿಸುವುದು ಈ ಕಲಿಕೆಯ ಪ್ರಧಾನ ಉದ್ದೇಶವಾಗಿದೆ. ಆರೋಗ್ಯ ಮತ್ತು ಕ್ರೀಡಾ ಶಿಕ್ಷಣದ ಸಾಧ್ಯತೆಗಳನ್ನು ಉಳಿಸಿಕೊಂಡು ವಿಭಿನ್ನ ವಿಷಯಗಳನ್ನು ವಿನಿಮಯ ಮಾಡುವುದು ಅಗತ್ಯವಾಗಿದೆ.

### ಆರೋಗ್ಯ ಮತ್ತು ಕ್ರೀಡಾ ಕಲಿಕೆಯ ಪ್ರಧಾನ ಉದ್ದೇಶಗಳು

- ವಿವಿಧ ಸಂದರ್ಭಗಳಲ್ಲಿ ಯೋಗ್ಯವಾದ ರೀತಿಯಲ್ಲಿ ದೇಹವನ್ನು ಚಲಿಸುವಂತೆ ಮಾಡುವ ಕೌಶಲ್ಯವನ್ನು ಸಂಪಾದಿಸುವುದು.
- ದೇಹದ ಚಲನೆಯನ್ನು ನಿಯಂತ್ರಿಸುವ ವಿವಿಧ ಹಂತಗಳನ್ನು ತಿಳಿದುಕೊಂಡು, ಅವುಗಳನ್ನು ಸೃಜನಾತ್ಮಕ ಚಲನೆಗಳ ಮಾಧ್ಯಮವಾಗಿ ಅಭಿವೃದ್ಧಿಪಡಿಸುವುದು.

- ಸಾಮಾಜಿಕವಾದ ಜವಾಬ್ದಾರಿಗಳನ್ನು ಅರಿತುಕೊಂಡು, ಪ್ರಜಾಪ್ರಭುತ್ವ ರೀತಿಯ ಜೀವನ ಶೈಲಿಯನ್ನು ರೂಢಿಸಿಕೊಳ್ಳುವುದು ಮತ್ತು ಆಸ್ವಾದಿಸುವುದು.
- ಮಗುವಿನ ಸರ್ವತೋಮುಖ ಬೆಳವಣಿಗೆಯನ್ನು ದೃಢಪಡಿಸುವುದು.

## 1.8 ಒಳಗೊಂಡಿರುವ ಶಿಕ್ಷಣ (Inclusive Education)

ಶಾಲೆಯಲ್ಲಿ ಉತ್ತಮ ಪ್ರದರ್ಶನವನ್ನು ನೀಡುವ ತಮ್ಮ ಸಹಪಾಠಿಗೆ ವಾಸವಾಗಲು ಮನೆಯಿಲ್ಲವೆಂದೂ, ರಸ್ತೆ ಬದಿಯ ಪೈಪಿನಡಿಯಲ್ಲಿ ಕಟ್ಟಿದ ಡೇರೆಯೇ ಅವನ ಮನೆಯೆಂದೂ ತಿಳಿದಾಗ ಅದು ಚರ್ಚೆಗೆ ಗ್ರಾಸವಾಯಿತು. ಕಷ್ಟಗಳನ್ನು ಪರಸ್ಪರ ಹಂಚಿಕೊಳ್ಳುವುದರಿಂದ ಮಾತ್ರ ಪರಿಹಾರ ಉಂಟಾಗುವುದಿಲ್ಲ ಎಂದು ಅರಿತುಕೊಂಡ ವಿದ್ಯಾರ್ಥಿಗಳು ಅಧ್ಯಾಪಕರ ಸಹಾಯದೊಂದಿಗೆ ಹಣವನ್ನು ಸಂಗ್ರಹಿಸಿ ಗೆಳೆಯನಿಗೆ ಮನೆ ನಿರ್ಮಿಸಿಕೊಟ್ಟು ಮಾದರಿಯಾದರು.

*(ಒಂದು ಶಾಲೆಯ ಅನುಭವ)*

ತರಗತಿ ಕೋಣೆಯಲ್ಲಿ ಎಲ್ಲರನ್ನೂ ಒಂದುಗೂಡಿಸುವ, ಯಾರನ್ನೂ ಹೊರ ಹಾಕದ ಕಲಿಕೆಯ ಒಂದು ವಾತಾವರಣವನ್ನು ಸೃಷ್ಟಿಸಬೇಕಾಗಿದೆ. ನಮ್ಮ ಶಾಲೆಗಳಲ್ಲಿ ಮುಖ್ಯವಾಗಿ ಎರಡು ವಿಭಾಗಗಳಿಗೆ ಹೆಚ್ಚಿನ ಪ್ರೋತ್ಸಾಹವನ್ನೂ, ಸಹಾಯವನ್ನೂ ನೀಡಿ ನ್ಯಾಯಯುತವಾದ ಗುಣಮಟ್ಟದ ಶಿಕ್ಷಣವನ್ನು (Equitable Quality Education) ದೃಢಗೊಳಿಸಬೇಕಾಗಿದೆ.

**ವಿಶೇಷ ಗಮನ, ಕಲಿಕಾ ಸಹಾಯ ಮತ್ತು ರಕ್ಷಣೆ ಅಗತ್ಯವಿರುವುದು ಯಾರಿಗೆ?**

### (ಎ) ಸಾಮಾಜಿಕ ಮತ್ತು ಆರ್ಥಿಕ ಕಾರಣಗಳಿಗಾಗಿ ಹೊರಹಾಕಲ್ಪಟ್ಟವರ ಮಕ್ಕಳು

- ವಿಭಿನ್ನ ಮತ್ತು ವೈವಿಧ್ಯಪೂರ್ಣವಾದ ಸಾಮಾಜಿಕ, ಸಾಂಸ್ಕೃತಿಕ, ಕೌಟುಂಬಿಕ ಹಿನ್ನೆಲೆಯಲ್ಲಿ ತಾರತಮ್ಯವನ್ನು ಅನುಭವಿಸುವ ಮಕ್ಕಳು, ತೀವ್ರ ಬಡತನವನ್ನು ಎದುರಿಸುವವರು, ಬುಡಕಟ್ಟು ಆದಿವಾಸಿಗಳು, ಹೆಣ್ಮಕ್ಕಳು, ಪರಿಶಿಷ್ಟ ಜಾತಿ, ಪಂಗಡಗಳಿಗೆ ಸೇರಿದವರು, ಬೇರೆ ರಾಜ್ಯಗಳಿಂದ ವಲಸೆ ಬಂದವರು, ಖಾಯಂ ಮನೆಗಳಿಲ್ಲದವರು–ಹೀಗೆ ಅನೇಕ ಸಂಕಷ್ಟಗಳನ್ನು ಎದುರಿಸುವವರು ಈ ವಿಭಾಗದಲ್ಲಿ ಸೇರುತ್ತಾರೆ.

ವಿಭಿನ್ನತೆಗಳನ್ನು, ಪರಿಮಿತಿಗಳನ್ನು ಅರಿತುಕೊಂಡು, ಅವರನ್ನು ಗುರುತಿಸಿ ಗೌರವಿಸಬೇಕಾದುದು ನಮ್ಮ ಸಮೀಪನವಾಗಿರಬೇಕು. ಶಾಲೆಯ ಒಗ್ಗಟ್ಟಿನ ಕಾರ್ಯ ಚಟುವಟಿಕೆಗಳ ಮೂಲಕ ಇಂಥವರ ಅನೇಕ ಸಮಸ್ಯೆಗಳನ್ನು ಪರಿಹರಿಸಬಹುದು.

## (ಬಿ) ದೈಹಿಕ ಹಾಗೂ ಮಾನಸಿಕ ಸವಾಲುಗಳನ್ನು ಎದುರಿಸುವವರು

ದೈಹಿಕ ಹಾಗೂ ಮಾನಸಿಕ ಸವಾಲುಗಳನ್ನು ಎದುರಿಸುವವರಿಗೂ, ಕಲಿಕೆಯಲ್ಲಿ ಕಷ್ಟವನ್ನು ಅನುಭವಿಸುವ ಮಕ್ಕಳಿಗೂ ಪ್ರತ್ಯೇಕವಾದ ಕಲಿಕಾ ವಿಧಾನದ ಅಗತ್ಯಗಳಿವೆ (special educational needs). ಕಿವುಡುತನ, ದೃಷ್ಟಿದೋಷ, ಬೌದ್ಧಿಕ ಮತ್ತು ಚಲನೆಯ ಪರಿಮಿತಿಗಳು, ಓಟಿಸಂ, ಸೆರೆಬ್ರಲ್ ಪಾಲ್ಸಿ, ಬಹುಮುಖವಾದ ವೈಕಲ್ಯಗಳು, ಭಾವನಾತ್ಮಕವಾದ ಅಸಮತೋಲನವಿರುವ ಮಕ್ಕಳು, ಗಮನಹರಿಸುವಲ್ಲಿ ಪರಿಮಿತಿಗಳಿರುವ ಮಕ್ಕಳು ಮುಂತಾದವರು ವಿಭಾಗದಲ್ಲಿ ಸೇರುತ್ತಾರೆ.

### ಪಠ್ಯಕ್ರಮದ ವಿನಿಮಯ ಹಾದಿಯಲ್ಲಿ ನಾವು ಏನನ್ನು ಅನುಸರಿಸಬೇಕು?

- ಕಲಿಕೆಯ ಅಗತ್ಯಗಳು, ಅಭಿರುಚಿ ಇವುಗಳನ್ನು ಪರಿಗಣಿಸಿ ಕಲಿಕಾ ಚಟುವಟಿಕೆಗಳ ಯೋಜನೆಗಳು.
- ಕಲಿಕಾ ಚಟುವಟಿಕೆಗಳಲ್ಲಿ ಎಲ್ಲರ ಭಾಗವಹಿಸುವಿಕೆ ಇರುವಂತೆ ಪಾಠಯೋಜನೆಯಲ್ಲಿ ಹೊಂದಾಣಿಕೆ.
- ವಿಭಿನ್ನವಾದ ಕಲಿಕಾ ವೇಗ, ಕಲಿಕಾ ಶೈಲಿ ಇವುಗಳನ್ನು ಪರಿಗಣಿಸಿಕೊಂಡು ವಿವಿಧ ಇಂದ್ರಿಯಾಧಾರಿತ ಸಮೀಪನ (multisensory approach) ಅನುಷ್ಠಾನ.
- ಪರಿಹಾರ ಚಟುವಟಿಕೆಗಳು (Remedial Practices), ಪೋಷಕ ಚಟುವಟಿಕೆಗಳು (Enrichment Practice) ಇವುಗಳನ್ನು ಪ್ರತಿಯೊಬ್ಬ ಮಗುವಿನ ಅಗತ್ಯವನ್ನು ಅನುಸರಿಸಿ ಅನುಷ್ಠಾನಗೊಳಿಸುವುದು.
- ವಿವಿಧ ಮೌಲ್ಯಮಾಪನ ಸಾಧ್ಯತೆಗಳನ್ನು ಜಾರಿಗೊಳಿಸುವುದು.
- ಸಂಪನ್ಮೂಲ ಅಧ್ಯಾಪಕರ ಹಾಗೂ ಇತರ ತಜ್ಞರ ಸಹಾಯವನ್ನು ದೃಢಪಡಿಸುವುದು.
- ಮಗುವಿನ ಕಲಿಕೆ, ಸಂರಕ್ಷಣೆ ಮೊದಲಾದ ವಿಷಯಗಳಲ್ಲಿ ಹೆತ್ತವರ ನಿರಂತರ ಬೆಂಬಲವನ್ನು ದೃಢಪಡಿಸುವುದು.

ಈ ಎರಡು ವಿಭಾಗದ ಮಕ್ಕಳಲ್ಲದೆ, ವಿಶೇಷ ಗಮನ ಹಾಗೂ ಪರಿಗಣನೆ ನೀಡಬೇಕಾದ ಪ್ರತ್ಯೇಕ ಅಭಿರುಚಿ ಮತ್ತು ಸಾಮರ್ಥ್ಯಗಳಿರುವ ಮಕ್ಕಳೂ (Gifted Childrens) ಇದ್ದಾರೆ. ಹೀಗೆ ಎಲ್ಲ ವಿಭಾಗದ ಮಕ್ಕಳನ್ನು ಒಳಗೊಳ್ಳುವ ರೀತಿಯಲ್ಲಿ ಶಾಲೆಯ ಚಟುವಟಿಕೆಗಳನ್ನೂ ಭೌತಿಕ ಹಿನ್ನೆಲೆಗಳನ್ನೂ ಶಾಸ್ತ್ರೀಯವಾಗಿ ರೂಪಿಸಬೇಕಾಗಿದೆ.

## 1.9 ಮಾಹಿತಿ ತಂತ್ರಜ್ಞಾನ – ಸಾಧ್ಯತೆ

ಮಾಹಿತಿ ವಿನಿಮಯಕ್ಕೆ ಅನೇಕ ವ್ಯವಸ್ಥೆಗಳು ಇಂದು ಬಳಕೆಯಲ್ಲಿವೆ ಅಲ್ಲವೇ? **ICT** ಬಳಕೆಯು ಇವುಗಳಲ್ಲಿ ತುಂಬ ಪ್ರಯೋಜನಕರವಾದುದು. ಮಕ್ಕಳು ಇದರ ತಂತ್ರಜ್ಞಾನವನ್ನು ಹೆಚ್ಚು ಕಡಿಮೆ ತಿಳಿದವರೇ ಆಗಿದ್ದಾರೆ. ಈ ತಿಳುವಳಿಕೆಯನ್ನು ತರಗತಿಯ ಕಲಿಕೆಗೆ ಬಳಸಿಕೊಳ್ಳಬೇಕಾಗಿದೆ. ಕಲಿಕೆಯನ್ನು ಅನಾಯಾಸಕರ ಹಾಗೂ ಸಂತೋಷದಾಯಕವನ್ನಾಗಿಸಲು ಇದರಿಂದ ಸಾಧ್ಯ.

### ಅಗತ್ಯ

ಪಠ್ಯಕ್ರಮ ವಿನಿಮಯದ ನಿರ್ದಿಷ್ಟ ಹಂತದಲ್ಲಿ ಯೋಗ್ಯವಾದ ICT ಸಾಮಗ್ರಿಗಳನ್ನು ಅಗತ್ಯವಾದರೆ ಮಾತ್ರ ಬಳಸಿದರೆ ಸಾಕು. ಮುದ್ರಣ ಮಾಧ್ಯಮದಲ್ಲಿರುವ ಪಾಠಪುಸ್ತಕಗಳ ಮಿತಿಗಳಾದ ಚಲನಶೀಲತೆ, ಶಬ್ದಗಳನ್ನು ಕೇಳಿಸಲು ಆಗದಿರುವುದು ಮೊದಲಾದ ಕೊರತೆಗಳನ್ನು ICT ಸಾಧ್ಯತೆಗಳ ಮೂಲಕ ಪರಿಹರಿಸಬಹುದು. ICT ಬಳಕೆಯ ಅಗತ್ಯ ಯಾವ ಯಾವ ಸಂದರ್ಭಗಳಲ್ಲಿ ಬೇಕಾಗಿದೆ ಎಂದೂ ಅದರ ಪ್ರಯೋಜನವನ್ನು ಹೇಗೆ ಪಡೆಯಬಹುದೆಂದೂ ನಿರ್ಧರಿಸಲು ಅಧ್ಯಾಪಕರಿಗೆ ಸಾಧ್ಯವಾಗಬೇಕು.

### ಹೊಂದಾಣಿಕೆ

ಮಗುವಿನ ಬುದ್ಧಿಯನ್ನೂ ಪ್ರತಿಭೆಯನ್ನೂ ಪ್ರಚೋದಿಸುವ ICT ಸಾಧ್ಯತೆಗಳು ಬೇಕಾಗಿವೆ. ಜಿಜ್ಞಾಸೆ ಮತ್ತು ಆಕಾಂಕ್ಷೆಯೊಂದಿಗೆ ಪಠ್ಯ ವಿಷಯದ ಬಗ್ಗೆ ಆಸಕ್ತಿ ಮೂಡುವಂತೆ ICT ಯನ್ನು ಬಳಸಬೇಕು. ಇಂದ್ರಿಯ ವೈಕಲ್ಯವುಳ್ಳವರಿಗೆ ಇದರ ಪ್ರಯೋಜನ ಹೆಚ್ಚು. ಶಬ್ದ ಹಾಗೂ ದೃಶ್ಯಗಳಿಂದ ವಿಷಯಗಳನ್ನು ಅನುಭವಕ್ಕೆ ತರಲು ICT ಪ್ರಯೋಜನಕಾರಿಯಾಗಿದೆ. ವಿಭಿನ್ನವಾದ ಕಲಿಕೆಯ ಶೈಲಿಗಳನ್ನು ಅಳವಡಿಸಿಕೊಂಡಿರುವ ಕಲಿಕೆಯ ಅನುಭವಗಳನ್ನು ಒದಗಿಸಲು ಇದು ಸಹಾಯಕವಾಗಿದೆ.

### ವಿಶ್ವಸನೀಯತೆ

ಕಲಿಕಾ ಸಾಮಗ್ರಿಗಳ ಬಗೆಗಿನ ವಿಶ್ವಸನೀಯತೆಯನ್ನು ದೃಢಪಡಿಸಬೇಕು. ಸರಕಾರಿ ಇಲಾಖೆಗಳ ಸೈಟುಗಳು, ಶೈಕ್ಷಣಿಕ ವೆಬ್‌ಸೈಟುಗಳು, ಪೋರ್ಟಲುಗಳು, ಬ್ಲಾಗುಗಳು, ಸಾಮಾಜಿಕ ಜಾಲ ತಾಣಗಳು ಮೊದಲಾದವುಗಳಿಂದ ಮಾಹಿತಿಗಳನ್ನು ಸಂಗ್ರಹಿಸುವಾಗ ಅದು ಅಧಿಕೃತವೇ ಎಂದು ದೃಢಪಡಿಸಬೇಕು. ತರಗತಿ ಕೋಣೆಯಲ್ಲಿ ಬಳಸುವ ಸಾಮಗ್ರಿಗಳ ಪ್ರಾಯೋಗಿಕ ನೆಲೆಯನ್ನು ದೃಢಪಡಿಸಬೇಕು. ಇಂತಹ ಸಾಮಗ್ರಿಗಳು ಕಾರ್ಯ ನಿರ್ವಹಿಸುವುದಕ್ಕೆ ಯೋಗ್ಯವಾದ ಸೋಫ್ಟ್‌ವೇರ್‌ಗಳು ಸುಲಭದಲ್ಲಿ ದೊರಕುವಂಥದ್ದೂ, ಉಪಯೋಗಕ್ಕೆ ಸಿಗುವಂಥದ್ದೂ ಆಗಿರಬೇಕು. ICT ಸಾಧ್ಯತೆಗಳು ಮಗುವಿನ ವಯಸ್ಸು, ಮಾನಸಿಕ ಸ್ಥಿತಿ ಇವುಗಳಿಗೆ ಹೊಂದಿಕೆಯಾಗುವಂತಿರಬೇಕು.

## 1.10 ಮೌಲ್ಯಗಳು, ಮನೋಧರ್ಮಗಳು, ಕಾಳಜಿ ಇವುಗಳನ್ನು ಬೆಳೆಸುವ ವಲಯಗಳು

ವಿದ್ಯಾರ್ಥಿಯಲ್ಲಿ ಮಾನವೀಯ ಮೌಲ್ಯ ಹಾಗೂ ಸಾಂವಿಧಾನಿಕ ಮೌಲ್ಯಗಳ ಕುರಿತು ಅರಿವು ಮೂಡಿಸುವುದು, ಸಾಮಾಜಿಕ ಜೀವನವನ್ನು ಬಲಗೊಳಿಸುವ ಮನೋಧರ್ಮವನ್ನು ಮೂಡಿಸುವುದು, ಸಾಮಾಜಿಕ ಕಾಳಜಿಯನ್ನು ಬೆಳೆಸುವುದು ಮೊದಲಾದವು ಪಠ್ಯ ಕ್ರಮದ ಪ್ರಥಮ ಪರಿಗಣನೆಯ ವಿಷಯಗಳಾಗಿವೆ. ಇವುಗಳನ್ನು ಬೆಳೆಸಲು ಸೂಚಿಸಲಾದ ಆಶಯ ವಲಯಗಳನ್ನು ಕೆಳಗೆ ನೀಡಲಾಗಿದೆ.

### ಪ್ರಜಾಪ್ರಭುತ್ವ ಪ್ರಜ್ಞೆ

ವಿವಿಧ ವಿಷಯಗಳನ್ನು ಆಯ್ಕೆ ಮಾಡುವಾಗ ಪ್ರಜಾಪ್ರಭುತ್ವ ವ್ಯವಸ್ಥೆಗೆ ಸಂಬಂಧಿಸಿದ ದೃಷ್ಟಿಕೋನಗಳನ್ನು ಪರಿಗಣಿಸಬೇಕು. ಕಲಿಕಾ ಚಟುವಟಿಕೆಗಳ ಯೋಜನೆಯಲ್ಲಿಯೂ ವಿನಿಮಯ ಪ್ರಕ್ರಿಯೆಯಲ್ಲಿಯೂ ಪ್ರಜಾಪ್ರಭುತ್ವದ ಸಮೀಪನ ಇರಬೇಕಾಗಿದೆ. ಪ್ರಜಾಪ್ರಭುತ್ವ ರೀತಿಯ ತರಗತಿ, ಶಾಲಾ ಪ್ರದೇಶಗಳು (ಪ್ರಜಾಪ್ರಭುತ್ವ ರೀತಿಯ ವೇದಿಕೆಗಳು), ಪ್ರಜಾಪ್ರಭುತ್ವ ಜೀವನ ಸಮೀಪನ ಮೊದಲಾದವುಗಳಿಂದ ಈ ಪ್ರಜ್ಞೆಯನ್ನು ಬೆಳೆಸುವುದು ಪಠ್ಯಕ್ರಮದ ಉದ್ದೇಶವಾಗಿದೆ.

### ಸಾಂವಿಧಾನಿಕ ಮೌಲ್ಯಗಳು

ನಮ್ಮ ಸಂವಿಧಾನವು ಎತ್ತಿ ಹಿಡಿದಿರುವ ಮೌಲ್ಯಗಳನ್ನೂ ಗುರಿಗಳನ್ನೂ ಪಠ್ಯಕ್ರಮವು ಪ್ರತಿಫಲಿಸುವಂತಿರಬೇಕು. ಸಾಂವಿಧಾನಿಕ ಮೌಲ್ಯಗಳನ್ನು ಸಾಧಿಸುವುದಕ್ಕಾಗಿ ವಿದ್ಯಾರ್ಥಿಗಳನ್ನು ಸಮರ್ಥರನ್ನಾಗಿಸುವ ಪಾಠಗಳನ್ನೂ ವಿನಿಮಯ ಪ್ರಕ್ರಿಯೆಗಳನ್ನೂ ಆಯ್ಕೆ ಮಾಡುವತ್ತ ಗಮನಿಸಬೇಕು.

### ಜಾತ್ಯತೀತ ಮನೋಭಾವ

ಜಾತ್ಯತೀತ ಮನೋಧರ್ಮವನ್ನು ಬೆಳೆಸುವಂಥ ವಿಷಯಗಳನ್ನು ಪಾಠಪುಸ್ತಕದಲ್ಲಿ ಅಳವಡಿಸಿಕೊಂಡು, ಯೋಗ್ಯವಾದ ಕಲಿಕಾ ರೀತಿಯನ್ನು ಸ್ವೀಕರಿಸಬೇಕು.

### ಸಹಿಷ್ಣುತೆ

ಭಿನ್ನಾಭಿಪ್ರಾಯವುಳ್ಳವರನ್ನೂ ಸಹನೆಯಿಂದ ಕಾಣುವುದು ಎಂಬ ಮೂಲ ತತ್ವವನ್ನು ಪಠ್ಯಕ್ರಮವು ಗುರಿಯಾಗಿಸಬೇಕು.

### ಕ್ರಿಯಾಶೀಲ – ಸೃಜನಶೀಲ ಚಿಂತನೆ

ವಿದ್ಯಾರ್ಥಿಗಳಲ್ಲಿ ಕ್ರಿಯಾಶೀಲವೂ ಸೃಜನಶೀಲವೂ ಆಗಿರುವ ಚಿಂತನೆಗಳನ್ನೂ, ಸಂಶೋಧನ ಬುದ್ಧಿಯನ್ನೂ ಬೆಳೆಸಬೇಕಾಗಿದೆ. ಪಠ್ಯಕ್ರಮದ ಪಠ್ಯ ವಿಷಯಗಳಲ್ಲಿ ಹಾಗೂ ಕಲಿಕಾ ತಂತ್ರಗಳಲ್ಲಿ ಸೃಜನಶೀಲ ಹುಡುಕಾಟಕ್ಕೆ ಅವಕಾಶವಿರಬೇಕು. ಬಹುಮುಖ ಬೌದ್ಧಿಕತೆ (multiple intelligence) ಯ ಹಂತಗಳನ್ನು ಇದಕ್ಕಾಗಿ ಪರಿಗಣಿಸಬೇಕು.

### ಸಂಸ್ಕೃತಿ ಹಾಗೂ ಪರಂಪರೆಯನ್ನು ಗೌರವಿಸುವುದು

ನಮ್ಮ ಸಾಂಸ್ಕೃತಿಕ ಪರಂಪರೆ ಹಾಗೂ ಇತಿಹಾಸವನ್ನು ಗೌರವಿಸುವ ಮನೋಧರ್ಮದ ನಿರ್ಮಾಣ ಎಂಬುದು ಪಠ್ಯಕ್ರಮವು ಪೂರೈಸಬೇಕಾದ ಮುಖ್ಯ ಗುರಿಗಳಲ್ಲಿ ಒಂದಾಗಿದೆ.

**ಸಮತ್ವ ಎಂಬ ಆಶಯ**

ಬೇರೆ ಬೇರೆ ಸಂದರ್ಭಗಳಲ್ಲಿ ಹಾಗೂ ಕಲಿಕಾ ಚಟುವಟಿಕೆಗಳಲ್ಲಿ ಸಮಾನತೆ, ಸಮತ್ವ ಮೊದಲಾದವುಗಳನ್ನು ದೃಢಪಡಿಸಬೇಕಾದುದು ಅನಿವಾರ್ಯವಾಗಿದೆ.

**ನಾಯಕತ್ವಗುಣ**

ಹೊಸ ಸಹಸ್ರಮಾನದ ಸವಾಲುಗಳನ್ನು ಎದುರಿಸಲೂ, ಸಾಧ್ಯತೆಗಳನ್ನು ವಿನಿಯೋಗಿಸಲೂ ಸಮರ್ಥರಾದ ನಾಯಕರನ್ನು ಸೃಷ್ಟಿಸಲು ಯೋಗ್ಯವಾದ ಕಲಿಕಾ ತಂತ್ರಗಳನ್ನು ಅಭಿವೃದ್ಧಿ ಪಡಿಸಬೇಕಾಗಿದೆ. ತರಗತಿಯ ಚಟುವಟಿಕೆಗಳಲ್ಲಿ ಎಲ್ಲ ವಿದ್ಯಾರ್ಥಿಗಳ ಭಾಗವಹಿಸುವಿಕೆಯನ್ನು ದೃಢಗೊಳಿಸಿ, ನಾಯಕತ್ವ ಗುಣಗಳನ್ನು ಅಭಿವೃದ್ಧಿ ಪಡಿಸುವ ಪರಿಸರವನ್ನು ಸೃಷ್ಟಿಸಬೇಕಾದ ಅಗತ್ಯವಿದೆ.

**ಜೀವನ ಕೌಶಲ್ಯ ಶಿಕ್ಷಣ**

ದೈನಂದಿನ ಬದುಕಿನಲ್ಲಿ ವ್ಯಕ್ತಿಗಳು ಅನುಭವಿಸುವ ಸಮಸ್ಯೆ ಹಾಗೂ ಸವಾಲುಗಳನ್ನು ಫಲಪ್ರದವಾಗಿ ಎದುರಿಸಲು ಸಹಾಯಕವಾದ ಸ್ವಭಾವಗಳನ್ನು ಗಳಿಸಿಕೊಳ್ಳುವ ಸಾಮರ್ಥ್ಯವೇ ಜೀವನ ಕೌಶಲ್ಯಗಳು. ತನ್ನನ್ನು ತಾನು ಅರಿತುಕೊಳ್ಳುವುದು, ಇತರರನ್ನು ಅರಿತುಕೊಳ್ಳುವುದು, ವಿಚಾರ ವಿನಿಮಯ ಸಾಮರ್ಥ್ಯ, ವ್ಯಕ್ತಿಗಳ ನಡುವಿನ ಸಂಬಂಧ, ಸೃಜನಶೀಲ ಚಿಂತನೆ, ವಿಮರ್ಶಾತ್ಮಕ ಚಿಂತನೆ, ತೀರ್ಮಾನಗಳನ್ನು ಕೈಗೊಳ್ಳುವ ಸಾಮರ್ಥ್ಯ, ಸಮಸ್ಯೆಗಳ ಪರಿಹಾರ, ಭಾವನಾತ್ಮಕ ಸಮತೋಲನ, ಒತ್ತಡದ ನಿಭಾಯಿಸುವಿಕೆ ಮೊದಲಾದವು ಜೀವನಕೌಶಲ್ಯಗಳಾಗಿವೆ. ಮಕ್ಕಳ ಪರಿಸರವನ್ನು ಹೊಂದಿಕೊಂಡು ಈ ವಲಯಗಳ ಘಟಕಗಳನ್ನು ಪಠ್ಯಕ್ರಮದಲ್ಲಿ ಅಳವಡಿಸಬೇಕಾಗಿದೆ. ಬದುಕಿನಲ್ಲಿ ಆತ್ಮವಿಶ್ವಾಸದೊಂದಿಗೆ ಮುಂದುವರಿಯಲು ಇಂತಹ ಕೌಶಲ್ಯಗಳು ವಿದ್ಯಾರ್ಥಿಗೆ ಸಹಾಯಕವಾಗುತ್ತವೆ.

**ಪೌರಧರ್ಮ**

ರಾಷ್ಟ್ರಗಳು ಪ್ರಜೆಗಳಿಗೆ ಹೇಗೋ ಹಾಗೆಯೇ ಪ್ರಜೆಗಳು ರಾಷ್ಟ್ರಕ್ಕೆ ಸಲ್ಲಿಸಬೇಕಾದ ಕೆಲವು ಧರ್ಮಗಳೂ, ಕರ್ತವ್ಯಗಳೂ ಇವೆ. ಒಂದು ರಾಷ್ಟ್ರದ ಅಭಿವೃದ್ಧಿ ಎಂದರೆ ಮಾನವ ಸಂಪನ್ಮೂಲದ ಅಭಿವೃದ್ಧಿ ಎಂದು ತಿಳಿಯುವ ಈ ಕಾಲದಲ್ಲಿ ಪೌರಪ್ರಜ್ಞೆಯಿರುವ ಜನರನ್ನು ಸೃಷ್ಟಿಸುವುದು ಶಿಕ್ಷಣದ ಪ್ರಧಾನ ಕರ್ತವ್ಯವಾಗಿದೆ. ಸ್ವತಂತ್ರವಾದ ಸಮಾಜ ಸೃಷ್ಟಿಯೊಂದಿಗೆ ಜವಾಬ್ದಾರಿ ಮತ್ತು ಶಿಸ್ತಿನಿಂದ ಕೂಡಿದ ಪ್ರಜೆಗಳನ್ನು ಸೃಷ್ಟಿಸುವುದು ಶಿಕ್ಷಣ ವ್ಯವಸ್ಥೆಯ ಗುರಿಯಾಗಿದೆ.

**ಮಾನವ ಹಕ್ಕುಗಳು**

ಮಾನವ ಎಂಬ ನೆಲೆಯಲ್ಲಿ ಈ ಭೂಮಿಯಲ್ಲಿ ಗೌರವದಿಂದ ಬದುಕುವ ವ್ಯಕ್ತಿಯ ಹಕ್ಕುಗಳೇ ಮಾನವ ಹಕ್ಕುಗಳು. ಸಂಯುಕ್ತರಾಷ್ಟ್ರ ಸಂಘದ ಮಾನವ ಹಕ್ಕುಗಳ ಘೋಷಣೆಯಲ್ಲಿ ಸಾರ್ವತ್ರಿಕವಾಗಿ ಅಂಗೀಕಾರ ಲಭಿಸಿದ ಮಾನವ ಹಕ್ಕು ಗಳಿಗೆ ಪಠ್ಯಕ್ರಮದಲ್ಲಿಯೂ ಪಾಠವಿನಿಮಯ ಪ್ರಕ್ರಿಯೆಯಲ್ಲಿಯೂ ಸೂಕ್ತ ಪ್ರಾಧಾನ್ಯವನ್ನು ನೀಡಬೇಕಾಗಿದೆ.

**ಮಕ್ಕಳ ಹಕ್ಕುಗಳು**

ಮಕ್ಕಳ ಎಲ್ಲ ರೀತಿಯ ಹಕ್ಕುಗಳನ್ನು ಸಂರಕ್ಷಿಸಬೇಕಾದ ಜವಾಬ್ದಾರಿ ನಮ್ಮ ಕರ್ತವ್ಯವಾಗಿದೆ.

**ಪ್ರಕೃತಿ – ಪ್ರಕೃತಿ ಸಂಪನ್ಮೂಲ ಸಂರಕ್ಷಣೆ, ಪರಿಸರ ಶುಚಿತ್ವ**

ಪ್ರಕೃತಿ ಸಂಪನ್ಮೂಲಗಳ ಸಂರಕ್ಷಣೆ, ಪರಿಸರ ಶುಚಿತ್ವ, ಪ್ರಕೃತಿ ಮತ್ತು ಪ್ರಾಕೃತಿಕ ಸಂಪನ್ಮೂಲಗಳ ಕುರಿತು ಪ್ರಾಥಮಿಕ ದೃಷ್ಟಿಕೋನಗಳನ್ನು ಪ್ರಾಥಮಿಕ ತರಗತಿಗಳಿಂದಲೇ ಅಳವಡಿಸಿಕೊಳ್ಳಬೇಕು. ವ್ಯಕ್ತಿ ಶುಚಿತ್ವದಂತೆಯೇ ಪರಿಸರ ಶುಚಿತ್ವವೂ ಅಗತ್ಯ ಎಂಬ ಶುಚಿತ್ವದ ಪ್ರಜ್ಞೆಯನ್ನು ವಿದ್ಯಾರ್ಥಿಗಳಲ್ಲಿ ಮೂಡಿಸಬೇಕಾಗಿದೆ. ಪ್ರಕೃತಿ ಮತ್ತು ಪ್ರಾಕೃತಿಕ ಸಂಪನ್ಮೂಲಗಳು ಕೇವಲ ಮಾನವನಿಗೆ ಮಾತ್ರ ಸೇರಿದ್ದಲ್ಲ ಮತ್ತು ಪ್ರಕೃತಿಯ ಸಮತೋಲನವನ್ನು ಕಾಪಾಡದಿದ್ದರೆ ವ್ಯಾಪಕವಾದ ದುರಂತಗಳಿಗೆ ಕಾರಣವಾಗುವುದು ಎಂಬ ಮನೋಭಾವವನ್ನು ವಿದ್ಯಾರ್ಥಿಗಳಲ್ಲಿ ಬೆಳೆಸಬೇಕು. ಪ್ರಾಕೃತಿಕ ಸಂಪನ್ಮೂಲ ಸಂರಕ್ಷಣೆ ಹಾಗೂ ಪರಿಸರ ಶುಚಿತ್ವವನ್ನು ಒಂದು ಜೀವನ ಮೌಲ್ಯವಾಗಿ ಮತ್ತು ಮನೋಧರ್ಮವಾಗಿ ಬದಲಾಯಿಸುವ ಚಟುವಟಿಕೆಗಳನ್ನು ಅನುಷ್ಠಾನಗೊಳಿಸಬೇಕು.

**ಶಾಂತಿಯ ಶಿಕ್ಷಣ**

ವೈಯುಕ್ತಿಕವಾಗಿಯೂ ಸಾಮಾಜಿಕವಾಗಿಯೂ ಶಾಂತಿ ಮತ್ತು ಸಮಾಧಾನವನ್ನು ಕಾಪಾಡುವ ಸಾಮರ್ಥ್ಯ ಮತ್ತು ಮನೋಭಾವಗಳನ್ನು ಬೆಳೆಸುವುದು ಶಾಂತಿ ಶಿಕ್ಷಣದ ಮುಖ್ಯ ಗುರಿ. ಸಂಘರ್ಷಗಳು ಹಾಗೂ ಅವುಗಳಿಗೆ ಕಾರಣವಾಗುವ ಹಿನ್ನೆಲೆಗಳನ್ನು ಬಿಟ್ಟು ಶಾಂತಿ, ಸೌಹಾರ್ದ ಹಾಗೂ ಸಮಾಧಾನದ ಸಾಧ್ಯತೆಗಳನ್ನು ಪಠ್ಯಕ್ರಮದ ವಿವಿಧ ವಿಷಯಗಳಲ್ಲಿ ಅಳವಡಿಸಬೇಕಾದುದು ಈ ಶಿಕ್ಷಣ ನೀತಿಯ ಅಗತ್ಯವಾಗಿದೆ.

**ಕಾನೂನು ಸಾಕ್ಷರತೆ**

ಕಾನೂನು ಸಂಬಂಧವಾದ ತಿಳುವಳಿಕೆಯು ಪ್ರಜಾಪ್ರಭುತ್ವ ದೇಶದ ಪ್ರಜೆಗಳಿಗೆ ಅತಿ ಅಗತ್ಯವಾಗಿದೆ. ಕಾನೂನು ಸಾಕ್ಷರತೆಯನ್ನು ದೃಢಪಡಿಸುವ ಪಾಠಭಾಗಗಳನ್ನು ವಿಷಯಕ್ಕೆ ಹೊಂದಿಕೊಂಡು ಅಳವಡಿಸಬೇಕಾದುದು ಕಾಲದ ಅಗತ್ಯವಾಗಿದೆ. ಕಾನೂನು ಸಹಾಯ ವೇದಿಕೆ, ಕಾನೂನು ಕ್ಲಬ್‌ಗಳು, ಕಾನೂನು ಕ್ಲಿನಿಕ್‌ಗಳು, ಕಾನೂನು ತಿಳುವಳಿಕಾ ಶಿಬಿರಗಳು ಮೊದಲಾದ ವಿಭಿನ್ನ ಚಟುವಟಿಕೆಗಳನ್ನು ಆಯೋಜಿಸಬಹುದು.

**ಸೈಬರ್ ಅಪರಾಧಗಳ ಕುರಿತಾಗಿರುವ ತಿಳುವಳಿಕೆ**

ಮಾಹಿತಿ ತಂತ್ರಜ್ಞಾನದ ಬಳಕೆಯಿರುವ ಸಮಕಾಲೀನ ಜಗತ್ತಿನಲ್ಲಿ ಪ್ರತಿದಿನವೆಂಬಂತೆ ಸೈಬರ್ ದುರುಪಯೋಗ ಮತ್ತು ಅಪರಾಧ ಚಟುವಟಿಕೆಗಳು ಹೆಚ್ಚುತ್ತಿವೆ. ಮಕ್ಕಳನ್ನು ಇಂತಹ ಚಟುವಟಿಕೆಗಳಿಂದ ದೂರವಿರಿಸುವ ತಿಳುವಳಿಕೆಯನ್ನು ಪಠ್ಯಕ್ರಮದಲ್ಲಿ ಅಳವಡಿಸಬೇಕು. ಇ–ಮೈಲ್, ಇಂಟರ್‌ನೆಟ್, ಸಾಮಾಜಿಕ ಜಾಲತಾಣಗಳು ಮೊದಲಾದವುಗಳ ಉಪಯೋಗವನ್ನು ಕುರಿತು ಸ್ಪಷ್ಟವಾದ ತಿಳುವಳಿಕೆಯನ್ನೂ ಅವುಗಳ ಬಳಕೆಯ ಗುಣ ದೋಷಗಳನ್ನೂ ಮಕ್ಕಳಿಗೆ ಒದಗಿಸಬೇಕು.

ಸೈಬರ್ ಅಪರಾಧಗಳಿಗಿರುವ ಶಿಕ್ಷೆ ಹಾಗೂ ಇಂಟರ್‌ನೆಟ್ ಬಳಕೆಯ ನೈತಿಕತೆಯನ್ನು ಪಠ್ಯಕ್ರಮದ ಮೂಲಕ ತಿಳಿಸಬೇಕು.

### ಮಾಧ್ಯಮ ತಿಳುವಳಿಕೆ

ಪತ್ರಿಕೆ ಹಾಗೂ ದೃಶ್ಯಮಾಧ್ಯಮಗಳಿಗೆ ನಮ್ಮ ಸಮಾಜದಲ್ಲಿ ಬಹಳ ಪ್ರಾಧಾನ್ಯವಿದೆ. ದೃಶ್ಯಮಾಧ್ಯಮಗಳು ಮಕ್ಕಳ ಮೇಲೆ ಬೀರುವ ಪರಿಣಾಮ ಅಪಾರ. ಹೀಗೆ ಮಾಧ್ಯಮ ಸಂಬಂಧಿ ಮಾಹಿತಿಗಳನ್ನು ನೀಡುವ ಘಟಕಗಳನ್ನು ಪಠ್ಯಕ್ರಮದಲ್ಲಿ ಸೇರ್ಪಡೆಗೊಳಿಸುವುದು ಅಗತ್ಯವಾಗಿದೆ.

### ಶಾಶ್ವತ ಅಭಿವೃದ್ಧಿ ದೃಷ್ಟಿಕೋನ

ಈ ಭೂಮಿಯು ಮಾನವನಿಗೆ ಮಾತ್ರ ಸೇರಿದ್ದಲ್ಲ ಎಂಬ ಪರಿಸರ ಪ್ರಜ್ಞೆಯನ್ನು ಪಠ್ಯಕ್ರಮವು ಒದಗಿಸಬೇಕಾಗಿದೆ. ಪರಿಸರ ಸಂಬಂಧವಾದ ಸವಾಲುಗಳು, ಪರಿಸರ ನಾಶಕ್ಕೆ ಕಾರಣವಾಗುವ ಮಾನವನ ಕೈವಾಡಗಳು ಹಾಗೂ ಪರಿಸರವನ್ನು ದುರಂತಗಳಿಂದ ಪಾರುಮಾಡುವ ದಾರಿಗಳ ಕುರಿತು ಪ್ರಜ್ಞೆಯನ್ನು ಮೂಡಿಸಬೇಕಾದುದು ಇಂದಿನ ಅಗತ್ಯವಾಗಿದೆ. ಪರಿಸರ ಮತ್ತು ಅಭಿವೃದ್ಧಿಯನ್ನು ಸಂಯೋಜಿಸುವುದು ಹೇಗೆ ಎಂಬುದನ್ನೂ ಶಾಶ್ವತವಾದ ಅಭಿವೃದ್ಧಿಯ ದೃಷ್ಟಿಕೋನಗಳನ್ನೂ ಸಂಶೋಧನೆಗಳನ್ನೂ ಪಠ್ಯಕ್ರಮದಲ್ಲಿ ಅಳವಡಿಸಬೇಕು. ಸಮಗ್ರವಾದ ಪರಿಸರ ಪ್ರಜ್ಞೆಯನ್ನು ಹುಟ್ಟಿಸುವುದು ಪಠ್ಯಕ್ರಮದ ಮುಖ್ಯ ಉದ್ದೇಶಗಳಲ್ಲಿ ಒಂದು.

### ಬಾಲ್ಯ ಶಿಕ್ಷಣ

ಮಕ್ಕಳ ಮನಶಾಸ್ತ್ರಜ್ಞರು, ಆರೋಗ್ಯ ಕಾರ್ಯಕರ್ತರು, ವೈದ್ಯರು ಹಾಗೂ ಅಧ್ಯಾಪಕರ ಸಂಯುಕ್ತ ಪರಿಶ್ರಮಗಳ ಮೂಲಕ ಬಾಲ್ಯ ಶಿಕ್ಷಣಕ್ಕೆ ಯೋಗ್ಯವಾದ ಘಟಕಗಳನ್ನು ಪಠ್ಯಕ್ರಮದಲ್ಲಿ ಅಳವಡಿಸಲು ಪರಿಗಣಿಸಬೇಕು. ವಿದ್ಯಾರ್ಥಿಗಳ ಆರೋಗ್ಯ, ಶುಚಿತ್ವ ಇವುಗಳಿಗೆ ಸಂಬಂಧಿಸಿದ ಸಂಶಯಗಳನ್ನು ಪರಿಹರಿಸಲು ವೈಜ್ಞಾನಿಕವಾದ ಮಾಹಿತಿಗಳನ್ನು ಪರಿಗಣಿಸುವುದು ಅಗತ್ಯವಾಗಿದೆ.

### ಉಪಭೋಗ ಸಂಸ್ಕೃತಿ–ದುಷ್ಪರಿಣಾಮಗಳು

ಉಪಭೋಗ ಸಂಸ್ಕೃತಿಯ ದುಷ್ಪರಿಣಾಮಗಳ ಕುರಿತಾದ ಸತ್ಯಾಂಶಗಳನ್ನು ಪ್ರಾಥಮಿಕ ಶಾಲಾ ಮಟ್ಟದಿಂದಲೇ ಪಠ್ಯಕ್ರಮದಲ್ಲಿ ಅಳವಡಿಸಬೇಕು. ಬಳಕೆದಾರ ಎಂಬ ನೆಲೆಯಲ್ಲಿ ನಮ್ಮ ಹಕ್ಕುಗಳನ್ನೂ, ಬಳಕೆದಾರರಿಗೆ ನೆರವಾಗುವ ಕಾನೂನುಗಳನ್ನೂ ಮಕ್ಕಳಿಗೆ ತಿಳಿಸಿಕೊಡಬೇಕು.

### ಮಾದಕ ದ್ರವ್ಯ ವಿರೋಧಿ ನಿಲುವು

ಮದ್ಯ, ಮಾದಕ ವಸ್ತುಗಳು, ಹೊಗೆ ಸೊಪ್ಪು ಹಾಗೂ ಇತರ ಮಾದಕ ದ್ರವ್ಯಗಳ ಬಳಕೆಯು ಹೊಸ ತಲೆಮಾರಿನ ಆರೋಗ್ಯವನ್ನು ಕೆಡಿಸುತ್ತದೆ ಎಂಬ ಅರಿವು ನಮ್ಮದಾಗಬೇಕು. ಮುಂದಿನ ತಲೆಮಾರನ್ನು

ಇವುಗಳಿಂದ ಮುಕ್ತಗೊಳಿಸಿ ರಕ್ಷಿಸಬೇಕು. ಅದಕ್ಕಾಗಿ ಮಾದಕದ್ರವ್ಯಗಳ ಉಪಯೋಗದಿಂದ ಉಂಟಾಗುವ ದೈಹಿಕ ಮಾನಸಿಕ ತೊಂದರೆಗಳನ್ನು ತಿಳಿಸುವ ಚಿತ್ರಗಳು, ಲಘು ಬರಹಗಳು, ದೃಶ್ಯಗಳನ್ನು ಪಠ್ಯಕ್ರಮದ ವಿಷಯಗಳಲ್ಲಿ ಅಳವಡಿಸಬೇಕು. ಮಾದಕ ದ್ರವ್ಯ ವಿರೋಧಿ ನಿಲುವನ್ನು ಸೃಷ್ಟಿಸುವುದು ಇವುಗಳ ಮುಖ್ಯ ಗುರಿಯಾಗಿರಬೇಕು.

**ಲಿಂಗ ಸಮಾನತೆ**

ಪಠ್ಯಕ್ರಮವು ಲಿಂಗ ಸಮಾನತೆಯನ್ನು ದೃಢಪಡಿಸುವಂತಿರಬೇಕು. ಗಂಡು – ಹೆಣ್ಣು ಎಂಬ ಭೇದಭಾವಗಳು ಪಠ್ಯಕ್ರಮದಲ್ಲಿ ನುಸುಳಬಾರದು. ಪಾಠಪುಸ್ತಕಗಳ ಚಿತ್ರಗಳಲ್ಲಿ ಕೂಡಾ ಲಿಂಗ ಸಮಾನತೆಯ ದೃಷ್ಟಿಕೋನವಿರಬೇಕು. ಕಲಿಕಾ ಚಟುವಟಿಕೆಗಳ ಸಂದರ್ಭಗಳಲ್ಲಿಯೂ ಈ ಲಿಂಗ ಸಮಾನತೆಯನ್ನು ದೃಢಪಡಿಸಬೇಕಾದುದು ಅಧ್ಯಾಪಕರ ಕರ್ತವ್ಯವಾಗಿದೆ.

**ಮಿತವ್ಯಯ ಗುಣ**

ಪ್ರಾಥಮಿಕ ಶಾಲಾ ಹಂತದಲ್ಲಿಯೇ ಮಿತವ್ಯಯ ಗುಣವನ್ನು ಮಕ್ಕಳಿಗೆ ಕಲಿಸಬೇಕು. ಮಿತವ್ಯಯ ಗುಣದ ಅಗತ್ಯ ಮತ್ತು ಮಹತ್ವವನ್ನು ತಿಳಿಸಿಕೊಡಬೇಕು. ಮಿತವ್ಯಯವನ್ನು ಪ್ರಾಯೋಗಿಕ ಚಟುವಟಿಕೆಗಳ ಮೂಲಕ ತಿಳಿಸಿಕೊಡಬೇಕು.

**ರಸ್ತೆ ಸುರಕ್ಷೆ**

ರಸ್ತೆಯಲ್ಲಿ ಪಾಲಿಸಬೇಕಾದ ನಿಮಯಗಳು, ರಸ್ತೆ ಅಪಘಾತಗಳನ್ನು ತಪ್ಪಿಸಲು ಇರುವ ಪ್ರಾಯೋಗಿಕ ಸೂಚನೆಗಳು, ಚಟುವಟಿಕೆಗಳು ಮೊದಲಾದವು ರಸ್ತೆ ಸುರಕ್ಷೆಯ ಘಟಕಗಳಾಗಿವೆ. ರಸ್ತೆಯು ಸಾರ್ವಜನಿಕ ಸ್ಥಳವೆಂದೂ, ನಮ್ಮ ಹಾಗೆ ಇತರರಿಗೂ ರಸ್ತೆಯನ್ನು ಬಳಸುವ ಸ್ವಾತಂತ್ರ್ಯವಿದೆ ಎಂದೂ ಪೌರಪ್ರಜ್ಞೆಯನ್ನು ಹುಟ್ಟಿಸಬೇಕು. ರಸ್ತೆ ಸುರಕ್ಷತೆಯ ಸಂಬಂಧವಾಗಿ ಚಟುವಟಿಕೆಗಳಿಗೆ ಪ್ರಾಧಾನ್ಯ ನೀಡಬೇಕು.

ಪಠ್ಯಕ್ರಮದ ಸ್ವಾಭಾವಿಕವಾದ ವಿನಿಮಯದಲ್ಲಿ ಈ ಘಟಕಗಳನ್ನು ಹಿನ್ನೆಲೆಯಾಗಿಟ್ಟುಕೊಂಡು ಕಲಿಕಾ ಸಾಧನೆಗಳನ್ನು ದೃಢಪಡಿಸಬೇಕು. ವಿವಿಧ ವಿಷಯಗಳ ಒಳ ಹೂರಣದ ಆಶಯಗಳ ಆಯ್ಕೆಯಲ್ಲಿಯೂ ಕಲಿಕಾ ಚಟುವಟಿಕೆಗಳನ್ನು ಕ್ರಮೀಕರಿಸುವಾಗಲೂ ಸಾಕಷ್ಟು ಪರಿಗಣನೆಯನ್ನು ನೀಡಬೇಕಾಗಿದೆ. ಬೋಧನೆ ಮತ್ತು ಕಲಿಕೆಯ ಪ್ರಕ್ರಿಯೆಗಳಲ್ಲಿ ಸಾಗುವಾಗ ಇಂತಹ ಆಶಯಗಳಿಗೆ ಸಂಬಂಧಿಸಿದ ತಿಳುವಳಿಕೆ, ಕೌಶಲ್ಯ, ಮನೋಭಾವ ಇವುಗಳಿಗೆ ಒತ್ತು ನೀಡಬೇಕು. ನಿರಂತರ ಮೌಲ್ಯಮಾಪನ ಪ್ರಕ್ರಿಯೆಗಳ ಮೂಲಕ ಈ ಗುರಿಗಳನ್ನು ಈಡೇರಿಸಲು ಸಾಧ್ಯವಾಗಿದೆಯೇ ಎಂದು ಪರಿಶೋಧಿಸಲು ಸಾಧ್ಯವಾಗಬೇಕು. ವಿವಿಧ ಕ್ಲಬ್‌ಗಳ ಚಟುವಟಿಕೆಗಳು, SPC, NCC, Scouts & Guides, JRC, ವಿದ್ಯಾರಂಗ ಕಲಾ ಸಾಹಿತ್ಯವೇದಿಕೆ, ಗಾಂಧೀದರ್ಶನ ಮೊದಲಾದ ವ್ಯವಸ್ಥೆಗಳು ಮೌಲ್ಯಗಳನ್ನೂ ಮನೋಧರ್ಮಗಳನ್ನೂ ಕಾಳಜಿಯನ್ನೂ ಬೆಳೆಸುವ ವೇದಿಕೆಗಳಾಗಬೇಕು.

## 1.11 ಹಕ್ಕು ಆಧಾರಿತ ಶಿಕ್ಷಣ (Right Based Education)

ಮಕ್ಕಳ ಹಕ್ಕುಗಳನ್ನು ನಿರ್ಣಯಿಸಿ ಜಗತ್ತಿನಾದ್ಯಂತ ಅನುಷ್ಠಾನಗೊಳಿಸಲು ಯುನೆಸ್ಕೋ ನೇತೃತ್ವ ವಹಿಸಿದೆ. ಈ ಹಿನ್ನೆಲೆಯಲ್ಲಿ ವಿವಿಧ ದೇಶಗಳಲ್ಲಿ ಮಕ್ಕಳ ಹಕ್ಕುಗಳ ಸಂರಕ್ಷಣೆಗಾಗಿ ಅನೇಕ ಕಾನೂನುಗಳನ್ನು ರಚಿಸಲಾಗಿದೆ. ಭಾರತದಲ್ಲಿ ರಾಷ್ಟ್ರೀಯ ಶಿಕ್ಷಣ ಹಕ್ಕು ನಿಯಮ– 2009 ಕಾರ್ಯಗತವಾಗಿರುವುದು ಈ ನಿಟ್ಟಿನಲ್ಲಿ ಒಂದು ಮೈಲಿಗಲ್ಲು. ಮಕ್ಕಳ ಎಲ್ಲ ರೀತಿಯ ಹಕ್ಕುಗಳನ್ನು ಸಂರಕ್ಷಿಸುವ ಜವಾಬ್ದಾರಿಯು ಹಿರಿಯರಾದ ನಮ್ಮ ಕರ್ತವ್ಯವಾಗಿದೆ. ಶಿಕ್ಷಣ ಹಕ್ಕುಗಳ ಕುರಿತು ಹೇಳುವಾಗ ಅವುಗಳನ್ನು ಮೂರು ಮುಖ್ಯ ಘಟಕಗಳಾಗಿ ವಿಂಗಡಿಸಬಹುದು.

- ಭಾಗವಹಿಸುವಿಕೆ (Participation)
- ಲಭ್ಯತೆ (Provision)
- ಸಂರಕ್ಷಣೆ (Protection)

**ಭಾಗವಹಿಸುವಿಕೆ (Participation)**

- ಮಕ್ಕಳಿಗೆ ಸಂಬಂಧಿಸಿದ ಎಲ್ಲ ತೀರ್ಮಾನಗಳಲ್ಲಿ ನನ್ನ ಅಭಿಪ್ರಾಯವನ್ನು ಕೇಳುತ್ತಾರೆ.
- ತೀರ್ಮಾನಗಳಲ್ಲಿ ನನ್ನ ಅಭಿಪ್ರಾಯಕ್ಕೆ ಮುಖ್ಯ ಪರಿಗಣನೆ ಇದೆ.
- ನನ್ನ ಸಾಮರ್ಥ್ಯ ಹಾಗೂ ಮಿತಿಗಳಿಗೆ ಹೊಂದಿಕೊಂಡು ನೀಡಲಾಗುವ ಚಟುವಟಿಕೆಗಳಲ್ಲಿ ಭಾಗವಹಿಸಲು ನನಗೆ ಅವಕಾಶ ಲಭಿಸುತ್ತದೆ.
- ನನ್ನ ಸಾಮರ್ಥ್ಯಗಳನ್ನು ಪೋಷಿಸಲೂ ಮಿತಿಗಳನ್ನು ದಾಟಲೂ ಯೋಗ್ಯವಾದ ಕಲಿಕಾ ಪ್ರಕ್ರಿಯೆಗಳ ಮೂಲಕ ಸಾಗಲು ಸಾಧ್ಯವಾಗುತ್ತದೆ.
- ತರಗತಿಯಲ್ಲಿ ನಡೆಯುವ ಚಟುವಟಿಕೆಗಳಲ್ಲಿ ನನಗೂ ಸಹಪಾಠಿಗಳಿಗೂ ಕ್ರಿಯಾಶೀಲವಾದ ಭಾಗವಹಿಸುವಿಕೆ ಲಭಿಸುತ್ತಿದೆ.
- ನನ್ನ ಸಾಮರ್ಥ್ಯಗಳನ್ನು ಪ್ರದರ್ಶಿಸಲು ನನಗೆ ಅವಕಾಶ ಸಿಗುತ್ತದೆ.

**ಲಭ್ಯತೆ (Provision)**

- ಸರಿಯಾದ ಶೈಕ್ಷಣಿಕ ಯೋಗ್ಯತೆಯಿರುವ, ಜ್ಞಾನವನ್ನು ಕಾಲಕ್ಕನುಸರಿಸಿ ನವೀಕರಿಸುವ ಅಧ್ಯಾಪಕರ ಸೇವೆ ನನಗೆ ಲಭಿಸುತ್ತಿದೆ.
- ನಿರ್ದಿಷ್ಟ ಸಮಯದಲ್ಲಿ ಕಲಿಕಾನುಭವಗಳು ಸರಿಯಾದ ಕಾಲಕ್ಕೆ ಸಿಗುತ್ತಿವೆ.
- ದೈಹಿಕ, ಮಾನಸಿಕ ಬೆಳವಣಿಗೆಗೆ ಪೂರಕವಾಗಿರುವ ತರಗತಿ ಪರಿಸರ ನನಗೆ ಲಭಿಸುತ್ತಿದೆ.

- ಕಲಿಕಾ ಚಟುವಟಿಕೆಗಳಿಗೆ ಅಗತ್ಯವಾದ ಕಲಿಕೋಪಕರಣಗಳನ್ನು ಯಥಾಕಾಲಕ್ಕೆ ಒದಗಿಸಿಕೊಡಲು ನನ್ನ ಅಧ್ಯಾಪಕರಿಗೆ ಸಾಧ್ಯವಾಗುತ್ತದೆ.
- ಕಲೆ ಮತ್ತು ಕ್ರೀಡೆಯ ಬೆಳವಣಿಗೆಗೆ ಅಗತ್ಯವಾದ ಉಪಕರಣಗಳೂ ಅವಕಾಶಗಳೂ ನನಗೆ ಸಿಗುತ್ತಿವೆ.

**RTE 2009 ಹೀಗೆ ಹೇಳುತ್ತದೆ**

- 1 ರಿಂದ 5 ರ ವರೆಗಿನ ತರಗತಿಗಳಲ್ಲಿ ಕಲಿಯುವ ಮಕ್ಕಳಿಗೆ 200 ಕಲಿಕೆಯ ದಿವಸಗಳೂ 800 ಗಂಟೆಗಳ ಬೋಧನ ಸಮಯವೂ ಲಭಿಸಬೇಕು.
- 6 ರಿಂದ 8 ರ ವರೆಗಿನ ತರಗತಿಗಳಲ್ಲಿ ಕಲಿಯುವ ವಿದ್ಯಾರ್ಥಿಗಳಿಗೆ 220 ಕಲಿಕೆಯ ದಿವಸಗಳೂ 1000 ಗಂಟೆಗಳ ಬೋಧನ ಸಮಯವೂ ಲಭಿಸಬೇಕು.

**ಸಂರಕ್ಷಣೆ (Protection)**

- ಶಾಲೆಯಲ್ಲಿ ಹಾಗೂ ಹೊರಗೆ ಯಾವುದೇ ಭೇದಭಾವವನ್ನು ನಾನು ಅನುಭವಿಸುವುದಿಲ್ಲ.
- ನನ್ನನ್ನು ಯಾರೂ ಕೂಡಾ ಯಾವುದೇ ರೀತಿಯಲ್ಲಿ ಕಡೆಗಣಿಸುವುದಿಲ್ಲ.
- ಯಾರೂ ಕೂಡಾ ದೈಹಿಕ ಅಥವಾ ಮಾನಸಿಕ ದೌರ್ಜನ್ಯವೆಸಗುವುದಿಲ್ಲ.
- ಅಧ್ಯಾಪಕರಲ್ಲಿ ನಿರ್ಭೀತಿಯಿಂದ ವ್ಯವಹರಿಸಲು ನನಗೆ ಸಾಧ್ಯವಾಗುತ್ತದೆ.
- ಮಗುವಾದರೂ ನನಗೆ ಖಾಸಗಿತನವಿದೆ. ನನ್ನನ್ನು ಎಲ್ಲರೂ ಅಂಗೀಕರಿಸುತ್ತಾರೆ.
- ಶಾಲೆಯಲ್ಲಿಯೂ ಮನೆಯಲ್ಲಿಯೂ ನಾನು ಸುರಕ್ಷಿತನಾಗಿದ್ದೇನೆ ಎಂಬ ಭರವಸೆ ನನಗಿದೆ.

## ಕೇರಳ ರಾಜ್ಯ ಮಕ್ಕಳ ಹಕ್ಕು ಸಂರಕ್ಷಣ ಆಯೋಗ

2002 ಮೇ ತಿಂಗಳಲ್ಲಿ ಸೇರಿದ ಸಂಯುಕ್ತ ರಾಷ್ಟ್ರ ಸಭೆಯ ಮಕ್ಕಳಿಗಾಗಿರುವ ವಿಶೇಷ ಸಮ್ಮೇಳನವು 'ಮಕ್ಕಳಿಗೆ ಯೋಗ್ಯವಾದ ಒಂದು ಜಗತ್ತು' ಎಂಬ ಶೀರ್ಷಿಕೆಯಲ್ಲಿ ನಿರ್ಣಯವೊಂದನ್ನು ಅಂಗೀಕರಿಸಿತು. ಇದರ ಆಧಾರದಲ್ಲಿ ಕೇಂದ್ರ ಸರಕಾರವು ನಿರ್ಮಿಸಿದ 2005ರ ಬಾಲಕರ ಹಕ್ಕು ಸಂರಕ್ಷಣ ಆಯೋಗ ಕಾಯಿದೆಯ ಹಾಗೂ 2012ರ ಕೇರಳ ಪ್ರಾಂತ್ಯ ಮಕ್ಕಳ ಹಕ್ಕು ನಿಯಮಗಳ ಆಧಾರದಲ್ಲಿ 'ಕೇರಳ ಪ್ರಾಂತ್ಯ ಮಕ್ಕಳ ಹಕ್ಕು ಆಯೋಗ' ಕಾರ್ಯಾಚರಿಸುತ್ತಿದೆ. ನಮ್ಮ ಸಂವಿಧಾನವು ಹೇಳುವ ಮೂಲಭೂತ ಹಕ್ಕುಗಳನ್ನು ಹಾಗೂ ಮಕ್ಕಳ ಹಕ್ಕುಗಳನ್ನು ಸಂರಕ್ಷಿಸುವುದು ಆಯೋಗದ ಕೆಲಸವಾಗಿದೆ.

ಈ ಮಕ್ಕಳ ಹಕ್ಕುಗಳನ್ನು ದೃಢಪಡಿಸಲು ತಾನು ಏನು ಮಾಡಿದೆನೆಂದೂ ಇನ್ನು ಏನು ಮಾಡಬಹುದೆಂದೂ ಪ್ರತಿಯೊಬ್ಬ ಅಧ್ಯಾಪಕನೂ ಯೋಚಿಸಬೇಕಾಗಿದೆ.

## 1.12 ಮೆಂಟರಿಂಗ್

ರಾಷ್ಟ್ರೀಯ ಶಿಕ್ಷಣ ಹಕ್ಕು ಕಾಯ್ದೆಯು ಅಧ್ಯಾಪಕ/ಅಧ್ಯಾಪಿಕೆಯನ್ನು ಮೆಂಟರ್ (mentor) ಎಂಬುದಾಗಿ ಪರಿಗಣಿಸುತ್ತದೆ. ಸಮಗ್ರ ಶಾಲಾ ಅಭಿವೃದ್ಧಿ ವಲಯದಲ್ಲಿ ಮೆಂಟರಿಂಗ್‌ಗೆ ಬಹಳಷ್ಟು ಪ್ರಾಧಾನ್ಯವಿದೆ. ಕಲಿಕೆಯ ಸಾಧನೆಗಳನ್ನು ರುಜುವಾತುಪಡಿಸಲು ಸಮಗ್ರವಾದ ಮಾರ್ಗಸೂಚಿಗಳು ಅತಿ ಅವಶ್ಯಕ.

ಶಿಕ್ಷಣ ಪ್ರಕ್ರಿಯೆಯ ಮುಖ್ಯ ಘಟಕವಾದ ಅಧ್ಯಾಪಕ – ವಿದ್ಯಾರ್ಥಿ ಸಂಬಂಧದಲ್ಲಿ ಇಂದು ಬಹಳಷ್ಟು ವ್ಯತ್ಯಾಸಗಳಾಗಿವೆ. ವಿದ್ಯಾರ್ಥಿಗೆ ಜ್ಞಾನವನ್ನು ಹಸ್ತಾಂತರಿಸುವ ವ್ಯಕ್ತಿ ಮಾತ್ರವಲ್ಲದೆ ವಿದ್ಯಾರ್ಥಿಗಳಿಗೆ ಜ್ಞಾನವನ್ನು ಗಳಿಸಲಿರುವ ವೈವಿಧ್ಯಪೂರ್ಣ ಅವಕಾಶಗಳನ್ನು ಒದಗಿಸಿಕೊಡುವ ವ್ಯಕ್ತಿಯಾಗಿಯೂ ಅಧ್ಯಾಪಕ/ಅಧ್ಯಾಪಿಕೆ ಕಾರ್ಯನಿರ್ವಹಿಸಬೇಕಾಗಿದೆ.

ಮನೆಯನ್ನು ಹೊರತುಪಡಿಸಿದರೆ ವಿದ್ಯಾರ್ಥಿಗೆ ಶಾಲೆ ಎಂಬುದು ಮತ್ತೊಂದು ಮನೆಯಿದ್ದಂತೆ. ಶಾಲೆ ಮನೆಯೇ ಆದಾಗ ವಿದ್ಯಾರ್ಥಿಗೆ ಅಧ್ಯಾಪಕ ವೃಂದವು ಮನೆಯ ಸದಸ್ಯರೇ ಆಗುತ್ತಾರೆ. ವಿದ್ಯಾರ್ಥಿಗೆ ಮನೆಯಿಂದ ಲಭಿಸುವ ಪ್ರೀತಿ, ಕಾಳಜಿ, ರಕ್ಷಣೆ, ಅಂಗೀಕಾರ ಮುಂತಾದವುಗಳು ಗರಿಷ್ಠ ಅಥವಾ ಕನಿಷ್ಠ ಮಟ್ಟದಲ್ಲಿ ಲಭಿಸುತ್ತಿವೆ ಎಂಬುದನ್ನು ಪ್ರತಿಯೊಬ್ಬ ಅಧ್ಯಾಪಕ ಅಥವಾ ಅಧ್ಯಾಪಿಕೆ ಮನದಟ್ಟು ಮಾಡಿಕೊಳ್ಳಬೇಕು. ಇದನ್ನು ತಿಳಿದಾದ ಬಳಿಕ ಪ್ರತಿಯೊಂದು ಮಗುವಿಗೂ ಅವಶ್ಯಕವಾದ ರೀತಿಯಲ್ಲಿ ಇವುಗಳನ್ನು ನೀಡುವ ಹೊಣೆಗಾರಿಕೆ ಅಧ್ಯಾಪಕರಿಗಿದೆ. ಹೀಗಾದಾಗ ಮಾತ್ರ ಶಾಲೆಯೂ ಮನೆಯೆನಿಸಿಕೊಳ್ಳುವುದು.

ಪ್ರತಿಯೊಂದು ಮಗುವಿನ ವ್ಯಕ್ತಿಗತವಾದ ಮತ್ತು ಕೌಟುಂಬಿಕವಾದ ಹಿನ್ನೆಲೆಗಳನ್ನು ಅರ್ಥಮಾಡಿಕೊಳ್ಳಲು ಅಧ್ಯಾಪಕರು ಈ ಕೆಳಗಿನ ವಿಷಯಗಳನ್ನು ಗಮನಿಸಬೇಕಾಗುತ್ತದೆ.

- ಗೃಹ ಸಂದರ್ಶನ
- ಹೆತ್ತವರೊಂದಿಗಿನ ಆಶಯ ವಿನಿಮಯ
- ಮಗುವಿನ ನಿರಂತರ ನಿರೀಕ್ಷಣೆ

ಹೀಗೆ ಮಗುವಿಗೆ ಪ್ರೀತಿ, ಅಂಗೀಕಾರ ಮತ್ತು ಸಂರಕ್ಷಣೆ ಇತ್ಯಾದಿಗಳನ್ನು ನೀಡಿ, ನಾವು ಅಧ್ಯಾಪಕರು ಮಗುವಿನ ಸಹರಕ್ಷಕರಾಗಿ ಜವಾಬ್ದಾರಿ ವಹಿಸಿಕೊಂಡಾಗ ಮಾತ್ರ ಹೊಸ ಕಾಲಮಾನದ ಅಧ್ಯಾಪಕ/ಅಧ್ಯಾಪಿಕೆಯಾಗಿ ನಾವು ಗುರುತಿಸಿಕೊಳ್ಳಬಹುದು.

ಮೆಂಟರಿಂಗ್ ಮೂಲಕ ಮಾರ್ಗದರ್ಶನ, ಸಲಹೆ, ಬೆಂಬಲ, ಜ್ಞಾನವನ್ನು ಉತ್ತಮಪಡಿಸಲು ಬೇಕಾದ ಅವಕಾಶ ಮುಂತಾದುವುಗಳನ್ನು ಅಧ್ಯಾಪಕರು ಮಗುವಿಗೆ ಒದಗಿಸಿಕೊಡುತ್ತಾರೆ. ಅನುಭವಿಯಾದ ನೇತಾರ ಎಂಬ ನೆಲೆಯಲ್ಲಿಯೂ ಅನುಕರಣೀಯ ಆದರ್ಶ ವ್ಯಕ್ತಿ ಎಂಬ ನೆಲೆಯಲ್ಲಿಯೂ ಮೆಂಟರಿಂಗ್‌ನ ಕಾರ್ಯಚಟುವಟಿಕೆಗಳು ಮುಂದುವರಿಯಬೇಕು. ಬೋಧನೆಗೆ ಬೇಕಾದ ಸೂಚನೆಗಳು, ಕೌನ್ಸಿಲಿಂಗ್ ಇತ್ಯಾದಿಗಳೆಲ್ಲ ಇದರ ಭಾಗಗಳಾಗಿವೆ. ವಿದ್ಯಾರ್ಥಿಯ ಒಳಗೆ ಸುಪ್ತವಾಗಿರುವ ಪ್ರತಿಭೆಯನ್ನು ಹೊರಗೆ ತರಲು ಸಮರ್ಥ ಮೆಂಟರ್‌ನಿಂದ ಮಾತ್ರ ಸಾಧ್ಯ.

**ಮೆಂಟರಿಂಗ್ ಮೂಲಕ**

- ಅಧ್ಯಾಪಕ ಹಾಗೂ ವಿದ್ಯಾರ್ಥಿಗೆ ಉತ್ತಮ ಶಿಕ್ಷಣ ಅನುಭವಗಳು ಲಭಿಸುತ್ತವೆ.
- ಅಧ್ಯಾಪಕ ಹಾಗೂ ವಿದ್ಯಾರ್ಥಿಯ ಜ್ಞಾನ ವಲಯ ವಿಸ್ತಾರಗೊಳ್ಳುತ್ತದೆ.
- ವಿದ್ಯಾರ್ಥಿ ಮತ್ತು ಶಾಲೆಯ ಪರಸ್ಪರ ಸಂಬಂಧ ಗಟ್ಟಿಗೊಳ್ಳುತ್ತದೆ.
- ವಿದ್ಯಾರ್ಥಿಯ ಕಲಿಕೆಯಲ್ಲಿ ಪ್ರಗತಿ ಹಾಗೂ ವ್ಯಕ್ತಿತ್ವ ವಿಕಾಸ ಉಂಟಾಗುತ್ತದೆ.
- ಚಟುವಟಿಕೆಗಳ ಮೂಲಕ ಸಾಮಾಜಿಕ ಪ್ರಜ್ಞೆ ಬೆಳೆಸಲು ಮತ್ತು ತೀರ್ಮಾನಗಳನ್ನು ಕೈಗೊಳ್ಳಲು ಸಾಧ್ಯವಾಗುವುದು.
- ಹೆತ್ತವರು ಹಾಗೂ ಶಾಲೆಯ ಪರಸ್ಪರ ಸಂಬಂಧ ಗಟ್ಟಿಗೊಳ್ಳುವುದಲ್ಲದೆ ವಿದ್ಯಾರ್ಥಿಯ ಕಲಿಕೆಯ ಗುಣಮಟ್ಟದ ಕುರಿತು ತಿಳಿಯಲು ಸಾಧ್ಯವಾಗುತ್ತದೆ.
- ಕಲೆ, ಕ್ರೀಡೆ, ಆರೋಗ್ಯ, ವೃತ್ತಿ ಪರಿಚಯ ಮೊದಲಾದ ಕಲಿಕಾ ವಲಯಗಳಲ್ಲಿ ವಿದ್ಯಾರ್ಥಿಗಳ ಪಾಲ್ಗೊಳ್ಳುವಿಕೆ ಮತ್ತು ಮೌಲ್ಯಮಾಪನವನ್ನು ಗಟ್ಟಿಗೊಳಿಸುತ್ತದೆ.

ಮೆಂಟರಿಂಗ್‌ಗೆ ಸಾಧ್ಯವಿರುವ ರೀತಿಯಲ್ಲಿ ನಕಾಶೆಗಳನ್ನು ರೂಪಿಸಿ, ಇದೊಂದು ಪರಿಹಾರ ಬೋಧನೆ ಪ್ರಕ್ರಿಯೆಯಾಗಿಯೂ ನಿರಂತರ ಮೌಲ್ಯನಿರ್ಣಯ ಮತ್ತು ವಿದ್ಯಾರ್ಥಿಯ ವ್ಯಕ್ತಿತ್ವ ವಿಕಾಸಕ್ಕೆ ಸಹಾಯಕವಾಗುವ ಪ್ರಕ್ರಿಯೆಯನ್ನಾಗಿಯೂ ರೂಪುಗೊಳಿಸಬೇಕಾಗಿದೆ.

ಶಾಲೆಯ ಎಲ್ಲಾ ಅಧ್ಯಾಪಕರನ್ನು 'ಮೆಂಟರ್ಸ್' ಎಂಬುದಾಗಿಯೂ ವಿದ್ಯಾರ್ಥಿಗಳನ್ನು 'ಮೆಂಟಿ' ಗಳನ್ನಾಗಿಯೂ ಪರಿಗಣಿಸುವ ಮೂಲಕ ಮೆಂಟರಿಂಗ್ ರೂಪುಗೊಳ್ಳಬೇಕು. ತರಗತಿಯ ಎಲ್ಲಾ ವಿದ್ಯಾರ್ಥಿಗಳನ್ನು ಸಣ್ಣ ಸಣ್ಣ ಗುಂಪುಗಳೆಂದು ಭಾವಿಸಿಕೊಂಡು, ಪ್ರತಿಯೊಂದು ಗುಂಪಿನ ಪ್ರಗತಿಯನ್ನು ಸಮರ್ಪಕ ರೀತಿಯಲ್ಲಿ ತಿಳಿಯಲು ಆಯಾ ತರಗತಿಯಲ್ಲಿ ಕಲಿಸುವ ಅಧ್ಯಾಪಕರಿಗೆ ಗುಂಪಿನ ಜವಾಬ್ದಾರಿಯನ್ನು ನೀಡಬಹುದು.

## 1.13 ಅಧ್ಯಾಪಕರು ಪಾಲಿಸಬೇಕಾದ ಪ್ರಮುಖ ವೃತ್ತಿಪರ ನೀತಿಸಂಹಿತೆ

(Code of Professional Ethics for School Teachers)

### 1. ವಿದ್ಯಾರ್ಥಿಗಳೊಂದಿಗಿರುವ ಜವಾಬ್ದಾರಿಗಳು

1.1 ಎಲ್ಲ ವಿದ್ಯಾರ್ಥಿಗಳೊಂದಿಗೆ ಪ್ರೀತಿ, ವಾತ್ಸಲ್ಯದಿಂದ ವರ್ತಿಸುವುದು.

- ಎಲ್ಲ ವಿದ್ಯಾರ್ಥಿಗಳೊಂದಿಗೆ ಸಮಾನ ರೀತಿಯಿಂದ ವರ್ತಿಸುವುದು.
- ಕಲಿಕೆಯಲ್ಲಿ ಹಿಂದಿರುವ ವಿದ್ಯಾರ್ಥಿಗಳಿಗೆ ವಿಶೇಷ ಪರಿಗಣನೆ ನೀಡುವುದು.
- ವಿದ್ಯಾರ್ಥಿಗಳಲ್ಲಿ ಆತ್ಮವಿಶ್ವಾಸ, ಆಸಕ್ತಿ ಮುಂತಾದುವುಗಳನ್ನು ಮೂಡಿಸುವ ರೀತಿಯಲ್ಲಿ ವ್ಯವಹರಿಸುವುದು.

1.2 ಜಾತಿ, ಮತ, ವರ್ಗ, ವರ್ಣ, ಆರ್ಥಿಕ ಸ್ಥಿತಿಗತಿ, ಭಾಷೆ, ಲಿಂಗ, ಜನ್ಮಸ್ಥಳ ಎಂಬೀ ವಿಷಯಗಳಲ್ಲಿ ಭೇದಭಾವವಿಲ್ಲದೆ, ನಿಷ್ಪಕ್ಷಪಾತ ಹಾಗೂ ನ್ಯಾಯಯುತವಾದ ಮೌಲ್ಯಗಳನ್ನು ಗೌರವಿಸುವುದು.

- ಪ್ರಜಾಪ್ರಭುತ್ವ ತತ್ವಸಿದ್ಧಾಂತಗಳಲ್ಲಿ, ಸಹಿಷ್ಣುತೆಯ ವಿಷಯಗಳಲ್ಲಿ, ಸಾಮಾಜಿಕ ವಿಚಾರಗಳಲ್ಲಿ ಅಧ್ಯಾಪಕರಿಗಿರುವ ನಂಬಿಕೆ ಮತ್ತು ವಿಶ್ವಾಸವನ್ನು ವಿದ್ಯಾರ್ಥಿಗಳಲ್ಲಿಯೂ ಮೂಡಿಸುವುದು.

- ಅಧ್ಯಾಪಕರ ವ್ಯಕ್ತಿಗತವಾದ ನಂಬಿಕೆಗಳು ಸಂವಿಧಾನದ ತತ್ವಗಳಿಗೆ ವಿರುದ್ಧವಾದರೆ ಅದು ಶಾಲೆಯ ಒಟ್ಟು ವ್ಯವಸ್ಥೆಯ ಮೇಲೆ ಗಂಭೀರ ಪರಿಣಾಮ ಬೀರಬಹುದು.

1.3 ವಿದ್ಯಾರ್ಥಿಯ ದೈಹಿಕ, ಬೌದ್ಧಿಕ, ಭಾವನಾತ್ಮಕ, ಸಾಮಾಜಿಕ ಮತ್ತು ಸದಾಚಾರಗಳ ಬೆಳವಣಿಗೆಗಳಿಗೆ ಸೂಕ್ತ ವಾತಾವರಣದ ಸೃಷ್ಟಿ.

- ಶಾಲಾ ಶಿಕ್ಷಣವು ವಿದ್ಯಾರ್ಥಿಯ ಶಾರೀರಿಕ ಮತ್ತು ಬೌದ್ಧಿಕವಾದ ಕೌಶಲ್ಯಗಳನ್ನು ಪರಿಪೂರ್ಣತೆಯತ್ತ ಕೊಂಡೊಯ್ಯುವ ಕಾಲಘಟ್ಟವಾಗಿದೆ.
- ಶಿಕ್ಷಣವು ವಿದ್ಯಾರ್ಥಿಯ ಬೌದ್ಧಿಕ ಬೆಳವಣಿಗೆಗೆ ಮಾತ್ರ ಸೀಮಿತವಾಗಿರಬಾರದು.
- ವಿದ್ಯಾರ್ಥಿಯ ಸರ್ವಾಂಗೀಣ ಅಭಿವೃದ್ಧಿಯು ಶಿಕ್ಷಣದ ಮುಖ್ಯ ಲಕ್ಷ್ಯವಾಗಿರಬೇಕು.

1.4 ಶಾಲಾ ಶಿಕ್ಷಣದ ಎಲ್ಲಾ ಘಟ್ಟಗಳಲ್ಲಿಯೂ ವಿದ್ಯಾರ್ಥಿಯ ವ್ಯಕ್ತಿತ್ವವು ಗೌರವಿಸಲ್ಪಡಬೇಕು.

- ವ್ಯಕ್ತಿ ಎಂಬ ನೆಲೆಯಲ್ಲಿ ಪ್ರತಿಯೊಬ್ಬ ವಿದ್ಯಾರ್ಥಿಗಿರುವ ಪ್ರಜಾಪ್ರಭುತ್ವ ಪರವಾದ ಹಕ್ಕುಗಳು ಹಾಗೂ ಸ್ಥಾನಮಾನಗಳನ್ನು ಗಮನಿಸಬೇಕು.
- ಅಧ್ಯಾಪಿಕೆಯ ಭಾಗದಿಂದ ಬರಬಹುದಾದ ಯಾವುದೇ ಪ್ರತಿಕೂಲ ಅಭಿಪ್ರಾಯಗಳು ವಿದ್ಯಾರ್ಥಿಯ ಸ್ವಾಭಿಮಾನವನ್ನು ಘಾಸಿಗೊಳಿಸುವುದಲ್ಲದೆ ಅವು ಆತನ ಕಲಿಕೆಯ ಮೇಲೆ ದುಷ್ಪರಿಣಾಮವನ್ನುಂಟು ಮಾಡಬಹುದು.
- ಶಾಲೆಯ ಎಲ್ಲಾ ಕಾರ್ಯಚಟುಟಿಕೆಗಳಲ್ಲಿಯೂ ಎಲ್ಲ ವಿದ್ಯಾರ್ಥಿಗಳ ಸಕ್ರಿಯವಾದ ಪಾಲ್ಗೊಳ್ಳುವಿಕೆಗೆ ಪ್ರೋತ್ಸಾಹ ನೀಡಬೇಕು.
- ಸಂಯುಕ್ತ ರಾಷ್ಟ್ರ ಸಂಘ ಅಂಗೀಕರಿಸಿದ ಹಾಗೂ ಭಾರತವು ಒಪ್ಪಿರುವ ಮತ್ತು ಪಾಲಿಸಿಕೊಂಡು ಬಂದಿರುವ ಮಕ್ಕಳ ಹಕ್ಕು ಕಾಯ್ದೆಗಳನ್ನು ಹಾಗೂ ಮಕ್ಕಳ ಹಕ್ಕು ಸಂರಕ್ಷಣಾ ಸಮಿತಿಯ ವರದಿಗಳನ್ನು ಅಧ್ಯಾಪಕರು ಗಮನದಲ್ಲಿಟ್ಟು ವ್ಯವಹರಿಸಬೇಕಾಗಿದೆ.
- ಶಾಲೆಯ ಶಿಸ್ತುಕ್ರಮ ಪಾಲನೆಗಾಗಿ ರೂಪಿಸುವ ನಿಯಮಾವಳಿಗಳು ವಿದ್ಯಾರ್ಥಿಯ ಮಾನವೀಯ ಹಕ್ಕುಗಳಿಗೆ ಧಕ್ಕೆಯನ್ನುಂಟುಮಾಡಬಾರದು.

1.5 ವಿದ್ಯಾರ್ಥಿಯಲ್ಲಿ ಸುಪ್ತವಾಗಿರುವ ಕೌಶಲ್ಯ ಮತ್ತು ಪ್ರತಿಭೆಯು ಪ್ರಕಟಗೊಳ್ಳಲು ಸೂಕ್ತವಾದ ಹಾಗೂ ಅಚ್ಚುಕಟ್ಟಾದ ಯೋಜನೆಗಳನ್ನು ರೂಪಿಸಬೇಕು.

- ಶೈಕ್ಷಣಿಕ ಸಾಧನೆ ಮಾತ್ರವಲ್ಲದೆ ಪ್ರತಿಯೊಬ್ಬ ವಿದ್ಯಾರ್ಥಿಯಲ್ಲಿರುವ ವಿಶೇಷ ಕೌಶಲ್ಯ ಮತ್ತು ಪ್ರತಿಭೆಯನ್ನು ಗುರುತಿಸುವುದು ಅಧ್ಯಾಪಿಕೆಯ ಬಹುಮುಖ್ಯ ಕರ್ತವ್ಯವಾಗಿದೆ.
- ವಿದ್ಯಾರ್ಥಿಯ ಎಲ್ಲಾ ವಿಧದ ಕೌಶಲ್ಯಗಳನ್ನು ಬೆಳೆಸುವ ಚಟುವಟಿಕೆಗಳು ಇರಬೇಕು.

1.6 ಪಠ್ಯಕ್ರಮವು ಸಂವಿಧಾನವು ತಿಳಿಸುವ ಮೌಲ್ಯಗಳು ಮತ್ತು ವಿಚಾರಧಾರೆಗಳನ್ನು ಒಳಗೊಂಡಿರಬೇಕು.

- ಪ್ರಜಾಪ್ರಭುತ್ವ, ಜಾತ್ಯತೀತತೆ, ಸಮತ್ವ, ನೈತಿಕತೆ, ಸ್ವಾತಂತ್ರ್ಯ ಮುಂತಾದ ಸಂವಿಧಾನದ ಮೌಲ್ಯಗಳು ಪಠ್ಯಕ್ರಮ ಯೋಜನೆಯ ಪ್ರಧಾನ ಅಂಶಗಳಾಗಿರಬೇಕು.

- ಪೌರರ ಕರ್ತವ್ಯಗಳ ಕುರಿತು ಹೇಳಿರುವ ಸಂವಿಧಾನದ ಪರಿಚ್ಛೇದ (ಆರ್ಟಿಕಲ್) 51 ಎ ಯನ್ನು ಅರ್ಥಮಾಡಿಕೊಂಡು, ಅದರಲ್ಲಿನ 'ಎ' ಯಿಂದ 'ಕೆ' ವರೆಗಿನ ಆಶಯಗಳನ್ನು ಗಮನದಲ್ಲಿಟ್ಟುಕೊಂಡು ವ್ಯವಹರಿಸಬೇಕು.

1.7 ವಿದ್ಯಾರ್ಥಿಗಳ ಅಗತ್ಯಗಳಿಗನುಸಾರ ಅಧ್ಯಾಪಿಕೆಯ/ಅಧ್ಯಾಪಕನ ಬೋಧನ ರೀತಿಯನ್ನು ಪರಿಷ್ಕರಿಸಬೇಕು.

- ನಿರಂತರ ಮೌಲ್ಯನಿರ್ಣಯದ ಆಧಾರದಲ್ಲಿ ವಿದ್ಯಾರ್ಥಿಯ ಸ್ವಭಾವ, ಗಳಿಸಿದ ಜ್ಞಾನ, ಅಭಿರುಚಿ, ಕಲಿಕೆಯ ರೀತಿ ಮುಂತಾದುವುಗಳನ್ನು ಪರಿಗಣಿಸಿ, ಬೋಧನೆಯ ವಿಧಾನಗಳಲ್ಲಿ ಅಗತ್ಯವಾದ ಪರಿಷ್ಕಾರವನ್ನು ನಿರಂತರ ನಡೆಸುತ್ತಿರಬೇಕು.

1.8 ವಿದ್ಯಾರ್ಥಿಗಳು ನೀಡುವ ಅವರ ವ್ಯಕ್ತಿಗತವಾದ ವಿಚಾರಗಳ ಗೌಪ್ಯತೆಯನ್ನು ಕಾಪಾಡುವುದು ಮತ್ತು ಇಂತಹ ವಿಷಯಗಳನ್ನು ಕಾನೂನುಬದ್ಧವಾಗಿ ಯಾರಿಗೆ ತಿಳಿಸಬಹುದೋ ಅವರಿಗೆ ಮಾತ್ರ ತಿಳಿಸುವುದು.

- ಕೌನ್ಸಿಲರ್ ಕೂಡಾ ಆಗಿರುವ ಅಧ್ಯಾಪಿಕೆಗೆ ವಿದ್ಯಾರ್ಥಿಯ ವ್ಯಕ್ತಿಗತವಾದ ವಿಷಯಗಳನ್ನು ತಿಳಿಯಲು ಸಾಧ್ಯ.
- ಈ ವಿವರಗಳನ್ನು ವಿದ್ಯಾರ್ಥಿಯ ಒಳಿತಿಗಾಗಿ ವಿವೇಕದಿಂದ ಉಪಯೋಗಿಸತಕ್ಕದ್ದು.

1.9 ವಿದ್ಯಾರ್ಥಿಗಳನ್ನು ಗದರಿಸುವುದು, ಆತಂಕಕ್ಕೀಡುಮಾಡುವುದು, ಶಾರೀರಿಕವಾಗಿ, ಮಾನಸಿಕವಾಗಿ, ಭಾವನಾತ್ಮಕವಾಗಿ ದೌರ್ಜನ್ಯವೆಸಗುವುದು ಮುಂತಾದುವುಗಳನ್ನು ಮಾಡಬಾರದು.

- ಲೈಂಗಿಕ ದೌರ್ಜನ್ಯದಿಂದ, ಕಡೆಗಣಿಸುವಿಕೆಯಿಂದ, ಶೋಷಣೆಯಿಂದ ವಿದ್ಯಾರ್ಥಿಯನ್ನು ಸಂರಕ್ಷಿಸುವ ಜವಾಬ್ದಾರಿ ಅಧ್ಯಾಪಕರಿಗಿದೆ.
- ಉತ್ತಮ ಕಲಿಯುವಿಕೆಗೆ ಶಿಕ್ಷೆ ಸಹಕಾರಿ ಎಂಬ ತಪ್ಪು ಕಲ್ಪನೆ ದೂರವಾಗಬೇಕು.
- ಇಂತಹ ಸನ್ನಿವೇಶಗಳಲ್ಲಿ ವಿದ್ಯಾರ್ಥಿಗೆ ಲಭಿಸುವ ಕಾನೂನು ರಕ್ಷಣೆಗಳ ಕುರಿತು ಅಧ್ಯಾಪಕರು ತಿಳಿದಿರಬೇಕು.

1.10 ಯಾವುದೇ ರೀತಿಯ ಲೈಂಗಿಕ ಶೋಷಣೆಯಿಂದ ವಿದ್ಯಾರ್ಥಿಯನ್ನು ಸಂರಕ್ಷಿಸುವುದು.

- ಯಾವುದೇ ರೀತಿಯ ಲೈಂಗಿಕ ಶೋಷಣೆ, ದೈಹಿಕ ಗಾಯಗಳು ಮಾತ್ರವಲ್ಲದೆ, ದೀರ್ಘಕಾಲ ಉಳಿದುಕೊಳ್ಳುವ ಮಾನಸಿಕ ಆಘಾತವೂ ವಿದ್ಯಾರ್ಥಿಯನ್ನು ಅಧೀರನನ್ನಾಗಿಸುತ್ತದೆ.

  ಉದ್ಯೋಗ ಸ್ಥಳಗಳಲ್ಲೂ, ಶಾಲೆಗಳಲ್ಲೂ ನಡೆಯುವ ಲೈಂಗಿಕ ಶೋಷಣೆಯ ವಿರುದ್ಧ ಭಾರತದ ಗೌರವಾನ್ವಿತ ಸುಪ್ರೀಂ ಕೋರ್ಟು ಮತ್ತು ಎನ್.ಸಿ.ಪಿ. ನೀಡಿದ ಮಾರ್ಗಸೂಚಿಗಳನ್ನು ಅಧ್ಯಾಪಕರು ಪಾಲಿಸಬೇಕಾಗಿದೆ.

## 2. ರಕ್ಷಕರು ಮತ್ತು ಸಮಾಜದೊಂದಿಗೆ ಇರಬೇಕಾದ ಜವಾಬ್ದಾರಿಗಳು

2.1 ತಂದೆ–ತಾಯಿಯರೊಂದಿಗೆ ಮತ್ತು ರಕ್ಷಕರೊಂದಿಗೆ ವಿನಯಪೂರ್ವಕವಾದ ವರ್ತನೆ ಇರಬೇಕು.

- ವಿದ್ಯಾರ್ಥಿಗಳ ಕುರಿತು ಹೆಚ್ಚು ತಿಳಿಯುವುದಕ್ಕಾಗಿ ಅವರ ಹೆತ್ತವರೊಂದಿಗೂ ಗೆಳೆಯರೊಂದಿಗೂ ಉತ್ತಮ ಸಂಪರ್ಕ ಇಟ್ಟುಕೊಳ್ಳುವುದು ಅಗತ್ಯ.
- ಅಧ್ಯಾಪಿಕೆ ಮತ್ತು ಹೆತ್ತವರ ಬಾಂಧವ್ಯವು ವಿದ್ಯಾರ್ಥಿ ಮತ್ತು ಅಧ್ಯಾಪಿಕೆಯ ಸಂಬಂಧವನ್ನು ಹೆಚ್ಚು ನಿಕಟಗೊಳಿಸುತ್ತದೆ.
- ತಮ್ಮ ಮಕ್ಕಳ ಶಾಲೆಯೊಳಗಿನ ಮತ್ತು ಹೊರಗಿನ ಚಟುವಟಿಕೆಗಳ ಕುರಿತು ಅಧ್ಯಾಪಕರಿಂದ ತಿಳಿಯಲು ಹೆಚ್ಚಿನ ಹೆತ್ತವರು ಬಯಸುತ್ತಾರೆ.
- ಬೆಳವಣಿಗೆಯ ಸಂದರ್ಭದಲ್ಲಿ ವಿದ್ಯಾರ್ಥಿಗೆ ಉಂಟಾಗುವ ಪ್ರಮಾದಗಳನ್ನು ಹೆತ್ತವರೊಂದಿಗೆ ಚರ್ಚಿಸುವುದರಿಂದ ಮುಂದೆ ಸಂಭವಿಸಬಹುದಾದ ಹೊಸ ದುರಂತಗಳನ್ನು ತಪ್ಪಿಸಲು ಸಾಧ್ಯವಾಗಬಹುದು.

2.2 ವಿದ್ಯಾರ್ಥಿಯ ಸ್ವಾಭಿಮಾನಕ್ಕೆ ಧಕ್ಕೆ ತರುವ ಚಟುವಟಿಕೆಗಳಿಂದ ದೂರವಿರುವುದು.

- ಇತರ ವಿದ್ಯಾರ್ಥಿಗಳ ಮುಂದೆ ವಿದ್ಯಾರ್ಥಿಯ ಸ್ವಾಭಿಮಾನಕ್ಕೆ ಧಕ್ಕೆ ಉಂಟಾಗುವ ರೀತಿಯಲ್ಲಿ ಮಾತನಾಡುವುದನ್ನು ಬಿಟ್ಟುಬಿಡಬೇಕು.
- ಅದೇ ರೀತಿಯಲ್ಲಿ ಹೆತ್ತವರ ಸ್ವಾಭಿಮಾನವನ್ನು ಪ್ರಶ್ನಿಸಬಾರದು.
- ಯಾವುದಾದರೂ ಒಂದು ವಿಭಾಗದ ವಿದ್ಯಾರ್ಥಿಗಳನ್ನು ಮಾತ್ರ ಹಿನ್ನೆಲೆಯಾಗಿರಿಸಿ (ಜಾತಿ, ಮತ, ಆರ್ಥಿಕ ಸ್ಥಿತಿ, ...) ಹೊಗಳುವುದರಿಂದ ಉಳಿದ ವಿದ್ಯಾರ್ಥಿಗಳಲ್ಲಿ ದ್ವೇಷ ಮನೋಭಾವ ಉಂಟಾಗುವುದು.

2.3 ಭಾರತದ ಸಾಂಸ್ಕೃತಿಕ ಪರಂಪರೆಯ ಕುರಿತು ವಿದ್ಯಾರ್ಥಿಗಳಿಗೆ ಆದರ ಹಾಗೂ ಗೌರವ ಉಂಟಾಗುವಂತೆ ಮಾಡುವುದು.

- ಭಾರತವು ವಿವಿಧ ಸಂಸ್ಕೃತಿ, ಭಾಷೆ, ಮತ, ನಂಬಿಕೆಗಳ ದೇಶ. ಈ ವೈವಿಧ್ಯವನ್ನು ಪ್ರತಿಯೊಂದು ತರಗತಿಗಳಲ್ಲೂ ಕಾಣಬಹುದು.
- ಭಾರತದಲ್ಲಿ ವಿವಿಧತೆಯಲ್ಲಿ ಏಕತೆಯಿದೆ.
- ಪ್ರತಿಯೊಬ್ಬನಲ್ಲೂ ಪರಸ್ಪರ ಸಹಿಷ್ಣುತೆ ಮತ್ತು ಎಲ್ಲಾ ಸಂಸ್ಕೃತಿಗಳನ್ನು ಗೌರವಿಸುವ ಮನೋಭಾವ ಇರಬೇಕು.
- ಈ ಮನೋಭಾವ ಅಥವಾ ತತ್ವಗಳನ್ನು ಪಠ್ಯಕ್ರಮದ ಮೂಲಕ ಬೆಳೆಸುವ ಪ್ರಜ್ಞಾಪೂರ್ವಕ ಪ್ರಯತ್ನ ಅಗತ್ಯವಾಗಿದೆ.

2.4 ವಿವಿಧ ಜನಸಮುದಾಯಗಳೊಳಗೆ ಪರಸ್ಪರ ದ್ವೇಷ, ಹಗೆತನವನ್ನು ಬೆಳೆಸುವ ರೀತಿಯ ಕಾರ್ಯಚಟುವಟಿಕೆಗಳಿಗೆ ಕಡಿವಾಣ ಹಾಕಬೇಕು.

- ಎಲ್ಲ ಮತ, ನಂಬಿಕೆ ಮತ್ತು ಭಾಷೆಗಳಲ್ಲಿ ಸಮಾನ ಗೌರವವನ್ನು ಉಂಟುಮಾಡುವ ರೀತಿಯ ಚಟುವಟಿಕೆಗಳು ತರಗತಿಯಲ್ಲಿ ನಡೆಯಬೇಕು.
- ರಾಷ್ಟ್ರೀಯ ಭಾವೈಕ್ಯದ ದೃಷ್ಟಿಯಿಂದ ಪ್ರತಿಯೊಬ್ಬನೂ ಮೊದಲಿಗೆ ಭಾರತೀಯ. ಬಳಿಕ ಮಾತ್ರವೇ ಒಂದು ಸಮುದಾಯದ ಸದಸ್ಯ ಎಂಬುದು ಮುಖ್ಯ ವಿಷಯವಾಗಬೇಕು.

- ಯಾವುದಾದರೂ ಒಂದು ನಿರ್ದಿಷ್ಟ ಗುಂಪಿನ ಪ್ರಚಾರಕ್ಕಾಗಿ ಶಾಲೆ/ತರಗತಿಯನ್ನು ಬಳಸಬಾರದು.
- ಸಮಕಾಲೀನ ಸಾಮಾಜಿಕ, ರಾಜಕೀಯ ಬೆಳವಣಿಗೆಗಳನ್ನು ಚರ್ಚೆ ಮಾಡುವಾಗ ಅಧ್ಯಾಪಕ/ಅಧ್ಯಾಪಿಕೆ ಯಾವುದಾದರೂ ಒಂದು ಪಕ್ಷದ ಪರವಾಗಿ ಮಾತನಾಡಬಾರದು.

**3. ಅಧ್ಯಾಪನ ವೃತ್ತಿಯಲ್ಲಿ ಹಾಗೂ ಸಹೋದ್ಯೋಗಿಗಳೊಡನೆ ಇರಬೇಕಾದ ಜವಾಬ್ದಾರಿಗಳು**

3.1 ವೃತ್ತಿ ಪರಿಣತಿಯನ್ನು ಬೆಳೆಸಲು ನಿರಂತರ ಪ್ರಯತ್ನಿಸುವುದು.

- ಒಬ್ಬ ವಿದ್ಯಾರ್ಥಿಯನ್ನು ನಿರಂತರ ಕಲಿಕೆಯವನನ್ನಾಗಿ ಮಾಡುವುದರೊಂದಿಗೆ ಅಧ್ಯಾಪಕನು ತಾನೂ ಕಲಿಯುತ್ತಿರಬೇಕು.
- ನಿರಂತರವಾಗಿ ಬೆಳೆಯುತ್ತಿರುವ  ಜ್ಞಾನ ವಲಯಗಳ ಕುರಿತು, ಅಧ್ಯಾಪನ ರೀತಿಯ ಕುರಿತು ಜ್ಞಾನವನ್ನು ಸಂಪಾದಿಸಲೂ ಅದನ್ನು ಕಾರ್ಯರೂಪಕ್ಕೆ ತರಲೂ ಸಾಧ್ಯವಾಗಬೇಕು.
- ಯಾವ ಯಾವ ಮೂಲಗಳಿಂದ ತನಗೆ ಹೊಸ ಅರಿವು ಲಭಿಸಬಹುದೆಂಬ ಹುಡುಕಾಟ ಅಧ್ಯಾಪಕನ ಕರ್ತವ್ಯವಾಗಿರಬೇಕು.

3.2 ಸಹೋದ್ಯೋಗಿಗಳೊಂದಿಗೆ ಹಾಗೂ ಇತರರೊಂದಿಗೆ ಪರಸ್ಪರ ಆಶಯ ವಿನಿಮಯ ಮಾಡುವುದರಿಂದ ಹೊಸತಾದ ಜ್ಞಾನ ವಲಯ ಸೃಷ್ಟಿಯಾಗುವುದು.

- ಶಾಲೆಯಲ್ಲಿ ಶೈಕ್ಷಣಿಕ ಜಾಗೃತಿಯನ್ನು ಮೂಡಿಸುವುದು ಮತ್ತು ಎಲ್ಲ ಅಧ್ಯಾಪಕರಿಗೆ ತಮ್ಮದೇ ಆದ ಕೊಡುಗೆ ನೀಡುವ ಅವಕಾಶವನ್ನು ಕಲ್ಪಿಸಿ ಉತ್ತಮ ವಾತಾವರಣವನ್ನು ಉಂಟುಮಾಡುವುದು.
- ಇಂತಹ ಸನ್ನಿವೇಶವುಂಟಾಗಲು ಪೂರ್ವಯೋಜನೆ ಮತ್ತು ಫಲಪ್ರದವಾದ ಸಹಕಾರ ಮನೋಭಾವ ಎಲ್ಲ ಅಧ್ಯಾಪಕರಲ್ಲೂ ನಿರ್ಮಾಣವಾಗಬೇಕು.
- ಶಾಲೆಯ ಯಾವುದೇ ರೀತಿಯ ಸಮಸ್ಯೆಗಳನ್ನು ಪರಿಹಾರ ಮಾಡುವಲ್ಲಿ ಎಲ್ಲ ಅಧ್ಯಾಪಕರ ಒಗ್ಗಟ್ಟು, ಚರ್ಚೆ, ಕ್ರಿಯಾತ್ಮಕ ಮಾರ್ಗದರ್ಶನ ಹಾಗೂ ಫಲಪ್ರದ ಕಾರ್ಯಚಟುವಟಿಕೆ ಇರಬೇಕು.
- ಅಧ್ಯಾಪಕರನ್ನು ಮಾತ್ರವಲ್ಲದೆ ಶಾಲೆಯ ವಿಷಯಗಳಲ್ಲಿ ಮುತುವರ್ಜಿಯಿರುವ ಎಲ್ಲರನ್ನು ಇಂತಹ ಕ್ರಿಯಾಚಟುವಟಿಕಗಳಲ್ಲಿ ಪಾಲ್ಗೊಳ್ಳುವಂತೆ ಮಾಡಲು ಅಧ್ಯಾಪಕನಿಗೆ ಸಾಧ್ಯವಾಗಬೇಕು.

3.3 ಸಹೋದ್ಯೋಗಿಗಳೊಡನೆ ಗೌರವಾದರಗಳೊಂದಿಗೆ ವ್ಯವಹರಿಸಬೇಕು.

- ಶಾಲೆಯ ಎಲ್ಲ ಅಧ್ಯಾಪಕರೊಡನೆ ಅವರ ವಿದ್ಯಾಭ್ಯಾಸ ಯೋಗ್ಯತೆ, ಅವರು ಯಾವ ವಿದ್ಯಾರ್ಥಿಗಳಿಗೆ ಕಲಿಸುತ್ತಿದ್ದಾರೆ ಎಂಬುದನ್ನು ನೋಡದೆ ಅವರೊಂದಿಗೆ ಗೌರವಾದರಗಳಿಂದ ವ್ಯವಹರಿಸಬೇಕು.

3.4 ಅಧ್ಯಾಪಕರು ಖಾಸಗಿಯಾಗಿ ಟ್ಯೂಶನ್ ತರಗತಿಗಳನ್ನು ನಡೆಸುವುದು ಅಥವಾ ಇತರ ಖಾಸಗಿ ಶಿಕ್ಷಣ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುವುದು ಸಮರ್ಪಕವಲ್ಲ.

- ಅಧ್ಯಾಪಕರು ಖಾಸಗಿಯಾಗಿ ಟ್ಯೂಶನ್ ನಡೆಸುವುದರಿಂದ ಅಧ್ಯಾಪಕನ ಶಾಲಾ ಚಟುವಟಿಕೆಗಳ ಮೇಲೆ ಕೆಟ್ಟ ಪರಿಣಾಮ ಉಂಟಾಗಬಹುದು.

- ಖಾಸಗಿ ಟ್ಯೂಶನ್ ನಡೆಸುವುದರಿಂದ ಶಾಲೆಯ ನೈತಿಕ ತತ್ವ ಸಿದ್ಧಾಂತಗಳಿಗೆ ಧಕ್ಕೆಯುಂಟಾಗುವಂಥ ವ್ಯವಹಾರಗಳಿಗೆ ಕಾರಣವಾಗುವುದು.

3.5 ತನ್ನ ಚಟುವಟಿಕೆಗಳು ಮತ್ತು ತೀರ್ಮಾನಗಳು ಪರರ ಪ್ರಭಾವಕ್ಕೊಳಗಾಗದಂತೆ ನೋಡಿಕೊಳ್ಳಲು ಯಾವುದೇ ವಿಧವಾದ ಉಡುಗೊರೆ ಅಥವಾ ಇತರ ಸಹಾಯಗಳನ್ನು ಸ್ವೀಕರಿಸುವುದಿಲ್ಲ.

- ಯಾವುದೇ ರೀತಿಯ ಸೌಲಭ್ಯಗಳನ್ನು ನಿರೀಕ್ಷಿಸಿಕೊಂಡು ಕೊಡಮಾಡುವ ಬೆಲೆಬಾಳುವ ಉಡುಗೊರೆಗಳನ್ನು ಅಧ್ಯಾಪಕರು ವಿದ್ಯಾರ್ಥಿಯಿಂದ ಅಥವಾ ಹೆತ್ತವರಿಂದ ಸ್ವೀಕರಿಸಬಾರದು.

3.6 ಸಹೋದ್ಯೋಗಿಗಳಿಗೆದುರಾಗಿ ಮತ್ತು ಮೇಲಿನ ಅಧಿಕಾರಿಗಳಿಗೆದುರಾಗಿ ಅನಗತ್ಯವಾದ ಆರೋಪಗಳನ್ನು ಮಾಡುವುದಿಲ್ಲ.

- ಪರಸ್ಪರ ತಪ್ಪು ಹೊರಿಸುವ ಗುಂಪುಗಾರಿಕೆ ಅಧ್ಯಾಪಕರಲ್ಲಿ ಇರಬಾರದು.
- ಸಾಕ್ಷ್ಯಗಳಿಲ್ಲದೆ ಸಹೋದ್ಯೋಗಿಗಳ ಮೇಲೆ ಆರೋಪ ಮಾಡಬಾರದು.
- ಯಾವುದಾದರೂ ಸಹೋದ್ಯೋಗಿ/ಸಹೋದ್ಯೋಗಿಗಳಲ್ಲಿ ಗಂಭೀರವಾದ ಅಪರಾಧ ಕಂಡುಬಂದರೆ ಅದನ್ನು ಹಿರಿಯ ಅಧ್ಯಾಪಕರ ಗಮನಕ್ಕೆ ತರಬೇಕು.

3.7 ಸಹೋದ್ಯೋಗಿಗಳ, ವಿದ್ಯಾರ್ಥಿಗಳ ಅಥವಾ ಹೆತ್ತವರ ಎದುರಲ್ಲಿ ಸಹೋದ್ಯೋಗಿಯೊಬ್ಬನ ಮೇಲೆ ದೋಷಾರೋಪಣೆ ಮಾಡಬಾರದು.

- ಅಧ್ಯಾಪಕರ ಬಗ್ಗೆ ವಿಭಿನ್ನ ರೀತಿಯ ಅಭಿಪ್ರಾಯಗಳಿರಬಹುದು. ಅವುಗಳನ್ನು ಯೋಗ್ಯ ರೀತಿಯಲ್ಲಿ ವ್ಯಕ್ತಪಡಿಸಬೇಕು.
- ಸಹೋದ್ಯೋಗಿಯ ಅಧ್ಯಾಪನ ರೀತಿಯನ್ನು ಅಪಹಾಸ್ಯ ಮಾಡುವ ರೀತಿಯಲ್ಲಿ ಮಾತನಾಡಬಾರದು.

3.8 ಸಹೋದ್ಯೋಗಿಗಳ ಬೋಧನ ಗುಣಮಟ್ಟವನ್ನು ಗೌರವಿಸುವುದು.

- ಅಧ್ಯಾಪನದಲ್ಲಿ ಉತ್ತಮ ಸಾಧನೆ ಮಾಡಿದವರ ಚಟುವಟಿಕೆಗಳನ್ನು ಶ್ಲಾಘಿಸಬೇಕು. ಮಾತ್ರವಲ್ಲದೆ ಅಂತಹ ಸಾಧನೆಯನ್ನು ಮಾಡಲು ಪ್ರಯತ್ನಿಸಬೇಕು. ಆದರೆ ಅದು ಅಂಧಾನುಕರಣೆಯಾಗಲೇಬಾರದು.

3.9 ಸಹೋದ್ಯೋಗಿಗಳ ಕುರಿತು ತಿಳಿದಿರುವ ವೈಯಕ್ತಿಕ ವಿವರಗಳನ್ನು ಗೌಪ್ಯವಾಗಿಡಬೇಕು. ಅಗತ್ಯವಾದಾಗ ಮಾತ್ರ ಕಾನೂನು ಪ್ರಕಾರ ತಿಳಿಯಪಡಿಸುವುದು.

- ಯಾವುದಾದರೂ ಅಗತ್ಯಕ್ಕಾಗಿ ಸಂಗ್ರಹಿಸಲ್ಪಟ್ಟ ಸಹೋದ್ಯೋಗಿಗಳ ವೈಯಕ್ತಿಕ ವಿವರಗಳು ಗೌಪ್ಯವಾಗಿಡುವಂಥವುಗಳಾಗಿದ್ದಲ್ಲಿ ಅವುಗಳನ್ನು ಕಾನೂನುಬದ್ಧವಾದ ಕಾರ್ಯಗಳಿಗೆ ಮಾತ್ರ ತಿಳಿಯಪಡಿಸತಕ್ಕದ್ದು.

## 1.14 ಟೀಚಿಂಗ್ ಮ್ಯಾನುವೆಲ್

ಕಲಿಕಾ ಸಾಧನೆಗಳನ್ನು ಉದ್ದೇಶವಾಗಿಟ್ಟು ತಮ್ಮ ಕಾರ್ಯಚಟುವಟಿಕೆಗಳನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸಲು ಪ್ರತಿಯೊರ್ವ ಅಧ್ಯಾಪಕನಿಗೂ ಸಾಧ್ಯವಾಗಬೇಕು. ಪಠ್ಯಪುಸ್ತಕದಲ್ಲಿ ಮತ್ತು ಅಧ್ಯಾಪಕರ ಪಠ್ಯದಲ್ಲಿ ನೀಡಿರುವ ಚಟುವಟಿಕೆಗಳನ್ನು ತರಗತಿಯ ಮಕ್ಕಳಿಗೆ ಅನುಕೂಲವಾದ ರೀತಿಯಲ್ಲಿ ತಿದ್ದಿಕೊಳ್ಳುವ ಅಥವಾ ಸೇರಿಸಿಕೊಳ್ಳುವ ಯೋಜನೆಯಿರಬೇಕು. ಪ್ರತಿಯೊಂದು ಕಲಿಕಾಸಾಧನೆ ಈಡೇರಲು ಬೇಕಾಗುವಷ್ಟು ಕಾರ್ಯಚಟುವಟಿಕೆಗಳು ಯೋಜನೆಯಲ್ಲಿರಬೇಕು.

ಕಲಿಕಾ ಚಟುವಟಿಕೆಗಳ ಜೊತೆಗೆ ಮೌಲ್ಯನಿರ್ಣಯವನ್ನೂ ಒಳಗೊಂಡಿರುವ ಯೋಜನೆಗಳು ಪಾಠಪ್ರಕ್ರಿಯೆಯ ಪುಟದಲ್ಲಿರಬೇಕು. ನಿರಂತರ ಮೌಲ್ಯಮಾಪನದಲ್ಲಿ ಲಭಿಸುವ ವಿವರಗಳ ದಾಖಲಾತಿಯು ಮೌಲ್ಯನಿರ್ಣಯ ಪುಟದಲ್ಲಿರಬೇಕು.

ಮುಂದಿನ ಒಂದು ವಾರಕ್ಕೆ ಬೇಕಾಗಿ ತಯಾರಿಸುವ ಟೀಚಿಂಗ್ ಮ್ಯಾನುವೆಲ್, ಸ್ಕೂಲ್ ರಿಸೋರ್ಸ್ ಗ್ರೂಪ್ (SRG) ನಲ್ಲಿ / ವಿಷಯ ಸಮಿತಿಗಳಲ್ಲಿ (Subject Councils) ಮಂಡಿಸುವುದು ಉತ್ತಮ. ಒಂದು ವಾರದ ಮೌಲ್ಯಮಾಪನ ಪುಟದ ವಿವರಗಳನ್ನು ಆಧಾರವಾಗಿಟ್ಟುಕೊಂಡು ಅಧ್ಯಾಪಕನು ಸರಳವಾದ ಅವಲೋಕನ ಟಿಪ್ಪಣಿ (Reflection Note) ತಯಾರಿಸಿ, **SRG/SC** ಯಲ್ಲಿ ಚರ್ಚೆ ಮಾಡಬಹುದು. ಈ ಟಿಪ್ಪಣಿಯ ಆಧಾರದಲ್ಲಿ ಅಧ್ಯಾಪಕನ ಮುಂದಿನ ಯೋಜನಾ ಟಿಪ್ಪಣಿಗಳು ತಯಾರಾಗಬೇಕು.

ಟೀಚಿಂಗ್ ಮ್ಯಾನುವೆಲ್‌ನ ನಮೂನೆಯನ್ನು ಕೆಳಗೆ ಕೊಡಲಾಗಿದೆ.

## ಟೀಚಿಂಗ್ ಮ್ಯಾನುವೆಲ್

ಪಾಠದ ಹೆಸರು :

ದಿನಾಂಕ :

ಸಮಯ :

ವಿಷಯ (Theme) :

ಕಲಿಕಾ ಸಾಧನೆಗಳು :

ಆಶಯಗಳು :

ಕೌಶಲ್ಯಗಳು :

ಭಾಷಾ ಸತ್ಯಾಂಶಗಳು (ಭಾಷೆಗೆ ಮಾತ್ರ) :

ವ್ಯವಹಾರ ರೂಪಗಳು (ಭಾಷಾ ವಿಷಯಕ್ಕೆ ಮಾತ್ರ) :

ಮೌಲ್ಯಗಳು – ಮನೋಭಾವಗಳು :

ಕಲಿಕೋಪಕರಣಗಳು :

ಉತ್ಪನ್ನಗಳು :

| ಪ್ರಕ್ರಿಯೆ | ಮೌಲ್ಯನಿರ್ಣಯ |
|---|---|
| ಚಟುವಟಿಕೆ ಮತ್ತು ಮೌಲ್ಯಮಾಪನಗಳನ್ನೊಳಗೊಂಡ ಪ್ರಕ್ರಿಯೆ | (ಮೌಲ್ಯನಿರ್ಣಯದ ವಿವರಗಳನ್ನು ಇಲ್ಲಿ ದಾಖಲಿಸಬೇಕು) |

ಪ್ರಾಂಶುಪಾಲರ ಸಹಿ

ಅಧ್ಯಾಪಕ/ಅಧ್ಯಾಪಿಕೆಯ ಸಹಿ

**ಅವಲೋಕನ ಟಿಪ್ಪಣಿ (Reflections)**

ನನ್ನ ನಿಗಮನಗಳು ಮತ್ತು ಹೊಸ ಅರಿವುಗಳು (ಕಲಿಕಾ ಚಟುವಟಿಕೆಗಳು ಮತ್ತು ಮೌಲ್ಯನಿರ್ಣಯ ಪ್ರಕ್ರಿಯೆಗಳಿಂದ ಲಭಿಸಿದ ಮಾಹಿತಿಗಳ ಆಧಾರದಲ್ಲಿ)

■

■

■

■

ಮುಂದುವರಿದ ಚಟುವಟಿಕೆಗಳು ಮತ್ತು ಪರಿಹಾರ ಚಟುವಟಿಕೆಗಳು

■

■

■

■

■

**ಅವಲೋಕನ ಟಿಪ್ಪಣಿ (Reflection note) ಯಾಕೆ?**

ನಿರ್ದಿಷ್ಟ ಕಲಿಕಾ ಸಾಧನೆಗಳಿಗನುಸಾರವಾಗಿ ನಡೆಸಲಾದ ಕಲಿಕಾ ಚಟುವಟಿಕೆಗಳು ಪೂರ್ತಿಯಾದ ಬಳಿಕ ಅವಲೋಕನ ಟಿಪ್ಪಣಿ ತಯಾರಿಸಬೇಕು.

■ ಈ ಟಿಪ್ಪಣಿಗಳನ್ನು ಪ್ರತಿವಾರದ **SRG** ಸಭೆಯಲ್ಲಿ ಮಂಡಿಸಬೇಕು.

■ ಮುಂದಿನ ಯೋಜನೆಗಳಿಗೆ ಸೂಕ್ತ ಮಾರ್ಗದರ್ಶನ ನೀಡಲು.

■ ಒಂದು ಅವಧಿಯ **C.E.** ಕ್ರೋಡೀಕರಿಸುವುದಕ್ಕಾಗಿ.

# ಮೌಲ್ಯಮಾಪನ ಸಮೀಪನಗಳು

ಶಾಲೆಯಲ್ಲಿ ಕಲಿಕೆಯು ಸಹಜವೂ ನಿರಂತರೂ ಆಗಿ ನಡೆಯಬೇಕಾದ ಪ್ರಕ್ರಿಯೆಯಾಗಿದೆ. ಕಲಿಕೆಯು ಪರಿಣಾಮಕಾರಿಯಾಗಬೇಕಾದರೆ ಕಲಿಕೆಯ ಅನುಭವಗಳು ನಿರ್ದಿಷ್ಟ ಉದ್ದೇಶವನ್ನು ಹೊಂದಿರಬೇಕು ಹಾಗೂ ಕಲಿಕಾ ಪ್ರಕ್ರಿಯೆ ಮೂಲಕ ಗಳಿಸಬೇಕಾದ ನೈಪುಣ್ಯಗಳ ಹಾಗೂ ತಿಳುವಳಿಕೆಗಳ ಕುರಿತು ಅಧ್ಯಾಪಕರಿಗೆ ಮತ್ತು ವಿದ್ಯಾರ್ಥಿಗಳಿಗೆ ಸ್ಪಷ್ಟವಾದ ಅರಿವು ಇರಬೇಕು. ಪ್ರತಿಯೊಂದು ಪಾಠಭಾಗಕ್ಕೆ ಸಂಬಂಧಿಸಿ ಗಳಿಸಬೇಕಾದ ಸಾಧನೆಗಳನ್ನು ಪೂರ್ವಭಾವಿಯಾಗಿ ತಿಳಿದುಕೊಂಡು ಕಲಿಕಾ ಚಟುವಟಿಕೆಗಳನ್ನು ರೂಪಿಸಬೇಕು. ಇವುಗಳನ್ನು ನಿಜ ಜೀವನಕ್ಕೆ ಹೊಂದಿಸಿಕೊಂಡು ಪ್ರಸ್ತುತ ಪಡಿಸಬೇಕು.

ಗಳಿಸಿದ ನೈಪುಣ್ಯಗಳು, ತಿಳುವಳಿಕೆಗಳು ಕಲಿಕಾ ಸಾಧಣೆಯನ್ನು ಖಾತರಿಪಡಿಸುವಲ್ಲಿ ಎಷ್ಟರಮಟ್ಟಿಗೆ ಸಮರ್ಥವಾಗಿವೆ? ಕಲಿಕಾ ಸಾಧನೆಯನ್ನು ಗಳಿಸುವಲ್ಲಿ ಹಿಂದುಳಿದವರು ಯಾರು? ಅವರಿಗೆ ನೀಡಬೇಕಾದ ಮುಂದುವರಿದ ಚಟುಟಿಕೆಗಳು ಯಾವುವು? ಅವುಗಳನ್ನು ಹೇಗೆ ಅಳವಡಿಸಬಹುದು? ಈ ರೀತಿಯ ಆಲೋಚನೆಗಳು ಮೌಲ್ಯಮಾಪನದ ಅಂಗವಾಗಿ ಅಧ್ಯಾಪಕರು ಮಾಡಬೇಕು.

ಪತ್ಯಭಾಗದ/ಘಟಕದ ವಿನಿಮಯದ ನಂತರ “ಯಾವೆಲ್ಲಾ ಕಲಿಕಾ ಸಾಧನೆಗಳನ್ನು ಗಳಿಸಿದ್ದಾರೆ” ಎಂದು ಮೌಲ್ಯಮಾಪನ ಮಾಡುವ ವಿಧಾನವನ್ನು ಕಲಿಕೆಯ ಮೌಲ್ಯಮಾಪನ (Assessment of Learning) ಎಂದು ಕರೆಯುವರು. ಕಲಿಕೆಯ ನಂತರ ವಿದ್ಯಾರ್ಥಿಯ ಸಾಮರ್ಥ್ಯ ಹಾಗೂ ಗುಣಮಟ್ಟ ಎಂಬಿವುಗಳನ್ನು ಇಲ್ಲಿ ಮೌಲ್ಯಮಾಪನ ಮಾಡಬೇಕು. ಇದು ಮೌಲ್ಯಮಾಪನದ ಒಂದು ಹಂತ ಮಾತ್ರವಾಗಿದೆ.

ಕಲಿಕೆಯನ್ನು ದೃಢಪಡಿಸುವುದಕ್ಕಾಗಿರುವ ಮೌಲ್ಯಮಾಪನಕ್ಕೆ ಹೆಚ್ಚಿನ ಪ್ರಾಧಾನ್ಯ ನೀಡಬೇಕು. ಕಲಿಕೆಯ ಸಂದರ್ಭದಲ್ಲಿ ಅದರ ಕಾರ್ಯದಕ್ಷತೆಗಾಗಿ ಅಧ್ಯಾಪಕರಿಂದಲೋ ಸಹಪಾಠಿಗಳಿಂದಲೋ ವಿವಿಧ ರೀತಿಯ ಸಹಕಾರಗಳನ್ನು ನಿರೀಕ್ಷಿಸಬಹುದು. ಕಲಿಕೆಯೊಂದಿಗಿನ ಸಹಕಾರ ಹಾಗೂ ಪುನರವಲೋಕನ ಮೌಲ್ಯಮಾಪನದ ಇನ್ನೊಂದು ಘಟ್ಟವಾಗಿದೆ. ಇದನ್ನು ಕಲಿಕೆಗಾಗಿರುವ ಮೌಲ್ಯಮಾಪನ ಎಂದು ಕರೆಯುವರು. ಕಲಿಕಾಭಿವೃದ್ಧಿಗೆ ನಿರಂತರವಾಗಿ ನಿರ್ವಹಿಸಬೇಕಾದ ಕಲಿಕಾ ಚಟುವಟಿಕೆಗಳೊಂದಿಗೆ ಇದು ಸೇರ್ಪಡೆಗೊಳ್ಳಬೇಕು.

ಕಲಿಕೆಯಿಂದ ಪಡೆದ ಆಶಯಗಳನ್ನು ಮತ್ತು ತಿಳುವಳಿಕೆಗಳನ್ನು ವಿಮರ್ಶಾತ್ಮಕವಾಗಿ ಕಂಡುಕೊಂಡು ಅದರಲ್ಲಿನ ಬದಲಾವಣೆಗಳನ್ನು ತಿಳಿದುಕೊಂಡು ಕೆಲವು ತಿದ್ದುಪಡಿಗಳನ್ನು ಮಾಡಬೇಕಾಗಿದೆ. ಇದನ್ನು ಸ್ವಯಂ ಮೌಲ್ಯಮಾಪನ ಎಂದು ತಿಳಿಯಬಹುದು. ಈ ರೀತಿಯಲ್ಲಿ ಸ್ವತಃ ನಡೆಸಿದಾಗಲೇ ಮೌಲ್ಯಮಾಪನದ ಮೂಲಕ ಕಲಿಕೆಯು ಸಾಧ್ಯವಾಗುತ್ತದೆ. ಇದನ್ನು ಮೌಲ್ಯಮಾಪನ ಕಲಿಕೆ (Assessment of Learning) ಎಂದು ಕರೆಯುವರು. ಈ ರೀತಿಯಲ್ಲಿ ಉತ್ತಮ ಕಲಿಕೆ ಹೇಗೆ ಸಾಧ್ಯ? ಎಂದು ವಿದ್ಯಾರ್ಥಿಯು ತಿಳಿದುಕೊಳ್ಳುವನು.

ಕಲಿಕೆಯು ಇನ್ನಷ್ಟು ಕಾರ್ಯದಕ್ಷವಾಗಲು ‘ಕಲಿಕೆಗಾಗಿ ಮೌಲ್ಯಮಾಪನ’, ‘ಮೌಲ್ಯಮಾಪನವೇ ಕಲಿಕೆ’

ಎಂಬಿವುಗಳಿಗೆ ಒತ್ತು ನೀಡಬೇಕಾಗಿದೆ. ಕಲಿಕೆಯು ಪ್ರಯೋಜನಕಾರಿಯಾಗಲು ಮೌಲ್ಯಮಾಪನ ಪ್ರಕ್ರಿಯೆಗಳಿಗೆ ಪ್ರಾಧಾನ್ಯ ನೀಡುವ ಸಮೀಪನವನ್ನು ಸ್ವೀಕರಿಸಬೇಕಾಗಿದೆ.

ಕಲಿಕಾ ಸಾಧನೆಗಳನ್ನು ಖಾತರಿಪಡಿಸುವ ರೀತಿಯ ಕಲಿಕಾ ಸಮೀಪನವನ್ನು ಅಳವಡಿಸುವಾಗ ಅದಕ್ಕನುಗುಣವಾದ ಮೌಲ್ಯಮಾಪನ ಸಮೀಪನವನ್ನು ಸ್ವೀಕರಿಸಬೇಕು. ಆದುದರಿಂದ ಕಲಿಕಾ ಸಾಧನೆಗಳಿಗೆ ಒತ್ತು ನೀಡುವ ಮೌಲ್ಯಮಾಪನ ಸಮೀಪನವನ್ನು (Out come focused assessment approach) ಸ್ವೀಕರಿಸಬೇಕು. ಕಲಿಕಾ ಸಾಧನೆಗಳಿಗೆ ಒತ್ತುನೀಡಿ ರೂಪಿಸುವ ಕಲಿಕಾ ಚಟುವಟಿಕೆಗಳಲ್ಲಿ ವಿದ್ಯಾರ್ಥಿಯ ಸಕ್ರಿಯ ಪಾಲ್ಗೊಳ್ಳುವಿಕೆಯನ್ನು ಖಚಿತಪಡಿಸಬೇಕು. ಕಲಿಕ ಸಾಧನೆಗಳನ್ನು ಖಾತರಿಪಡಿಸಿಕೊಂಡೇ ಮುಂದುವರಿಯಲು ಸಾಧ್ಯ. ಕಲಿಕಾ ಸಾಧನೆಗಳ ಕುರಿತು ವಿದ್ಯಾರ್ಥಿ, ಅಧ್ಯಾಪಕ, ಪೋಷಕರಿಗೆ ಸಮಾನವಾದ ಪರಿಕಲ್ಪನೆ ಇರಬೇಕು. ಕಲಿಕಾ ಸಾಧನೆಗಳನ್ನು ಖಾತರಿಪಡಿಸಿಕೊಂಡೇ ಮುಂದುವರಿಯಲು ಸಾಧ್ಯ. ವಿದ್ಯಾರ್ಥಿಗಳಲ್ಲಿ ಕೇಂದ್ರಿತರವಾಗಿರುವುದು, ಸಾಮಾಜಿಕ ಸಮಸ್ಯೆಗಳನ್ನು ಗುರುತಿಸುವುದಕ್ಕಿರುವ ಸಾಮರ್ಥ್ಯಗಳನ್ನು ಬೆಳೆಸುವುದು, ಕ್ರಿಯಾತ್ಮಕ, ವಿಮರ್ಶಾತ್ಮಕ ಹಾಗೂ ನ್ಯಾಯ ಸಮ್ಮತವಾದ ಚಿಂತನೆಗಳನ್ನು ಪ್ರೋತ್ಸಾಹಿಸುವುದು ಮೊದಲಾದುವು ಕಲಿಕಾ ಸಾಧನೆಗಳಿಗೆ ಒತ್ತು ನೀಡಿರುವ ಕಲಿಕಾ ವಿಶೇಷತೆಗಳಾಗಿವೆ.

## ನಿರಂತರ ಹಾಗೂ ಸಮಗ್ರ ಮೌಲ್ಯಮಾಪನ (CCE)

ಕಲಿಕೆಯು ವಿದ್ಯಾರ್ಥಿಗಳಲ್ಲಿ ನಿರಂತರವಾಗಿ ನಡೆಯುತ್ತಿರುವ ಪ್ರಕ್ರಿಯೆಯಾಗಿದೆ. ಆದುದರಿಂದ ನೈಪುಣ್ಯ ಹಾಗೂ ಅರಿವು ಎಷ್ಟರ ಮಟ್ಟಿಗೆ ಸಾಧಿಸಲಾಗಿದೆ ಎಂದು ತಿಳಿದುಕೊಳ್ಳುವ ಮೌಲ್ಯಮಾಪನ ಪ್ರಕ್ರಿಯೆಯೂ ನಿರಂತರವಾಗಿರಬೇಕು. ಸಮಗ್ರ ಮೌಲ್ಯಮಾಪನ ಎಂದರೆ ವಿದ್ಯಾರ್ಥಿಯ ವೈಜ್ಞಾನಿಕ, ಸಾಮಾಜಿಕ–ಭಾವನಾತ್ಮಕ ವಲಯಗಳ ಮೌಲ್ಯಮಾಪನವಾಗಿದೆ. ಈ ರೀತಿಯ ನಿರಂತರ ಹಾಗೂ ಸಮಗ್ರ ಮೌಲ್ಯಮಾಪನ ರೀತಿಯನ್ನು ಸ್ವೀಕರಿಸಲಾಗಿದೆ.

### CCE ವಲಯಗಳು

CCE ಯನ್ನು ಎರಡು ವಲಯಗಳ ಮೂಲಕ ನಿರ್ವಹಿಸಲಾಗುವುದು.

1. ವೈಜ್ಞಾನಿಕ ವಲಯ
2. ಸಾಮಾಜಿಕ–ಭಾವನಾತ್ಮಕ

## ವೈಜ್ಞಾನಿಕ ವಲಯದ ಬೆಳವಣಿಗೆಗೆ ಸಂಬಂಧಿಸಿದ ಮೌಲ್ಯಮಾಪನ

ಹೈಯರ್ ಸೆಕಂಡರಿ ವಲಯದಲ್ಲಿನ ಕಲಿಕೆಯ ವಿಷಯಗಳಾದ ಭಾಷೆ, ವಿಜ್ಞಾನ, ಮಾನವಿಕ ಶಾಸ್ತ್ರ, ವಾಣಿಜ್ಯ ಶಾಸ್ತ್ರ, ಆರೋಗ್ಯ ಕ್ರೀಡಾ ವಿದ್ಯಾಭ್ಯಾಸ ಮೊದಲಾದುವುಗಳು ವೈಜ್ಞಾನಿಕ ವಲಯಗಳಲ್ಲಿ ಒಳಪಡುತ್ತವೆ.

ಪ್ರತಿಯೊಂದು ವಿಷಯದಲ್ಲಿಯೂ ಗಳಿಸಿದ ಸಾಧನೆಗಳನ್ನು ಮೌಲ್ಯಮಾಪನ ಮಾಡಬೇಕು. ಕೆಳಗೆ ಎರಡು ರೀತಿಯ ಮೌಲ್ಯಮಾಪನಗಳನ್ನು ಸೂಚಿಸಲಾಗಿದೆ.

1. ನಿರಂತರ ಮೌಲ್ಯಮಾಪನ (CE)
2. ಅವಧಿ ಮೌಲ್ಯಮಾಪನ (TE)

### ನಿರಂತರ ಮೌಲ್ಯಮಾಪನ

ಮೂರು ರೀತಿಯ ನಿರಂತರ ಮೌಲ್ಯ ಮಾಪನಗಳನ್ನು ನಿರ್ದೇಶಿಸಲಾಗಿದೆ.

- ಕಲಿಕಾ ಪ್ರಕ್ರಿಯೆಯ ಮೌಲ್ಯಮಾಪನ
- Portfolio ಮೌಲ್ಯಮಾಪನ
- ಘಟಕದ ಮೌಲ್ಯಮಾಪನ

### ಕಲಿಕಾ ಪ್ರಕ್ರಿಯೆಯ ಮೌಲ್ಯಮಾಪನ

ಕಲಿಕಾ ಸಾಧನೆಯನ್ನು ಪಡೆಯುವುದಕ್ಕಾಗಿ ವಿದ್ಯಾರ್ಥಿ ಹಾಗೂ ಅಧ್ಯಾಪಕರು ವಿವಿಧ ರೀತಿಯ ಚಟುವಟಿಕೆಗಳನ್ನು ಆಯೋಜಿಸಬಹುದು. ಚಟುವಟಿಕೆಯಲ್ಲಿ ವಿದ್ಯಾರ್ಥಿಯ ಪಾಲ್ಗೊಳ್ಳುವಿಕೆ, ವಿದ್ಯಾರ್ಥಿಯ ಮಂಡನೆ ಹಾಗೂ ಪ್ರಕಟಪಡಿಸುವಿಕೆಯಲ್ಲಿನ ಗುಣಮಟ್ಟ, ವಿದ್ಯಾರ್ಥಿಯ ಸೃಜನಾತ್ಮಕತೆ, ನಿಗದಿತ ನೈಪುಣ್ಯಗಳನ್ನು ಎಷ್ಟರಮಟ್ಟಿಗೆ ಪಡೆಯಲು ಸಾಧ್ಯವಾಗಿದೆ ಮುಂತಾದ ವಿಚಾರಗಳನ್ನು ಅಧ್ಯಾಪಕರು ಮೌಲ್ಯಮಾಪನ ಮಾಡಬೇಕು. ಕೆಳಗೆ ನೀಡಲಾದ ಸೂಚಕಗಳನ್ನು ಮೌಲ್ಯಮಾಪನಕ್ಕೆ ಅಳವಡಿಸಬೇಕು.

- ಚಟುವಟಿಕೆಯಲ್ಲಿ ಪಾಲ್ಗೊಳ್ಳುವಿಕೆ
- ಆಶಯದ ಅರಿವು
- ನೈಪುಣ್ಯಗಳ ಗಳಿಕೆ
- ಮಂಡನೆ/ಪ್ರಕಟಪಡಿಸುವಿಕೆ
- ದಾಖಲಿಸುವಿಕೆ/ತಯಾರಿಸುವಿಕೆ

ಚಟುವಟಿಕೆಗಳ ಮೌಲ್ಯಮಾಪನ ಮಾಡುವಾಗ, ಪ್ರತಿಯೊಂದು ಸೂಚಕದ ಆಧಾರದಲ್ಲಿ ಮೌಲ್ಯಮಾಪನ ನಡೆಸಬೇಕು. ಉದಾ: ಚಟುವಟಿಕೆಗಳಲ್ಲಿನ ಪಾಲ್ಗೊಳ್ಳುವಿಕೆ ಎಂಬ ಸೂಚಕದ ಆಧಾರದಲ್ಲಿ ಮೌಲ್ಯಮಾಪನ ಮಾಡುವಾಗ ಅತ್ಯಂತ ಉತ್ತಮ ರೀತಿಯಲ್ಲಿ ಪಾಲ್ಗೊಂಡವರು, ಉತ್ತಮ ರೀತಿಯಲ್ಲಿ ಪಾಲ್ಗೊಂಡವರು ಇನ್ನೂ ಉತ್ತಮಪಡಿಸಬೇಕಾದವರು ಎಂದು ಸೂಚಿಸುವ ಟಿಪ್ಪಣಿಗಳು Teacher Plannerನ ಮೌಲ್ಯಮಾಪನದ ಪುಟದಲ್ಲಿ ದಾಖಲಿಸಬೇಕು. ಒಂದು ಅವಧಿಯಲ್ಲಿ ಪ್ರತಿಯೊಬ್ಬ ವಿದ್ಯಾರ್ಥಿಯನ್ನು ಚಟುಟಿಕೆಯ ಅಂಗವಾಗಿ ಮೌಲ್ಯಮಾಪನ ನಡೆಸಿ ದಾಖಲಿಸಬೇಕು.

ಪ್ರಕ್ರಿಯೆಯ ಮೌಲ್ಯಮಾಪನದಲ್ಲಿ–ಸ್ವಯಂ ಮೌಲ್ಯಮಾಪನ, ಪರಸ್ಪರ ಮೌಲ್ಯಮಾಪನ, ಅಧ್ಯಾಪಕರಿಂದ ಮೌಲ್ಯಮಾಪನ ಎಂಬಿವುಗಳಿಗೆ ಅವಕಾಶವಿರಬೇಕು.

ನಿರಂತರ ಮೌಲ್ಯಮಾಪನದ ಅಂಗವಾಗಿ ವಿವಿಧ ವಿಷಯಗಳಲ್ಲಿ ಕಲಿಕಾ ಪ್ರಕ್ರಿಯೆಯನ್ನು ಮೌಲ್ಯಮಾಪನ ಮಾಡುವುದು ಹೇಗೆಂದು ನೋಡೋಣ.

### ಚಟುವಟಿಕೆಗಳಲ್ಲಿ ಪಾಲ್ಗೊಳ್ಳುವಿಕೆ

- ಚಟುವಟಿಕೆಗಳನ್ನು ಮಾಡಿದ್ದಾರೆಯೇ?
- ವೈಯಕ್ತಿಕವಾಗಿ ನಿರ್ವಹಿಸಲು ಪ್ರಯತ್ನಿಸಿದ್ದಾರೆಯೇ?
- ಗುಂಪಿನಲ್ಲಿ ಸಕ್ರಿಯವಾಗಿ ಪಾಲ್ಗೊಂಡಿದ್ದಾರೆಯೇ?
- ಆಶಯಗಳನ್ನು ಹಂಚಿಕೊಂಡಿದ್ದಾರೆಯೇ?
- ಇತರರ ಪಾಲ್ಗೊಳ್ಳುವಿಕೆಗೆ ಪ್ರೋತ್ಸಾಹ ನೀಡಿದ್ದಾರೆಯೇ?

### ಆಶಯದ ಅರಿವು

ಒಳಹೂರಣದ ಅರಿವು

ಜ್ಞಾನ ನಿರ್ಮಾಣದ ಹಂತಗಳು

ಆಶಯದ ಗುಣಮಟ್ಟ

ಆಶಯದ ಪ್ರಯೋಗಾತ್ಮಕತೆ

– ಇವುಗಳಲ್ಲಿ ವಿದ್ಯಾರ್ಥಿಗಳ ಗುಣಮಟ್ಟ

### ನೈಪುಣ್ಯಗಳನ್ನು ಗಳಿಸುವುದು

- ಚಟುವಟಿಕೆಯ ನೈಪುಣ್ಯಗಳನ್ನು ಹೊಂದಲು ಬೇಕಾದ ಪೂರ್ವ ಪರಿಕಲ್ಪನೆ ಎಷ್ಟರ ಮಟ್ಟಿಗಿದೆ.
- ನಿಶ್ಚೈಸಲಾದ ಪ್ರಕ್ರಿಯೆಯ ಸಾಮರ್ಥ್ಯವನ್ನು ಪಡೆಯಲು ಈ ಚಟುವಟಿಕೆಯಿಂದ ಸಾಧ್ಯವಾಗಿದೆಯೇ.
- ಸಾಮರ್ಥ್ಯವನ್ನು ಪಡೆದವರಿಗೆ ಹೆಚ್ಚಿನ ಯಾವ ಚಟುವಟಿಕೆಗಳನ್ನು ನೀಡಬೇಕು.

### ಮಂಡನೆ/ಅಭಿವ್ಯಕ್ತಿ

- ವೈಯಕ್ತಿಕ ಚಟುವಟಿಕೆ ಹಾಗೂ ಗುಂಪಿನ ಚಟುವಟಿಕೆಗಳ ನಂತರ ಕಂಡುಕೊಂಡ ಕಾರ್ಯವನ್ನು ಮಂಡಿಸಲು ಪ್ರಯತ್ನ ನಡೆದಿದೆಯೇ?

- ನಿಗಮನಗಳಿಗೆ ಕಾರ್ಯವನ್ನು ಮಂಡಿಸಲು ಪ್ರಯತ್ನ ನಡೆದಿದೆಯೇ?
- ನಿಗಮನಗಳಿಗೆ ಯುಕ್ತವಾದ ಸಮರ್ಥನೆ ನೀಡಲು ಸಾಧ್ಯವಾಗಿದೆಯೇ?

**ದಾಖಲಿಸುವುದು/ತಯಾರಿಸುವುದು**

- ಚುಟವಟಿಕೆಗಳ ಮೂಲಕ ಹಾದುಹೋಗುವಾಗ ದಾಖಲಿಸಿಕೊಳ್ಳಲಾಗಿದೆಯೇ?
- ದಾಖಲೆಗಳು ಇತರರಿಗೆ ಅರ್ಥವಾಗುವ ರೀತಿಯಲ್ಲಿವೆಯೇ?
- ದಾಖಲೆಗಳಿಗೆ ಸುಂದರವಾದ ಚೌಕಟ್ಟು ನೀಡಲಾಗಿದೆಯೇ?

ವ್ಯಕ್ತಿಗತವಾಗಿಯೂ ಗುಂಪಿನ ಚರ್ಚೆಯ ಬಳಿಕವೂ ಸಾಮಾನ್ಯ ಚರ್ಚೆಗಳ ನಂತರವೂ ದಾಖಲೆಗಳನ್ನು ಮಾಡಲಾಗಿದೆಯೇ?

ನಿರಂತರ ಮೌಲ್ಯಮಾಪನದ ಅಂಗವಾಗಿ ಭಾಷೆಯ ಕಲಿಕಾ ಪ್ರಕ್ರಿಯೆಗಳನ್ನು ಮೌಲ್ಯ ಮಾಡಬೇಕಾದ ರೀತಿ ಹೇಗೆಂದು ನೋಡೋಣ:

ಭಾಷೆಯಲ್ಲಿ ಒಳಹೂರಣಕ್ಕನುಗುಣವಾಗಿ ಆಶಯ ಲಭಿಸುತ್ತದೆ. ವ್ಯವಹಾರ ಸಂಬಂಧವಾದ ತಿಳುವಳಿಕೆಯೂ, ಭಾಷಾ ನೈಪುಣ್ಯಗಳ ಅಭಿವೃದ್ಧಿಯೂ ಪ್ರಧಾನವಾಗಿದೆ. ಹಾಗಾದರೆ ಸೂಚಕಗಳನ್ನು ಪರಿಗಣಿಸಿಕೊಂಡು ಕಲಿಕಾ ಪ್ರಕ್ರಿಯೆಯನ್ನು ಹೇಗೆ ಮೌಲ್ಯಮಾಪನ ಮಾಡಬೇಕೆಂದು ನೋಡೋಣ.

**ಸಹಭಾಗಿತ್ವ**

ಕಲಿಕಾ ಪ್ರಕ್ರಿಯೆಯಲ್ಲಿ ವಿದ್ಯಾರ್ಥಿಯ ಆಸಕ್ತಿ, ಗುಂಪಿನ ಚಟುವಟಿಕೆಯಲ್ಲಿ ಪಾಲ್ಗೊಳ್ಳುವಿಕೆ ಎಂಬಿವುಗಳನ್ನು ಇಲ್ಲಿ ಪರಿಗಣಿಸಬೇಕು.

**ಆಶಯದ ಅರಿವು**

ಭಾಷೆಯಲ್ಲಿನ ಒಳ ಹೂರಣಕ್ಕನುಗುಣವಾದ ಅರಿವು ವ್ಯಾವಹಾರಿಕಗಳ ರೂಪುರೇಷೆ, ಮೌಲ್ಯಮಾಪನ ಸೂಚಕಗಳು, ವೈವಿಧ್ಯಮಯ ಭಾಷಾ ಕಲಿಕೆಯ ತಂತ್ರಗಳ ಮೂಲಕ ಜ್ಞಾನ ನಿರ್ಮಾಣದ ರೀತಿ, ಭಾಷಾ ಪರವಾದ ಗುಣಮಟ್ಟ ಎಂಬಿವುಗಳಲ್ಲಿ ವಿದ್ಯಾರ್ಥಿಯ ಸ್ಥಾನ ಏನೆಂದು ಅಧ್ಯಾಪಕರು ಕಂಡುಕೊಳ್ಳಬೇಕು.

**ನೈಪುಣ್ಯಗಳು**

ಆಲಿಸುವಿಕೆ, ಮಾತುಗಾರಿಕೆ, ಓದುವಿಕೆ, ಬರವಣಿಗೆ, ಸೃಜನಾತ್ಮಕತೆ ಮೊದಲಾದ ನೈಪುಣ್ಯಗಳ ವಲಯಗಳಲ್ಲಿ ವಿದ್ಯಾರ್ಥಿಯ ಅಭಿವೃದ್ಧಿಯನ್ನು ಮೌಲ್ಯಮಾಪನ ಮಾಡಿ ಪುನರವಲೋಕನ ಮಾಡಬೇಕು. ಇಲ್ಲಿ ಭಾಷೆಯ ವ್ಯಾವಹಾರಿಕಗಳು, ಭಾಷೆಯ ವಸ್ತುನಿಷ್ಠತೆ, ಅಭಿಪ್ರಾಯಗಳ ವಿನಿಮಯ ಎಂಬಿವುಗಳಲ್ಲಿ ವಿದ್ಯಾರ್ಥಿಗಳ ಅಭಿವ್ಯಕ್ತಿ ಸಾಮರ್ಥ್ಯವನ್ನು ಪರಿಗಣಿಸಬೇಕು.

**ಮಂಡನೆ/ಅಭಿವ್ಯಕ್ತಿ**

ಆಶಯ ವಿನಿಮಯಕ್ಕೆ ಭಾಷೆಯಲ್ಲಿ ವೈವಿಧ್ಯಮಯವಾದ ಅವಕಾಶಗಳಿವೆ. ವಿದ್ಯಾರ್ಥಿಯ ಸೃಜನಾತ್ಮಕ ಗುಣದಂತೆಯೇ ಇತರ ಭಾಷಾ ನೈಪುಣ್ಯಗಳು – ಹಾಡುವಿಕೆ, ಅಭಿನಯ, ಚಿತ್ರರಚನೆ, ಮಾತುಗಾರಿಕೆ, ಶುದ್ಧ ಉಚ್ಛಾರ, ಸ್ಪಷ್ಟತೆ–ಇವುಗಳನ್ನು ಪರಿಗಣಿಸಿಕೊಂಡು ಅಧ್ಯಾಪಕರು ನಡೆಸಬೇಕು.

**ದಾಖಲಿಸುವಿಕೆ/ತಯಾರಿಸುವಿಕೆ**

ಚಟುವಟಿಕೆಯ ಮೂಲಕ ಹಾದುಹೋದಾಗ ಅಗತ್ಯ ದಾಖಲೆಗಳನ್ನು ಮಾಡಲಾಗಿದೆಯೇ? ದಾಖಲೆಗಳು ಇತರರಿಗೆ ಅರ್ಥವಾಗುವ ರೀತಿಯಲ್ಲಿವೆಯೇ? ದಾಖಲೆಗಳು ಒಪ್ಪ ಓರಣವಾಗಿದೆಯೇ? ವೈಯಕ್ತಿಕ ರಚನೆಗಳಿವೆಯೇ? ತರಗತಿಯಲ್ಲಿನ ಚರ್ಚೆಯ ನಂತರ ಗುಂಪಿನಲ್ಲಿ ಉತ್ತಮಪಡಿಸಲಾಗಿದೆಯೇ? ತಪ್ಪಿಲ್ಲದೆ ರಚನೆಳನ್ನು ಬರೆಯಲು ವಿದ್ಯಾರ್ಥಿಗಳಿಗೆ ಸಾಧ್ಯವಾಗುತ್ತಿದೆಯೇ? ಮುಂತಾದುವುಗಳನ್ನು ಅಧ್ಯಾಪಕರು ಮೌಲ್ಯಮಾಪನ ಮಾಡಬೇಕು.

ಕಲಿಕಾ ಚಟುವಟಿಕೆಗಳನ್ನು ಸೂಕ್ಷ್ಮ ರೀತಿಯಲ್ಲಿ ಯೋಜನೆ ಮಾಡುವಾಗ ನಿರಂತರ ಮೌಲ್ಯಮಾಪನವನ್ನು ಕ್ರಮಬದ್ಧವಾಗಿಸಲು ತಯಾರಿಸಬೇಕು. Teacher Planner ತಯಾರಿಸಬೇಕು.

## 1. Teacher Planner ವಿವರಗಳು

- ಕಲಿಕಾ ಸಾಧನೆ
- ಪರಿಕಲ್ಪನೆಗಳು
- ನೈಪುಣ್ಯಗಳು
- ಮೌಲ್ಯಗಳು/ಮನೋಭಾವಗಳು
- ಕಲಿಕಾ ಸಾಮಗ್ರಿಗಳು
- ನಿರೀಕ್ಷಿಸುವ ಉತ್ಪನ್ನಗಳು
- ಪಿರೇಡುಗಳ ಸಂಖ್ಯೆ

ಚಟುವಟಿಕೆ, ಮೌಲ್ಯಮಾಪನ ಮುಂತಾದ ಪ್ರಕ್ರಿಯೆಗಳು ಅಡಕವಾಗಿರುವ ಪುಟ ಹಾಗೂ ಮೌಲ್ಯಮಾಪನಗಳ ದಾಖಲಾತಿಯಾಗಿರುವ ಪುಟ, ಪ್ರತಿರೂಪ ನಿರ್ಮಿತಿಯೂ ಅಡಕವಾಗಿರುವಂತೆ, ಕಲಿಕಾ ಚಟುವಟಿಕೆಗಳ ಯೋಜನೆ, ಮೌಲ್ಯಮಾಪನ ಸಂದರ್ಭಗಳು, ತಂತ್ರಗಳು, ಪರಿಕರಗಳು ಎಂಬಿವುಗಳುTeacher Plannerನಲ್ಲಿ ಒಳಗೊಂಡಿರಬೇಕು. ಒಂದು ಆಶಯ, ವಿವಿಧ ಆಶಯಗಳು, ಒಂದು ಕಲಿಕಾ ಸಾಧನೆಯನ್ನು ಕೇಂದ್ರೀಕರಿಸಿ ಅಥವಾ ಘಟಕವನ್ನು ಸಮಗ್ರವಾಗಿ ಕಂಡುಕೊಂಡು Teacher Plannerನ್ನು ತಯಾರಿಸಬೇಕು.

## 2. ವಿಷಯಕ್ಕೆ ಸಂಬಂಧಿಸಿದ Activity log ನ ವಿಶದೀಕರಣ

ವಿದ್ಯಾರ್ಥಿಯ Activity log ಜ್ಞಾನವಲಯದ ಮೌಲ್ಯಮಾಪನಕ್ಕೆ ಅಳವಡಿಸಬೇಕಾದ ಪ್ರಧಾನ ದಾಖಲೆಯಾಗಿದೆ. ಕಲಿಕಾ ಪ್ರಕ್ರಿಯೆಗಳಿಗೆ ಅನುಗುಣವಾಗಿ ವಿವಿಧ ಚಟುವಟಿಕೆಗಳನ್ನು ಸಂಪೂರ್ಣಗೊಳಿಸಲು Ac-

tivity log ಸಹಾಯಕವಾಗಿದೆ. ವಿದ್ಯಾರ್ಥಿಯ ಸೃಜನಾತ್ಮಕತೆ, ಚಿಂತನ ಪ್ರಕ್ರಿಯೆ, ಭಾಷಾ ನೈಪುಣ್ಯ, ಸಾಮಾಜಿಕ ಭಾವನಾತ್ಮಕ ಮಟ್ಟ ಮೊದಲಾದುವುಗಳು Activity logನಲ್ಲಿ ಪ್ರತಿಫಲಿಸುತ್ತವೆ. ಪಾಠಭಾಗವನ್ನು ವಿನಿಮಯ ಮಾಡಲು ಬಳಸಬಹುದಾದ ವಿವಿಧ ತಂತ್ರಗಳು, ಅವುಗಳನ್ನು ಈಡೇರಿಸಿಕೊಳ್ಳಲು ವಿದ್ಯಾರ್ಥಿಗಳು ನಡೆಸುವ ಪೂರ್ವ ತಯಾರಿ, ಚಟುವಟಿಕೆಗಳ ವಿವಿಧ ಹಂತಗಳಲ್ಲಿನ ವ್ಯವಹಾರವೇ ಮೊದಲಾಗಿ ಎಲ್ಲಾ ವಿವರಣೆಗಳು Activity logನಲ್ಲಿರಬೇಕು. ಚಟುವಟಿಕೆಯ ಮೂಲಕ ರೂಪುಗೊಂಡ ಕಲಿಕೋತ್ಪನ್ನಗಳಿಗೆ ಸಂಬಂಧಿಸಿದ ವಿವರಣೆಗಳು Activity logನಲ್ಲಿ ದಾಖಲಿಸಬೇಕಾಗಿದೆ. ಕಲಿಕಾ ಪ್ರಕ್ರಿಯೆಯನ್ನು ಬಲಪಡಿಸುವುದಕ್ಕಾಗಿ ಅಧ್ಯಾಪಕರು ನೀಡುವ ಹೆಚ್ಚಿನ ಮಾಹಿತಿಗಳನ್ನು Activity logನಲ್ಲಿ ದಾಖಲಿಸಬೇಕು.

ಕಾಲೋಚಿತವಾಗಿ ಸಾಧನೆಗಳನ್ನು ಮೌಲ್ಯಮಾಪನ ಮಾಡಿ ಕಲಿಕೆಯ ಅಭಿವೃದ್ಧಿಗೆ ಅಗತ್ಯವಾದ ನಿರ್ದೇಶಗಳನ್ನು ಹಾಗೂ ಸಹಾಯಗಳನ್ನು ಅಧ್ಯಾಪಕರು ನೀಡಬೇಕು. ಘಟಕವು ಕೊನೆಗೊಳ್ಳಲು ಆ ಘಟಕದಲ್ಲಿನ ಕಲಿಕಾ ಸಾಧನೆಗಳನ್ನು ವಿದ್ಯಾರ್ಥಿ ಪಡೆದಿರುವನೋ ಎಂದು ಮೌಲ್ಯಮಾಪನ ಮಾಡುವುದಕ್ಕಿರುವ ಪುರಾವೆಯಾಗಿ Activity log ಪರಿಣಮಿಸಬೇಕು.

ಆಶಯದ ಸ್ಪಷ್ಟತೆ ಹಾಗೂ ಆಶಯದ ಕುರಿತಿರುವ ಯೋಗ್ಯವಾದ ವಿವರಣೆಯಿದ್ದು ಸ್ವಯಂ ಚಿಂತನೆಗಳನ್ನು ಪಡೆಯುವಂತೆಯೂ, ಪ್ರತಿಫಲಿಸುವಂತೆಯೂ Activity log ಇರಬೇಕು. ಹೇಳಬೇಕಾದ ಅಂಶಗಳನ್ನು ಮೌಲ್ಯಾಧಾರಿತವಾಗಿ ತಿಳಿಸಿರಬೇಕು. Activity log ಸಮಗ್ರವೂ ಮುಂದುವರಿಯುವಂತೆಯೂ ಇರಬೇಕು.

## Port folio ದ ಮೌಲ್ಯಮಾಪನ

Port folio ಕಲಿಕಾ ಪ್ರಕ್ರಿಯೆ ಮೂಲಕ ಹಾದು ಹೋಗುವಾಗ ರೂಪುಗೊಳ್ಳುವ ಪ್ರತಿಯೊಂದು ಕಲಿಕೋತ್ಪನ್ನದ ಕ್ರೋಡೀಕರಣವಾಗಿದೆ. Portfolio ವಿದ್ಯಾರ್ಥಿ, ರಕ್ಷಕರು ಹಾಗೂ ಅಧ್ಯಾಪಕರಿಗೆ ಕಲಿಕೆಯ ಕುರಿತು ಅವಲೋಕನ ನೀಡುತ್ತದೆ.

## Portfolio ದಲ್ಲಿ ದಾಖಲಿಸಬೇಕಾದವುಗಳು

- Activity log
- ಕಲಿಕೆಗೆ ಸಂಬಂಧಿಸಿದ ಇತರ ದಾಖಲೆಗಳು, ಚಿತ್ರಗಳು, ಸಂಗ್ರಹಗಳು, ರಚನೆಗಳು, ಕಲಿಕೋಪಕರಣಗಳು, ICTಯ ಮೂಲಕ ಸೃಷ್ಟಿಯಾದ ಉತ್ಪನ್ನಗಳು ಮೊದಲಾದವುಗಳು.
- ಸೃಜನಾತ್ಮಕ ರಚನೆಗಳು
- ವರ್ಕ್‌ಶೀಟ್‌ಗಳು

**Portfolio ವನ್ನು ಮೌಲ್ಯಮಾಪನ ಮಾಡುವಾಗ ಈ ಕೆಳಗಿನ ಸೂಚಕಗಳನ್ನು ಉಪಯೋಗಿಸಬಹುದು.**

- ಆಶಯ ಸ್ಪಷ್ಟತೆ
- ಅರಿವು ಪಡೆದಿರುವಿಕೆ
- ಅನುಗುಣವಾದ ಚೌಕಟ್ಟು
- ಸಂಪೂರ್ಣತೆ
- ನೈಜತೆ

## ಕಲಿಕಾ ಪ್ರಕ್ರಿಯೆ ಹಾಗೂ Port folioಗಳ ಅಂಕಗಳನ್ನು ಕಂಡುಕೊಳ್ಳುವ ರೀತಿ

ಪ್ರತಿಯೊಂದು ಚಟುವಟಿಕೆಯಲ್ಲೂ ಮೇಲೆ ಹೇಳಿದ ಸೂಚಕಗಳಿಗನುಸರಿಸಿ ಒಬ್ಬೊಬ್ಬ ವಿದ್ಯಾರ್ಥಿಯನ್ನು ಮೌಲ್ಯಮಾಪನ ಮಾಡಿ ಅಂಕಗಳನ್ನು ನೀಡಿ ದಾಖಲಿಸಬೇಕೆಂದಿಲ್ಲ. ಸೂಚಕಗಳ ಆಧಾರದಲ್ಲಿ ಒಂದು ಅವಧಿಯ ಒಟ್ಟು ಅಭಿವ್ಯಕ್ತಿಯನ್ನು ಮೌಲ್ಯಮಾಪನ ಮಾಡಬೇಕು. Teacher Planner ನಲ್ಲಿರುವ ಟಿಪ್ಪಣಿಗಳು, Activity logನ ದಾಖಲೆಗಳು ಎಂಬಿವುಗಳನ್ನು ಪರಿಗಣಿಸಿಕೊಂಡು ಅವಧಿಯ ಕೊನೆಯಲ್ಲಿ ಇವುಗಳನ್ನು ಕ್ರೋಡೀಕರಿಸಿ, ಅತ್ಯಂತ ಉತ್ತಮ ರೀತಿಯಲ್ಲಿ ಪಾಲ್ಗೊಂಡವರು, ಇನ್ನೂ ಉತ್ತಮ ಪಡಿಸಬೇಕಾದವರು ಎಂಬಂತೆ ವಿಭಾಗಿಸಿ ಮೌಲ್ಯಮಾಪನ ಮಾಡಿ 4/3/2/1 ಎಂಬ ರೀತಿಯಲ್ಲಿ ಅಂಕಗಳನ್ನು ನೀಡಬೇಕು. 5 ಸೂಚಕಗಳನ್ನು ಕಂಡುಕೊಂಡು ಪ್ರತಿಯೊಂದು ಸೂಚಕಕ್ಕೂ ಅಂಕ ನೀಡುವಾಗ ಗರಿಷ್ಠ 20 ಅಂಕಗಳು ಎಂದು ಪರಿಗಣಿಸಬೇಕು.

## ಘಟಕ ಮಟ್ಟದ ಮೌಲ್ಯಮಾಪನ

ಒಂದು ಘಟಕದಲ್ಲಿ ಕಲಿಕಾ ಸಾಧನೆಗಳಿಗಿರುವ ಚಟುವಟಿಕೆಗಳು ಪರಸ್ಪರ ಹೊಂದಿಕೊಂಡು ಹಂಚಲಾಗಿದೆ. ಇದಕ್ಕೊಂಡು ಸಮಗ್ರತೆಯ ರೂಪವಿದೆ. ವಿದ್ಯಾರ್ಥಿಯ ಒಂದು ಘಟದ ಕಲಿಕೆಯನ್ನು ಮೌಲ್ಯಮಾಪನ ಮಾಡುವುದರಿಮದ ಈ ಸಮಗ್ರತೆಯ ತಿಳುವಳಿಕೆಯನ್ನು (ಸಂಪೂರ್ಣ ಕಲಿಕಾ ಸಾಧನೆಯನ್ನು ಪರಿಗಣಿಸಿಕೊಂಡು) ಮೌಲ್ಯಮಾಪನ ಮಾಡುವುದು. ಪ್ರಸ್ತುತ ಘಟಕದ ಮೌಲ್ಯಮಾಪನ ರೀತಿಯಲ್ಲಿದೆ ವಾಚಕ ಮೌಲ್ಯಮಾಪನ, ರಸಪ್ರಶ್ನೆ, ಮುಕ್ತ ಮೌಲ್ಯಮಾಪನ, ಪ್ರಶ್ನೆ ತಯಾರಿ, ಉತ್ತರ ಸೂಚಿಯನ್ನು ಕಂಡುಕೊಳ್ಳುವುದು, ಸೃಜನಾತ್ಮಕ ರಚನೆಗಳ ಮೌಲ್ಯಮಾಪನ ಮೊದಲಾದವುಗಳನ್ನು ಘಟಕದ ಮೌಲ್ಯಮಾಪನಕ್ಕೆ ಪರಿಗಣಿಸಬೇಕು. ನಿಗದಿತ ಘಟಕದ ಮೌಲ್ಯಮಾಪನದ ನಿಟ್ಟಿನಲ್ಲಿ ವಿದ್ಯಾರ್ಥಿಯ ಸ್ಥಾನವನ್ನು ಕಂಡುಕೊಳ್ಳಲು ಸಹಾಯಕರಾದ ರೇಟಿಂಗ್ ಸ್ಕೇಲ್, ಚೆಕ್‌ಲಿಸ್ಟ್ ಮೊದಲಾದವುಗಳನ್ನು ಉಪಯೋಗಿಸಬಹುದು. ಕಲಿಕಾ ಪ್ರಕ್ರಿಯೆಯೊಂದಿಗೆ ಘಟಕದ ಮೌಲ್ಯ ಮಾಪನವನ್ನೂ ಮಾಡಬೇಕು.

ಘಟಕದ ಮೌಲ್ಯಮಾಪನಕ್ಕೆ ಪರಿಗಣಿಸಲಾದ ಚಟುವಟಿಕೆಗಳ ಸೂಚಕಗಳ ಆಧಾರದಲ್ಲಿ ಅಂಕಗಳನ್ನು ನೀಡಿ, ಅವಧಿಯ ಕೊನೆಯಲ್ಲಿ ನಿಶ್ಚಿತ ಮಾದರಿಯಲ್ಲಿ ದಾಖಲಿಸಬೇಕು. ಇದಕ್ಕಾಗಿ ಬಳಸಲಾದ ಪರಿಕರಣಗಳಿಗೆ ಅನುಸರಿಸಿದ ಸೂಚಕಗಳನ್ನು ಅಧ್ಯಾಪಕರು ತಯಾರಿಸಬೇಕು. ಒಂದು ಅವಧಿಯಲ್ಲಿ ಒಂದಕ್ಕಿಂತ ಹೆಚ್ಚು ಘಟಕಗಳ

ಮೌಲ್ಯಮಾಪನ ಬೇಕಾಗಿರುವುದರಿಂದ ಪ್ರತಿ ಘಟಕದ ಮೌಲ್ಯಮಾಪನದ ಸರಾಸರಿ ಅಂಕಗಳನ್ನು ಅವಧಿಯ ಕೊನೆಯಲ್ಲಿ ಸೇರಿಸಬೇಕು.

## CE ಅಂಕಗಳನ್ನು ಕಂಡುಕೊಳ್ಳುವ ರೀತಿ

ಪ್ರತಿಯೊಂದು ವಿಷಯದ ಕಲಿಕಾ ಪ್ರಕ್ರಿಯೆ, Portpolio ಘಟಕ ಮಟ್ಟದ ಮೌಲ್ಯಮಾಪನ ಎಂಬಿವುಗಳಲ್ಲಿ ಪ್ರತಿಯೊಂದರ ಗರಿಷ್ಠ ಅಂಕಗಳು 20 ಆಗಿರುತ್ತದೆ. ಮೇಲಿನವುಗಳಲ್ಲಿ ಪಡೆದ ಅಂಕಗಳ ಸರಾಸರಿ ಅಂಕಗಳನ್ನು ಕಂಡುಕೊಂಡು ಅವಧಿ ಮಟ್ಟದ ದಾಖಲಾತಿ ಮಾಡಬೇಕು. ಇವುಗಳನ್ನು ಕ್ರೋಡಿಕರಿಸಿ ದಾಖಲಿಸುವುದಕ್ಕಾಗಿ Annexure-I formatನ್ನು ಉಪಯೋಗಿಸಬಹುದು.

## ಅವಧಿ ಮೌಲ್ಯಮಾಪನ (TE)

ತರಗತಿಯ ಚಟುವಟಿಕೆಯ ಮೂಲಕ ಪ್ರತಿಯೊಂದು ವಿದ್ಯಾರ್ಥಿಯು ಪಡೆದಿರುವ ಕಲಿಕಾ ಸಾಧನೆಯೇನೆಂದು, ಪ್ರತಿ ಅವಧಿಯ ಕೊನೆಯಲ್ಲಿ ಮೌಲ್ಯಮಾಪನ ಮಾಡಬೇಕಾದುದು ಅತ್ಯಗತ್ಯ. ಭಾಷಾ ವಿಷಯಗಳಿಗೆ ಸಂಬಂಧಿಸಿದಂತೆ, ಅವಧಿಗಾಗಿ ಪರಿಗಣಿಸಲ್ಪಟ್ಟ ಘಟಕಗಳ ಕಲಿಕಾ ಸಾಧನೆಗಳನ್ನು ಆಧಾರವಾಗಿಟ್ಟುಕೊಂಡು, ವ್ಯಾವಹಾರಿಕಗಳು, ಭಾಷಾ ನೈಪುಣ್ಯ, ಭಾಷಿಕ ಅಂಶಗಳು ಎಂಬೀ ವಲಯಗಳನ್ನು ಪರಿಗಣಿಸಿಕೊಂಡು ಅವಧಿ  ಮೌಲ್ಯಮಾಪನ ಮಾಡಬೇಕು. ಒಳಹೂರಣ ವಲಯಗಳಿಗೂ ನೈಪುಣ್ಯಗಳಿಗೂ ಒತ್ತು ನೀಡಿಕೊಂಡು ವೈವಿಧ್ಯವಾದ ಪ್ರಶ್ನಾವಳಿಗಳನ್ನು ಅಳವಡಿಸಬೇಕು. ಇತರ ವಿಷಯಗಳಿಗೆ ಅವಧಿ ಪರೀಕ್ಷೆಯಲ್ಲಿ ಪರಿಗಣಿಸುವ ಘಟಕಗಳ, ಒಳಹೂರಣ ವಲಯಗಳ ಆಧಾರದಲ್ಲಿ ಅವಧಿ ಮೌಲ್ಯಮಾಪನ ಮಾಡಬೇಕು. ಕಲಿಕಾ ಸಾಧನೆಗಳಿಗೆ ಒತ್ತು ನೀಡುವ ರೀತಿಯಲ್ಲಿ ತಿಳುವಳಿಕೆ ಹಾಗೂ ನೈಪುಣ್ಯಗಳನ್ನು ಮೌಲ್ಯಮಾಪನ ಮಾಡಲು ಒದಗುವ ಪ್ರಶ್ನೆಗಳನ್ನು ತಯಾರಿಸಬೇಕು.

ಪ್ರತಿಯೊಂದು ಘಟಕ/ಆಶಯದ ವಲಯಕ್ಕೂ ವೈವಿಧ್ಯಮಯವಾದ ಜ್ಞಾನ ಪ್ರಕ್ರಿಯೆಗಳಿಗೂ (ತಿಳಿವು ಪಡೆಯುವುದು, ಆಶಯಗಳು/ಅರಿವು ಎಂಬಿವುಗಳ ಪ್ರಯೋಗ, ವಿಶ್ಲೇಷಣೆ, ನಿಗಮನವನ್ನು ಕಂಡುಕೊಳ್ಳುವುದು. ಮೌಲ್ಯಮಾಪನ, ಸೃಜನಾತ್ಮಕತೆ ಮುಂತಾದ ಜ್ಞಾನ ಪ್ರಕ್ರಿಯೆ) ಸರಿಯಾದ ಪ್ರಾಧಾನ್ಯತೆ ನೀಡಿಕೊಂಡು ನೀಲಿನಕ್ಷೆ ತಯಾರಿಸಿ ವೈವಿಧ್ಯಮಯವಾದ ಪ್ರಶ್ನೆಗಳನ್ನು ಅಳವಡಿಸಲಾಗಿದೆಯೆಂದು ದೃಢೀಕರಿಸಿಕೊಂಡೇ ಪ್ರಶ್ನೆಪತ್ರಿಕೆಯನ್ನು ತಯಾರಿಸಬೇಕು. ಪ್ರಶ್ನೆಗಳಿಗೆ ಅನುಗುಣವಾದ ಸೂಚಕಗಳನ್ನು ನೀಡಿ, ಅವುಗಳ ಆಧಾರದಲ್ಲಿ ಮೌಲ್ಯಮಾಪನ ಮಾಡಬೇಕು.

ಕಲಿಕಾ ಪ್ರಕ್ರಿಯೆಯ ಅಂಗವಾಗಿ ನಡೆಸಲಾಗುವ ಪ್ರಯೋಗಿಕ ಪರೀಕ್ಷೆಗಳು, ಅದರ ದಾಖಲಾತಿಗಳು ಎಂಬಿವುಗಳು ನಿರಂತರವಾಗಿ ನಡೆಯಬೇಕಾಗಿದೆ. ಪ್ರಯೋಗಿಕ ಪರೀಕ್ಷೆಗಳಿಗೆ ಸಂಬಂಧಿಸಿದ ದಾಖಲಾತಿಗಳಿಗೆ Practical Diary ಯನ್ನು ಉಪಯೋಗಿಸಬೇಕು.

ಪ್ರಯೋಗಿಕ ಪರೀಕ್ಷೆ ಇರುವ ವಿಷಯಗಳಿಗೆ ಸಂಬಂಧಿಸಿದ ಪರೀಕ್ಷೆಯನ್ನು ಎರಡನೇ ವರ್ಷಗಳ ಪ್ರಯೋಗಿಕ ಪರೀಕ್ಷೆಗಳ ದಾಖಲಾತಿ ಮಾಡಲಾದ Practical Diary ಹಾಗೂ ಎರಡನೇ ವರ್ಷದ ಅಂತ್ಯದಲ್ಲಿ ನಡೆಸಲಾಗುವ ಪ್ರಯೋಗಿಕ ಪರೀಕ್ಷೆಗಳನ್ನು External Examiners ಪರಿಶೀಲಿಸಿ ಅಂಕಗಳನ್ನು ನೀಡಬೇಕು.

## ಆರೋಗ್ಯ-ಕ್ರೀಡಾ ವಿದ್ಯಾಭ್ಯಾಸದ ಮೌಲ್ಯಮಾಪನ ರೀತಿ

2014–15ರಿಂದ ಆರೋಗ್ಯ-ಕ್ರೀಡಾ ವಿದ್ಯಾಭ್ಯಾಸವನ್ನು ವಿಜ್ಞಾನ ವಿಷಯವೆಂಬುದಾಗಿ ಪರಿಗಣಿಸಲಾಗಿದೆ. ವಿದ್ಯಾರ್ಥಿಯ ದೈಹಿಕ, ಮಾನಸಿಕ ಅಭಿವೃದ್ಧಿಯು ಹದಿಹರೆಯದಲ್ಲಿ ಇನ್ನಷ್ಟೂ ಪ್ರಬಲಗೊಳ್ಳುತ್ತದೆ. ಉತ್ತಮ ಆರೋಗ್ಯಕ್ಕೆ ಬೇಕಾದ ಗುಣಸ್ವಭಾವಗಳಿಗೆ ಸಂಬಂಧಿಸಿ ಕ್ರೀಡಾ ಚಟುವಟಿಕೆಗಳಲ್ಲಿ ಪಾಲ್ಗೊಳ್ಳಬೇಕಾದ ಅಗತ್ಯಗಳ ಕುರಿತು ಸರಿಯಾದ ಅರಿವನ್ನು ಪಡೆಯಲು ಅವಕಾಶವನ್ನು ನೀಡಬೇಕು. ಆರೋಗ್ಯ-ಕ್ರೀಡಾ ವಿದ್ಯಾಭ್ಯಾಸವೆಂಬ ಹೈಯರ್ ಸೆಕೆಂಡರಿ ಮಟ್ಟದ ಆಕರ ಪಠ್ಯ ಪುಸ್ತಕದಲ್ಲಿ ನೀಡಲಾಗಿದೆ.

## ಸಾಮಾಜಿಕ-ಭಾವನಾತ್ಮಕ ವಲಯಗಳ ಮೌಲ್ಯಮಾಪನ

ವಿಜ್ಞಾನ ವಲಯದಂತೆಯೇ ಸಾಮಾಜಿಕ ಹಾಗೂ ಭಾವನಾತ್ಮಕ ವಲಯಗಳಲ್ಲೂ ಮೌಲ್ಯಮಾಪನವು ಅಗತ್ಯವಾಗಿದೆ. Learning to know, Learning to do, Learning to live together, Learning to be ಎಂಬಿವುಗಳಿಗೆ ಸಂಬಂಧಿಸಿ ನೈಪುಣ್ಯಗಳನ್ನು ಇಲ್ಲಿ ಪರಿಗಣಿಸಬೇಕು. ಸಾಮಾಜಿಕ-ಭಾವನಾತ್ಮಕ ವಲಯಗಳ ಮೌಲ್ಯಮಾಪನಗಳಿಗೆ ಸಂಬಂಧಿಸಿ ಕೆಳಗೆ ನೀಡಲಾದ ನೈಪುಣ್ಯಗಳನ್ನು ಮೌಲ್ಯಮಾಪನಕ್ಕೊಳಪಡಿಸಬೇಕು.

1. ಆಶಯಗಳ ಸಂವಹನ ಸಾಮರ್ಥ್ಯ (Communication Skill)
2. ಅಂತರ್ವ್ಯಕ್ತಿ ನೈಪುಣ್ಯ (Interpersonal skill)
3. ಸಹಭಾವನೆ (Empathy)
4. ಭಾವನೆಗಳೊಂದಿಗೆ ಹೊಂದಿಕೊಳ್ಳುವಿಕೆ (Coping with emotions)
5. ಮಾನಸಿಕ ಒತ್ತಡಗಳೊಂದಿಗೆ ಹೊಂದಿಕೊಳ್ಳುವಿಕೆ (Coping with emotional stress)
6. ಸಮಸ್ಯೆಯನ್ನು ಬಗೆಹರಿಸುವ ನೈಪುಣ್ಯ (Problem solving Skill)
7. ನಿಗಮನಕ್ಕೆ ಬರುವ ಸಾಮರ್ಥ್ಯ (Decision making)
8. ವಿಮರ್ಶಾತ್ಮಕ ಚಿಂತನೆ (Creatical thinking)
9. ಸೃಜನಾತ್ಮಕ ಚಿಂತನಾ ಸಾಮರ್ಥ್ಯ(Creative thinking Skill)

ವೈಜ್ಞಾನಿಕ ವಲಯದಲ್ಲಿ ವಿವಿಧ ವಿಷಯಗಳನ್ನು ನಿರ್ವಹಿಸುವ ಅಧ್ಯಾಪಕರೇ ಇವುಗಳನ್ನು ಮೌಲ್ಯಮಾಪನ ಮಾಡಬೇಕು. ಪ್ರತಿಯೊಂದು ವಿಷಯಕ್ಕೆ ಸಂಬಂಧಿಸಿದ ಪ್ರಕ್ರಿಯೆಗಳ ಮೌಲ್ಯಮಾಪನದ ಅಂಗವಾಗಿ ಈ ಮೌಲ್ಯಮಾಪನವನ್ನು ಮಾಡಬೇಕು. ಇಲ್ಲಿ ಪ್ರಕ್ರಿಯಾ ಸಾಮರ್ಥ್ಯವನ್ನು ಮೌಲ್ಯಮಾಫನ ಮಾಡುವುದರೊಂದಿಗೆ

ಮೌಲ್ಯಗಳು/ಮನೋಭಾವಗಳು ಎಂಬಿವುಗಳು ರೂಪುಗೊಳ್ಳುವುದಕ್ಕೆ ಸಂಬಂಧಿಸಿದ ಮೌಲ್ಯಮಾಪನವನ್ನೂ ಮಾಡಬೇಕು.

ಸಾಮಾಜಿಕ–ಭಾವನಾತ್ಮಕ ವಲಯದಲ್ಲಿ ವಿದ್ಯಾರ್ಥಿಯ ಸಾಮರ್ಥ್ಯಕ್ಕೆ ಸಂಬಂಧಿಸಿದ ಗುಣೋನ್ಮುಖವಾದ ನೈಪುಣ್ಯವನ್ನು ಗುರುತಿಸಿ ಪ್ರೋತ್ಸಾಹ ನೀಡಬೇಕು. ಈ ಸಾಮರ್ಥ್ಯವನ್ನು Teacher Plannerನಲ್ಲಿ ಕ್ರೋಡೀಕರಿಸಲಾದ ವಿವರಣೆಗಳನ್ನು ಅನುಬಂಧ–2ರಲ್ಲಿ ನಮೂದಿಸಬೇಕು.

## ಕಲಾತ್ಮಕ, ಸಾಮಾಜಿಕ, ಸಾಂಸ್ಕೃತಿಕ ಹಾಗೂ ವೃತ್ತಿಪರವಾದ ಸಾಮರ್ಥ್ಯಗಳು

ಹೈಯರ್ ಸೆಕೆಂಡರಿ ಮಟ್ಟದ ವಿದ್ಯಾರ್ಥಿಯ ಸರ್ವತೋಮುಖವಾದ ಅಭಿವೃದ್ಧಿಯನ್ನು ಖಚಿತಪಡಿಸುವುದಕ್ಕಾಗಿ ಕಲಿಕೆಯೊಂದಿಗೆ ಆಸ್ವಾದನ ಸಾಮರ್ಥ್ಯ, ಸೃಜನಾತ್ಮಕ ಸಾಮರ್ಥ್ಯ ಕಲಾಪರವಾದ ನೈಪುಣ್ಯಗಳು, ಸಾಮಾಜಿಕ, ಸಾಂಸ್ಕೃತಿಕ ಸೇವಾ ಚಟುವಟಿಕೆಗೆ ಪ್ರವೃತ್ತಿ ಮೊದಲಾದವುಗಳನ್ನು ನಿರ್ವಹಿಸುವುದಕ್ಕಿರುವ ಮನೋಭಾವಗಳನ್ನು ರೂಪಿಸಿಕೊಳ್ಳಬೇಕು. ತಿಂಗಳಿಗೊಮ್ಮೆಯಾದರೂ ಈ ರೀತಿಯ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳುವಿಕೆಗೆ ಅವಕಾಶ ನೀಡಬೇಕು.

ಇದಕ್ಕಾಗಿ ಹೈಯರ್ ಸೆಕೆಂಡರಿ ಮಟ್ಟದಲ್ಲಿ ಕಲಾವೇದಿಕೆ, ಕರಿಯರ್ ಗೈಡೆನ್ಸ್, ಸಮಾಜ ಸೇವೆಗೆ ಸಂಬಂಧಿಸಿದ ಚಟುವಟಿಕೆ, ಎನ್.ಎಸ್.ಎಸ್., ಎನ್.ಸಿ.ಸಿ., ವಿವಿಧ ರೀತಿಯ ಕ್ಲಬ್‌ಗಳು ಮುಂತಾದವುಗಳನ್ನು ಉಪಯೋಗಿಸಿಕೊಳ್ಳಬೇಕು.

ಇದಕ್ಕಾಗಿ ಹೈಯರ್ ಸೆಕೆಂಡರಿ ಮಟ್ಟದಲ್ಲಿ ವ್ಯಾಸಂಗ ಮಾಡುವ ಎಲ್ಲ ವಿದ್ಯಾರ್ಥಿಗಳು ಯಾವುದಾದರೂ ಒಂದು ಚಟುವಟಿಕೆಯಲ್ಲಿ ಪಾಲ್ಗೊಳ್ಳಲೇ ಬೇಕು. ಪಾಲ್ಗೊಳ್ಳುವಿಕೆಗೆ ಸಂಬಂಧಿಸಿದ ಸಾಮರ್ಥ್ಯಕ್ಕೆ ಪ್ರತ್ಯೇಕ ಗ್ರೇಡ್ ಸರ್ಟಿಫಿಕೇಟ್ ನೀಡಬೇಕು.

| | | |
|---|---|---|
| ಅತ್ಯಂತ ಉನ್ನತ ಮಟ್ಟದ ಚಟುವಟಿಕೆಗೆ | – | A ಗ್ರೇಡ್ |
| ಉತ್ತಮ ಚಟುವಟಿಕೆಗೆ | – | B ಗ್ರೇಡ್ |
| ತೃಪ್ತಿಕರ ಚಟುವಟಿಕೆ | – | C ಗ್ರೇಡ್ |
| ಕೇವಲ ಪಾಲ್ಗೊಳ್ಳುವಿಕೆ | – | D ಗ್ರೇಡ್ |

## ಮೌಲ್ಯಮಾಪನ–ವಾರ್ಷಿಕ ಕ್ರೋಡೀಕರಣ

ಅವಧಿ ಮೌಲ್ಯಮಾಪನದಲ್ಲಿ ದೊರಕುವ CE ಅಂಕಗಳನ್ನು ಪರಿಗಣಿಸುವಾಗ, ಮೂರು ಅವಧಿಗಳಲ್ಲಿ ವಿದ್ಯಾರ್ಥಿಗೆ ಲಭಿಸಿದ ಅತ್ಯಂತ ಉತ್ತಮವಾದ ಅಂಕಗಳನ್ನೇ CEಯ ವಾರ್ಷಿಕ ಅಂಕಗಳಾಗಿ ಆಯ್ದುಕೊಳ್ಳಬೇಕು. ಈ ಅಂಕಗಳನ್ನು ಅನುಬಂಧ–2ರ ಫಾರ್ಮನಲ್ಲಿ ಅಂತಿಮ ಅಂಕಗಳು ಎಂಬ ಕಾಲಂನಲ್ಲಿ ನಮೂದಿಸಬೇಕು. ಇದು ವಿದ್ಯಾರ್ಥಿಯ ಪ್ರತಿಯೊಂದು ವಿಷಯಕ್ಕೆ ಸಂಬಂಧಿಸಿದ ಅಂತಿಮವಾದ CE ಅಂಕಗಳಾಗಿವೆ. ಮುಂದೆ

ಪ್ರತಿಯೊಂದು ವಿಷಯಕ್ಕೆ ಸಂಬಂಧಿಸಿದ ಅವಧಿಯ ಅಂಕಗಳನ್ನು (TE) ಕಂಡುಕೊಂಡು ಅನಂತರ CE, TE ಎಂಬಿವುಗಳ ಒಟ್ಟು ಅಂಕಗಳನ್ನು ಕೂಡಿಸಿ ಹಾಕಬೇಕು. ಇದು ಒಬ್ಬ ವಿದ್ಯಾರ್ಥಿ ಗಳಿಸಿದ ಒಟ್ಟು ಅಂಕವಾಗಿರುತ್ತದೆ. ಪ್ರಯೋಗಿಕ ಪರೀಕ್ಷೆ ಇರುವ ವಿಷಯಗಳಿಗೆ ಸಂಬಂಧಿಸಿದ ಅಂಕಗಳನ್ನು ಕೂಡ ಪರಿಗಣಿಸಿಕೊಂಡು ಒಟ್ಟು ಅಂಕಗಳನ್ನು ಕಂಡುಕೊಳ್ಳಬೇಕು.

ಹೈಯರ್ ಸೆಕೆಂಡರಿಯ ಅವಧಿ ಪರೀಕ್ಷೆಯು ಸಾರ್ವಜನಿಕ ಪರೀಕ್ಷೆ ಆದುದರಿಂದ TEಯ ಲಿಖಿತ ಪರೀಕ್ಷೆ, ಪ್ರಾಯೋಗಿಕ ಪರೀಕ್ಷೆ ಎಂಬಿವುಗಳ ಅಂತಿಮ ಅಂಕಗಳೇ ಸಾರ್ವಜನಿಕ ಪರೀಕ್ಷೆಯ ಅಂಕಗಳಾಗಿರುತ್ತವೆ.

ಸಾಮಾಜಿಕ–ಭಾವನಾತ್ಮಕ ವಲಯದ ನೈಪುಣ್ಯಗಳಲ್ಲಿ ಪ್ರತಿಯೊಬ್ಬ ವಿದ್ಯಾರ್ಥಿಗೆ ಸಂಬಂಧಿಸಿದವುಗಳಲ್ಲಿ ಉನ್ನತವಾದುದನ್ನೂ ಅದಕ್ಕಾಗಿ ಕಾದಿರಿಸಿದ ಕಾಲಂಗಳಲ್ಲಿ ನಮೂದಿಸಬೇಕು. ಸಾಮರ್ಥ್ಯ ಪ್ರಕಟಪಡಿಸಿದ ನೈಪುಣ್ಯಗಳಿದ್ದರೆ ಅವುಗಳನ್ನು, ಸಾಮರ್ಥ್ಯ ಪ್ರಕಟಪಡಿಸಿಲ್ಲ ಎಂಬ ರೀತಿಯಲ್ಲಿ ನಮೂದಿಸಬೇಕಾಗಿಲ್ಲ.

## ಗ್ರೇಡಿಂಗ್ ರೀತಿ

ಹೈಯರ್ ಸೆಕಂಡರಿ ಹಂತದಲ್ಲಿ ವೈಜ್ಞಾನಿಕ ವಿಷಯಗಳ ಮೌಲ್ಯಮಾಪನಕ್ಕಾಗಿ ಗ್ರೇಡಿಂಗ್ ರೀತಿಯನ್ನು ಬಳಸಲಾಗುತ್ತಿದೆ. ಇದಕ್ಕಾಗಿ 9 ಪೋಯಿಂಟ್ ಆಬ್ಸಲ್ಯೂಟ್ ಗ್ರೇಡಿಂಗ್ ಉಪಯೋಗಿಸಲಾಗುತ್ತಿದೆ.

| ಸ್ಕೋರ್ | ಗ್ರೇಡ್ |
|---|---|
| 90–100 | A+ |
| 80–89 | A |
| 70–79 | B+ |
| 60–69 | B |
| 50–59 | C+ |
| 40–49 | C |
| 30–39 | D+ |
| 20–29 | D |
| Below 20 | E |

ವಿದ್ಯಾರ್ಥಿ ಉನ್ನತ ವ್ಯಾಸಂಗಕ್ಕಾಗಿ ಅರ್ಹತೆ ಪಡೆಯಬೇಕಾದರೆ ಹೈಯರ್ ಸೆಕಂಡರಿ ಮಟ್ಟದಲ್ಲಿ (ಹಂತದಲ್ಲಿ) ಪ್ರತಿಯೊಂದು ವಿಷಯದಲ್ಲೂ CE+TE (ಸಾರ್ವತ್ರಿಕ ಪರೀಕ್ಷೆ) ಯಲ್ಲಿ ಕನಿಷ್ಠ D+ ಗ್ರೇಡ್ (30–39 ಶೇ.) ಆದರೂ ಪಡೆದಿರಬೇಕು. ಇದರೊಂದಿಗೆ ಸಾರ್ವಜನಿಕ ಪರೀಕ್ಷೆಯಲ್ಲಿ (TE) ಮಾತ್ರವಾಗಿ ಕನಿಷ್ಠ D+ ಪಡೆದಿರಬೇಕು.

ಈ ರೀತಿಯಲ್ಲಿ ವೈಜ್ಞಾನಿಕ ಹಂತದಲ್ಲೂ ಸಾಮಾಜಿಕ ಭಾವನಾತ್ಮಕ ಹಂತದಲ್ಲೂ ವಿದ್ಯಾರ್ಥಿಯ ಮಟ್ಟವನ್ನು ಅಳೆದು ಕಲಿಕಾ ಸಾಧನೆಗಳನ್ನು ಖಚಿತಪಡಿಸಲು ಅಗತ್ಯದ ಕ್ರಮಗಳನ್ನು ಕೈಗೊಳ್ಳಲು ಸಾಧ್ಯವಾಗುತ್ತದೆ. ಈ ಮೌಲ್ಯಮಾಪನವು ನಿರಂತರವೂ ಸಮಗ್ರವೂ ಆಗಿ ನಡೆಸಲು ಒಟ್ಟಾಗಿ ಪ್ರಯತ್ನಿಸುವುದು ಅಗತ್ಯಗತ್ಯವಾಗಿದೆ. ಅದು ಸಾಧ್ಯವಾಗುವುದಕ್ಕಾಗಿ ಕ್ಲಸ್ಟರ್ ಮಟ್ಟದ ಸಭೆಯಲ್ಲಿನ ಮೌಲ್ಯಮಾಪನ ಹೆಚ್ಚು ಸಹಕಾರಿಯಾಗುವುದು.

ಮೌಲ್ಯಮಾಪನಕ್ಕೆ ಬೇಕಾದ ಫೋರ್ಮೇಟುಗಳು ಅನುಬಂಧದಲ್ಲಿ ನೀಡಲಾಗಿದೆ.

## ಮೌಲ್ಯಮಾಪನ ಒಂದೇ ನೋಟದಲ್ಲಿ



# ಕಲಿಕಾ ಸಾಧನೆಗಳು

- ಹೊಸಗನ್ನಡ ಕಾಲಘಟ್ಟದ ನವೋದಯ, ನವ್ಯ ನವ್ಯೋತ್ತರ ಮೊದಲಾದ ಪಂಥಗಳ ಸಾಹಿತ್ಯರಚನೆಗಳನ್ನು ಓದಿ ಪರಾಮರ್ಶಿಸಿ ಆಶಯ ಮತ್ತು ಸ್ವಾರಸ್ಯವನ್ನು ಲಿಖಿತ ರೂಪದಲ್ಲಿ ಮಂಡಿಸುವರು.
- ಕವಿತೆಗಳಲ್ಲಿ ಮೂಡಿ ಬಂದಿರುವ ವರ್ಣನೆಯನ್ನು ಓದಿ ಆಸ್ವಾದಿಸಿ ವಿಮರ್ಶೆ, ಆಸ್ವಾದನಾ ಟಿಪ್ಪಣಿಗಳನ್ನು ಬರೆಯುವರು.
- ದಲಿತ, ಬಂಡಾಯ ಹಾಗೂ ಪ್ರಗತಿಶೀಲ ಮನೋಧರ್ಮದ ಕೃತಿಗಳನ್ನು ಓದಿ ಅಲ್ಲಿ ಬಂದಿರುವ ಧೋರಣೆಗಳನ್ನು ಗುರುತಿಸಿಕೊಂಡು ಆಶಯಗಳನ್ನು ಪ್ರಕಟಿಸುವರು.
- ಗಾದೆಮಾತು, ನಾಣ್ಣುಡಿ, ನುಡಿಗಟ್ಟುಗಳ ಬಳಕೆಯ ಪ್ರಾಧಾನ್ಯತೆಯನ್ನು ಕಂಡುಕೊಂಡು ಭಾಷಾ ಪ್ರಯೋಗಗಳಲ್ಲಿ ಅಳವಡಿಸಿಕೊಳ್ಳುವರು.
- ಆತ್ಮಕಥೆ, ಜೀವನಚರಿತ್ರೆ, ವ್ಯಕ್ತಿ ಚಿತ್ರ ಮೊದಲಾದ ಸಾಹಿತ್ಯ ರಚನೆಗಳನ್ನು ಓದಿ ಅವರ ಜೀವನ ನೀತಿ, ಆದರ್ಶಗಳನ್ನು ನಿತ್ಯ ಜೀವನದಲ್ಲಿ ರೂಢಿಸಿಕೊಳ್ಳುವರು.
- ಅನುವಾದಿತ ಕೃತಿಗಳನ್ನು ಓದಿ ಅನ್ಯದೇಶದ ಸಾಮಾಜಿಕ, ಸಾಂಸ್ಕೃತಿಕ ಸ್ಥಿತಿಗತಿಗಳನ್ನು ತಿಳಿದುಕೊಂಡು ಭಾಷಾಂತರ ಮೊದಲಾದ ಪ್ರಕ್ರಿಯೆಗಳಲ್ಲಿ ತೊಡಗಿಸಿಕೊಳ್ಳುವರು.
- ಕಲೆ, ಕ್ರೀಡೆ, ವಿಜ್ಞಾನ, ತಂತ್ರಜ್ಞಾನ ಮೊದಲಾದ ವಿಷಯಗಳಿಗೆ ಸಂಬಂಧಿಸಿದ ಸಾಹಿತ್ಯ ರಚನೆಗಳನ್ನು ಓದಿ ಅವುಗಳಲ್ಲಿ ತಮ್ಮ ಆಸಕ್ತಿಯನ್ನು ನೆಲೆಗೊಳಿಸುವರು.
- ಪೂರಕ ಗ್ರಂಥಗಳು, ಇಂಟರ್‌ನೆಟ್ ಮೊದಲಾದವುಗಳಿಂದ ಮಾಹಿತಿ ಸಂಗ್ರಹಿಸಿ ಸ್ವರಚನೆಗೆ ಬೇಕಾದ ಭಾಷಾ ನೈಪುಣ್ಯವನ್ನು ಆರ್ಜಿಸಿಕೊಳ್ಳುವರು.
- ಸ್ತ್ರೀಪರ ಚಿಂತನೆಯ ಕೃತಿಗಳನ್ನು ಓದುವುದರ ಮೂಲಕ ಸ್ತ್ರೀ ಸಮಾನತೆಯ ಪ್ರಾಧಾನ್ಯತೆಯನ್ನು ಕಂಡುಕೊಂಡು ಅದರ ಅಗತ್ಯವನ್ನು ಲಿಖಿತರೂಪಗಳಲ್ಲಿ ಮಂಡಿಸುವರು.
- ದೃಶ್ಯಮಾಧ್ಯಮಗಳಲ್ಲಿ ಚಲನಚಿತ್ರವು ಜನಪ್ರಿಯವೂ ಶಕ್ತಿಯುತವೂ ಆದ ಸಂವಹನ ಮಾಧ್ಯಮ ಎಂಬುದನ್ನು ಕಂಡುಕೊಂಡು ಆ ಕುರಿತಾದ ತಮ್ಮ ನಿಲುವುಗಳನ್ನು ಪ್ರಕಟಿಸುವ ಸಾಮರ್ಥ್ಯಗಳಿಸುವರು.
- ಚಲನಚಿತ್ರಕ್ಕೆ ಸಂಬಂಧಪಟ್ಟಂತೆ ಕಥೆ, ಚಿತ್ರಕಥೆ, ಸಂಭಾಷಣೆ ಇವೇ ಮೊದಲಾದವುಗಳಲ್ಲಿ ತೊಡಗಿಸಿಕೊಳ್ಳುವ ಸಾಮರ್ಥ್ಯವನ್ನು ಪಡೆಯುವರು.
- ಮುದ್ರಣ ಮಾಧ್ಯಮ, ದೃಶ್ಯ ಮಾಧ್ಯಮ ಮೊದಲಾದವುಗಳ ಭಾಷೆ, ಶೈಲಿ ಇತ್ಯಾದಿಗಳನ್ನು ಕರಗತ ಮಾಡಿಕೊಂಡು ಭಾಷಾ ನೈಪುಣ್ಯವನ್ನು ಬೆಳೆಸಿಕೊಳ್ಳುವರು.
- ಕನ್ನಡ ಭಾಷೆ ಹಾಗೂ ಸಾಹಿತ್ಯದ ಬೆಳವಣಿಗೆಯನ್ನು ಹಳೆಗನ್ನಡ, ನಡುಗನ್ನಡ ಕೃತಿಗಳ ಹಿನ್ನೆಲೆಯಲ್ಲಿ ಗುರುತಿಸಿಕೊಂಡು ಆ ಬಗೆಗೆ ತಮ್ಮ ನಿಲುವುಗಳನ್ನು ಪ್ರಕಟಿಸುವರು.
- ಸಾಹಿತ್ಯ ಕೃತಿಗಳನ್ನು ಓದಿ ವಿಶ್ಲೇಷಣೆ ಮಾಡುವುದರ ಮೂಲಕ ಪರಂಪರೆಯಿಂದ ಹರಿದು ಬಂದ ಆಚಾರ ವಿಚಾರಗಳನ್ನು, ಸಾಂಸ್ಕೃತಿಕ ಮೌಲ್ಯಗಳನ್ನು ತಿಳಿದುಕೊಂಡು ಅವುಗಳನ್ನು ನಿತ್ಯಜೀವನದಲ್ಲಿ ರೂಢಿಸಿಕೊಳ್ಳುವರು.
- ಪದ ನಿಷ್ಪತ್ತಿ, ವಾಕ್ಯ ಪ್ರಯೋಗ, ಕ್ರಿಯಾಧಾತು, ನಾಮ ವಿಶೇಷಣ ಸಂಧಿ, ಸಮಾಸ, ದೇಶ್ಯ–ಅನ್ಯದೇಶ್ಯ ಇವೇ ಮೊದಲಾದ ವ್ಯಾಕರಣ ವಿಶೇಷತೆಗಳನ್ನು ತಿಳಿದುಕೊಂಡು ಭಾಷಾ ಪ್ರಯೋಗಗಳಲ್ಲಿ ಅಳವಡಿಸಿಕೊಳ್ಳುವರು.

- ಶತಕ, ಕೀರ್ತನೆ, ತ್ರಿಪದಿಗಳಲ್ಲಿ ಮೂಡಿಬಂದಿರುವ ಜೀವನ ನೀತಿ, ಸಮಾಜ ವಿಮರ್ಶೆ ಮೊದಲಾದವುಗಳನ್ನು ತಿಳಿದುಕೊಂಡು ತಮ್ಮ ಪ್ರತಿಕ್ರಿಯೆಗಳನ್ನು ಸೂಕ್ತ ವ್ಯವಹಾರ ರೂಪಗಳಲ್ಲಿ ಪ್ರಕಟಿಸುವ ಸಾಮರ್ಥ್ಯವನ್ನು ಗಳಿಸುವರು.
- ಸಾಹಿತ್ಯ ಕೃತಿಗಳಲ್ಲಿ ಮೂಡಿಬಂದಿರುವ ಸಮಕಾಲೀನ ವಿಚಾರಗಳನ್ನು ಕಂಡುಕೊಂಡು ನಾಡು ನುಡಿ ಚಿಂತನೆ, ಪರಿಸರ ಪ್ರಜ್ಞೆ, ಪರಸ್ಪರ ಸ್ನೇಹ ಬಾಂಧವ್ಯ ಇವೇ ಮೊದಲಾದ ಮನೋಭಾವಗಳನ್ನು ಬೆಳೆಸಿಕೊಳ್ಳುವರು.
- ಚಂಪೂ ಸಾಹಿತ್ಯ ಸ್ವರೂಪವನ್ನು ಆಳವಾಗಿ ಅಧ್ಯಯನ ಮಾಡಿ ಹಳೆಗನ್ನಡ ಪದ್ಯಸಾಹಿತ್ಯದ ಆಶಯಗಳನ್ನು ಅರ್ಥಮಾಡಿಕೊಂಡು ಸೂಕ್ತ ಸಂದರ್ಭಗಳಲ್ಲಿ ಬಳಸಲು ಸಮರ್ಥರಾಗುವರು.
- ಸಾಹಿತ್ಯ ಕೃತಿಗಳನ್ನು ಅವಲೋಕಿಸಿ ಅವುಗಳಲ್ಲಿನ ಸಾಮಾಜಿಕ ಜೀವನ ಹಾಗೂ ಇತರ ಮೌಲ್ಯಗಳನ್ನು ತಿಳಿದುಕೊಳ್ಳುವರು.
- ಹಳೆಗನ್ನಡ ಕಾವ್ಯಭಾಗಗಳನ್ನು ಸ್ವರಭಾರಯುಕ್ತವಾಗಿ, ಸ್ಫುಟವಾಗಿ ವಾಚನಮಾಡುವರು.
- ಕಾವ್ಯಭಾಗಗಳಲ್ಲಿ ಬಳಕೆಯಾದ ಛಂದಸ್ಸನ್ನು (ಕಂದಪದ್ಯ, ವರ್ಣವೃತ್ತ) ಗುರುತಿಸಲು ಸಮರ್ಥರಾಗುವರು.
- ಕಾವ್ಯಭಾಗದಲ್ಲಿ ಬರುವ ವ್ಯಾಕರಣ, ಛಂದಸ್ಸು ಇತ್ಯಾದಿಗಳನ್ನು ಗುರುತಿಸಿ ಸೂಕ್ತ ಸಂದರ್ಭಗಳಲ್ಲಿ ಅಳವಡಿಸಿಕೊಳ್ಳುವರು.

# ವಾರ್ಷಿಕ ಯೋಜನೆ

## (Scheme of Work)

Plus Two - Lang

| ತಿಂಗಳು | | ಪಾಠಭಾಗ | ಪಿರೇಡು |
|---|---|---|---|
| ಜೂನ್ | 1 | ಊರ್ಮಿಳಾ | 10 |
| | 2 | ಕೆರೆಯದಡದಲ್ಲಿ | 8 |
| | 3 | ಅವರವರ ದಾರಿ | 6 |
| ಜುಲೈ | 1 | ನೆರೆ | 9 |
| | 2 | ಅಪ್ಪನೂ ಒಲೆಯುರಿಯೂ | 6 |
| | 3 | ತಾಯಿ | 9 |
| ಆಗಸ್ಟ್ | 1 | ಸಾವಿರಾರು ನದಿಗಳು | 8 |
| | 2 | ನಾಡಸಿರಿ | 14 |
| ಸೆಪ್ಟೆಂಬರ್ | 1 | ನೀರವ ರಾತ್ರಿಯ ಮಾಯಾಲೋಕ | 6 |
| | 2 | ಸಕ್ಕರೆಗುಪ್ಪಂಸರಿಮಾಳ್ಪರೇ | 10 |
| ಅಕ್ಟೋಬರ್ | 1 | ಜಾಲಿಯಮರದಂತೆ | 8 |
| | 2 | ಸುಬ್ಬಣ್ಣ | 14 |
| ನವಂಬರ್ | 1 | ಬಣ್ಣದಲೋಕ | 10 |
| | 2 | ಆಗದು ಎಂದು.. | 6 |
| | 3 | ಬೂತಯ್ಯಮನ ಮಗ ಅಯ್ಯು | 8 |
| ಡಿಸೆಂಬರ್ | 1 | ತರುಣ ಸೂರ್ಯಂ ಕತ್ತಲೆಯನೆಪೊಕ್ಕಂತ್ತಾಯ್ತು | 16 |
| ಜನವರಿ | 1 | ನಡೆವುದೊಂದೆ ಭೂಮಿ | 6 |
| | 2 | ಗುರುವಚನಮಲಂಘನೀಯಂ | 14 |

# TEACHER PLANNER

ಪಾಠದ ಹೆಸರು : ಊರ್ಮಿಳಾ

ದಿನಾಂಕ :

ನಿರೀಕ್ಷಿತ ಸಮಯ : 10 ಪಿರೇಡುಗಳು

**ಕಲಿಕಾ ಸಾಮಾಗ್ರಿಗಳು**

- ಪಠ್ಯ ಪುಸ್ತಕ
- ಅಡಕ ಮುದ್ರಿಕೆ
- ಅಂತರ್ಜಾಲ
- ಪರಾಮರ್ಶನ ಗ್ರಂಥಗಳು
- ಸ್ಥಳೀಯ ಸಂಪನ್ಮೂಲಗಳು

**ಮೌಲ್ಯಗಳು ಹಾಗೂ ಮನೋಭಾವಗಳು**

- ಹೊಸಗನ್ನಡ ಸಾಹಿತ್ಯದ ಕಾವ್ಯ, ಕತೆ, ಕವನ ಪ್ರಕಾರಗಳನ್ನು ತಿಳಿಯುವುದು.
- ಸಾಮಾಜಿಕ ಮೌಲ್ಯಗಳನ್ನು ತಿಳಿಯುವುದು
- ಭಾಷಾ ವೈಶಿಷ್ಟ್ಯಗಳನ್ನು ತಿಳಿಯುವ ಮನೋಭಾವ
- ಸ್ತ್ರೀ ಸಮಾನತೆ, ಸ್ತ್ರೀ ಸ್ವಾತಂತ್ರ್ಯ ಕುರಿತಾದ ಧೋರಣೆಗಳು

| ಪ್ರಕ್ರಿಯೆ ಚಟುವಟಿಕೆ | ಪ್ರತಿಕ್ರಿಯೆ |
|---|---|
| • ವಿದ್ಯಾರ್ಥಿಗಳ ಪೂರ್ವಜ್ಞಾನ ಪರೀಕ್ಷಿಸುವುದು.<br>• ಆಧುನಿಕ ಕವಿಗಳು ಅವರು ರಚಿಸಿದ ಕವಿತೆಗಳ ಕುರಿತು ತಿಳಿಯುವುದು.<br>• ಕವಿಗಳ ಮನೋಭಾವವನ್ನು ತಿಳಿಯುವುದು.<br>• ಕಾಸರಗೋಡು ಪ್ರದೇಶದ ಕನ್ನಡ ಸಾಹಿತಿಗಳ ವಿವರಗಳನ್ನು ತಿಳಿಯುವುದು. ಅಭಿಪ್ರಾಯ ಮಂಡನೆ. | |

| | |
|---|---|
| • ಕಯ್ಯಾರರ ಸಾಹಿತ್ತಿಕ ಸಾಧನೆಗಳನ್ನು ತಿಳಿಯುವುದು. ಟಿಪ್ಪಣಿ ತಯಾರಿಸುವುದು.<br>• 'ಊರ್ಮಿಳಾ' ಕವಿತೆಯ ಓದು.<br>• ಕವಿತೆಯಲ್ಲಿ ವರ್ಣಿತವಾದ ವಿಚಾರಗಳನ್ನು ಬಾಯ್ದೆರೆಯಾಗಿ ಹೇಳುವುದು.<br>• ಕವಿ ಪ್ರಯೋಗಿಸಿದ ಪದಗಳ ಔಚಿತ್ಯ, ವರ್ಣನಾತ್ಮಕ ಶೈಲಿ, ಪ್ರಾಸ ಮೊದಲಾದವುಗಳ ಕುರಿತಾದ ವಿಶ್ಲೇಷಣೆ– ವಿದ್ಯಾರ್ಥಿಗಳ ಪ್ರತಿಕ್ರಿಯೆ<br>• ಆಸ್ವಾದಿಸುವ ಟಿಪ್ಪಣಿ ಬರೆಯುವುದು. ತರಗತಿಯಲ್ಲಿ ಮಂಡಿಸುವುದು.<br>• 'ಕವಿತಾ ಸಂಕಲನದ' ಪೂರ್ವ ತಯಾರಿ, ಸಂಪಾದಕೀಯ, ಮುನ್ನುಡಿ, ಸ್ವರೂಪ ಪರಿಚಯ | |

ಪ್ರಾಂಶುಪಾಲರ ಸಹಿ.                ಅಧ್ಯಾಪಕರ ಸಹಿ

**ನಿರಂತರ ಮೌಲ್ಯಮಾಪನ (CE), ಅವಧಿ ಮೌಲ್ಯಮಾಪನ (TE) ಇವುಗಳನ್ನು ಪ್ರತಿಯೊಂದು ಅವಧಿಯಲ್ಲೂ ದಾಖಲಿಸಲಿರುವ ವಿಷಯಾಧಾರಿತ ಕ್ರೋಡೀಕೃತ ನಮೂನೆ**

ಅವಧಿ : 1/2/3

ವಿಷಯ ........................................ ತರಗತಿ ..................... ವಿಭಾಗ ................................

| ಕ್ರಮ ಸಂಖ್ಯೆ | ವಿದ್ಯಾರ್ಥಿಯ ಹೆಸರು | CE ವಿಭಾಗ | | | ಒಟ್ಟು CE ಸ್ಕೋರ್ | TE ಸ್ಕೋರ್ | ಒಟ್ಟು ಗ್ರೇಡ್ |
|---|---|---|---|---|---|---|---|
| | | ಪ್ರಕ್ರಿಯೆ | ಪೋರ್ಟ್ ಫೋಲಿಯೋ | ಘಟಕ ಮೌಲ್ಯಮಾಪನ | | | |
| | | | | | | | |

## Annual Consolidation Format - Higher Secondary Level

Class :                Division :

Year :

| Sl. No. | Name of Student | Term | Part 1 (Language) | | | Part 2 (2nd Language) | | | Part 3 | | | | | | | | | | | | | | | | Socio-Emotional skills |
|---|---|---|---|---|---|---|---|---|---|---|---|---|---|---|---|---|---|---|---|---|---|---|---|---|---|
| | | | | | | | | | Paper 1 | | | Paper 2 | | | Paper 3 | | | Paper 4 | | | Health & Physical Edn. | | | | |
| | | | CE | TE | Total | CE | TE | Total | CE | TE | Total | CE | TE | Total | CE | TE | Total | CE | TE | Total | CE | TE | Total | | |
| | | I | | | | | | | | | | | | | | | | | | | | | | | |
| | | II | | | | | | | | | | | | | | | | | | | | | | | |
| | | III | | | | | | | | | | | | | | | | | | | | | | | |
| | | Final Score | | | | | | | | | | | | | | | | | | | | | | | |
| | | | | | | | | | | | | | | | | | | | | | | | | | |

# 1. ಸಿರಿಬೆಳಸು

| | | |
|---|---|---|
| ಘಟಕ 1 | : | ಸಿರಿಬೆಳಸು |
| ಸಮಯ | : | 22 ಪಿರೇಡುಗಳು |
| **ಕಲಿಕಾ ಸಾಮಾಗ್ರಿಗಳು** | : | ಪಠ್ಯ ಪುಸ್ತಕ<br>ಅಡಕ ಮುದ್ರಿಕೆ<br>ಅಂತರ್ಜಾಲ<br>ಪರಾಮರ್ಶನ ಗ್ರಂಥಗಳು<br>ಸ್ಥಳೀಯ ಸಂಪನ್ಮೂಲಗಳು |

**ಮೌಲ್ಯಗಳು ಹಾಗೂ ಮನೋಭಾವಗಳು** :

- ಹೊಸಗನ್ನಡ ಸಾಹಿತ್ಯದ ಕಾವ್ಯ, ಕತೆ, ಕವನ ಪ್ರಕಾರಗಳನ್ನು ತಿಳಿಯುವುದು.
- ಸಾಮಾಜಿಕ ಮೌಲ್ಯಗಳನ್ನು ತಿಳಿಯುವುದು.
- ಪರಿಸರ ಪ್ರೇಮವನ್ನು ಬೆಳೆಸುವ ಮನೋಭಾವ
- ಭಾಷಾ ವೈಶಿಷ್ಟ್ಯಗಳನ್ನು ತಿಳಿಯುವ ಮನೋಭಾವ
- ಸಹೋದರ ಭಾಷೆಯ ಕಥಾ ವೈಶಿಷ್ಟ್ಯಗಳನ್ನು ತಿಳಿಯುವ ಮನೋಭಾವ.
- ಪರಿಸರದ ಪ್ರಾಣಿಗಳ ಜೀವನ ಕ್ರಮಗಳನ್ನು ತಿಳಿಯುವ ಮನೋಭಾವ.

# ಪ್ರಸ್ತಾವನೆ

ಯಂತ್ರ ಸಂಸ್ಕೃತಿ ಮತ್ತು ಲಾಭ ನಷ್ಟಗಳ ಲೆಕ್ಕಾಚಾರದಲ್ಲಿ ನಾವಿಂದು ಬದುಕುತ್ತಿದ್ದೇವೆ. ಈ ವಿಶ್ವವೇ ನಮ್ಮ ಅಂಗೈಯಲ್ಲಿ ಇದೆಯೆಂದು ಜಂಭಕೊಚ್ಚಿಕೊಳ್ಳುವ ನಾವು ನಮ್ಮ ಸುತ್ತಮುತ್ತಲಿನ ಪರಿಸರವನ್ನು ಮರೆಯುತ್ತೇವೆ. ಪ್ರಕೃತಿ ಮತ್ತು ಮನುಷ್ಯನ ಸಂಬಂಧಗಳು, ಪ್ರೀತಿ, ಪ್ರೇಮ, ಕಾಯಕ ನಿಷ್ಠೆ ಇವುಗಳ ಬಗ್ಗೆ ಅರಿವು ಮೂಡಿದಾಗ ಮನುಷ್ಯನು ಹೆಚ್ಚು ಜಾಗೃತನಾಗುತ್ತಾನೆ. ಆತನಿಗೆ ಸತ್ಯದ ದರ್ಶನವಾಗುವುದು. ಮಾನವನಿಗೆ ಹಿತವನ್ನುಂಟು ಮಾಡುವುದೆ ಸಾಹಿತ್ಯ. ಸಾಹಿತ್ಯವು ಜನಸಾಮಾನ್ಯರ ಬಾಳಿಗೂ ದೀವಿಗೆಯಾಗುವುದು. ಆ ಮೂಲಕ ಕವಿ, ಕೃತಿ ಗೆಲ್ಲುವುದು. ಸಾಹಿತ್ಯ ಕೃತಿಗಳನ್ನು ಓದುವ, ಆಸ್ವಾದಿಸುವ ಮನೋಬಾವವನ್ನು ಬೆಳೆಸುವುದರ ಜೊತೆಗೆ ಸೃಜನಶೀಲ ರಚನೆಗಳನ್ನು ನಿರ್ಮಿಸಲು ವಿದ್ಯಾರ್ಥಿಗಳು ಸಮರ್ಥರಾಗುವಂತೆ ಮಾಡಲು ಅನುಕೂಲಕರವಾದ ಪಾಠಗಳನ್ನು ಈ ಘಟಕದಲ್ಲಿ ಅಳವಡಿಸಲಾಗಿದೆ.

ಈ ಘಟಕದಲ್ಲಿ ಒಟ್ಟು ನಾಲ್ಕು ಪಾಠಗಳಿವೆ. ಆರಂಭದಲ್ಲಿ ಬಂದಿರುವ 'ಊರ್ಮಿಳಾ' ಕವನವನ್ನು ಬರೆದವರು ಕವಿ ಕಯ್ಯಾರ ಕಿಞ್ಞಣ್ಣ ರೈಯವರು. ಕಾವ್ಯಗಳಲ್ಲಿ ಅನಾದರಕ್ಕೊಳಪಟ್ಟ ಪಾತ್ರಗಳು ಅವೆಷ್ಟೋ ಇರುತ್ತವೆ. ಅಂಥವುಗಳಲ್ಲಿ ಊರ್ಮಿಳೆಯ ಪಾತ್ರವೂ ಒಂದು. ಈ ಅಲಕ್ಷಿತ ಪಾತ್ರದ ಭಾವನೆಗಳನ್ನು ಈ ಪದ್ಯಭಾಗದಲ್ಲಿ ಕಾಣಬಹುದು. ನವೋದಯ ಕಾವ್ಯದ ಭಾಷೆ, ಶೈಲಿ, ವರ್ಣನಾ ವೈಖರಿಗಳು ಇಲ್ಲಿ ಮನ ಸೆಳೆಯುತ್ತವೆ.

ಪರಿಸರದೊಂದಿಗೆ ಬದುಕುತ್ತ ಅದರ ವೈವಿಧ್ಯಗಳನ್ನು ಲೇಖನ ರೂಪದಲ್ಲಿ ಬರೆದವರು ಕೆ.ಪಿ. ಪೂರ್ಣಚಂದ್ರ ತೇಜಸ್ವಿ, ತಮ್ಮ ಪರಿಸರದಲ್ಲಿನ ಜೀವಿಗಳ ಜೀವನ ಕ್ರಮಗಳನ್ನು 'ಕೆರೆಯ ದಡದಲ್ಲಿ ' ಎಂಬ ಲೇಖನದಲ್ಲಿ ಕಾಣಬಹುದು. ಈ ಪಾಠಭಾಗದ ಮೂಲಕ ಮಕ್ಕಳಲ್ಲಿ ಪರಿಸರ ಪ್ರೇಮವನ್ನು, ಜೀವ ವೈವಿಧ್ಯವನ್ನು ಸಂರಕ್ಷಿಸುವ ಬಗೆಗಿನ ಅರಿವನ್ನು ಮೂಡಿಸಲು ಸಾಧ್ಯವಾಗಬಹುದು.

ಸಮನ್ವಯ ಕವಿಯಾದ ಜಿ.ಎಸ್. ಶಿವರುದ್ರಪ್ಪನವರು ಬರೆದ 'ಅವರವರ ದಾರಿ' ಕವಿತೆಯಲ್ಲಿ ಪ್ರಸ್ತುತ ಸಮಾಜದಲ್ಲಿನ ಮಾನವೀಯ ಸಂಬಂಧದ ಕುರಿತಾದ ಚಿಂತನೆಗಳನ್ನು ಕಾಣಬಹುದು. ಸಾಮಾಜಿಕ ಪರಿಸ್ಥಿತಿಗೆ ಅನುಗುಣವಾಗಿ ಮಾನವನು ಬದುಕಬೇಕೆಂಬುದನ್ನು ವಿದ್ಯಾರ್ಥಿಗಳು ಗುರುತಿಸಿಕೊಳ್ಳಲು ಈ ಕವಿತೆಯ ಓದು ಸಹಾಯಕವಾಗಬಲ್ಲುದು.

ತಗಳಿ ಶಿವಶಂಕರ ಪಿಳ್ಳೆಯವರ 'ನೆರೆ' ಕಥೆಯಲ್ಲಿ ಪ್ರಾಣಿಯೊಂದರ ಸ್ವಾಮಿನಿಷ್ಠೆ ಮತ್ತು ಮನುಷ್ಯನ ಕೃತಘ್ನತೆಯ ಸ್ವಭಾವವನ್ನು ಕಾಣಬಹುದು. ಪ್ರಾಣಿಗಳ ಬದುಕಿಗಿಂತ ಮನುಷ್ಯನ ಬದುಕು ಕಡೆ ಎನ್ನುವ ಸಂದೇಶವನ್ನು ಈ ಕತೆ ಸಾರುತ್ತದೆ. ಉತ್ತಮ ರೀತಿಯಲ್ಲಿ ಬದುಕುವ ನೀತಿಯನ್ನು ಇಲ್ಲಿ ಸಹೋದರ ಭಾಷೆಯ ಕಥೆಯೊಂದು ನಿರೂಪಿಸಿರುವುದು ಗಮನಾರ್ಹ.

# UNIT FRAME

**ಘಟಕ 1 : ಸಿರಿಬೆಳಸು** ಸಮಯ :

**ಕಲಿಕಾ ಸಾಧನೆಗಳು**

- ಹೊಸಗನ್ನಡ ಕಾಲಘಟ್ಟದ ನವೋದಯ, ಪ್ರಗತಿಶೀಲ, ನವ್ಯ, ನವ್ಯೋತ್ತರ ಮೊದಲಾದ ಪಂಥಗಳ ಸಾಹಿತ್ಯರಚನೆಗಳನ್ನು ಓದಿ ಪರಾಮರ್ಶಿಸಿ ಅವುಗಳಲ್ಲಿನ ಆಶಯ ಮತ್ತು ಸ್ವಾರಸ್ಯವನ್ನು ಲಿಖಿತ ರೂಪದಲ್ಲಿ ಮಂಡಿಸುವರು.
- ಕತೆ – ಕವಿತೆಗಳಲ್ಲಿ ಮೂಡಿ ಬಂದಿರುವ ವರ್ಣನೆಗಳನ್ನು ಓದಿ ಆಸ್ವಾದಿಸಿ ವಿಮರ್ಶೆ, ಆಸ್ವಾದನಾ ಟಿಪ್ಪಣಿಗಳನ್ನು ಬರೆಯುವರು.
- ಅನುವಾದಿತ ಕೃತಿಗಳನ್ನು ಓದಿ ಅನ್ಯಭಾಷೆಗಳ ಸಾಮಾಜಿಕ, ಸಾಂಸ್ಕೃತಿಕ ಸ್ಥಿತಿಗತಿಗಳನ್ನು ತಿಳಿದುಕೊಂಡು ಭಾಷಾಂತರ ಮೊದಲಾದ ಪ್ರಕ್ರಿಯೆಗಳಲ್ಲಿ ತೊಡಗಿಸಿಕೊಳ್ಳುವರು.
- ಪೂರಕ ಗ್ರಂಥಗಳು, ಅಂತರ್ಜಾಲ ಮೊದಲಾದವುಗಳಿಂದ ಮಾಹಿತಿ ಸಂಗ್ರಹಿಸಿ ಸ್ವರಚನೆಗೆ ಬೇಕಾದ ಭಾಷಾ ನೈಪುಣ್ಯವನ್ನು ಆರ್ಜಿಸಿಕೊಳ್ಳುವರು.
- ಸ್ತ್ರೀವಾದಿ ಚಿಂತನೆಯ ಕೃತಿಗಳನ್ನು ಓದುವುದರ ಮೂಲಕ ಸ್ತ್ರೀ ಸಮಾನತೆಯ ಪ್ರಾಧಾನ್ಯವನ್ನು ಕಂಡುಕೊಂಡು ಅದರ ಅಗತ್ಯವನ್ನು ಲಿಖಿತರೂಪಗಳಲ್ಲಿ ಮಂಡಿಸುವರು.
- ಸಾಹಿತ್ಯ ಕೃತಿಗಳನ್ನು ಓದಿ ವಿಶ್ಲೇಷಣೆ ಮಾಡುವುದರ ಮೂಲಕ ಪರಂಪರೆಯಿಂದ ಹರಿದು ಬಂದ ಆಚಾರವಿಚಾರಗಳನ್ನು, ಸಾಂಸ್ಕೃತಿಕ ಮೌಲ್ಯಗಳನ್ನು ತಿಳಿದುಕೊಂಡು ಅವುಗಳನ್ನು ನಿತ್ಯಜೀವನದಲ್ಲಿ ರೂಢಿಸಿಕೊಳ್ಳುವರು.
- ಸಾಹಿತ್ಯ ಕೃತಿಗಳಲ್ಲಿ ಮೂಡಿಬಂದಿರುವ ಸಮಕಾಲೀನ ವಿಚಾರಗಳನ್ನು ಕಂಡುಕೊಂಡು ನಾಡುನುಡಿಗಳ ಚಿಂತನೆ, ಪರಿಸರ ಪ್ರಜ್ಞೆ, ಪರಸ್ಪರ ಸ್ನೇಹ – ಬಾಂಧವ್ಯ ಇವೇ ಮೊದಲಾದ ಮನೋಭಾವಗಳನ್ನು ಬೆಳೆಸಿಕೊಳ್ಳುವರು.

| ಪರಿಕಲ್ಪನೆ | ಪ್ರಕ್ರಿಯೆ / ಚಟುವಟಿಕೆ/ಮೌಲ್ಯಮಾಪನ | ಕಲಿಕಾ ಸಾಧನೆಗಳು |
|---|---|---|
| • ವಾಸ್ತವ ಬದುಕಿನ ನೇರ ನಿರೂಪಣೆಯ ಜತೆಗೆ ಮಾನವೀಯ ಮೌಲ್ಯಗಳನ್ನು ಪ್ರತಿಪಾದಿಸುವ ರಚನೆಗಳು ನವೋದಯ ಕಾಲ ಘಟ್ಟದಲ್ಲಿ ಮೂಡಿಬಂದಿವೆ. | • ನವೋದಯ ಕಾಲಘಟ್ಟದ ಸ್ಥೂಲ ಪರಿಚಯವನ್ನು ಅಧ್ಯಾಪಕರು ಮಾಡುವುದು. ಪ್ರಸ್ತುತ ಕಾಲಘಟ್ಟದ ಕೃತಿಗಳಲ್ಲಿ ಪ್ರತಿಪಾದಿತವಾಗಿರುವ ಆಶಯಗಳ ಕುರಿತಾಗಿ ಚರ್ಚಿಸುವುದು. ಸಂಕೀರ್ಣ ಬದುಕನ್ನು ಸುಗಮಗೊಳಿಸುವ ಘಟಕಗಳಾದ ಪ್ರೀತಿ, ಮಮತೆ,ಅನುಕಂಪ, ತ್ಯಾಗ ಮೊದಲಾದವುಗಳು ನವೋದಯ ಕಾಲಘಟ್ಟದ ಕೃತಿಗಳಲ್ಲಿವೆ ಎಂಬ ನಿಗಮನಕ್ಕೆ ಬರುವುದು. | • ಚರ್ಚೆ–ಸಂವಾದಗಳಲ್ಲಿ ಸಕ್ರಿಯವಾಗಿ ಭಾಗವಹಿಸುವ ಸಾಮರ್ಥ್ಯ |

| ಪರಿಕಲ್ಪನೆ | ಪ್ರಕ್ರಿಯೆ / ಚಟುವಟಿಕೆ/ಮೌಲ್ಯಮಾಪನ | ಕಲಿಕಾ ಸಾಧನೆಗಳು |
|---|---|---|
| • ನಿರ್ಲಕ್ಷಿತ ವ್ಯಕ್ತಿತ್ವವೊಂದರ ಕುರಿತಾಗಿ ಅನುಕಂಪವನ್ನು 'ಊರ್ಮಿಳಾ' ಕವನದಲ್ಲಿ ಕಾಣಬಹುದು. | • ಪಾಠಭಾಗದಲ್ಲಿ ಬಂದಿರುವ 'ಊರ್ಮಿಳಾ' ಕವಿತೆಯ ಓದು. ಅಧ್ಯಾಪಕರ ಮಾದರಿ ಓದು. ವಿದ್ಯಾರ್ಥಿಗಳು ತಾವು ಓದಿದ ಭಾಗಗಳಲ್ಲಿನ ಆಶಯಗಳನ್ನು ಕಂಡುಕೊಳ್ಳುವುದು. ಗುಂಪಿನಲ್ಲಿ ಚರ್ಚಿಸುವುದು. ಚರ್ಚೆಯಲ್ಲಿ ಬಂದ ಅಭಿಪ್ರಾಯಗಳನ್ನು ಕ್ರೋಡೀಕರಿಸಿ ಕವಿತೆಯ ಆಶಯವನ್ನು ಬರೆಯುವುದು. ತರಗತಿಯಲ್ಲಿ ಮಂಡಿಸುವುದು.<br>• ಕವಿತೆಯಲ್ಲಿ ಬಂದಿರುವ ಸ್ವಾರಸ್ಯಪೂರ್ಣ ಸಾಲುಗಳನ್ನು ಗುರುತಿಸುವುದು. ಸ್ವಾರಸ್ಯವನ್ನು ವಿವೇಚಿಸಿಕೊಂಡು ಟಿಪ್ಪಣಿ ಬರೆಯುವುದು.<br>• ಕವಿತೆಯಲ್ಲಿ ಬಂದಿರುವ ಊರ್ಮಿಳೆ ಪಾತ್ರದ ಕುರಿತಾದ ವಿಚಾರಗಳನ್ನು ಗ್ರಹಿಸಿಕೊಂಡು ಗುಂಪಿನಲ್ಲಿ ಚರ್ಚೆ ನಡೆಸುವುದು.<br>• ಅಭಿಪ್ರಾಯ ಮಂಡನೆ. ಚರ್ಚೆಯಲ್ಲಿ ಬಂದಿರುವ ಅಭಿಪ್ರಾಯಗಳನ್ನು ಕ್ರೋಡೀಕರಿಸಿ 'ಸತಿ ಊರ್ಮಿಳೆ' ಎಂಬ ವಿಷಯದ ಮೇಲೆ ಪ್ರಬಂಧ ರಚಿಸುವುದು. ವಿಚಾರಗೋಷ್ಠಿಯಲ್ಲಿ ಮಂಡನೆ. ಪರಸ್ಪರ ಮೌಲ್ಯಮಾಪನ.<br>• ಸಮಾನ ಆಶಯವನ್ನು ಹೊಂದಿರುವ ಕಾವ್ಯಭಾಗಗಳನ್ನು ಪ್ರಸ್ತುತ ಕವಿತೆಯೊಂದಿಗೆ ಸಮೀಕರಿಸಿ ತುಲನಾತ್ಮಕ ಟಿಪ್ಪಣಿ ಬರೆಯುವುದು. | • ಕವಿತೆಯಲ್ಲಿ ಬಂದಿರುವ ಮಾತುಗಳ ಸ್ವಾರಸ್ಯವನ್ನು ಕುರಿತು ಬರೆದ ಟಿಪ್ಪಣಿ.<br>• ಚರ್ಚಾಗೋಷ್ಠಿಯಲ್ಲಿ ಸಕ್ರಿಯವಾಗಿ ಭಾಗವಹಿಸುವ ಸಾಮರ್ಥ್ಯ.<br>• ಸೆಮಿನಾರ್ ಪ್ರಬಂಧ.<br>• ಕವಿತೆ ಹಾಗೂ ಕಾವ್ಯಭಾಗದಲ್ಲಿ ಮೂಡಿಬಂದಿರುವ ಸಮಾನ ಆಶಯಗಳನ್ನು ತೌಲನಿಕವಾಗಿ ವಿವೇಚಿಸಿ ಬರೆದ ಟಿಪ್ಪಣಿ. |
| • ಪ್ರಕೃತಿಯೊಂದಿಗಿನ ಭಾವನಾತ್ಮಕ ಸಂಬಂಧವನ್ನು ವರ್ಣಿಸುವ ಬರಹಗಳು ಕನ್ನಡದಲ್ಲಿವೆ. | • 'ಕೆರೆಯದಡದಲ್ಲಿ' ಪಾಠಭಾಗದ ಓದು. ಪಾಠಭಾಗದಲ್ಲಿ ಬಂದಿರುವ ವಿಶೇಷ ಪದಗಳನ್ನು, ಪದಪ್ರಯೋಗಗಳನ್ನು ಗುರುತಿಸುವುದು. ವ್ಯಾಖ್ಯಾನಿಸುವುದು. ಸ್ವಂತ ವಾಕ್ಯಗಳಲ್ಲಿ ಪ್ರಯೋಗಿಸುವುದು. ಪಾಠಭಾಗದಲ್ಲಿ ವರ್ಣಿತವಾಗಿರುವ ಜೀವ ಆವಾಸ ಕೇಂದ್ರಗಳಲ್ಲಿ, ಜೀವ ವೈವಿಧ್ಯ, ಸ್ವಯಂರಕ್ಷಣೆಗಾಗಿ ಪ್ರಕೃತಿದತ್ತವಾಗಿ ಬಂದಿರುವ ರಕ್ಷಣಾ ತಂತ್ರಗಳು ಇವೇ ಮೊದಲಾದವುಗಳನ್ನು ತಿಳಿದುಕೊಳ್ಳುವುದು. | • ಗದ್ಯಭಾಗದಲ್ಲಿ ಬಂದಿರುವ ವಿಶೇಷ ಪದಗಳನ್ನು ನುಡಿಗಟ್ಟುಗಳನ್ನು ಸ್ವಂತ ವಾಕ್ಯಗಳಲ್ಲಿ ಪ್ರಯೋಗಿಸುವ ಸಾಮರ್ಥ್ಯ. |

| ಪರಿಕಲ್ಪನೆ | ಪ್ರಕ್ರಿಯೆ / ಚಟುವಟಿಕೆ/ಮೌಲ್ಯಮಾಪನ | ಕಲಿಕಾ ಸಾಧನೆಗಳು |
|---|---|---|
| | • ಅಭಿಪ್ರಾಯಗಳನ್ನು ಪ್ರಕಟಿಸುವುದು. ತಮ್ಮ ಸುತ್ತುಮುತ್ತಲಲ್ಲಿ ಕಂಡು ಬರುವ ಜೀವಿಗಳ ರಕ್ಷಣಾ ತಂತ್ರಗಳನ್ನು ತಿಳಿದುಕೊಳ್ಳುವಂತೆ ಸೂಚಿಸುವುದು. ವಿದ್ಯಾರ್ಥಿಗಳು ಅವುಗಳನ್ನು ಕಂಡುಕೊಂಡು ತರಗತಿಯಲ್ಲಿ ಬಾಯ್ದೆರೆಯಾಗಿ ಹೇಳುವುದು. ಟಿಪ್ಪಣಿ ತಯಾರಿ.<br>• 'ವಿನಾಶದಂಚಿನಲ್ಲಿರುವ ಜೀವಸಂಕುಲ' ಎಂಬ ವಿಷಯದ ಮೇಲೆ ಚರ್ಚಾಗೋಷ್ಠಿ ಏರ್ಪಡಿಸುವುದು. ಅಭಿಪ್ರಾಯಗಳನ್ನು ಮಂಡಿಸುವುದು. ಅವುಗಳನ್ನು ಕ್ರೋಡೀಕರಿಸಿ ಪ್ರಬಂಧವನ್ನು ರಚಿಸುವುದು. ವಿಚಾರಗೋಷ್ಟಿಯಲ್ಲಿ ಮಂಡನೆ. ಮೌಲ್ಯಮಾಪನ.<br>• ವಿವಿಧ ಮೂಲಗಳಿಂದ ಮಾಹಿತಿಗಳನ್ನು ಕಲೆ ಹಾಕಿ ಔಷದೀಯ ಗಿಡಗಳ ಕುರಿತಾಗಿ ಪ್ರಬಂಧ ಸಿದ್ಧಪಡಿಸುವುದು.<br>• ಪಶ್ಚಿಮ ಘಟ್ಟ ಸಂರಕ್ಷಣೆಯ ಕುರಿತು ಪತ್ರಿಕೆಗಳಲ್ಲಿ, ನಿಯತಕಾಲಿಕೆಗಳಲ್ಲಿ ಬಂದಿರುವ ವಿಚಾರಗಳನ್ನು ಕಲೆ ಹಾಕಿ ಪಶ್ಚಿಮ ಘಟ್ಟ ಆಂದೋಲನ ಕುರಿತಾದ ಲೇಖನವೊಂದನ್ನು ವಿದ್ಯಾರ್ಥಿಗಳು ಬರೆಯುವುದು. ತರಗತಿಯಲ್ಲಿ ಮಂಡನೆ ಮೌಲ್ಯಮಾಪನ.<br>• ಭಾಷಾ ಅಂಶಗಳನ್ನು ಗುರುತಿಸಿಕೊಳ್ಳುವುದು. ಸರಳ, ಸಂಯುಕ್ತ, ಮಿಶ್ರ ವಾಕ್ಯಗಳ ರಚನೆಗಳಲ್ಲಿ ಸ್ವತಃ ತೊಡಗಿಸಿಕೊಳ್ಳುವುದು. | • ಟಿಪ್ಪಣಿ ಬರಹ<br>• ಸೆಮಿನಾರ್ ಪ್ರಬಂಧ ಮಂಡಿಸುವ ಸಾಮರ್ಥ್ಯ.<br>• ಪರಿಚಯಾತ್ಮಕ ಲೇಖನ<br>• ಪಶ್ಚಿಮ ಘಟ್ಟದ ಆಂದೋಲನದ ಕುರಿತಾಗಿ ಬರೆದ ಪ್ರಬಂಧ. |
| • ಅಣುಕುಟುಂಬ ಪದ್ಧತಿ, ವಾರ್ಧಕ್ಯ ಸಮಸ್ಯೆ ಮೊದಲಾದವುಗಳ ಕುರಿತಾದ ಚಿಂತನೆ ಪ್ರಸ್ತುತ ಕಾಲಘಟ್ಟದ ಕೃತಿಗಳಲ್ಲಿವೆ. | • 'ಅವರವರ ದಾರಿ' ಕವಿತೆಯ ಓದು. ಕವಿತೆಯಲ್ಲಿ ಬಂದಿರುವ ವಿಚಾರಗಳನ್ನು ವಿದ್ಯಾರ್ಥಿಗಳಿಂದ ಬಾಯ್ದೆರೆಯಾಗಿ ಹೇಳಿಸುವುದು. ಕವಿತೆಯ ಆಶಯವನ್ನು ಕುರಿತು ಟಿಪ್ಪಣಿ ರಚಿಸುವುದು. ತರಗತಿಯಲ್ಲಿ ಮಂಡಿಸುವುದು.<br>• ಕವಿತೆಯಲ್ಲಿ ಅಡಕವಾಗಿರುವ ವಿಚಾರಗಳೊಂದಿಗೆ ತಮ್ಮ ಅಭಿಪ್ರಾಯಗಳನ್ನು ಪ್ರಕಟಿಸುವುದು. | • ಕವಿತೆಯ ಆಶಯವನ್ನು ಒಳಗೊಂಡ ಟಿಪ್ಪಣಿ |

| ಪರಿಕಲ್ಪನೆ | ಪ್ರಕ್ರಿಯೆ / ಚಟುವಟಿಕೆ/ಮೌಲ್ಯಮಾಪನ | ಕಲಿಕಾ ಸಾಧನೆಗಳು |
|---|---|---|
| | • ಅನ್ಯಭಾಷಾ ಸಂಸ್ಕೃತಿಗೆ ಮರುಳಾಗುವ ಸನ್ನಿವೇಶ. ಸಾಕಿ ಸಲಹಿದ ಹೆತ್ತವರನ್ನು ಬಿಟ್ಟು ದೂರದ ಊರಿನಲ್ಲಿ ನೆಲೆಸುವ ಮಕ್ಕಳು, ವೃದ್ಧ ತಂದೆತಾಯಿಗಳ ಸಂಕಷ್ಟ – ಇವೆಲ್ಲವೂ ಪ್ರಧಾನವಾಗಿ ಬರುವಂತೆ ಚರ್ಚಾಗೋಷ್ಠಿ ಏರ್ಪಡಿಸುವುದು. ವರದಿ ತಯಾರಿಸುವುದು.<br>• ಸಮಾನ ಆಶಯವನ್ನು ಹೊಂದಿರುವ ಮತ್ತೊಂದು ಕವಿತೆಯ ಭಾಗದೊಂದಿಗೆ ತುಲನೆ ಮಾಡುವುದು. ತುಲನಾತ್ಮಕ ಪ್ರಬಂಧ ಬರೆಯುವುದು. | • ಸಮಕಾಲೀನ ಸಮಸ್ಯೆಗಳನ್ನು ಪ್ರತಿಬಿಂಬಿಸಿ ಬರೆದ ಲೇಖನ.<br>• ಸಮಾನ ಆಶಯವನ್ನು ಪ್ರತಿಬಿಂಬಿಸುವ ತುಲನಾತ್ಮಕ ಬರಹ |
| • ಸಾಹಿತ್ಯ ಕೃತಿಗಳ ಅನುವಾದದಿಂದ ಆಯಾಯ ಭಾಷೆಗಳ ಸಾಹಿತ್ಯ ಹಾಗೂ ಸಂಸ್ಕೃತಿಯ ವಿನಿಮಯ ಸಾಧ್ಯವಾಗುತ್ತದೆ. | • ಅನುವಾದ ಸಾಹಿತ್ಯದ ಅಗತ್ಯ ಮತ್ತು ಅದರಿಂದಾಗುವ ಪ್ರಯೋಜನಗಳ ಕುರಿತಾದ ಚರ್ಚೆ– ಅಭಿಪ್ರಾಯಮಂಡನೆ– ಅನುವಾದ ಸಾಹಿತ್ಯದ ಸಂಕ್ಷಿಪ್ತ ಸ್ವರೂಪ–ಅಭಿಪ್ರಾಯಗಳ ಕ್ರೋಡೀಕರಣದೊಂದಿಗೆ ಟಿಪ್ಪಣಿ ತಯಾರಿ.<br>• 'ನೆರೆ'ಕಥೆಯ ಓದು. ಅಧ್ಯಾಪಕರು ಕಥೆಯ ಆಶಯಗ್ರಹಣ ಸಾಧ್ಯವಾಗುವಂತೆ ಪೂರಕ ಪ್ರಶ್ನೆಗಳನ್ನು ಕೇಳುವುದು. | • ಅನುವಾದ ಸಾಹಿತ್ಯದ ವಿಶೇಶತೆಗಳನ್ನು ತಿಳಿಯಪಡಿಸುವ ಟಿಪ್ಪಣಿ. |

# ಊರ್ಮಿಳಾ

–ಕಯ್ಯಾರ ಕಿಞ್ಞಣ್ಣ ರೈ

ಪ್ರಸ್ತುತ ಘಟಕದಲ್ಲಿ ಆರಂಭದ ಪಾಠವಾಗಿ ಬಂದಿರುವ 'ಊರ್ಮಿಳಾ' ಕವನವು ಕಯ್ಯಾರ ಕಿಞ್ಞಣ್ಣರೈಗಳ ಕವಿತೆಗಳಲ್ಲಿ ವಿಶಿಷ್ಟವಾಗಿ ನಿಲ್ಲುವಂತಹದ್ದು. ವಾಲ್ಮೀಕಿಯ ಮಹಾಕಾವ್ಯದಲ್ಲಿ ಉಪೇಕ್ಷೆಗೆ ಒಳಗಾಗಿ ಮರೆಯಾದ ವ್ಯಕ್ತಿತ್ವವೊಂದರ ಮೇಲಿನ ವಿಶೇಷವಾದ ಆದರನ್ನು ಈ ಕವಿತೆಯಲ್ಲಿ ಕಾಣಬಹುದಾಗಿದೆ. ಆ ವ್ಯಕ್ತಿತ್ವವೆಂದರೆ ಲಕ್ಷ್ಮಣನ ಸತಿ ಊರ್ಮಿಳಾದೇವಿ. ರವೀಂದ್ರನಾಥ ಠಾಗೋರರೇ ಹೇಳಿರುವಂತೆ 'ಉಷಃಕಾಲದಲ್ಲಿ ಕಣ್ಣಿಗೆ ಬೀಳುವ ನಕ್ಷತ್ರದಂತೆ ಮಹಾಕಾವ್ಯದ ಮೇರುಶಿಖರದಲ್ಲಿ ಒಮ್ಮೆ ಗೋಚರವಾಗಿ ಆ ಮೇಲೆ ಅರುಣ ಕಾಂತಿಯಲ್ಲಿ ಕಣ್ಮರೆಯಾದ ಪಾತ್ರವಾಗಿ ಬಿಟ್ಟಿದ್ದಾಳೆ ಊರ್ಮಿಳಾದೇವಿ.' ಆದರೆ ಊರ್ಮಿಳೆಯ ತ್ಯಾಗ, ಸಹನೆ, ಪತಿಭಕ್ತಿ ಅವಗಣೆನೆಗೆ ಸಲ್ಲುವಂಥದಲ್ಲ. ಹೀಗೆ ಕಾವ್ಯದ ಅನಾದರಕ್ಕೆ ಒಳಗಾದ ಪಾತ್ರವೊಂದನ್ನು ಎತ್ತಿಕೊಂಡು ಅದರ ಘನತೆ, ಗೌರವಗಳನ್ನು ಚಿತ್ರಿಸಿದ ರೀತಿ ಇಲ್ಲಿ ಗಮನ ಸೆಳೆಯುತ್ತದೆ.

## ಪಾಠ ಪ್ರವೇಶ

ವಿದ್ಯಾರ್ಥಿಗಳ ಪೂರ್ವಜ್ಞಾನವನ್ನು ತಿಳಿಯಲು ಹಿಂದಿನ ತರಗತಿಯಲ್ಲಿ ಕಲಿತಿರುವ ಕವನಗಳನ್ನು, ಅವುಗಳನ್ನು ರಚಿಸಿದ ಕವಿಗಳ ಹೆಸರನ್ನು ಹೇಳಿಸುವುದು. ಬಳಿಕ ಕಾಸರಗೋಡು ಪ್ರದೇಶದ ಖ್ಯಾತ ಕವಿಗಳ ಹೆಸರನ್ನು ಹೇಳುವಂತೆ ಸೂಚಿಸುವುದು. ಕಯ್ಯಾರ ಕಿಞ್ಞಣ್ಣರೈಗಳ ಹೆಸರನ್ನು ಇಲ್ಲಿ ನಿರೀಕ್ಷಿಸಬಹುದು. ಇವರು ಪ್ರತಿಭಾ ಸಂಪನ್ನರಾದ ಕವಿಗಳಾಗಿ, ಉತ್ತಮ ಲೇಖಕರಾಗಿ, ಸಮರ್ಥವಾಗ್ಮಿಗಳಾಗಿ ಪ್ರಸಿದ್ಧರು ಎಂಬುದನ್ನು ತಿಳಿಸುವುದು. ಇನ್ನೂ ಹೆಚ್ಚಿನ ಮಾಹಿತಿಗಾಗಿ ಪಾಠಭಾಗದಲ್ಲಿ ಕೊಡಲಾದ ಕವಿಯ ಕುರಿತಾದ ವಿವರಗಳನ್ನು ವಿದ್ಯಾರ್ಥಿಗಳು ಓದಿ ತಿಳಿದುಕೊಳ್ಳುವಂತೆ ಹೇಳುವುದು. ವಿದ್ಯಾರ್ಥಿಗಳು ರಾಮಾಯಣದಲ್ಲಿ ಬರುವ ಪ್ರಧಾನ ಪಾತ್ರಗಳನ್ನು ತಿಳಿದಿರುತ್ತಾರೆ. ಅವರು ತಮಗೆ ತಿಳಿದಿರುವ ಪಾತ್ರಗಳನ್ನು ಹೆಸರಿಸುವಂತೆ ಹೇಳುವುದು. ಅವರು ಸ್ತ್ರೀ ಪಾತ್ರಗಳನ್ನು ಹೆಸರಿಸಲಿ. ಬಳಿಕ ಊರ್ಮಿಳೆಯ ಕುರಿತಾಗಿ ಕೇಳುವುದು. ಆ ಪಾತ್ರದ ಕುರಿತಾದ ವಿದ್ಯಾರ್ಥಿಗಳ ಅಪೂರ್ಣ ಮಾಹಿತಿಗಳಿಗೆ ಕಾರಣಗಳೇನೆಂಬುದನ್ನು ತಿಳಿಸಿ ಪ್ರಸ್ತುತ ಕವಿತೆಯಲ್ಲಿ ಊರ್ಮಿಳೆಯ ಕುರಿತು ಹೇಳಿರುವ ವಿಚಾರಗಳೇನು ಎಂಬುದನ್ನು ತಿಳಿಯೋಣ ಎಂದು ಪಾಠ ಭಾಗಕ್ಕೆ ಬರುವುದು.

## ಆಶಯ ಗ್ರಹಣ

### ಕವಿತೆಯ ಓದು

'ಊರ್ಮಿಳಾ' ಕವಿತೆಯನ್ನು ರಾಗವಾಗಿ ಹಾಡುವುದಕ್ಕಿಂತಲೂ ಭಾವಪೂರ್ಣವಾದ ಓದು ಇಲ್ಲಿ ಹೆಚ್ಚು ಸೂಕ್ತ. ಆರಂಭದಲ್ಲಿ ಕೆಲವು ವಿದ್ಯಾರ್ಥಿಗಳಿಂದ ಕವಿತೆಯನ್ನು ಓದಿಸುವುದು. ಬಳಿಕ ಕವಿತೆಯ ಆಶಯಗ್ರಹಣಕ್ಕೆ ಅನುಕೂಲವಾಗುವಂತೆ ಅಧ್ಯಾಪಕರು ಮಾದರಿ ಓದನ್ನು ನಡೆಸುವುದು.

## ನವೀನ ಪದಗಳ ಅರ್ಥ

ಕವಿತೆಯ ಸಾಲುಗಳಲ್ಲಿರುವ ನವೀನ ಪದಗಳ ಅರ್ಥವನ್ನು ತಿಳಿದರೆ ಮಾತ್ರ ಸಾಲುಗಳಲ್ಲಿರುವ ಸ್ವಾರಸ್ಯ ಹಾಗೂ ಕವಿತೆಯ ಆಶಯಗ್ರಹಣ ಸಾಧ್ಯವಾದೀತು. ನವೀನ ಪದಗಳನ್ನು ಪಟ್ಟಿ ಮಾಡಿ ಅವುಗಳ ಅರ್ಥಗಳನ್ನು ಕಂಡುಕೊಳ್ಳಲು ಪಾಠಭಾಗದ ಕೊನೆಯಲ್ಲಿ ಕೊಟ್ಟಿರುವ ಪದಗಳ ಅರ್ಥವನ್ನು ನೋಡಿಕೊಳ್ಳುವಂತೆ ಸೂಚಿಸುವುದು.

### ಪದವಿಂಗಡನೆ

ಅಗತ್ಯವಿದ್ದೆಡೆಯಲ್ಲಿ ಸಂಧಿಪದಗಳನ್ನು ಅರ್ಥಕ್ಕೆ ಭಂಗ ಬಾರದಂತೆ ಅಧ್ಯಾಪಕರ ಸಹಾಯದೊಂದಿಗೆ ವಿಂಗಡಿಸಿ ಬರೆಯಲಿ.

### ಆಶಯಗ್ರಹಣ

ಪದವಿಂಗಡನೆ ಮಾಡಿ, ನವೀನ ಪದಗಳ ಅರ್ಥವನ್ನು ಕಂಡುಕೊಂಡ ಬಳಿಕ ಮತ್ತೊಮ್ಮೆ ಕವಿತೆಯ ಓದು ವಿದ್ಯಾರ್ಥಿಗಳಿಂದ ನಡೆಯಲಿ. ಬಳಿಕ ಗುಂಪಿನಲ್ಲಿ ಕುಳಿತುಕೊಂಡು ಕವಿತೆಯ ಆಶಯದ ಕುರಿತು ಚರ್ಚಿಸಲಿ. ಅಧ್ಯಾಪಕರು ಪೂರಕ ಪ್ರಶ್ನೆಗಳನ್ನು ಕೇಳುತ್ತಾ ಆಶಯಗ್ರಹಣಕ್ಕೆ ಸಹಕರಿಸುವುದು. ಈ ಸಂದರ್ಭದಲ್ಲಿ ಪಾಠಭಾಗದ ಕೊನೆಯಲ್ಲಿ ಕೊಟ್ಟಿರುವ ಪ್ರಶ್ನೆಗಳಿಗೆ ವೈಯಕ್ತಿಕವಾಗಿ ಉತ್ತರ ಬರೆಯಲಿ. ಬರೆದುದನ್ನು ಗುಂಪಿನಲ್ಲಿ ಮಂಡಿಸಿ ಉತ್ತಮ ಪಡಿಸಲಿ. ಪರಸ್ಪರ ಮೌಲ್ಯಮಾಪನದೊಂದಿಗೆ ಪರಿಷ್ಕರಿಸಿ ಚಟುವಟಿಕೆ ಪುಸ್ತಕದಲ್ಲಿ ಸೇರಿಸಿಕೊಳ್ಳಲಿ.

### ಕವಿತೆಯ ಆಶಯ

ಮಹಾಕವಿ ವಾಲ್ಮೀಕಿಯು ರಾಮಾಯಣ ಎಂಬ ಅಮೃತವನ್ನು ನೀಡಿ ಸಹೃದಯರಿಗೆ ಸುಖದ ಸವಿಯನ್ನು ಉಣಿಸಲಿಲ್ಲವೆ? ನಾವೆಲ್ಲ ಅವನಿಗೆ ಚಿರಋಣಿಗಳು. ಸಾಹಿತ್ಯ ಪ್ರಪಂಚಕ್ಕೆ ಎಂದೆಂದಿಗೂ ಅವನೇ ಆದಿಕವಿ. ಅವನ ಕಾವ್ಯವೇ ನಿತ್ಯ ನೂತನ ಶಾಶ್ವತ ಕಾವ್ಯ. "ವಾಗ್ದೇವಿ ಸರಸ್ವತಿಯೇ ಒಲಿದು ನಾಲಿಗೆಯಲ್ಲಿ ಬಂದು ನೆಲೆಸಿ ಕುಣಿಯುತ್ತಿರಲು ವಾಲ್ಮೀಕಿ ಪರವಶಗೊಂಡು ಬರೆದ ಮಹತ್ಕೃತಿ ರಾಮಾಯಣ ಕಾವ್ಯ. ಸಂಸ್ಕೃತ ಕಾವ್ಯ ಪರಂಪರೆಯಲ್ಲಿ ಅವನು ಕಾಳಿದಾಸನಿಗೂ ಗುರುವೆಂದು ಖ್ಯಾತಿಯನ್ನು ಪಡೆದವನು. ಅವನ ಮಹತ್ಕೃತಿಯು ಸಕಲಲೋಕಕ್ಕೆ ಪುಣ್ಯಪಾವನ ಕಥೆ, ಪ್ರಕೃತಿ ಪ್ರೇಮಕಥ, ಬಾಳ ಪೌರುಷದ ಪಥ" ಎಂದು ಮುಂತಾಗಿ ರಸಿಕರಾಜ್ಯ ಹೊಗಳುತ್ತಿರಲು ಅವುಗಳ ನಡುವೆ ಅರಸಿಕನಾದ ನನ್ನ ವಿಮರ್ಶೆ ಮಾತು (ಕವಿ ಕಿಞ್ಞಣ್ಣ ರೈಯವರ) ಪ್ರತಿಫಲನಗೊಳ್ಳುವುದೇ?

ಸಾಗರದಾಳದಿಂದ ರತ್ನಗಳನ್ನು ಆಯ್ದು ತೆಗೆದು ತಿಕ್ಕಿ ತಿಕ್ಕಿ ನೋಡುವಂತೆ ರಾಮಾಯಣದ ಭವ್ಯತೆ, ಸೌಂದರ್ಯವನ್ನು ಮೊಗೆ ಮೊಗೆದು ರಸಿಕಲೋಕಕ್ಕೆ ಪಸರಿಸಬೇಕು. ಹೀಗಿರುವಲ್ಲಿ ರತ್ನದ ಬದಲಾಗಿ ಯಃಕಶ್ಚಿತ್ ಕಸಕಡ್ಡಿಯೊಂದನ್ನು ತೆಗೆದು ತೋರಿಸಿದ ನನ್ನ ಈ ಮಾತು ಸರಿಕಾಣಬಹುದೇ? ವಾಲ್ಮೀಕಿಯ ಮಹಾಕಾವ್ಯವನ್ನು ನೀವೆಲ್ಲ ಓದಿರುವಿರಿ, ಪದ ಪದಗಳ ಅರ್ಥವನ್ನು ಭಾವಗಳನ್ನು ಸವಿದಿರುವಿರಿ. ವರ್ಣನೆಯಲ್ಲಿ, ನಿರೂಪಣೆಯಲ್ಲಿ, ಚಮತ್ಕೃತಿಯಲ್ಲಿ ಮಹಾಕವಿಯನ್ನು ಮೀರುವವರಿಲ್ಲ. ಆದರೆ ಆ ಮಹಾಕವಿಯ ಅಕ್ಷಮ್ಯ ಅಪರಾಧವೊಂದಿದೆ. ಅದು ನಿಮಗೆ ತಿಳಿದಿದೆಯೇ? ಕೆಲವೊಮ್ಮೆ ನಿಮಗೆ ತಿಳಿದಿರಬಹುದು, ತಿಳಿದಿದ್ದರೂ ಅದನ್ನು ಮರೆತಿರಬಹುದು. ಆದರೆ ಮರೆಯಲಾಗದೆ ನನ್ನ ಮನ ಕೊರಗುತ್ತಿದೆ. ಆ ಮಹಾಕವಿ ಕಠಿಣ ಹೃದಯಿ ಎಂದೆನಿಸುತ್ತದೆ.

ಕ್ರೌಂಚ ಹಕ್ಕಿಗಳ ರತಿಕ್ರೀಡೆಯು ಮುರಿದು ಬೀಳಲು, ಎಣೆಹಕ್ಕಿಯ ಹೃದಯದ ಬೇನೆಗೆ ನೊಂದ ಆ ಮಹಾಕವಿಯನ್ನು ಕಠಿಣ ಹೃದಯಿ ಎಂದೆನ್ನಬಹುದೆ? ಆದರೆ ಎಣೆ ಹಕ್ಕಿಯ ವಿಲಾಪಕ್ಕೆ ಕರುಣೆಗೊಂಡ ವಾಲ್ಮೀಕಿಗೆ ಲಕ್ಷ್ಮಣನ ಸತಿ ಊರ್ಮಿಳೆಯ ಹೃದಯವೇದನೆ ಕಾಣದಾಯಿತೆ? ಆ ಸ್ವರ್ಣಸುಂದರ ಪ್ರೇಮದ ಅಭಿವ್ಯಕ್ತಿಯ ಮಾಧುರ್ಯವನ್ನು ಮಹತ್ಕೃತಿಯಲ್ಲಿ ಬಣ್ಣಿಸದೆ ಹೋದದ್ದು ಸರಿಯೇ? ಹೃದಯದ ಉರಿಯನ್ನು ಕರುಳಕೊರೆಯುವಂತೆ ಬಣ್ಣಿಸುವ ಮಹಾಕವಿಗೆ ಇದು ಕಾಣಿಸದೆ ಹೋಯ್ತೆ? ರಾಮನನ್ನು ಅಗಲಿ ಪ್ರಲಾಪಿಸಿದ ಜಾನಕಿಯು ಬಲು ಬೆಂದು ಬಡವಾಗಿ ಬಸವಳಿದ ಬವಣೆಗಳನ್ನು ಅದೆಷ್ಟು ಬಣ್ಣಿಸಲಿಲ್ಲ? ಆದರೆ, ಆ ಹದಿನಾಲ್ಕು ವರ್ಷ ಭೋಗಭಾಗ್ಯದ ಬಂಧನವನ್ನು ಬಿಸುಟು ಹೊರಟ ತರುಣ ಹಾಗೂ ಸುಂದರನಾದ ತನ್ನ ಪತಿಯನ್ನು ಅಗಲಿ ವಿರಹದಿಂದ ನೊಂದ ಊರ್ಮಿಳೆಯ ಮನೋವೇದನೆಯ ಕುರಿತು ಆ ಕವಿ ಒಂದೇ ಒಂದು ಮಾತು

ಆಡಿಲ್ಲ. ಅವಳ ಅಸಹ್ಯ ವೇದನೆಯತ್ತ ಸಣ್ಣ ಕರುಣಾ ದೃಷ್ಟಿಯನ್ನು ಹರಿಯಿಸಲಿಲ್ಲ. ಸಾಂತ್ವನದ ಸವಿಮಾತುಗಳನ್ನು ಹೇಳಲಿಲ್ಲ, ಕಂಬನಿಯ ಮಿಡಿದಿಲ್ಲ ಹೀಗಿರಲು ಆ ಕವಿ ಕಠಿಣನಲ್ಲವೆ? ಮೂಕ ಪಕ್ಷಿಯ ವೇದನೆಗೆ ಕರುಣೆಗೊಂಡ ಕವಿ ಊರ್ಮಿಳೆಯ ಬಗೆಗೆ ಒಂದಿನಿತು ಪ್ರೀತಿದೋರುವುದನ್ನು ಮರೆತಿರುವುದು ಸರಿಯೆ? ಋಷಿಯಾಗಿರಬಹುದು, ಬ್ರಹ್ಮರ್ಷಿಯಾಗಿರಬಹುದು. ಆದರೆ ಅವನಲ್ಲಿ ಮನುಷ್ಯ ಹೃದಯವಿಲ್ಲವೇನು?

ಪಿತೃವಾಕ್ಯ ಪರಿಪಾಲನೆಗೆ ಶ್ರೀರಾಮನು ಸತಿ ಸಹಿತ ಕಾನನಕ್ಕೆ ತೆರಳಲು ವೀರಲಕ್ಷ್ಮಣನು ಅವರನ್ನು ಹಿಂಬಾಲಿಸಿದನು. ಹಸಿವು ಬಾಯಾರಿಕೆ ನಿದ್ರೆಯಾಹಾರಗಳನ್ನು ದೂರವಿರಿಸಿ ಹಗಲಿರುಳು ಅಗ್ರಜನ ಸೇವೆಗಾಗಿ ತನುವನ್ನು ಸವೆದ ಲಕ್ಷ್ಮಣನ ತ್ಯಾಗವನ್ನು ತಿಳಿಯದವರು ಯಾರು? ವನವಾಸದ ಆಯಾಸವನ್ನು ಪರಿಹರಿಸಿ ಸಾಕೇತನಗರಕ್ಕೆ ಬಂದು ನಿಂತಿರಲು, ತನ್ನ ಇನಿಯನಿಗೆ ಮಂಗಳಾರತಿಯನ್ನೆತ್ತಿ ಸ್ವಾಗತಿಸಿ ಸಂಭ್ರಮಿಸಿ ನಲಿಯುವ ಚೈತನ್ಯವಾದರೂ ಊರ್ಮಿಳೆಯಲ್ಲಿರಲಿಲ್ಲ. ಆದರೆ ಅಂದು ಆ ಕ್ಷಣದಲ್ಲಿ ಲಕ್ಷ್ಮಣನಲ್ಲಿ ವಿದ್ಯುದ್ವಿಲಾಸದ ಚೈತನ್ಯ ಹೊರ ಹೊಮ್ಮುತ್ತಿತ್ತು? ಅದು ಊರ್ಮಿಳೆಯ ತಪಸ್ಸಿನ ಶಕ್ತಿಯಲ್ಲದೆ ಮತ್ತಿನ್ನೇನು? ಅಜ್ಞಾತವಾಸದ ಸಂದರ್ಭದಲ್ಲಿ ತಪಸ್ವಿನಿಯಾಗಿ ನೆಲೆನಿಂತ ನಿನ್ನ ಅಚಲವಾದ ನಿಷ್ಠೆ ನೆನಪಾಗುತ್ತಿದೆ. ಪತಿಯ ರಕ್ಷೆಗಾಗಿ ಕಠಿಣ ತಪಸ್ಸಿಗೆ ನಿಂತ ನಿನಗೆ ಅಂದು ಒಂದೊಂದು ಕ್ಷಣವೂ ಒಂದೊಂದು ಯುಗವಾಗಿ ಪರಿಣಮಿಸಿ ಕಠಿಣವಾಗಿ ಸಾಗಿತಲ್ಲವೆ? ನಿನ್ನ ಈ ತ್ಯಾಗಕ್ಕೆ ರಸಿಕರಾಜ್ಯದ ರಮಣರು ಮಂಕಾಗದಿರುವರೆ?

## ಸ್ವಾರಸ್ಯ ಬರೆಯುವುದು

ಮೊದಲಿಗೆ ಸ್ವಾರಸ್ಯ ತಿಳಿಯಬೇಕಾದ ಸಾಲುಗಳನ್ನು ವಿದ್ಯಾರ್ಥಿಗಳು ಕವಿತೆಯಲ್ಲಿ ಗುರುತಿಸಿ ಅವುಗಳ ಸಂದರ್ಭವನ್ನು ತಿಳಿದುಕೊಳ್ಳಲಿ. ಅವುಗಳ ಅರ್ಥವನ್ನು ತಿಳಿದುಕೊಂಡು ಅಲ್ಲಿರುವ ಸ್ವಾರಸ್ಯವನ್ನು ಒಂದಿಬ್ಬರು ವಿದ್ಯಾರ್ಥಿಗಳು ತರಗತಿಯಲ್ಲಿ ಹೇಳಲಿ. ಅಗತ್ಯವಿದ್ದೆಡೆಯಲ್ಲಿ ಅಧ್ಯಾಪಕರು ವಿವರಣೆ ನೀಡಿ ನೆರವಾಗುವುದು. ಬಳಿಕ ಪ್ರತಿಯೊಬ್ಬ ವಿದ್ಯಾರ್ಥಿಯೂ ಸ್ವಾರಸ್ಯವನ್ನು ಬರೆಯಲಿ. ಬರೆದುದನ್ನು ಒಂದಿಬ್ಬರು ಮಂಡಿಸಲಿ. ಪರಸ್ಪರ ಮೌಲ್ಯಮಾಪನ ಮಾಡಿ ಪರಿಷ್ಕರಿಸಿ ತಮ್ಮ ಲಾಗ್ ಬುಕ್ಕಿನಲ್ಲಿ ಸೇರಿಸಿಕೊಳ್ಳಲಿ.

ಮಾದರಿಯಾಗಿ ಒಂದು ಮಾತಿನ ಸ್ವಾರಸ್ಯವನ್ನು ಇಲ್ಲಿ ಕೊಡಲಾಗಿದೆ.

- ಈ ನುಡಿಯೆ ಕನ್ನಡಿಯೊಳೆನ್ನ ಮುಖ ಕಾಣುವುದೆ?

ಕವಿ ಕಿಞ್ಞಣ್ಣರೈಯವರು ತಮ್ಮ 'ಊರ್ಮಿಳಾ' ಕವಿತೆಯಲ್ಲಿ ವಾಲ್ಮೀಕಿ ಮಹಾಕವಿಯ ಮೇರುಕೃತಿಯ ಬಗೆಗೆ ಪ್ರಸ್ತಾಪಿಸುತ್ತಾ ಹೇಳುವ ಮಾತು ಇದಾಗಿದೆ. ಚಮತ್ಕೃತಿಯಲ್ಲಿ, ವರ್ಣನೆಯ ಬೆಡಗಿನಲ್ಲಿ, ಭಾವನೆಯ ಅಭಿವ್ಯಕ್ತಿಯಲ್ಲಿ ಮಹಾಕವಿ ವಾಲ್ಮೀಕಿಯನ್ನು ಮೀರುವವರಿಲ್ಲ. ಸಂಸ್ಕೃತ ಸಾಹಿತ್ಯ ಪರಂಪರೆಯಲ್ಲಿ ಕಾಳಿದಾಸನಿಗೂ ವಾಲ್ಮೀಕಿಯು ಗಣ್ಯಗುರು ಎಂದು ಮುಂತಾಗಿ ರಸಿಕರಾಜ್ಯದ ಮಾತುಗಳಿರುವಾಗ ಕಾವ್ಯದ ಕುರಿತಾದ ತನ್ನ (ಕಿಞ್ಞಣ್ಣ ರೈಯವರ) ಪ್ರತಿಕ್ರಿಯೆಗೆ ಕಿವಿಗೊಡುವವರು ಇರಬಹುದೆ? ಕವಿ ವಾಲ್ಮೀಕಿಯ ಕುರಿತಾಗಿ ರಸಿಕ/ವಿಮರ್ಶಕರು ರಚಿಸಿರುವ ನುಡಿಗನ್ನಡಿಯಲ್ಲಿ ತನ್ನ (ಕಿಞ್ಞಣ್ಣ ರೈಯವರ) ವಿಮರ್ಶೆಯ ಮಾತುಗಳೆಂಬ ಮುಖವು ಪ್ರತಿಫಲಿಸೀತೆ? ಎಂಬುದು ಅವರ ಸಂದೇಹ. ತಾನು ಆದಿ ಕವಿಯ ಇದಿರಲ್ಲಿ ಸಣ್ಣವನು ಎಂಬ ಭಾವವನ್ನು ಈ ಮಾತುಗಳಲ್ಲಿ ಕಾಣಬಹುದು.

**ಚಟುವಟಿಕೆಗಳು**

**ಪ್ರಬಂಧ ಬರೆಯುವುದು**

ಕವಿತೆಯಲ್ಲಿ ಬಂದಿರುವ ಊರ್ಮಿಳೆ ಪಾತ್ರದ ಕುರಿತಾದ ವಿಚಾರಗಳು ಪ್ರಧಾನವಾಗಿ ಬರುವಂತೆ ಗುಂಪು ಚರ್ಚೆಗೆ ವಿದ್ಯಾರ್ಥಿಗಳನ್ನು ಅಣಿಗೊಳಿಸುವುದು. 'ಊರ್ಮಿಳೆ' ಪಾತ್ರದ ಕುರಿತಾಗಿ ತಾವು ಕಂಡುಕೊಂಡ ವಿಚಾರಗಳನ್ನು ಬಾಯ್ದೆರೆಯಾಗಿ ಅವರು ಹೇಳಲಿ. ಅಧ್ಯಾಪಕರು ಕೂಡಾ ಊರ್ಮಿಳೆ ಪಾತ್ರದ ಕುರಿತಾದ ಸ್ಪಷ್ಟ ಚಿತ್ರಣವನ್ನು ಮೂಡಿಸುವಲ್ಲಿ ಈ ಸಂದರ್ಭದಲ್ಲಿ ನೆರವಾಗುವುದು. ತಮಗೆ ದೊರೆತ ಮಾಹಿತಿಗಳನ್ನು ಕ್ರೋಡೀಕರಿಸಿ ಪ್ರತಿಯೊಬ್ಬರು 'ಸತಿ ಊರ್ಮಿಳೆ' ಎಂಬ ವಿಷಯದ ಮೇಲೆ ಪ್ರಬಂಧವನ್ನು ಬರೆದು ಗುಂಪಿನಲ್ಲಿ ಮಂಡಿಸಲಿ. ಬರೆದುದರಲ್ಲಿ ಕೆಲವನ್ನು ವಿಚಾರಗೋಷ್ಠಿಯಲ್ಲಿ ಮಂಡಿಸುವುದು. ಉತ್ತಮಪಡಿಸಿ ಲಾಗ್ ಪುಸ್ತಕದಲ್ಲಿ ಸೇರಿಸಿಕೊಳ್ಳುವುದು.

## ಕಾವ್ಯದ ಅನಾದರ

ರವೀಂದ್ರನಾಥ ಠಾಕೂರ

ಊರ್ಮಿಳಾದೇವಿಯನ್ನು ನಾವು ನೋಡಿರುವುದು ಒಂದೇ ಒಂದು ಸಲ–ವಿದೇಹ ನಗರಿಯ ವಿವಾಹ ಸಭೆಯಲ್ಲಿ, ವಧೂವೇಷದಲ್ಲಿ, ಆಮೇಲೆ ಆಕೆಯು ರಘುವಂಶದ ನಗರಿಯ ವಿವಾಹ ಸಭೆಯಲ್ಲಿ, ವಧೂವೇಷದಲ್ಲಿ, ಆ ಮೇಲೆ ಆಕೆಯು ರಘುವಂಶದ ರಾಜರ ಅಂತ:ಪುರವನ್ನು ಪ್ರವೇಶ ಮಾಡಿದಂದಿನಿಂದ ಆಕೆಯನ್ನು ಪುನ: ಒಂದು ದಿನವಾದರೂ ನೋಡಿದಂತೆ ಮನಸ್ಸಿಗೆ ತೋರುವುದಿಲ್ಲ. ಆಕೆಯ ವಿವಾಹ ಸಭೆಯ ವಧೂವೇಷದ ಚಿತ್ರವೇ ನಮ್ಮ ಮನಸ್ಸಿನಲ್ಲಿ ನಿಂತುಬಿಟ್ಟಿರುತ್ತದೆ. ಊರ್ಮಿಳಾದೇವಿಯು ಚಿರವಧು–ಮೌನವಾದ ಲಜ್ಜೆಯಿಂದ ಕೂಡಿದವಳು. ನಿಶ್ಶಬ್ದವಾಗಿ ಸಂಚರಿಸತಕ್ಕವಳು.

ವಿವಾಹದ ದಿವಸ ತನ್ನ ನವಯೌವನದ ಶುಭ್ರಮಂಟಪದಲ್ಲಿ ಮೊಟ್ಟ ಮೊದಲು ಕುಂಕುಮಧಾರಣ ಮಾಡಿದ ಊರ್ಮಿಳಾದೇವಿಯು(ನಮ್ಮ ಭಾಗಕ್ಕೆ) ಕೊನೆಯವರೆಗೂ ಆ ದಿನದ ನವವಧುವಾಗಿಯೇ ಇರುತ್ತಾಳೆ. ಶ್ರೀರಾಮನ ಅಭಿಷೇಕಕ್ಕಾಗಿ ಅಂತಃಪುರಸ್ತ್ರೀಯರೆಲ್ಲರೂ ಮಂಗಳದ್ರವ್ಯಗಳನ್ನ ಅಣಿ ಮಾಡುತ್ತಿದ್ದ ದಿವಸ ಈ ವಧುವೂ ಮುಂದಲೆಯ ಮೇಲೆ ಆರ್ಧ ಮುಸುಕನ್ನು ಎಳೆದುಕೊಂಡು ರಘುಕುಲಕಾಂತೆಯರೊಂದಿಗೆ ತಾನೂ ಪ್ರಸನ್ನವಾದ ಮುಖ್ಯವುಳ್ಳವಳಾಗಿ ಈ ಆ ಮಂಗಳ ದ್ರವ್ಯಗಳನ್ನು ಸಿದ್ಧಪಡಿಸುವ ಕಾರ್ಯದಲ್ಲಿ ಉದ್ಯುಕ್ತಳಾಗಿರಲಿಲ್ಲವೆ? ಆ ಮೇಲೆ ಯಾವ ದಿವಸ ಅಯೋಧ್ಯೆಯನ್ನು ಅಂಧಕಾರಮಯಮಾಡಿ ರಾಮ ಲಕ್ಷ್ಮಣರು ಸೀತಾದೇವಿಯೊಡನೆ ತಾಪ ವೇಷದಿಂದ ಕಾಡಿನ ದಾರಿಯಲ್ಲಿ ಹೊರಟರೋ! ಆ ದಿವಸ, ಊರ್ಮಿಳಾ ದೇವಿಯು ಅರಮನೆಯ ನಿರ್ಜನವಾದೊಂದು ಶಯ್ಯಾಗೃಹದಲ್ಲ, ದೂಳಿಶಯ್ಯೆಯಲ್ಲಿ, ತೊಟ್ಟುಕಳಚಿದ ಮೊಗ್ಗಿನಂತೆ ಮೂರ್ಛಿತಳಾಗಿ ಬಿದ್ದಿದ್ದಳೆಂದು ಯಾರಿಗೆ ಗೊತ್ತು? ಆ ದಿನದ ವಿಶ್ವವ್ಯಾಪ್ತಿಯಾದ ವಿಲಾಪದಲ್ಲಿ ಆ ಕೋಮಲ ಹೃದಯದ ಬಾಲಿಕೆಯ ಅಸನೀಯವಾದ ಶೋಕವನ್ನು ಯಾರು ನೋಡಿದರು? ಕ್ರೌಂಚವಿರಹಿಣಿಯ ವೈಧವ್ಯದುಃಖವನ್ನು ಮುಹೂರ್ತಕಾಲ ಕೂಡ ಸಹಿಸಲಾರದವನಾಗಿದ್ದ ಋಷಿಕವಿಯೂ ಒಂದು ಬಾರಿಯಾದರೂ ಆತ್ತ ಕಡೆ ಮನಸಿಟ್ಟು ನೋಡಲಿಲ್ಲ.

ಲಕ್ಷ್ಮಣನು ರಾಮಚಂದ್ರನಿಗಾಗಿ ಸರ್ವ ವಿಧಗಳಲ್ಲಿಯೂ ಸ್ವಾರ್ಥತ್ಯಾಗ ಮಾಡಿದನು. ಆ ಕೀರ್ತಿಯೂ ಈಗಲೂ ಭರತ ಖಂಡದಲ್ಲಿ ಮನೆಮನೆಯಲ್ಲಿಯೂ ಕೇಳಿಬರುತ್ತದೆ. ಆದರೆ ಸೀತಾದೇವಿಗಾಗಿ ಊರ್ಮಿಳಾದೇವಿಯು ಮಾಡಿದ ಸ್ವಾರ್ಥತ್ಯಾಗವು ಜಗತ್ತಿನಲ್ಲಿ ಮಾತ್ರವೇ ಅಲ್ಲ, ಕಾವ್ಯದಲ್ಲಿಯೂ ಕೂಡ ಕಂಡುಬರುವುದಿಲ್ಲ. ಲಕ್ಷ್ಮಣನು ದೇವತಾ ಸ್ವರೂಪದ ಸೀತಾರಾಮರಿಗಾಗಿ ಸ್ವಾರ್ಥವನ್ನು ಮಾತ್ರ ತ್ಯಾಗ ಮಾಡಿದನು. ಊರ್ಮಿಳಾ ದೇವಿಯಾದರೋ ಮಾತ್ತನ್ನೆ ಎತ್ತುವುದಿಲ್ಲ, ಸೀತಾದೇವಿಯ ಕಣ್ಣೀರಿನಲ್ಲಿ ಊರ್ಮಿಳಾದೇವಿಯು ಸಂಪೂರ್ಣವಾಗಿ ಕೊಚ್ಚಿಕೊಂಡು ಹೋದಳು.

ಲಕ್ಷ್ಮಣನೇನೋ ಹನ್ನೆರಡು ವರ್ಷ ಕಾಲವೂ ಪೂಜಾಯೋಗ್ಯವಾದ ಪ್ರಿಯ ಜನರ ಸೇವಾಕಾರ್ಯದಲ್ಲಿ ನಿರತನಾಗಿದ್ದನು.

ಊರ್ಮಿಳಾದೇವಿಯು ತನ್ನ ಸ್ತ್ರೀ ಜೀವನದ ಆ ಹನ್ನೆರಡು ಶ್ರೇಷ್ಠವಾದ ವರ್ಷಗಳನ್ನು ಹೇಗೆ ಕಳೆದಳು? ಲಜ್ಜಾಯುಕ್ತವಾದ ನವಪ್ರೇಮದಿಂದ ಸಂತೋಷವನ್ನು ಹೊಂದಿ ಆಗತಾನೇ ಅರಳುತ್ತಿದ್ದ ಹೃದಯದ ಮೊಗ್ಗೆಯುಳ್ಳವಳಾದ ಊರ್ಮಿಳಾದೇವಿಗೆ, ಯಾವಾಗ ತನ್ನ ಸ್ವಾಮಿಯೊಂದಿಗೆ ಪ್ರಥಮತಮವೂ ಮಧುರತಮವೂ ಆದ ಪರಿಚಯಕ್ಕೆ ಆರಂಭಬೇಕಾಗಿತ್ತೋ, ಆ ಮುಹೂರ್ತದಲ್ಲಿಯೇ ಲಕ್ಷ್ಮಣನು ಸೀತಾದೇವಿಯ ಹೆಜ್ಜೆಯ ಮೇಲೆ ದೃಷ್ಟಿಯನ್ನಿಟ್ಟು ಅರಣ್ಯಕ್ಕೆ ಹೊರಟುಹೋದನು. ಅವನು ಹಿಂದಿರುಗಿ ಬಂದಾಗ, ಪ್ರೇಮದ ಬೆಳಕನ್ನೇ ಕಾಣದ ಆ ನವವಧುವಿನ ಹೃದಯದಲ್ಲಿ ಹಿಂದೆ ಇದ್ದ ನವೀನತೆಯು ಇನ್ನೂ ಉಳಿದಿತ್ತೆ? ಯಾರಾದರೂ ಸೀತಾದೇವಿಯ ದುಃಖದೊಂದಿಗೆ ಊರ್ಮಿಳಾದೇವಿಯ ಅತ್ಯಧಿಕವಾದ ದುಃಖವನ್ನು ತಲನಮಾಡಿಯಾರೆಂಬ ಶಂಕೆಯಿಂದಲೇ ಕವಿಯು ಸೀತಾದೇವಿಯ ಸ್ವರ್ಣ ಮಂದಿರದ ಈ ಮಹಾದುಃಖಿನಿಯನ್ನು ಸಂಪೂರ್ಣವಾಗಿ ಹೊರಗಿಟ್ಟಿರಬಹುದೇ? ಆಕೆಗೆ ಜಾನಕೀದೇವಿಯ ಪಾದಪೀಠದ ಹತ್ತಿರದಲ್ಲಿ ಕೂಡ ಕೂರುವುದಕ್ಕೆ ಅವಕಾಶವನ್ನು ಕೊಟ್ಟಿಲ್ಲ.

ವಾಲ್ಮೀಕಿ ಮಹಾಕವಿಯು ತನ್ನ ಕಲ್ಪನಾಶಕ್ತಿಯ ಕರುಣಾಜಲವೆಲ್ಲವನ್ನೂ ಜನಕಸುತೆಯ(ಸೀತಾದೇವಿಯ) ಪುಣ್ಯಾಭಿಷೇಕದಲ್ಲಿಯೇ ಮುಗಿಸಿಬಿಟ್ಟಿರುತ್ತಾನೆ. ಕಳೆಗುಂದಿದ ಮುಖವುಳ್ಳವಳೂ ಸಮಸ್ತ ಐಹಿಕ ಸುಖದಿಂದ ವಂಚಿತಳೂ ಆಗಿ ಸೀತಾದೇವಿಯ ಛಾಯೆಯಲ್ಲಿ ಅವಕುಂಠನವತಿಯಾಗಿ ನಿಂತಿರುವ ಮತ್ತೊಬ್ಬ ರಾಜಕುಮಾರಿಯ(ಆಕೆಯೂ ಜನಕಸುತೆಯೇ) ಚಿರದುಃಖದಿಂದ ತಪ್ತವಾದ ನಮ್ರಲಲಾಟದ ಮೇಲೆ ಕವಿಯು ತನ್ನ ಕಮಂಡಲುವಿನ ಒಂದು ತೊಟ್ಟು ನೀರನ್ನಾದರೂ ಏಕೆ ಚಿಮುಕಿಸುವುದಿಲ್ಲ? ಅಯ್ಯೋ, ಅವ್ಯಕ್ತವೇದನೆಯಾದ ಊರ್ಮಿಳಾದೇವಿ! ನೀನು ಉಷಃಕಾಲದಲ್ಲಿ ಕಣ್ಣಿಗೆ ಬೀಳುವ ನಕ್ಷತ್ರದಂತೆ ಮಹಾಕಾವ್ಯದ ಮೇರು ಶಿಖರದಲ್ಲಿ ಒಂದು ಬಾರಿ ಮಾತ್ರ ಗೋಚರಳಾದೆ; ಆ ಮೇಲೆ ಅರುಣಕಾಂತಿಯಲ್ಲಿ ಕಣ್ಮರೆಯಾದ ನೀನು ಪುನಃ ಕಾಣಲಿಲ್ಲ. ನಿನ್ನ ಉದಯಾಚಲವಲ್ಲಿ ಅಸ್ತಶಿಖರವಲ್ಲಿ ಎಂದು ಕೇಳುವುದನ್ನು ಕೂಡ ಎಲ್ಲರೂ ಮರೆತು ಬಿಟ್ಟಿರುತ್ತಾರೆ.

## ಚರ್ಚಾಗೋಷ್ಠಿ ಏರ್ಪಡಿಸುವುದು

ಸ್ತ್ರೀ ಸ್ವಾತಂತ್ರ್ಯ, ಸ್ತ್ರೀ ಸಮಾನತೆ, ವರ್ತಮಾನ ಸಮಾಜದಲ್ಲಿ ಸ್ತ್ರೀಯರ ಸ್ಥಾನಮಾನ, ಸ್ತ್ರೀ ಶೋಷಣೆ ಇವೇ ಮೊದಲಾದ ಚರ್ಚಾ ಸೂಚಕಗಳನ್ನಿರಿಸಿಕೊಂಡು 'ಮಹಿಳಾ ಸಬಲೀಕರಣದ ದಾರಿಯಲ್ಲಿನ ತೊಡಕುಗಳ' ಬಗ್ಗೆ ಗುಂಪಿನಲ್ಲಿ ವಿದ್ಯಾರ್ಥಿಗಳ ಚರ್ಚೆ ನಡೆಯಲಿ. ಪ್ರತಿಯೊಬ್ಬರೂ ತಮ್ಮ ತಮ್ಮ ಅಭಿಪ್ರಾಯಗಳನ್ನು ಮಂಡಿಸಲಿ. ಪ್ರತಿಯೊಂದು ಗುಂಪಿನಲ್ಲಿಯೂ ವಿದ್ಯಾರ್ಥಿಗಳು ತಾವು ಕಂಡುಕೊಂಡ ವಿಚಾರಗಳನ್ನು ಕ್ರೋಡೀಕರಿಸಿ ಆ ವಿಷಯದ ಮೇಲೆ ಗುಂಪಿಗೊಂದರಂತೆ ಕಿರುಲೇಖನಗಳನ್ನು ಸಿದ್ಧಪಡಿಸಲಿ. ಸಿದ್ಧಪಡಿಸಿದ ಲೇಖನವನ್ನು ಗುಂಪಿನಲ್ಲಿ ಒಬ್ಬರು ಮಂಡಿಸಲಿ. ಸೂಕ್ತಮಾನದಂಡಗಳನ್ನಿರಿಸಿಕೊಂಡು ಅಧ್ಯಾಪಕರು ಮೌಲ್ಯಮಾಪನ ನಡೆಸುವುದು. ಬಳಿಕ ಪರಿಷ್ಕರಿಸಿ, ಲೇಖನಗಳನ್ನು ವಿದ್ಯಾರ್ಥಿಗಳು ತಮ್ಮ ಲಾಗ್ ಬುಕ್ಕಿನಲ್ಲಿ ಸೇರಿಸಿಕೊಳ್ಳಲಿ.

## ವರದಿ ತಯಾರಿ

ಮೇಲಿನ ಚರ್ಚಾಗೋಷ್ಠಿಯ ವರದಿ ತಯಾರಿಸುವಂತೆ ವಿದ್ಯಾರ್ಥಿಗಳಿಗೆ ಮೊದಲೇ ಸೂಚನೆ ನೀಡುವುದು. ವರದಿಯಲ್ಲಿ ಗೋಷ್ಠಿಯ ಆರಂಭದಿಂದ ಮುಕ್ತಾಯದ ವರೆಗೆ ನಡೆದ ಕಲಾಪಗಳ ಸರಳವೂ ಸಂಪೂರ್ಣವೂ, ವಸ್ತುನಿಷ್ಠವೂ ಆದ ವಿವರಣೆಯಿರಬೇಕು ಎಂಬುದನ್ನು ವಿದ್ಯಾರ್ಥಿಗಳ ಗಮನಕ್ಕೆ ತಂದಿರುವುದು. ಚರ್ಚಾಗೋಷ್ಠಿಯ ಕುರಿತು ಗುಂಪಿಗೆ ಒಂದರಂತೆ ವರದಿ ತಯಾರಿಸಲಿ ಮತ್ತು ತರಗತಿಯಲ್ಲಿ ಮಂಡಿಸಲಿ. ಅಗತ್ಯದ ತಿದ್ದುಪಡಿಗಳೊಂದಿಗೆ ಇನ್ನೊಮ್ಮೆ ಪರಿಷ್ಕರಿಸಿ ಬರೆಯಲಿ. ಭಾಷೆ, ಶೈಲಿ, ವಿಷಯ ವಿಸ್ತಾರ ಇವುಗಳನ್ನಿರಿಸಿಕೊಂಡು ವರದಿಯ ಮೌಲ್ಯಮಾಪನ ನಡೆಸುವುದು.

## ತುಲನಾತ್ಮಕ ಟಿಪ್ಪಣಿ

'ಶ್ರೀರಾಮಾಯಣ ದರ್ಶನಂ ಮಹಾಕಾವ್ಯ'ದಲ್ಲಿ ಅಯೋಧ್ಯಾ ಸಂಪುಟದ 'ಊರ್ಮಿಳಾ' ಸಂಚಿಕೆಯ ಕೊನೆಯ ಭಾಗದ ಪ್ರತಿಯನ್ನು ವಿದ್ಯಾರ್ಥಿಗಳ ಗುಂಪಿಗೊಂದರಂತೆ ಒದಗಿಸಿಕೊಡುವುದು. ಮೊದಲ ಓದಿನಲ್ಲಿಯೇ ವಿದ್ಯಾರ್ಥಿಗಳಿಗೆ ಓದಿ ಅರ್ಥೈಸಿಕೊಳ್ಳಲು ತೊಡಕಾಗಬಹುದು. ಆದುದರಿಂದ ಅಧ್ಯಾಪಕರು ಆ ಭಾಗವನ್ನು ಒಂದೆರಡು ಬಾರಿ ಓದುವುದು. ಆಗ ವಿದ್ಯಾರ್ಥಿಗಳು ಅಲ್ಲಿ ಬಂದಿರುವ ಪ್ರಧಾನ ವಿಚಾರಗಳನ್ನು ಗುರುತಿಸಿಕೊಳ್ಳಲಿ. ಬಳಿಕ ಪತ್ಯದಲ್ಲಿ ಬಂದಿರುವ 'ಊರ್ಮಿಳಾ' ಕವಿತೆಯಲ್ಲಿನ ವಿಚಾರಗಳೊಂದಿಗೆ ಹೋಲಿಸಿಕೊಂಡು ಒಂದು ತುಲನಾತ್ಮಕ ಟಿಪ್ಪಣಿ ಬರೆಯಲಿ. ಬರೆದುದರಲ್ಲಿ ಕೆಲವನ್ನು ತರಗತಿಯಲ್ಲಿ ಮಂಡಿಸುವಂತೆ ಹೇಳುವುದು. ಪರಸ್ಪರ ಮೌಲ್ಯಮಾಪನಕ್ಕೆ ಅವಕಾಶ ನೀಡುವುದು. ಸೂಕ್ತ ತಿದ್ದುಪಡಿಗಳೊಂದಿಗೆ ಪರಿಷ್ಕರಿಸಿ ಬರೆಯಲಿ.

### ಊರ್ಮಿಳಾ

ನೀರವ ಧ್ಯಾನವಧೂ ಹೇ ಊರ್ಮಿಳಾ ದೇವಿ,
ಸೌಮಿತ್ರಿಯರ್ಧಾಂಗಿ, ಹೇಳು ನೀನೆಲ್ಲಿರ್ದೆ
ಕಡೆದ ಕಡಲೋಲಯೋಧ್ಯಾನಗರಿ ಮಸಗಿದಾ
ಕ್ರಾಂತಿ ದಿನದಂದು? ನಿನ್ನೆರ್ದೆವೂವಿನಾ ವೇಧೆ
ಜಗಳ್ದುದಿಲ್ಲವೆ ತುಳ್ಕಿ ನೇತ್ರ ಶತ ಪತ್ರದಿಂ?
ಪೆಣ್ತನಂ ತಾನೆ ನೀನಲ್ಲದೂರ್ಮಿಳೆಯಲ್ತು:
ಪೆಣ್ತೆಂಬ ತಪಕೆ ನೀಂ ನಿರುಪಮ ಪ್ರತಿಮೆಯೌ!
ಕಾಂತನೊಡನಿರ್ದು ಕಾಂತಾರ ವೈವಿಧ್ಯಮಂ
ಸವಿವ, ಲಂಕೆಯೊಳಿರ್ದ ಹದಿಬದೆಯ ಸಾಹಸದ
ರಸಕೆ ಬಾಳಂ ಬೇಳ್ವ, ದೇವ ಮಾನವ ಸಕಲ
ಲೋಕ ಸಂಸ್ತುತಿಯ ಬೆಂಬಲದ ಸೀತೆಯ ತಪಕೆ
ಮಿಗಿಲ್ ನಿನ್ನ ಅಖ್ಯಾತಮಾ ದೀರ್ಘ ಮೌನವ್ರತಂ,
ಮೂಕಸತಿ ಹೇ ಗೋಚರಾತೀತೆ! ಕಲ್ಲಾಗಿ
ಬಿಳ್ದಹಲ್ಯೆಯ ಶಿಕ್ಷೆಗಿರ್ದತ್ತಚೇತನದ
ರಕ್ಷೆ: ನೀನುಸಿರೆಳೆದುಮರೆ ಬಂಡೆಯೊಲಂತೆ
ಪದಿನಾಲ್ಕು ಬರಿಸಮಾಶಂಕೆಯ ನಿರೀಕ್ಷಣೆಯ
ಭೀತಿ ಖಿನ್ನತೆ ಹತಾಶತ್ತೆಗಳ್ಸೈವುರಿ ನಡುವೆ
ತಪಮಿರ್ದುಮೊಡೆಯದಿರ್ದುದ ನೆನೆಯಲದೆ ಮಹಾ
ವ್ರತಮಪ್ಪುದಿತರ ಜೀವರಿಗೆ–ಸೌಮಿತ್ರಿ ತಾಂ

ನಿನ್ನನುಮತಿಯನಣ್ಣನೊಡನಡವಿಗೈದಲ್ಕೆ ಪೇಳ್
ಬೇಡಿದನೆ? ಭ್ರಾತೃ ಭಕ್ತಿಯ ಸಂಭ್ರಮಾಧಿಕ್ಯದೊಳ್
ಪ್ರೀತಿಯಿಂ ಬೀಳ್ಕೊಳ್ವುದಂ ತಾಂ ಮರೆಯನಲ್ತೆ?
ಮರೆಯನೆಂದುಂ ಸುಮಿತ್ರಾತ್ಮಜಂ! ಪೇಳ್ದನೇನಂ,
ಪೇಳ್, ಬನಕೆ ನಡವಂದು? ಪೇಳ್ವೇಳೆಂತಯ್ ಮಂತ್ರವಂ
ತನ್ನ ಪತಿ ಗುರುತಪಕೆ ದೀಕ್ಷೆಯಿತ್ತುದನವಳ್
ಸತಿ ಶಿರೋಮಣಿ, ಊರ್ಮಿಳಾದೇವಿ ? ಪ್ರಾಣೇಶ
ಲಕ್ಷಣಂ ರಾಮ ಸೀತೆಯರೊಡನನಯೋಧ್ಯೆಯಂ
ಬಿಟ್ಟಂದುತೊಟ್ಟು, ಸರಯೂನದಿಯ ತೀರದೊಳ್
ಪರ್ಣಕುಟಿಯಂ ರಚಿಸಿ, ಚಿರ ತಪಸ್ವಿನಿಯಾಗಿ
ಕಟ್ಟಿದಳ್ ಚಿತ್ತಪೋಮಂಗಳದ ರಕ್ಷೆಯಂ
ಮೈಥಿಲಿಗೆ ರಾಮರಿಗೆ ಮೇಣ್ ತನ್ನಿನಿಯ ದೇವನಿಗೆ!

(ಶ್ರೀರಾಮಾಯಣ ದರ್ಶನಂ–ಕುವೆಂಪು)

**ಗದ್ಯಾನುವಾದ**

ಇಷ್ಟೆಲ್ಲಾ ಕ್ರಾಂತಿ ಅಯೋಧ್ಯೆಯಲ್ಲಿ ಮಸಗಿದಾಗ ಊರ್ಮಿಳಾದೇವಿ ಎಲ್ಲಿದ್ದಳು? ಹೆಣ್ಣೆಂಬ ಪವಿತ್ರಮ ಸತ್ಯಕ್ಕೆ ನೀನೇ ಉಪಮಾತೀತ ಪ್ರತಿಮೆ! ಸೀತೆ ಕಾಂತನೊಡನಿದ್ದು ಕಾಂತಾರ ವಾಸದ ರುಚಿಯನ್ನು ಅನುಭವಿಸುತ್ತಿದ್ದಾಳೆ. ಲಂಕೆಯಲ್ಲಿದ್ದು ಪತಿವ್ರತಾ ಸಾಹಸದ ಮಹಿಮೆಗೆ ಬಾಳನ್ನು ಬೇಳುವ ಅವಳ ತಪಕ್ಕೆ ದೇವ ಮಾನವಾದಿ ಸಕಲ ಲೋಕಗಳ ಸಂಸ್ತುತಿಯ ಬೆಂಬಲವಿದೆ. ಜಗತ್ತಿನ ಕಣ್ಣಿಗೆ ಬೀಳದ ನಿನ್ನ ದೀರ್ಘ ಘೋರ ಮೌನವ್ರತ ಸೀತೆಯ ತಪಸ್ಸಿಗಿಂತ ಮಿಗಿಲು ಹಾಗೂ ಕಠಿನ. ಕಲ್ಲಾದಹಲ್ಯೆಯ ಶಿಕ್ಷೆಗಿತ್ತು ಚೇತನದ ರಕ್ಷೆ. ಉಸಿರಿದ್ದರೂ ಹತಾಶೆಗಳೆಂಬ ಪಂಚಾಗ್ನಿಯ ನಡುವೆ ನೀನು ಹದಿನಾಲ್ಕು ವರ್ಷ ನಿರಂತರ ತಪಸ್ಸಿನಲ್ಲಿ ಮುಳುಗಿದ್ದೆ. ನಿನ್ನ ನೆನಹೇ ಇತರ ಜೀವಿಗಳಿಗೆ ಮಹಾವ್ರತವಾಗುತ್ತದೆ. ಸೌಮಿತ್ರಿ ಅಣ್ಣನೊಡನೆ ಹೋಗಲು ಅನುಮತಿಯನ್ನು ಬೇಡಿದಾಗ ಇಲ್ಲ ಎನ್ನಲಿಲ್ಲ. ಆಗವನು ಹೇಳಿದ್ದೇನು? ಗುರು ತಪಸ್ಸಿಗೆ ದೀಕ್ಷೆ ನೀಡಿದಾಗ ಕೊಟ್ಟ ಮಂತ್ರವನ್ನು ಆ ಸತಿ ಶಿರೋಮಣಿ ಉಸುರುವುದಾದರೂ ಹೇಗೆ? ಸೀತಾರಾಮ ಸಮೇತನಾಗಿ ಅವನು ಊರು ಬಿಟ್ಟಂದಿನಿಂದ ಸರಯೂ ನದೀ ತೀರದಲ್ಲಿ ಪರ್ಣಕುಟಿಯನ್ನು ರಚಿಸಿ ಚಿರ ತಪಸ್ವಿನಿಯಾಗಿ ನಿಂತಳು. ಸೀತೆಗೆ, ರಾಮನಿಗೆ, ತನ್ನ ಪತಿ ದೇವನಿಗೆ ತನ್ನ ತಪಸ್ಸನ್ನೇ ರಕ್ಷೆಯಾಗಿ ಕಟ್ಟಿದವಳು.

**ಭಾಷಾಭ್ಯಾಸ**

**ಪದವಿಂಗಡಣೆ**

ಕವಿತೆಯ ಓದಿನ ಸಂದರ್ಭದಲ್ಲೇ ಈ ಚಟುವಟಿಕೆಯನ್ನು ನೆರವೇರಿಸುವುದು.

- ಆದರೆ + ಅವನ + ಅಕ್ಷಮ್ಯದ + ಅಪರಾಧ
- ನಿದ್ರೆ + ಆಹಾರಗಳ
- ಅರಿಯದವರು + ಆರು + ಉಂಟು
- ವಿರಹದ + ಉರುವೇದನೆಯ
- ನೀನು + ಅಲ್ಲದೆ + ಅನ್ಯರು + ಆರು

**ಸಂಧಿ ತಿಳಿಸುವುದು**

ವಿದ್ಯಾರ್ಥಿಗಳ ಪದ ವಿಭಜನೆಯ ನೈಪುಣ್ಯವನ್ನು ಹೆಚ್ಚಿಸುವುದಕ್ಕೆ ಈ ರೀತಿಯ ಚಟುವಟಿಕೆಗಳು ಸಹಕಾರಿಯಾಗುತ್ತವೆ. ಸಂಧಿಯನ್ನು ಹೆಸರಿಸುವ ಮೂಲಕ ಸಂಧಿಯ ಕಾರ್ಯದ ಕುರಿತು ವಿದ್ಯಾರ್ಥಿಗಳು ಜ್ಞಾನಗಳಿಸುತ್ತಾರೆ. ಇಲ್ಲಿ ಕನ್ನಡ ಸಂಧಿಗಳಾದ ಲೋಪ, ಆಗಮ ಮತ್ತು ಆದೇಶಗಳ ಕುರಿತು ಹೇಳಲಾಗಿದೆ. ಹಿಂದಿನ ತರಗತಿಗಳಲ್ಲಿ ವಿದ್ಯಾರ್ಥಿಗಳು ಹಲವು ಸಂಧಿಗಳನ್ನು ಅಭ್ಯಸಿಸಿರುತ್ತಾರೆ. ಅದನ್ನು ಸ್ಮರಣೆಗೆ ತರುವುದಕ್ಕಾಗಿ ಕನ್ನಡ ಸಂಧಿಗಳಿಗೆ ಉದಾಹರಣೆಯಾಗಿರುವ ಪದಗಳನ್ನು ನೀಡಿ ಅವು ಯಾವ ಸಂಧಿಗೆ ಸೇರಿದವುಗಳೆಂದು ಪ್ರಶ್ನಿಸುವುದು. ಬಳಿಕ ಪಾಠಭಾಗದಲ್ಲಿ ಅಭ್ಯಾಸದಲ್ಲಿ ಕೊಟ್ಟಿರುವ ಪದಗಳನ್ನು ನೀಡಿ ಅವುಗಳನ್ನು ಸಂಧಿ ವಿಂಗಡಿಸಿ ಲೋಪ, ಆಗಮ, ಆದೇಶ ಸಂಧಿಗಳಾಗಿ ಪಟ್ಟಿಮಾಡುವಂತೆ ತಿಳಿಸುವುದು.

- ಪ್ರೀತಿ + ತೋರು – ಪ್ರೀತಿದೋರು (ಆದೇಶ)
- ಬೇನೆ + ಅರಿವು – ಬೇನೆಯರಿತು (‘ಯ’ಕಾರ ಆಗಮ)
- ಆದರೆ + ಅನಿತು – ಆದರನಿತು (ಲೋಪ)
- ನೆಲೆ + ಊರಿ – ನೆಲೆಯೂರಿ (‘ಯ’ಕಾರ ಆಗಮ)
- ನಿನ್ನ + ಒಡಲ – ನಿನ್ನೊಡಲ (ಲೋಪ)

# ಕೆರೆಯ ದಡದಲ್ಲಿ

## ಪ್ರವೇಶ

ಭೂಮಿಯಲ್ಲಿ ಜೀವ ಸ್ಪಂದನ ಆರಂಭಿಸಿ ಕೋಟಿಗಟ್ಟಲೆ ವರ್ಷಗಳು ಕಳೆದಿವೆ. ವೈವಿಧ್ಯಮಯವಾದ ಜೀವ ಜಾಲಗಳಿಂದ ತುಂಬಿ ಸಂಪನ್ನವಾದ ಭೂಮಿಯ ದೃಶ್ಯಗಳುಸದಾ ನಮ್ಮಲ್ಲಿ ಆನಂದವನ್ನು ಜಿಜ್ಞಾಸೆಯನ್ನೂ ಕೆರಳಿಸುತ್ತದೆ. ಇಂದು ಜೀವಂತವಾಗಿರುವ ಜೀವ ಜಾಲಗಳು 10 ಕೋಟಿಗಿಂತಲೂ ಅಧಿಕವಾಗಿವೆಯೆಂದು ಅಂದಾಜುಮಾಡಲಾಗಿವೆ ಎಂದು ಅಂದಾಜುಮಾಡಲಾಗಿದೆ. ಸುಮಾರು ಒಂದೂವರೆ ಕೋಟಿಯಷ್ಟು ಜೀವಜಾಲಗಳಿಗೆ ವೈಜ್ಞಾನಿಕ ಹೆಸರುಗಳನ್ನು ನೀಡಲು ವಿಜ್ಞಾನಿಗಳಿಗೆ ಸಾಧ್ಯವಾಗಿದೆ. ಇದರ ಹೊರತಾಗಿ ವಂಶನಾಶ ಹೊಂದಿರುವವುಗಳು ಅಸಂಖ್ಯಾತ. ಅಮೆರಿಕಾದ ಪ್ರಾಣಿಶಾಸ್ತ್ರಜ್ಞನಾದ ಸ್ಟೀಫನ್ ಜೆ.ಗೌಲ್ಡ್‌ನ ಅಭಿಪ್ರಾಯದಂತೆ ಭೂಮಿಯಲ್ಲಿ ಇದುವರೆಗೆ ಜೀವಿಸಿದ್ದ ಜೀವ ಜಾಲಗಳಲ್ಲಿ ಬಹುತೇಕ ಕೂಡಾ ತಮ್ಮ ಪಳೆಯುಳಿಕೆಗಳನ್ನು ಕೂಡಾ ಉಳಿಸದೆ ವಂಶ ನಾಶ ಹೊಂದಿವೆ. ಇದರಿಂದ ಭೂಮಿಯ  ಜೀವ ವೈವಿಧ್ಯದ ಬಗ್ಗೆ ಅಂದಾಜುಮಾಡಬಹುದಾಗಿದೆ. ಆದರೆ ಭೂಮಿಯಲ್ಲಿ ಈ ವೈವಿಧ್ಯಯು ಉಳಿಯಬೇಕಾದರೆ ಪ್ರಕೃತಿ ಸಂರಕ್ಷಣೆ ಅತ್ಯಗತ್ಯ. ಪ್ರಕೃತಿ ಸಂರಕ್ಷಣೆಗೆ ಪ್ರಾಧಾನ್ಯತೆ ಕೊಡುವ ಮೂರು ದಿನಗಳು– ಮಾರ್ಚ್ 21–ವನ ಮಹೋತ್ಸವ, ಮಾರ್ಚ್ – 22– ಜಲ ದಿನಾಚರಣೆ ಮತ್ತು ಮಾರ್ಚ್ 23 –ಹವಾಮಾನ ದಿನ. ಭೂಮಿಯ ಮೇಲಿನ ಜೀಲ ಜಾಲಗಳ ಅಸ್ತಿತ್ವ, ಪ್ರಕೃತಿ ಸಂಪನ್ಮೂಲಗಳ ಮೇಲೆ ಮನುಷ್ಯನ ಅನಿಯಂತ್ರಿತ ದಬ್ಬಾಳಿಕೆ ಮತ್ತು ಪರಿಸರದ ಮೇಲಾಗುವ ಆಘಾತಗಳ ಕುರಿತು ಈ ದಿನಾಚರಣೆಗಳಲ್ಲಿ ಚರ್ಚಿಸಲಾಗುತ್ತದೆ. ಕಾಡುಗಳ ನಾಶ, ಗುಡ್ಡಗಳ ಅಗೆಯುವಿಕೆ, ಬೃಹತ್ ಕಟ್ಟಡಗಳ ನಿರ್ಮಾಣ, ಕೆರೆ ತೋಡುಗಳ ಮುಚ್ಚುವಿಕೆ, ಸಾಂಪ್ರದಾಯಿಕ ಕೃಷಿಯನ್ನು ಬಿಟ್ಟು ವೈಜ್ಞಾನಿಕ ರೀತಿಯ ಕೃಷಿ ವಿಧಾನ, ಪಕ್ಷಿ ಮೃಗಾದಿಗಳ ಬೇಟೆ, ಕಾರ್ಖಾನೆಗಳಿಂದ ಹೊರ ಬಿಡುವ ಮಲಿನ ನೀರು, ಹೊಗೆ ವಾಹನಗಳ ದಟ್ಟಣೆಯಿಂದುಂಟಾಗುವ ವಾಯು ಮಾಲಿನ್ಯ ಈ ಎಲ್ಲಾ ಕಾರಣಗಳಿಂದ ಭೂಮಿಯ ಮೇಲಿನ ಜೈವ ವೈವಿಧ್ಯವು ಕಣ್ಮರೆಯಾಗುತ್ತಾ ಬರುತ್ತಿದೆ. ಇಂದು ಜೀವ ಜಾಲದ ಸಂರಕ್ಷಣೆಗಾಗಿ ಜಾಗತಿಕ ಮಟ್ಟದಲ್ಲೇ ಪ್ರಯತ್ನವನ್ನು ಮಾಡಲಾಗುತ್ತಿದೆ. 2010ನ್ನು 'ಅಂತಾರಾಷ್ಟ್ರೀಯ ಜೈವ ವೈವಿಧ್ಯ ವರ್ಷ' (International Year of Biodiversity) ವಾಗಿ ಘೋಷಿಸಲಾಗಿದೆ. ಮಾತ್ರವಲ್ಲ ಪ್ರತಿವರ್ಷವೂ ಮೇ 22ನ್ನು 'ವಿಶ್ವವೈವಿಧ್ಯದಿನ'ವಾಗಿ ಆಚರಿಸಲಾಗುತ್ತದೆ. ಪ್ರಾಣಿ–ಸಸ್ಯ ವೈವಿಧ್ಯವನ್ನು ಸಂರಕ್ಷಿಸುವ ಆಶಯವನ್ನು ಪ್ರಚಾರ ಪಡಿಸುವುದೇ ಈ ದಿನಾಚರಣೆಯ ಮುಖ್ಯ ಉದ್ದೇಶವಾಗಿದೆ. ಈ ಹಿನ್ನೆಲೆಯಲ್ಲಿ ಪ್ರವೇಶ ಚಟುವಟಿಕೆಯನ್ನು ನಡೆಸುವುದು.

## ಪ್ರವೇಶ ಚಟುವಟಿಕೆಗಳು

ಪಾಠಭಾಗದತ್ತ ವಿದ್ಯಾರ್ಥಿಗಳ ಮನವನ್ನು ಸೆಳೆಯುವ ಸಲುವಾಗಿ ಕೆಳಗಿನ ತಂತ್ರಗಳನ್ನು ಬಳಸಬಹುದು.

- ವಿದ್ಯಾರ್ಥಿಗಳಿಂದ ತಮ್ಮ ಮನೆಯ ಪರಿಸರದಲ್ಲಿ ಕಂಡ ಜೀವಿಗಳ ಹೆಸರನ್ನು ಹೇಳಿಸುವುದು.
- ಹಿಂದೆ ಮಳೆಗಾಲ ಆರಂಭವಾಗುವಾಗ ಕಪ್ಪೆಗಳ ವಟಗುಟ್ಟುವಿಕೆಯನ್ನು ನೀವು ಆಲಿಸಿರಬಹುದು. ಇಂದು ಆ ಧ್ವನಿ ಕೇಳುತ್ತಿದೆಯಾ? ಎಂಬ ಪ್ರಶ್ನೆಯ ಮೂಲಕ ಚರ್ಚೆಯನ್ನು ನಡೆಸಬಹುದು?
- ಭೂಮಿಯಲ್ಲಿ ಸಸ್ಯ–ಪ್ರಾಣಿ–ಪಕ್ಷಿಗಳು ಕಣ್ಮರೆಯಾದರೆ ಮನುಷ್ಯನಿಗೆ ಜೀವಿಸಲು ಸಾಧ್ಯವುಂಟೇ? – ಎಂಬ ವಿಷಯದ ಕುರಿತು ತರಗತಿಯಲ್ಲಿ ಗುಂಪು ಚರ್ಚೆಯನ್ನು ನಡೆಸುವ ಮೂಲಕ ಪಾಠ ಪ್ರವಲೇಶ ಮಾಡುವುದು.

ವಿದ್ಯಾರ್ಥಿಗಳು ಗುಂಪಿನಲ್ಲಿ ಚರ್ಚಿಸಲಿ. ಜೀವ ವಾಸ ವ್ಯವಸ್ಥೆಯಲ್ಲಿ ಈ ಜೈವ ವೈವಿಧ್ಯದ ಪಾತ್ರ ಅದೆಷ್ಟು ಮುಖ್ಯ ಎಂಬ ನಿಗಮನಕ್ಕೆ ವಿದ್ಯಾರ್ಥಿಗಳನ್ನು ಕೊಂಡೊಯ್ಯುವುದು. ಆ ಮೂಲಕ ಪತ್ಯ ಪ್ರವೇಶ ಮಾಡುವುದು. ಈ ಸಂದರ್ಭದಲ್ಲಿ ಪರಿಸರ ಹೋರಾಟಗಾರರಾದ ಸುಂದರ್‌ಲಾಲ್ ಬಹುಗುಣ, 'ಸಾಲು ಮರಗಳ ತಿಮ್ಮಕ್ಕ', ಮೇಧಾ ಪಾಟ್ಕರ್, ಪಕ್ಷಿ ತಜ್ಞರಾದ ಛಾಯಾಗ್ರಾಹಕ ಸಲೀಂ ಅಲಿ, ಪರಿಸರ ತಜ್ಞರಾದ ಕಾಸರಗೋಡಿನ ಶ್ರೀ ಪಡ್ರೆ ಮುಂತಾದ ಮಹನೀಯರ ಹೆಸರುಗಳನ್ನು ಉಲ್ಲೇಖಿಸಬಹುದು. ಬಳಿಕ ಪ್ರಸ್ತುತ ಪಾಠದ ಲೇಖಕರ ಕುರಿತು ತಿಳಿಸುವುದು.

ಕೆ.ಪಿ.ಪೂರ್ಣಚಂದ್ರ ತೇಜಸ್ವಿ ಅವರು ಕನ್ನಡದ ಪ್ರಮುಖ ಗದ್ಯ ಲೇಖಕರಲ್ಲಿ ಒಬ್ಬರು. ಅವರು ಜೀವ ಜಗತ್ತಿನ ವಿಸ್ಮಯ ಲೋಕಕ್ಕೆ ಪ್ರವೇಶ ಪಡೆಯುವುದಕ್ಕೆ ಮೊದಲು ಪ್ರೇರಣೆ, ಪ್ರೋತ್ಸಾಹ ಮತ್ತು ಶಿಕ್ಷಣ ಪಡೆದದ್ದು ತಮ್ಮ ತಂದೆಯವರಿಂದ ಎಂದು ಅವರೇ ಹೇಳಿಕೊಂಡಿದ್ದಾರೆ. ಕಾರಂತರನ್ನು ಬಿಟ್ಟರೆ, ಸಾಹಿತಿಯಾಗಿ, ಸಾಹಿತ್ಯೇತರ ಚಟುವಟಿಕೆಗಳ ಬಗ್ಗೆಯೂ ತೀವ್ರವಾದ ಆಸಕ್ತಿ ಇಟ್ಟುಕೊಂಡವರು ಇವರೇ ಎಂದು ಹೇಳಬಹುದಾಗಿದೆ. ಕಥೆಗಳನ್ನು ಬರೆಯುವಷ್ಟೇ ತನ್ಮಯತೆಯಿಂದ ಅವರು ಹಕ್ಕಿಗ ಬಗ್ಗೆ, ಕೃಷಿಯ ಬಗ್ಗೆ, ಬಣ್ಣ ಬಣ್ಣದ ಮೀನುಗಳ ಬಗ್ಗೆ ಬರೆಯಬಲ್ಲರು.

'ಪರಿಸರದ ಕತೆ'ಅನೇಕ ಕಾರಣಗಳಿಗಾಗಿ ಒಂದು ಮಹತ್ವಪೂರ್ಣ ಕೃತಿ. ಅವರು ಇಲ್ಲಿ 'ತಜ್ಞ'ರಾಗಿ ಬರೆಯುತ್ತಿಲ್ಲ. ಸಾಮಾನ್ಯ ಜ್ಞಾನವುಳ್ಳ ಅನುಭವಸ್ಥರಾಗಿ ತಮ್ಮ ಅನುಭವಗಳನ್ನು ಇಲ್ಲಿ ಹಂಚಿಕೊಂಡಿದ್ದಾರೆ.

### ಮೌನ ಓದು

ವಿದ್ಯಾರ್ಥಿಗಳು ಪಠ್ಯಭಾಗವನ್ನು ಮೌನವಾಗಿ ಓದಲಿ. ಓದಿದ ಬಳಿಕ ಅಲ್ಲಿ ಬರುವ ಜೀವಿಗಳ ಹೆಸರುಗಳನ್ನು ಒಬ್ಬೊಬ್ಬರಾಗಿ ಬಾಯ್ದೆರೆಯಾಗಿ ಹೇಳಲಿ. ತದನಂತರ ಅಧ್ಯಾಪಕರು ಒಂದೊಂದು ಪಾರಾವನ್ನು ವಿದ್ಯಾರ್ಥಿಗಳ ಒಂದೊಂದು ಗುಂಪಿಗೆ ನೀಡುವುದು. ಅವರು ಅವುಗಳನ್ನು ಓದಿ ಅಲ್ಲಿ ಕಂಡುಕೊಂಡ ಆಶಯಗಳನ್ನು ಬರೆದು ಪರಸ್ಪರ ಮೌಲ್ಯ ಮಾಪನ ಮಾಡಲಿ. ಬಳಿಕ ಓದಲಿ. ಹೀಗೆ ಎಲ್ಲಾ ಗುಂಪಿನವರು ಓದಿದ ಬಳಿಕ ಅಧ್ಯಾಪಕರ ಸೂಕ್ತ ತಿದ್ದುಪಡಿಯೊಂದಿಗೆ ಇನ್ನಷ್ಟು ಉತ್ತಮ ಪಡಿಸಿ ಬರೆದು ಓದಲಿ.

### ಮೂಡಿ ಬರಬೇಕಾದ ಆಶಯಗಳು

ಮೇಲ್ನೋಟಕ್ಕೆ ತೀರಾ ಸಾಮಾನ್ಯವೆಂದು ತೋರಬಹುದಾದ ವಿದ್ಯಮಾನಗಳಲ್ಲಿಯೂ ಪ್ರಕೃತಿಯ ಯಾವುದೇ ನಿಯಮ/ತತ್ವವು ಅಡಕವಾಗಿದೆ. ಫುಕುವೋಕಾ ಹೇಳುವಂತೆ ಪ್ರಕೃತಿ ವಿಸ್ಮಯದ ಆಳ ಆಳಕ್ಕೆ ಇಳಿಯದೆ ಆರ್ದ್ರ ಮನಸ್ಸಿನಿಂದ ಗಮನಿಸಿದರೂ ಪ್ರಕೃತಿಯಲ್ಲಿ ಅತೀವ ಆನಂದ ಲಭ್ಯ.

## ಪ್ರಕೃತಿ ಒಂದು ವಿಸ್ಮಯ

ಭೂಮಿಯ ಮೇಲೆ ಬದುಕುವ ಪ್ರತಿಯೊಂದು ಜೀವಿಯು ತನ್ನದೇ ಆದ ರೀತಿ ನೀತಿಗಳನ್ನು ಹೊಂದಿರುತ್ತದೆ. ಅವುಗಳ ದೇಹದ ಗಾತ್ರ, ವರ್ಣ ವಿನ್ಯಾಸ, ಆಹಾರದ ಸ್ವಭಾವ, ನಡವಳಿಕೆ, ಪರಿಸರ, ವಾತಾವರಣ ಮೊದಲಾದ ಅಂಶಗಳು ವೈವಿಧ್ಯಪೂರ್ಣವಾಗುತ್ತವೆ.

ಇಂತಹ ಜೈವ ವೈವಿಧ್ಯವು ಸಂರಕ್ಷಿಸಲ್ಪಡಬೇಕಾಗಿದೆ.

## ನವೀನ ಪದಗಳನ್ನು ಬರೆಸುವುದು

ಪಠ್ಯಭಾಗದಲ್ಲಿ ಬಂದಿರುವ ನವೀನ ಪದಗಳನ್ನು ಗುರುತಿಸುವಂತೆ ವಿದ್ಯಾರ್ಥಿಗಳಲ್ಲಿ ಹೇಳುವುದು. ಅರ್ಥಕೋಶದ ಸಹಾಯದಿಂದ ಅರ್ಥಗಳನ್ನು ಗುರುತಿಸಿ ಬರೆದು ಓದಲಿ.

ಜೊಂಡು – ಕೆರೆ, ಕೊಳಗಳಲ್ಲಿ ಒತ್ತೊತ್ತಾಗಿ ಬೆಳೆಯುವ ಒಂದು ಜಾತಿಯ ಸಸ್ಯ.

ಶಿಕಾರಿ – ಬೇಟೆ

ದಿಣ್ಣೆ – ದಿಬ್ಬ

## ವಿಶದೀಕರಣ

- ನಿತ್ಯ ಹರಿದ್ವರ್ಣ ಕಾಡುಗಳು

ಭೂಮಿಯ ಮೇಲಿರುವ ಸಸ್ಯ ಸಂಪತ್ತನ್ನು ಆರು ರೀತಿಯಾಗಿ ವರ್ಗೀಕರಿಸಲಾಗಿದೆ.

- ನಿತ್ಯ ಹರಿದ್ವರ್ಣ ಕಾಡುಗಳು
- ಆರ್ದ್ರ ಎಲೆಯುದಿರಿಸುವ ಕಾಡುಗಳು
- ಒಣ ಎಲೆಯುದುರಿಸುವ ಕಾಡುಗಳು
- ಹುಲ್ಲುಗಾವಲುಗಳು
- ಕಾಂಡ್ಲ ಕಾಡುಗಳು

ನಿತ್ಯ ಹರಿದ್ವರ್ಣ ಕಾಡುಗಳು: ವರ್ಷದ ಎಲ್ಲಾ ಋತುಗಳಲ್ಲೂ ಹಸಿರಾಗಿಯೇ ಉಳಿಯುವ ಕಾಡು. ಇದು 200ಸೆ.ಮೀ.ಗಿಂತಲೂ ಅಧಿಕ ಮಳೆದೊರೆಯುವ ಪ್ರದೇಶದಲ್ಲಿ ಬೆಳೆಯುವುದು. ದೊಡ್ಡ ದೊಡ್ಡ ಮರಗಳು, ದಟ್ಟ ಪೊದರುಗಳು, ಹರಿದಾಡುವ ಬಳ್ಳಿಗಳು ತುಂಬಿರುವಂತಹ ಈ ಕಾಡುಗಳಲ್ಲಿ ಮರಗಳು ಸುಮಾರು ಮರಗಳು ಸುಮಾರು 60 ಮೀಟರ್‌ಗಿಂತಲೂ ಎತ್ತರಕ್ಕೂ ಬೆಳೆಯುತ್ತವೆ. ಇಲ್ಲಿ ಬೆಳೆಯುವ ಮರಗಳು ನಿರ್ದಿಷ್ಟ ಸಮಯದಲ್ಲಿ ಎಲೆ ಉದುರಿಸುವುದಿಲ್ಲವಾದುದರಿಂದ ನಿತ್ಯ ಹರಿದ್ವರ್ಣ ಕಾಡುಗಳೆಂದು ಕರೆಯಲ್ಪಡುತ್ತದೆ. ಈ ಪ್ರದೇಶವು ವರ್ಷವಿಡೀ ತಂಪಾಗಿರುವುದು. ಮಹಾಗನಿ, ಬೀಟಿ, ಸಿಂಕೋನ ಮುಂತಾದ ಮರಗಳೂ, ಆನೆ, ಮಂಗ, ಜಿಂಕೆ ಮುಂತಾದ ಪ್ರಾಣಿಗಳೂ, ಅನೇಕಾನೇಕ ಪಕ್ಷಿಗಳೂ, ಬಾವಲಿಗಳೂ, ಚೇಳುಗಳೂ ಹೀಗೆ ಹಲವು ವೈವಿಧ್ಯಗಳನ್ನು ಹೊಂದಿರುವ ಕಾಡು.

## ಜಕನಾ

ಇದು ಜಾತಿಯ ನೀರುಹಕ್ಕಿ. ಈ ಪಕ್ಷಿಗಳು ಸರೋವರ, ಜವುಗು, ಕೆರೆ ಕುಂಟೆಗಳನ್ನು ಆಶ್ರಯಿಸಿ ಜೀವಿಸುವವುಗಳು. ಆದರೆ ಅವು ನಿರಲ್ಲಿ ನಡೆಯುವ ಬದಲು ನೀರಿನ ಮೇಲೆ ಓಡಾಡುವ ವಿದ್ಯೆ ಕಲಿತಿವೆ. ನೀರಿನ ಮೇಲೆ ತಾವರೆಗಳಂತಹ ದುಂಡಾದ ಎಲೆಗಳು ನೀರನ್ನು ಹೊದೆಯುವಷ್ಟು ಸಮೃದ್ಧವಾಗಿರುತ್ತದೆ. ಜಕನಾದ ಕಾಲಿನ ಬೆರಳುಗಳು ತುಂಬ ಉದ್ದವಾಗಿರುತ್ತವೆ. ಹಾಗಾಗಿ ಅವು ಉದ್ದನೆಯ ಬೆರಳುಗಳನ್ನು ಬಿಡಿಸಿ ಅವುಗಳ ಶರೀರದ ಭಾಗ ಈ ತಾವರೆ ಎಲೆಗಳ ಮೇಲೆ ಹಂಚಿಹೋಗುತ್ತದೆ.

## ಸಂಕ್ಷಿಪ್ತವಾಗಿ ಉತ್ತರಿಸುವುದು

ವಿದ್ಯಾರ್ಥಿಗಳು ಸಂಕ್ಷೇಪವಾಗಿ ಬರೆಯುವುದನ್ನು ಕೆಳಗಿನ ತರಗತಿಗಳಲ್ಲಿ ಅಭ್ಯಾಸಮಾಡಿರುವರು. ಪತ್ಯ ಭಾಗದಲ್ಲಿ ನೀಡಲಾದ ಪ್ರಶ್ನೆಗಳಿಗೆ ಉತ್ತರಗಳನ್ನು ವಿದ್ಯಾರ್ಥಿಗಳು ಸಂಕ್ಷೇಪವಾಗಿ ಬರೆಯಲಿ. ಮಾದರಿಯೊಂದನ್ನು ಕೆಳಗೆ ನೀಡಲಾಗಿದೆ.

- ಮರಕುಟಿಗ ಪಕ್ಷಿಯ ಚಲನವಲನವನ್ನು ತೇಜಸ್ವಿಯವರು ಸೂಕ್ಷ್ಮವಾಗಿ ನಿರೀಕ್ಷಿಸಿದ ಬಗೆ.

ತೇಜಸ್ವಿಯವರು ಒಂದು ದಿನ ತಮ್ಮ ತೋಟದ ಬೇಲಿಯ ಬಲಕ್ಕೆ ಇದ್ದ ಒಂದು ಹಳೆ ಕೆರೆಯ ಹತ್ತಿರ ಹೊರಟಿದ್ದರು. ಈ ಸಂದರ್ಭದಲ್ಲಿ ಹತ್ತಿರದ ಮರದ ಕೊಂಬೆಯಲ್ಲೊಂದು ಮರಕುಟಿಗ ಪಕ್ಷಿಯು ಮರವನ್ನು ಕುಟ್ಟುತ್ತಿರುವ ಸದ್ದು ಕೇಳಿಸಿತು. ಒಂದು ನಿಮಿಷ ಅವರದನ್ನು ಗಮನಿಸಿದಾಗ ಆ ಪಕ್ಷಿಯ ತಲೆ ಕುತ್ತಿಗೆಗಳು ಕಣ್ಣಿಗೆ ಕಾಣುತ್ತಿರಲಿಲ್ಲ. ಅದು ತನ್ನ ತಲೆಯನ್ನೇ ಸುತ್ತಿಗೆಯನ್ನಾಗಿ ಬಳಸಿ ಮರಕ್ಕೆ ಕುಟ್ಟುತ್ತಿತ್ತು. ಮರದೊಳಗಿರುವ ಹುಳುಗಳು ಇಂಥ ಕಡೆಯೇ ಇದೆ ಎಂದು ಪತ್ತೆ ಹಚ್ಚುವ ಸಾಮರ್ಥ್ಯ ಮತ್ತು ಈ ಮೂಲಕ ಅದು ತನ್ನ ಆಹಾರವನ್ನು ಸಂಪಾದಿಸುವ ರೀತಿಯು ಲೇಖಕರನ್ನು ಮೂಕ ವಿಸ್ಮಿತರನ್ನಾಗಿಸಿತು.

ಹೀಗೆ ವಿದ್ಯಾರ್ಥಿಗಳು ಮುಂದಿನ ಪ್ರಶ್ನೆಗಳಿಗೆ ಉತ್ತರಿಸಲಿ.

## ಚಟುವಟಿಕೆಗಳು

- ಶತ್ರುಗಳಿಂದ ಸ್ವಯಂ ಶಿಕ್ಷೆ – ಎಂಬುದನ್ನು ವಿದ್ಯಾರ್ಥಿಗಳು ತಮ್ಮ ಪರಿಸರದಲ್ಲಿ ಕಾಣುವ ಯಾವುದಾದರೂ ಎರಡು ಜೀವಿಗಳ ರಕ್ಷಣಾ ತಂತ್ರಗಳನ್ನು ಗುರುತಿಸಿಕೊಂಡು ವಿಶದಪಡಿಸುವುದು.

ವಿದ್ಯಾರ್ಥಿಗಳು ತಮ್ಮ ಸುತ್ತುಮುತ್ತಲು ಹಲ್ಲಿ, ಓತಿ, ಅರಣೆ, ಹುಲ್ಲುಕುದುರೆ ಮುಂತಾದ ಜೀವಿಗಳನ್ನು ನೋಡಿರುತ್ತಾರೆ. ಅವುಗಳು ಹೇಗೆ ವೈರಿಗಳಿಂದ ತಮ್ಮನ್ನು ತಾವೇ ರಕ್ಷಿಸುತ್ತವೆ ಎಂಬುದನ್ನು ಗಮನಿಸುವಂತೆ ಹೇಳುವುದು. ಗಮನಿಸಿದ್ದನ್ನು ತರಗತಿಯಲ್ಲಿ ಬರೆದು ಮಂಡಿಸಲಿ.

ಹಲ್ಲಿ ತನ್ನ ಶತ್ರುವಿನಿಂದ ಪಾರಾಗುವ ಬಗೆಯನ್ನು ಇಲ್ಲಿ ಮಾದರಿಯಾಗಿ ಕೊಡಲಾಗಿದೆ.

ಮನುಷ್ಯನೊಂದಿಗಿನ ನಿಕಟವರ್ತಿ ಉರಗವೆಂದರೆ ಹಲ್ಲಿ. ಮನೆಯ ಗೋಡೆಯಲ್ಲಿ, ಸಂದುಗೊಂದುಗಳಲ್ಲಿ ಅಡಗಿದ್ದು, ರಾತ್ರಿ ಹೊತ್ತಿನಲ್ಲಿ ಅದು ತನ್ನ ಬೇಟೆಯನ್ನು ಆರಂಭಿಸುತ್ತದೆ. ಹಲ್ಲಿಯನ್ನು 'ಜೆಕೋ' (Geko) ಎಂಬ ವಿಭಾಗದಲ್ಲಿ ಸೇರ್ಪಡೆಗೊಳಿಸಲಾಗಿದೆ. ಮನೆಯಲ್ಲಿ ಕಾಣುವ ಹಲ್ಲಿಗಳನ್ನು 'House Geko' ಎಂದು ಕರೆಯಲಾಗುತ್ತದೆ. ಶತ್ರುಗಳಿಂದ ಸ್ವಯಂ ರಕ್ಷೆ ಪಡೆಯಲು ಹಲ್ಲಿಯು ತನ್ನ ಬಾಲವನ್ನು ತುಂಡರಿಸುತ್ತದೆ. ಶತ್ರುವಿನ ಗಮನ ಮುರಿದು ಬಿದ್ದ ಬಾಲದ ಕಡೆಗಿರುವಾಗ ಹಲ್ಲಿ ಅಲ್ಲಿಂದ ಪಲಾಯನವಾಗುತ್ತದೆ. ಕೆಲವು ಮಾಂಸ ಪೇಶಿಗಳನ್ನು ಸಂಕುಚಿತಗೊಳಿಸಿ ಹಲ್ಲಿ ಬಾಲವನ್ನು ಮುರಿಯುವುದು. ಈ ಭಾಗದಲ್ಲಿ ರಕ್ತನಾಳಗಳು ಕಡಿಮೆಯಾದ ಕಾರಣ ರಕ್ತ ನಷ್ಟವಾಗುವುದಿಲ್ಲ. ಕೆಲವು ದಿನಗಳಲ್ಲಿ ಅದಕ್ಕೆ ಹೊಸ ಬಾಲವು ರೂಪು ಗೊಳ್ಳುತ್ತದೆ.

## ಪ್ರಬಂಧ ತಯಾರಿ

ಪ್ರಬಂಧ ತಯಾರಿಯಲ್ಲಿ ಗಮನಿಸಬೇಕಾದ ಹಂತಗಳು

- ಪೀಠಿಕೆ
- ವಿಷಯ ವಿಸ್ತಾರ
- ಕಾರಣಗಳು ಮತ್ತು ಪರಿಹಾರ ಮಾರ್ಗಗಳು (ವಿಷಯಕ್ಕನುಸರಿಸಿ)

- ನಿಗಮನ

ಮೇಲಿನ ಹಂತಗಳನ್ನಿಟ್ಟುಕೊಂಡು ಪ್ರಬಂಧ ತಯಾರಿಸಿ ಅಧ್ಯಾಪಕರ ಸೂಕ್ತ ತಿದ್ದುಪಡಿಯೊಂದಿಗೆ ಪರಿಷ್ಕರಿಸಿ ಬರೆಯುವುದು.

**ಮಾದರಿ**

- ವಿನಾಶದಂಚಿನಲ್ಲಿರುವ ಜೀವ ಸಂಕುಲ

ನಮ್ಮ ಗದ್ದೆಗಳು, ಕೊಳಗಳು, ಕಾಡುಗಳೆಲ್ಲಾ ಕಣ್ಮರೆಯಾಗುತ್ತಿರುವಾಗ ಅದರ ಅಪಾಯದ ಮೊದಲ ಸೂಚನೆ ಕಾಣಿಸಿಕೊಳ್ಳುವುದು ಕೆಲವು ಜೀವಿಗಳಲ್ಲಿ ಮತ್ತು ಸಸ್ಯಗಳಲ್ಲಾಗಿದೆ. ಇವುಗಳು 'ಜೈವ ಸೂಚಕ (Bio Indicators)' ಎಂದು ತಿಳಿಯಲ್ಪಡುತ್ತವೆ. ಜೀವಿಗಳು ನಾಶವಾದರೆ ಮನುಷ್ಯನ ಅಸ್ತಿತ್ವವೂ ನಾಶವಾಗಬಹುದು ಎಂದು ವಿಜ್ಞಾನ ಲೋಕವು ಮುನ್ಸೂಚನೆ ಕೊಟ್ಟಿದೆ. ಇಂದು ನಮ್ಮ ಪರಿಸರದಿಂದ ವಿನಾಶದ ಅಂಚಿಗೆ ತಲುಪಿದ ಕೆಲವು ಜೀವಿಗಳನ್ನು ಗಮನಿಸಬಹುದು.

## ಕಪ್ಪೆ

ಹಿಂದೆ ಮಳೆಗಾಲ ಆರಂಭವಾಗುವಾಗ ಕಪ್ಪೆಗಳ ವಟಗುಟ್ಟುವಿಕೆಯನ್ನು ನಾವು ಕೇಳಿರಬಹುದು. ಆದರೆ ಇಂದು ಆ ದನಿ ಕೇಳಿಸುತ್ತಿಲ್ಲ. ಕಾರಣ ಈಗಾಗಲೇ ಅವು ವಿನಾಶದ ಅಂಚಿನಲ್ಲಿವೆ. ಕಪ್ಪೆಯು 'ಉಭಯ ಜೀವಿ' ಎಂದು ಕರೆಯಲ್ಪಡುತ್ತದೆ. ಜಗತ್ತಿನಲ್ಲಿ ಸುಮಾರು 6000 ಜಾತಿಯ ಉಭಯ ಜೀವಿಗಳಿವೆ. ಭಾರತದಲ್ಲಿ ಇವು 346 ರಷ್ಟೂ, ಕೇರಳದಲ್ಲಿ 126 ರಷ್ಟೂ ಪ್ರಭೇದಗಳಿವೆ. ಇವುಗಳಲ್ಲಿ ಕಪ್ಪೆಗಳ ಸಂಖ್ಯೆಯೇ 306ರಷ್ಟು, ಕೇರಳದಲ್ಲಿ 113ರಷ್ಟೂ ಪ್ರಭೇದಗಳಿವೆ.

ಕಪ್ಪೆಗಳು ನೀರನ್ನು ಶುದ್ಧೀಕರಣಗೊಳಿಸುವ ಕಾರ್ಯದಲ್ಲಿ ಅಗ್ರಪಂಕ್ತಿಯಲ್ಲಿ ನಿಲ್ಲುತ್ತವೆ. ಇವು ಸೊಳ್ಳೆಗಳನ್ನೂ, ಕ್ರಿಮಿ ಕೀಟಗಳನ್ನೂ ತಿನ್ನುತ್ತವೆ. ಹೀಗೆ ಕೀಟ ನಿಯಂತ್ರಣದಲ್ಲೂ, ಜಲ ಶುದ್ಧೀಕರಣದಲ್ಲೂ ಇದರ ಪಾತ್ರ ಪ್ರಧಾನವಾದುದು.

ಮಾತ್ರವಲ್ಲ ಇವುಗಳು ಹಾವುಗಳಿಗೆ ಆಹಾರ ಕೂಡಾ ಆಗಿದೆ.

## ಪ್ರಕೃತಿಯ ಜಂಬೋ ಜೆಟ್–ದುಂಬಿ

ದುಂಬಿಗಳು ಹೂವಿನಿಂದ ಮಕರಂದವನ್ನು ಹೀರಲು ಹಾರುವುದು ಎಂದರೆ ತಪ್ಪು, ಅವು ಸಸ್ಯಹಾರಿಗಳಲ್ಲ ಸಣ್ಣ ಸಣ್ಣ ಕೀಟಗಳನ್ನು ತಿನ್ನುವ ಇವುಗಳು ತಮ್ಮ ಶರೀರದಷ್ಟೇ ಭಾರವಿರುವ ಕೀಟಗಳನ್ನು ತಿನ್ನುತ್ತವೆ. ಇವುಗಳು ಸಾಧಾರಣ ಗದ್ದೆಗಳ ಮತ್ತು ಸಣ್ಣ ಜಲಾಶಯಗಳ ಸಮೀಪ ಜೀವಿಸುತ್ತವೆ. ನೀರಿನಲ್ಲಿರುವ ಸಣ್ಣ ಪುಟ್ಟ ಸಸ್ಯಗಳಲ್ಲಿ ಇವು ಮೊಟ್ಟೆಯಿಡುತ್ತವೆ. ಮೊಟ್ಟೆಯಿಂದ ಹೊರ ಬರುವ ಮರಿಗಳು ನೀರಿನಲ್ಲಿರುವ ಹಲವು ತರದ ಕ್ರಿಮಿಗಳನ್ನು ತಿನ್ನುತ್ತವೆ. ತಾಯ್ಲೆಂಡಿನಲ್ಲಿ ಸೊಳ್ಳೆ ನಿವಾರಣೆಗಾಗಿ ದುಂಬಿಗಳನ್ನು ಜಲಾಶಯಗಳಲ್ಲಿ ಮೊಟ್ಟೆಯಿಡಲು ಅನುವು ಮಾಡಿಕೊಡಲಾಗುತ್ತದೆ.

ಚಿಟ್ಟೆಗಳು ಮತ್ತು ಜೇನ್ನೊಣಗಳು

ಹೂಗಳಲ್ಲಿ ಪರಾಗ ಸ್ಪರ್ಶ ನಡೆಸಿ ಫಲೀಕರಣದ ಪ್ರಕ್ರಿಯೆಯಲ್ಲಿ ಚಿಟ್ಟೆಗಳ ಹಾಗೂ ಜೇನ್ನೊಣಗಳ ಕಾರ್ಯ ಮಹತ್ತರವಾದುದು. ಈ ಜೀವಿಗಳು ನಶಿಸಿಹೋದರೆ ಎಷ್ಟೋ ಸಸ್ಯಗಳಲ್ಲಿ ಬೆಳೆ ಬೆಳೆಯದು. ಜಗತ್ತಿನಲ್ಲಿ ಸುಮಾರು 12,000ಜಾತಿಯ ಚಿಟ್ಟೆಗಳಿವೆ. ಭಾರತದಲ್ಲಿ ಇದು 1430ರಷ್ಟು, ಕೇರಳದಲ್ಲಿ 320ರಷ್ಟು ಪ್ರಭೇದಗಳನ್ನು ಗುರುತಿಸಲಾಗಿದೆ. ಪಶ್ಚಿಮ ಘಟ್ಟದಲ್ಲೇ 35 ರೀತಿಯ ಚಿಟ್ಟೆಗಳನ್ನು ಕಂಡು ಹಿಡಿಯಲಾಗಿದೆ. ಈಗ ಜೀವಿಗಳು ಕೂಡಾ ವಂಶನಾಶದ ಅಂಚಿನಲ್ಲಿವೆ.

ಜೇನ್ನೊಣಗಳನ್ನು ಗಮನಿಸಿದರೆ, ಒಂದು ಜೇನ್ನೊಣವು ಒಂದು ದಿನದಲ್ಲಿ 2000 ಕ್ಕೂ ಮಿಗಿಲು ಹೂಗಳನ್ನು ಸಮೀಪಿಸಿ ಮಕರಂದವನ್ನು ಹೀರುತ್ತವೆ ಎಂದು ತಿಳಿಯಲಾಗಿದೆ. ಒಟ್ಟಿಗೇ ಪರಾಗ ರೇಣುಗಳ ರವಾನಿಸುವಿಕೆ ಈ ಪ್ರಕ್ರಿಯೆಯಲ್ಲಿ ನಡೆಯುವುದು. ಹಾಗಿದ್ದಲ್ಲಿ ಇಷ್ಟು ಸಂಖ್ಯೆಯಲ್ಲಿ ಹೂಗಳನ್ನು ಬಿಡುವ ಸಸ್ಯಗಳಿಲ್ಲದಿದ್ದರೆ ಈ ಜೀವಿಗೆ ಬದುಕಲು ಸಾಧ್ಯವಿಲ್ಲ.

**ವಂಶನಾಶದ ಕಾರಣಗಳು (ಸೂಚನೆಗಳು ಮಾತ್ರ)**

- ನಗರೀಕರಣ
- ಗದ್ದೆಗಳು, ಕೊಳಗಳು, ಸಣ್ಣ ಜಲಾಶಯಗಳನ್ನು ಮುಚ್ಚಿ ಕಾಂಕ್ರೀಟು ಕಟ್ಟಡಗಳನ್ನು ಕಟ್ಟುವುದು.
- ಕೀಟನಾಶಕಗಳ ಪ್ರಯೋಗ
- ಅಂತರಿಕ್ಷ ಮಲಿನೀಕರಣ (ವಾಹನಗಳ, ಕಾರ್ಖಾನೆಗಳಿಂದ ಹೊರಬರುವ ಹೊಗೆ)
- ಜೈವ ಗೊಬ್ಬರಗಳನ್ನು ಬಳಸದೆ ರಾಸಾಯನಿಕ ಗೊಬ್ಬರಗಳನ್ನು ಬಳಸುವುದು.
- ಜಲ ಮಲಿನೀಕರಣ....ಇತ್ಯಾದಿ

**ಪರಿಹಾರ ಮಾರ್ಗಗಳು**

- ನಗೀಕರಣಕ್ಕೆ ನಿಯಂತ್ರಣವನ್ನು ತರುವುದು
- ವಾಹನಗಳ ನಿಯಂತ್ರಣ
- ಗದ್ದೆ, ಕೊಳಗಳನ್ನು ಮುಂದಿನ ಪೀಳಿಗೆಗೂ ಉಳಿಸಿಕೊಳ್ಳುವುದು.
- ಜೈವ ಗೊಬ್ಬರಗಳನ್ನು, ಕೀಟನಾಶಕಗಳನ್ನು ಬಳಸುವುದು.

**ನಿಗಮನ**

ಜೀವವಾಸ ವ್ಯವಸ್ಥೆಯಲ್ಲಿ ಪ್ರತಿಯೊಂದು ಜೀವಿಯೂ ಮಹತ್ವ ಪೂರ್ಣವಾದುದು. ಇವಿಲ್ಲವಾದರೆ ಮನುಷ್ಯನಿಗೆ ಕೂಡಾ ಅಸ್ತಿತ್ವ ಇಲ್ಲ.

**ಭಾಷಾಭ್ಯಾಸ**

ಸಂಸ್ಕೃತ ಪದಗಳಿಗೆ ತದ್ಭವ ಪದಗಳನ್ನು ಬರೆಸುವುದು.

| | |
|---|---|
| ಸಂಸ್ಕೃತ | ಸದ್ಭವ |
| ನಿದ್ರಾ | ನಿದ್ದೆ |
| ಪಕ್ಷಿ | ಹಕ್ಕಿ |
| ಶಬ್ದ | ಸದ್ದು |
| ಆಶ್ಚರ್ಯ | ಅಚ್ಚರಿ |

- **ಸರಳ ವಾಕ್ಯಗಳನ್ನು ಮಿಶ್ರ ವಾಕ್ಯಗಳನ್ನಾಗಿ ಪರಿವರ್ತಿಸುವುದು.**

ಯಾವುದೋ ಹಳೇ ಕೆರೆಯ ಸುತ್ತ ಇರವೇಕಾಣದಷ್ಟು ದಟ್ಟವಾದ ಗುಲಾಬಿ ಪೊದೆಗಳು ಬೆಳೆದಿದ್ದು ಅಂಚಿನಲ್ಲೆಲ್ಲಾ ಜೊಂಡು ಹಬ್ಬಿತ್ತು.

ಆ ಕೆರೆಯಲ್ಲಿ ಒಂದಷ್ಟು ನಾಮಗೋಳಿಗಳಿರುವುದರೊಂದಿಗೆ ಬಣ್ಣದ ಜಕನಾಗಳೂ ಇದ್ದುವು.

# ಅವರವರ ದಾರಿ

## ಪ್ರವೇಶ

ಹೊಸಗನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಬಹಳ ಸಮೃದ್ಧವಾದ ಬೆಳೆ ಬಂದದ್ದು ಕಾವ್ಯ ಕ್ಷೇತ್ರದಲ್ಲಿ. ಕುವೆಂಪು, ಬೇಂದ್ರೆ, ಕೆ. ಎಸ್. ನರಸಿಂಹಸ್ವಾಮಿ, ಗೋವಿಂದ ಪೈ ಮೊದಲಾದ ಕವಿಗಳ ಕವಿತೆಗಳನ್ನು ವಿದ್ಯಾರ್ಥಿಗಳು ಕೆಳಗಿನ ತರಗತಿಯಲ್ಲಿ ಅಧ್ಯಯನ ಮಾಡಿರುವರು. ಜಿ.ಎಸ್.ಶಿವರುದ್ರಪ್ಪನವರು ನವೋದಯ ಮತ್ತು ನವ್ಯ ಪಂಥದ ಚಿಂತನೆಗಳನ್ನು ಸ್ವೀಕರಿಸಿ ತಮ್ಮದೇ ಶೈಲಿಯಲ್ಲಿ ಕಾವ್ಯ ರಚನೆ ಮಾಡಿದ ಸಮನ್ವಯ ಕವಿ. ಅವರ ಈ ಕೆಳಗಿನ ಮಾತುಗಳನ್ನು ವಿದ್ಯಾರ್ಥಿಗಳ ಗಮನಕ್ಕೆ ತರುವುದು.

"ಮನುಷ್ಯ ದಿನದಿನದ ಬದುಕಿನಲ್ಲಿ ಜಾತಿ, ಮತ, ಭಾಷೆ, ಧರ್ಮ, ಪಕ್ಷ, ಆಚಾರ ಇವುಗಳ ಹೆಸರಿನಲ್ಲಿ ಇಲ್ಲಸಲ್ಲದ ಗೋಡೆಗಳನ್ನು ನಿರ್ಮಿಸಿಕೊಳ್ಳುತ್ತಿದ್ದಾನೆ. ಮನಸ್ಸು ಮನಸ್ಸುಗಳ ನಡುವಣ ಕಂದರಗಳನ್ನು ಕೂಡಿಸುವ ಸೇತುವೆಗಳನ್ನು ಸಂಪರ್ಕಗಳನ್ನು ಕಡಿದುಕೊಂಡು ಏಕಾಕಿಯಾಗುತ್ತಿದ್ದಾನೆ. ಯಂತ್ರ ನಾಗರಿಕತೆಯ ಜೀವನದಲ್ಲಿ ಮನುಷ್ಯ ತಾನು ಯಂತ್ರವಾಗುತ್ತ, ತನ್ನ ವ್ಯಕ್ತಿ ವಿಶಿಷ್ಟತೆಯನ್ನು ಕಳೆದುಕೊಳ್ಳುತ್ತಿದ್ದಾನೆ. ಈ ಪರಿಸರದಲ್ಲಿ ವ್ಯಕ್ತಿ ವ್ಯಕ್ತಿಗಳ ನಡುವೆ ಸೇತುವೆ ಕಟ್ಟುವುದು ಹೇಗೆ? ಮಾನವೀಯ ಸಂಬಂಧಗಳನ್ನು ಬೆಸೆಯುವುದು ಹೇಗೆ?"

ಆಧುನಿಕ ಬದುಕಿನ ವಾಸ್ತವಗಳನ್ನು ತಿಳಿದು ಬದುಕುವುದು ನಮ್ಮ ಕರ್ತವ್ಯವಾಗಬೇಕು. ಅಪ್ಪ–ಅಮ್ಮ, ಅಣ್ಣ–ತಮ್ಮ, ಅಕ್ಕ–ತಂಗಿ, ಗುರು–ಶಿಷ್ಯ, ಈ ಸಂಬಂಧಗಳ ಬಂಧವನ್ನು ಅರಿತು ಬದುಕಲು ಕಲಿತರೆ ಅದುವೇ ಸ್ವರ್ಗ. ವೃದ್ಧ ತಂದೆ ತಾಯಿಯನ್ನು ವೃದ್ಧಾಶ್ರಮಕ್ಕೆ ಸೇರಿಸುವ, ಆಹಾರ ನೀರು ಕೊಡದೇ ಮಾನಸಿಕವಾಗಿಯೂ, ದೈಹಿಕವಾಗಿಯೂ ನೋಯಿಸುವ, ಹಣ ಬಲ ಮತ್ತು ಬಿಸಿ ರಕ್ತದ ಬಲದಲ್ಲಿ ಬದುಕುವ ಮಕ್ಕಳನ್ನು ಕಾಣುತ್ತೇವೆ. ಎಲ್ಲ ಕಾಲದ ಒಂದು ಸಾಮಾನ್ಯ ಸಮಸ್ಯೆಯೆಂದರೆ ಹಿರಿಯರಿಗೆ ಕಿರಿಯರ ಬಗ್ಗೆ ಒಂದು ರೀತಿಯ ಅಪನಂಬಿಕೆ, ಆತಂಕ. ಕಿರಿಯರಿಗೆ ಹಿರಿಯರ ಬಗ್ಗೆ ಅಸಮಾಧಾನ, ತಿರಸ್ಕಾರ. ತಲೆಮಾರುಗಳ ಈ ಅಂತರದಿಂದಾಗಿಯೇ ಅನೇಕ ವೇಳೆ ಹಿರಿಯರ ಅನುಭವ ಸಂಪತ್ತಿನಿಂದ ಕಿರಿಯರು ವಂಚಿತರಾಗುತ್ತಾರೆ. ಕಿರಿಯರ ಹೊಸ ಚಿಂತನೆಗಳನ್ನು ಗ್ರಹಿಸಲಾಗದೆ ಹಿರಿಯರು ಜಡವಾಗುತ್ತಿದ್ದಾರೆ. ಈ ಕಾರಣಗಳಿಂದ ನಮ್ಮ ಸಮಾಜದಲ್ಲಿ ಸಮಸ್ಯೆಗಳ ಆರಂಭವಾಗುತ್ತದೆ ಎನ್ನುವುದನ್ನು ವಿದ್ಯಾರ್ಥಿಗಳಿಗೆ ಮನವರಿಕೆ ಮಾಡುವುದು.

ಈ ರೀತಿಯ ಸಮಸ್ಯೆಗಳಿಗೆ ಕಾರಣಗಳೇನೆಂದು ವಿದ್ಯಾರ್ಥಿಗಳಲ್ಲಿ ಅಧ್ಯಾಪಕರು ಕೇಳುವುದು.

ವಿದ್ಯಾರ್ಥಿಗಳು ಗುಂಪಿನಲ್ಲಿ ಚಿಂತಿಸಿ ಉತ್ತರಿಸಲಿ. ಈ ಕೆಳಗಿನ ಉತ್ತರವನ್ನು ನಿರೀಕ್ಷಿಸಬಹುದು.

- ಪ್ರತಿಭಾ ಪಲಾಯನ
- ಅನ್ಯ ಸಂಸ್ಕೃತಿಗೆ ತಮ್ಮನ್ನು ಮಾರಿಕೊಳ್ಳುವುದು.
- ಕೃಷಿ ಸಂಸ್ಕೃತಿಯನ್ನು ಬಿಡುವುದು.
- ಶ್ರಮದ ದುಡಿಮೆಯನ್ನು ತ್ಯಜಿಸಿ, ಸೌಕರ್ಯಗಳಿಗೆ ಮರುಳಾಗುವುದು.
- ಅನ್ಯ ಭಾಷಾ ಪ್ರೇಮಕ್ಕೆ ಬಲಿಯಾಗುವುದು.
- ಹಿರಿಯರು ಮತ್ತು ಕಿರಿಯರೊಳಗಿನ ಸಂಘರ್ಷ

ಈ ಮೇಲಿನ ಸಮಸ್ಯೆ ಮತ್ತು ಅವುಗಳಿಗೆ ಉತ್ತರವನ್ನು ಕಂಡುಕೊಳ್ಳಲು ಅಧ್ಯಾಪಕರು ಪಠ್ಯ ಭಾಗದಲ್ಲಿರುವ ಕವಿತೆಯನ್ನು ಅರ್ಥ ಸ್ಪಷ್ಟವಾಗುವಂತೆ ಓದುವುದು.

ವಿದ್ಯಾರ್ಥಿಗಳಿಂದ ಕವಿತೆಯನ್ನು ಓದಿಸುವುದು.

ಕವಿತೆಯಲ್ಲಿ ಬಂದಿರುವ ನವೀನ ಪದಗಳನ್ನು ಪಟ್ಟಿಮಾಡಲು ಹೇಳುವುದು. ವಿದ್ಯಾರ್ಥಿಗಳು ಅರ್ಥಕೋಶದ ಸಹಾಯದಿಂದ ಅರ್ಥವನ್ನು ತಿಳಿದುಕೊಳ್ಳಲಿ.

ಗುಂಪಿನಲ್ಲಿ ಚರ್ಚಿಸಿ ಮತ್ತು ಅಧ್ಯಾಪಕರ ಸಹಾಯದಿಂದ ವಿದ್ಯಾರ್ಥಿಗಳು ಕವಿತೆಯನ್ನು ಅರ್ಥೈಸಿಕೊಳ್ಳಲಿ.

ಮಕ್ಕಳಿಗೆ ಕವಿತೆಯು ಎಷ್ಟರ ಮಟ್ಟಿಗೆ ಅರ್ಥವಾಗಿದೆ ಎನ್ನುವುದನ್ನು ತಿಳಿಯಲು ಪ್ರತಿಯೊಬ್ಬರಲ್ಲಿಯೂ ಸಂಕ್ಷಿಪ್ತವಾಗಿ ಉತ್ತರಿಸಿರಿ ಎನ್ನುವ ಪ್ರಶ್ನೆಗಳಿಗೆ ಉತ್ತರವನ್ನು ಬರೆಸುವುದು. ಬರೆದ ಉತ್ತರವನ್ನು ತರಗತಿಯಲ್ಲಿ ಓದಿಸುವುದು. ಕವನದ ಆಶಯವನ್ನು ಗುಂಪಿನಲ್ಲಿ ಬರೆಸುವುದು. ತರಗತಿಯಲ್ಲಿ ಮಂಡಿಸಲು ಸೂಚಿಸುವುದು.

## ಚಟುವಟಿಕೆಗಳು

### ಆಶಯ ಬರೆಯುವುದು

ವಿದ್ಯಾರ್ಥಿಗಳು ಬರೆದ ಆಶಯವನ್ನು ತರಗತಿಯಲ್ಲಿ ಚರ್ಚಿಸಿ, ಅಧ್ಯಾಪಕರ ಮಾರ್ಗದರ್ಶನದೊಂದಿಗೆ ತರಗತಿಯಲ್ಲಿ ಮಂಡಿಸುವುದು.

ಅವಿಭಕ್ತ ಕುಟುಂಬದ ದೊಡ್ಡ ಮನೆ. ಆ ಮನೆಯಲ್ಲಿ ಎಪ್ಪತ್ತು ದಾಟಿದ ಮುದುಕ ಮುದುಕಿಯರು. ಗೋಡೆಯ ಮೇಲೆ ಮಗ–ಸೊಸೆಯ ಕೈ–ಕೈ ಹಿಡಿದು ನಗುವ ಭಾವ ಚಿತ್ರ. ಈ ಮಗ ಸೊಸೆ ದೂರದ ಅಮೇರಿಕದಲ್ಲಿ, ಈ ಮುದುಕ– ಮುದುಕಿ ಈ ಹಳೆಯ ದೊಡ್ಡ ಮನೆಯಲ್ಲಿ. ಈ ಮನೆಯಲ್ಲಿ ಹೊತ್ತು ಕಳೆಯಲು ಯಾವುದೇ ಭಾವ ಜೀವಿಗಳಿಲ್ಲ. ಟಿ.ವಿ., ಪೇಪರ್, ಪುಸ್ತಕ ಮಾತ್ರ. ಮನೆಯ ಅಂಗಳದಲ್ಲಿ ಒಂದಷ್ಟು ಸುತ್ತಾಟ ಮಾತ್ರ ಇವರ ವಿಶ್ವ.

ಟ್ರಿನ್ ಟ್ರಿನ್ ಎಂದು ತಿಂಗಳಿಗೋ, ಹದಿನೈದು ದಿನಕ್ಕೋ ಒಂದು ಸಲ ಬರುವ ಫೋನ್‌ಗಾಗಿ ಕಾಯುವ ಚಾತಕ ಪಕ್ಷಿಗಳು ಈ ಮುದುಕ ಮುದುಕಿಯರು. ದೂರವಾಣಿಯ ಮೂಲಕ ಮಗನಿಂದ ತಂದೆ ತಾಯಿಯ ಯೋಗಕ್ಷೇಮದ ವಿಚಾರಣೆ. ಹುದ್ದೆಯಲ್ಲಿ ಉನ್ನತಿಗೇರಿದ ವಿಷಯಗಳು. ಆದರೆ ಸೊಸೆಯ ಮಾತಿನಲ್ಲಿ ಒಂದು ರೀತಿಯ ಗತ್ತು. ಮೊಮ್ಮಗಳು "ಹಾಯ್ ತಾತಾ ಹೌ ಆರ್ ಯು"ಎನ್ನುವ ಮೂಲಕ ಅನ್ಯ ಭಾಷಾ ಪ್ರೇಮಕ್ಕೆ ಬಲಿಯಾಗಿರುವುದು ಇಲ್ಲಿ ವ್ಯಕ್ತವಾಗುವುದು.

ಮಕ್ಕಳ ಈ ವರ್ತನೆಯಿಂದ ಅಪ್ಪನೂ ಒಮ್ಮೊಮ್ಮೆ ಸಿಡಿಮಿಡಿಗೊಳ್ಳುವನು. ತಾನು ಹೊಟ್ಟೆ ಬಟ್ಟೆಯ ಕಟ್ಟಿ ಮಕ್ಕಳಿಗೆ ವಿದ್ಯಾಭ್ಯಾಸವನ್ನು ಕೊಟ್ಟದ್ದು ಯಾಕೆ? ಎಂದು ಅಪ್ಪನದು ನ್ಯಾಯಯುತವಾದ ಪ್ರಶ್ನೆ. ರೆಕ್ಕೆ ಪುಕ್ಕಗಳು ಬೆಳೆದ ನಂತರ ಗೂಡಿಂದ ದೂರವಾದ ಹಕ್ಕಿಗಳಂತೆ ಈ ಮಕ್ಕಳ ರೀತಿ. ಈ ನಾಡಿನಲ್ಲಿ ಶಿಕ್ಷಣವನ್ನು ಪಡೆದು ಈ ನಾಡಿನ ಋಣವನ್ನು ತೀರಿಸದೆ, ವಿದೇಶವನ್ನು ಉದ್ಧಾರ ಮಾಡುವುದು ಎಷ್ಟರ ಮಟ್ಟಿಗೆ ಸರಿ. ಹಣದ ಮೋಹದಿಂದ ತಮ್ಮನ್ನು ತಾವೇ ಮಾರಿಕೊಂಡಿದ್ದಾರೆ ಈ ಮಕ್ಕಳು ಎಂದು ಅಪ್ಪನ ಕೊರಗು. ಬಾಲ್ಯದ ನೆನಪುಗಳನ್ನು ಕತ್ತರಿಸಿ, ಸಂಬಂಧವನ್ನೇ ಕತ್ತರಿಸಿಕೊಂಡಂತೆ ಬೇರೆಲ್ಲೂ ಬದುಕುವುದನ್ನು ಕಲಿತ ಆ ಮಗನ ಬಗ್ಗೆ ಅಪ್ಪನ ನೋವಿನ ಮಾತುಗಳಿವು.

ಅಪ್ಪನ ರೋಷಕ್ಕೆ ಅಮ್ಮನ ಉತ್ತರವೇ ಬೇರೆ. ಈ ಮಕ್ಕಳಿಗೆ ಎಲ್ಲಿ ಸಂತೋಷವೋ ಅಲ್ಲೇ ಇರಲಿ. ನಾವು ಎಷ್ಟಾದರೂ ಹಳೆಯ ಕಾಲದವರು, ವಿನಾಯಕನಂತೆ ಎಂದು ಪೌರಾಣಿಕ ಕಥಾ ಪಾತ್ರಕ್ಕೆ ಹೋಲಿಸುತ್ತಾರೆ. ಹೊಸ ತಲೆಮಾರು ನವಿಲನ್ನೇರಿ ಪ್ರಪಂಚ ಸುತ್ತಿದ ಸುಬ್ರಹ್ಮಣ್ಯನಂತೆ ವಿಶ್ವ–ಸಂಚಾರ ಮಾಡಲಿ. ನಾವು ನಿಂತದ್ದೇ ನೆಲೆ, ಪಡೆದದ್ದೇ ಬೆಲೆ, ಆರಕ್ಕೆ ಏರಲೂ ಸಾಧ್ಯವಿಲ್ಲ, ಮೂರಕ್ಕೆ ಇಳಿಯಲೂ ಸಾಧ್ಯವಿಲ್ಲ ಎನ್ನುವಂತೆ ನಮ್ಮ ಸ್ಥಿತಿ. ಮಕ್ಕಳ ಭವಿಷ್ಯವನ್ನು ನಮ್ಮ ಭೂತಕಾಲದ ಜತೆಗೆ ಹೋಲಿಸುವುದು ಬೇಡ. ಅವರವರ ದಾರಿ ಅವರಿಗೆ ಎಂದು ಹೇಳುವಳು. ಈ ತಾಯಿ ಮಾತೃಹೃದಯದ ಹಾರೈಕೆ ನಮ್ಮ ಬದುಕನ್ನು ಹಸನುಗೊಳಿಸುವ ಮಾನವೀಯ ಸಂಬಂಧಗಳ ಮಹತ್ವ ಮತ್ತು ಪರಿಕಲ್ಪನೆಯನ್ನು ಜಾಗೃತಗೊಳಿಸುವುದು.

ಅವಿಭಕ್ತ ಕುಟುಂಬದಿಂದ ಅಣುಕುಟುಂಬದ ಕಡೆಗೆ ಸಾಗುತ್ತಿರುವ ವರ್ತಮಾನದ ಜೀವನ ಪದ್ಧತಿ ಸಂಬಂಧಗಳನ್ನು ಶಿಥಿಲಗೊಳಿಸುತ್ತದೆ". ಈ ವಿಷಯದ ಕುರಿತು ವಿದ್ಯಾರ್ಥಿಗಳಲ್ಲಿ ಗುಂಪಿನಲ್ಲಿ ಚರ್ಚಿಸಲು ಹೇಳುವುದು.

ಹೆಚ್ಚಿನ ಮಾಹಿತಿಗಾಗಿ ಈ ಕೆಳಗಿನ ಅಂಶಗಳನ್ನು ಅಧ್ಯಾಪಕರು ವಿದ್ಯಾರ್ಥಿಗಳಿಗೆ ಒದಗಿಸುವುದು. ಉತ್ತಮ ಲೇಖನವನ್ನು ಮಂಡಿಸಲು ಹೇಳುವುದು.

| **ಅವಿಭಕ್ತ ಕುಟುಂಬ** | **ವಿಭಕ್ತ ಕುಟುಂಬ** |
|---|---|
| 1) ಸಂಬಂಧಗಳ ಗಾಢವಾದ ಅರಿವು | ಕುಟುಂಬವೆಂದರೆ ಗಂಡ–ಹೆಂಡತಿ, ಮಕ್ಕಳು – ಈ ಕಲ್ಪನೆ ಮಾತ್ರ |
| 2) ಕಷ್ಟ ಸುಖಗಳನ್ನು ಹಂಚಿಕೊಳ್ಳುವುದು | ಕಷ್ಟ ಸುಖಗಳ ಹಂಚಿಕೆ ಇಲ್ಲ (ಕೆಟ್ಟ ಮಾರ್ಗಗಳ ಚಿಂತನೆ) |
| 3) ಒಬ್ಬನೇ ಯಜಮಾನ, ಅವನ ಮಾತೇ ಅಂತಿಮ | ಯಜಮಾನ ಇಲ್ಲ |
| 4) ಭಾವನಾತ್ಮಕವಾದ ಚಿಂತನೆಗೆ ಅವಕಾಶ | ಭಾವನಾತ್ಮಕವಾದ ಚಿಂತನೆಗೆ ಅವಕಾಶ ಕಡಿಮೆ |
| 5) ಒಟ್ಟಾಗಿ ಬೆರೆತು ಬದುಕುವ ಕಲೆ ಕರಗತ | ಪರಸ್ಪರ ಮುಖಾಮುಖಿ ಅಪರೂಪ. ಯಂತ್ರ–ತಂತ್ರಗಳೊಂದಿಗೆ ಬದುಕು. |
| 6) ಸಂಸ್ಕಾರ – ಸಂಸ್ಕೃತಿ ವಿಕಾಸ | ಸಂಸ್ಕಾರ – ಸಂಸ್ಕೃತಿಗೆ ಅವಕಾಶಗಳು ಕಡಿಮೆ |
| 7) ಉಪದೇಶ, ಚಿಂತನೆಗಳನ್ನು ಸ್ವೀಕರಿಸುವ ಮನೋಭಾವವಿರುವುದು | ಈ ಮನೋಭಾವಿಲ್ಲ |

## ಚರ್ಚಾಗೋಷ್ಠಿ

ವೃದ್ಧರು ಅನುಭವಿಸುವ ಕಷ್ಟಗಳು, ಪ್ರತಿಭಾ ಪಲಾಯನ ಯುವಜನಾಂಗವು ಮಾತೃ ಭಾಷೆ ಮತ್ತು ಸಂಸ್ಕೃತಿಗಳನ್ನು ಮರೆತು ಅನ್ಯಭಾಷಾ ಸಂಸ್ಕೃತಿಗಳಿಗೆ ಮರಳಾಗಿರುವ ಸನ್ನಿವೇಶ ಈ ವಿಷಯಗಳನ್ನು ಕೇಂದ್ರೀಕರಿಸಿ ಚರ್ಚಾಗೋಷ್ಠಿಯನ್ನು ನಡೆಸಲು ಅಧ್ಯಾಪಕರು ವಿದ್ಯಾರ್ಥಿಗಳಲ್ಲಿ ಹೇಳುವುದು.

ವಿದ್ಯಾರ್ಥಿಗಳನ್ನು ನಾಲ್ಕು ಗುಂಪುಗಳಾಗಿ ವಿಭಾಗಿಸುವುದು. ಒಂದೊಂದು ಗುಂಪಿಗೂ ಒಂದೊಂದು ವಿಷಯವನ್ನು ಹಂಚುವುದು. ಈ ವಿಷಯದ ಪರ ಮತ್ತು ವಿರುದ್ಧ ಅಂಶಗಳ ಕಡೆಗೆ ವಿದ್ಯಾರ್ಥಿಗಳು ಗಮನ ಹರಿಸುವಂತೆ ಮಾಡುವುದು. ವಾರ್ತಾಪತ್ರಿಕೆಗಳು, ಪುಸ್ತಕಗಳು, ಮಾಧ್ಯಮಗಳಲ್ಲಿ ಈ ವಿಷಯದ ಕುರಿತು ಬಂದಿರುವ ಅಂಶಗಳನ್ನು ಸಂಗ್ರಹಿಸಲು ಹೇಳುವುದು. ತರಗತಿಯಲ್ಲಿ ಆರೋಗ್ಯಪೂರ್ಣ ಚರ್ಚೆಯಾಗುವಂತೆ ಅಧ್ಯಾಪಕರು ನೋಡಿಕೊಳ್ಳುವುದು. ಚರ್ಚಿತ ಅಂಶಗಳನ್ನು ಸಂಗ್ರಹಿಸಿ ವರದಿಯನ್ನು ತಯಾರಿಸುವುದು. ವರದಿಯ ಸ್ವರೂಪದ ಬಗ್ಗೆ ಅಧ್ಯಾಪಕರು ವಿದ್ಯಾರ್ಥಿಗಳಿಗೆ ಸೂಚನೆಗಳನ್ನು ಕೊಡುವುದು.

## ಹೋಲಿಸಿ ಬರೆಯುವುದು

ಪಠ್ಯ ಪುಸ್ತಕದ "ಅವರವರದಾರಿ"ಕವಿತೆಯೊಂದಿಗೆ ಶ್ರೀಮತಿ ಲಲಿತಾ ಸಿದ್ಧಬಸಯ್ಯನವರು ಬರೆದು 'ಒಂದು ಹೂ ಹೆಚ್ಚಿಗೆ ಇಡುತಿನಿ' ಎನ್ನುವ ಕವಿತೆಯ ಭಾಗವನ್ನು ಹೋಲಿಸಿ ಬರೆಯಲು ಹೇಳುವುದು. ಪ್ರತಿಯೊಬ್ಬ ವಿದ್ಯಾರ್ಥಿಯು ಹೋಲಿಕೆ,

ಪರಸ್ಪರ ಸಾಮ್ಯವನ್ನು ಬರೆಯಲಿ. ಪಾಠಭಾಗದ ಕೊಟ್ಟ ಲಲಿತಾ ಸಿದಬಸವಯ್ಯನವರ ಕವಿತೆ ಮುಂದುವರಿದ ಭಾಗವನ್ನು ಇಲ್ಲಿ ಕೊಡಲಾಗಿದೆ. ಅದನ್ನು ವಿದ್ಯಾರ್ಥಿಗಳಿಗೆ ಒದಗಿಸುವುದು.

ಕಿರಿಮಗ ಮತ್ತವು ಹೆಂಡತಿ
ಒಂಭತ್ತಕೆ ಗುಡ್ಡದ ಕ್ವಾರ್ಟರ್ಸು ಬಿಟ್ಟರೆ
ಮತ್ತೆ ಮನೆ ಸೇರುವುದು ಹೊತ್ತು ತಿರುಗಿದ ಮೇಲೆ
ಮಾತೇ ಮರೆತು ಹೋಗಿದೆ ಕಣೆ ಎನ್ನುತ್ತಾನೆ ಫೋನು ಮಾಡಿ
ದಾಗಲೆಲ್ಲ; ಮಾತಾಡು ಮಾತಾಡು ಆಡು ಮಾತಾಡುತ್ತಿರು
ನಿಲ್ಲಿಸಬೇಡ ಗೋಗರೆಯುತ್ತಾನೆ; ಫೋನು ಗೂಡನ್ನೇ ತಬ್ಬಿ
ಹಿಡಿದಿದ್ದಾನೆನ್ನುವುದು ಇಲ್ಲಿಂದಲೇ ಗೊತ್ತಾಗುತ್ತದೆ ಮುದುಕಿಗೆ
ಮೆಲ್ಲಗೆ ಅಳುತ್ತಾಳೆ ಸುಯ್ಲು ಸೋರದ ಹಾಗೆ ನುಂಗುತ್ತಾಳೆ
ಒಳಗೊಳಗೆ ದಿಗಿಲು ಅವಳಿಗೆ, ಅತ್ತ ಮುದುಕನಿಗೆ ಗೊತ್ತಾದರೆ
ಪಾಪ ಕೊರಗುತ್ತಾನೆ ಇತ್ತ ಮಗನಿಗೆ ಕೇಳಿಸಿದರೆ ಗದರುತ್ತಾನೆ
'ಸುಮ್ಮನಿರಮ್ಮ ಈಗ ಅಳುವಂಥಾದ್ದೇನಾಗಿದೆಯಮ್ಮ ನಿನಗೆ?'

ಇನ್ನು ತಡೆಯಲಾಗದು ಸೋಪಾನಕದ್ದಿರುವ ಗಾಜುಬಿಲ್ಲೆ
ಜಾರಿಸದ ಹಾಗೆ ಮೊಣಕಾಲಚಿಪ್ಪ ಮೇಲೆ ಭಾರ ಹೇರುತ್ತ
ಹೇರಿದ ಭಾರಕ್ಕೆ ಅದುರುವ ಮಂಡಿಗಳ ಅಂಗೈಯಲ್ಲಿ
ಅದುಮುತ್ತ ಒಂದೊಂದೇ ಮೆಟ್ಟಿಲುಹತ್ತಿ ಕಾಡಿ ಕರೆಯುತ್ತಾಳೆ
ಮೊಮ್ಮಗಳನ್ನು; ಜಾಣೆ ಮೊಮ್ಮಗಳು ಮೂಜಗವನ್ನೆ
ಆವಾಹಿಸಿ ಕುಂತಿದ್ದಾಳೆ ಸ್ವಂತ ಕಂಪ್ಯೂಟರಿನ ಮೇಲೆ;
ರಸಾತಳಗಳೆದ್ದೆದ್ದು ಕುಣಿಯುತಿವೆ ಪರದೆ ಮೇಲೆ, ನಡುವೆ
ಈ ಅಜ್ಜಿ ಇಡಬಹುದೆ ಕಡುಬಿನ ಸೋರೆ

ಚಿಟುಗುಟುತ್ತಲೇ ಅಟ್ಟವಿಳಿದು ಬಂದ ಹುಡುಗಿ ಧಡ್ಡನೆ
ಫೋನೆತ್ತಿ ಕುಕ್ಕಿ "ರಾಂಗ್ ನಂಬರ್" ಕ್ಷಣಾರ್ಧದಲ್ಲಿ ಅಂತರ್ಧಾನ
ಮುದುಕಿಗೆ ಅನುಮಾನ, ಈ ಹುಡುಗಿ ಸರಿಯಾಗಿ ಕೇಳಿಸಿ
ಕೊಂಡಳೋ ಗಡಿಬಿಡಿಯಲ್ಲಿ ಬಿಡುಗಡೆಗೆ ಹಾತೊರೆದು
ರೈಟನ್ನೆ ರಾಂಗೆಂದಳೋ, ಬಚ್ಚಲಿಗೆ ಹೋಗಿ ನೋಡಿ ಮೆತ್ತಗೆ ಫೋನಿನ

ಬಳಿಗೇ ಬರುತ್ತಾಳೆ; ಅಗೋ ಅದು ಮತ್ತೆ ಝಣಝಣತ್ಕರಿಸಿ
ಅವಳ ಜೀವ ಬಾಯಿಗೆ ಬಂದು ತಡವರಿಸಿ ಎರಡೂ ಕೈಯಲ್ಲಿ
ರಿಸೀವರೆತ್ತಿ "ಹಲೋ ನಾನೇ ಕಣ್ರೀ ಮಾತಾಡ್ರಿ ಮಾತಾಡ್ರಿ"
ಮಾಗನ ಕಾರು ಸ್ಟಾರ್ಟಾಯಿತು, ಹಿಂದೆಯೇ ಮೊಮ್ಮಗಳ ಸ್ಕೂಟಿ
ಮೊಮ್ಮಗನ ವ್ಯಾನು ಬಂದಾಯಿತು; ಸೊಸೆಯೊಬ್ಬಳಿಗೆ ಈ ಹೊತ್ತು
ದೇವರೇ ಹೊರಗಿನ ಕೆಲಸ ಸಮ್ಮಿಲಿಸಲಿ, ಅಷ್ಟು ಮಾಡಪ್ಪ ನನ್ನಪ್ಪ
ಗುಟ್ಟೆಮಲ್ಲಪ್ಪ ಒಂದು ಹೂ ಹೆಚ್ಚಿಗೆ ಇಡುತೀನಿ ನಿನ್ನ ಗಟ್ಟಿ ಪಾದಕ್ಕೆ;
ಇವರೆಲ್ಲ ಹೊರಟರೆ ಆಚೆಗೆ ಒಂದಿಷ್ಟು ಹೊತ್ತು ನಿರಾಳ ಮಾತಾಡು
ತ್ತೇನೆ ನನ್ನ ಮುದುಕನ ಕೂಡ
ಒಳಗೊಳಗೆ ಪ್ರಾರ್ಥಿಸುತ್ತಿದೆ ಮುದುಕಿ
ಈಗಾಗಲೇ ಬಂದು ಬಿದ್ದಿರುವ ಅಗಣಿತ ಮೊರೆಗಳ ಒಟ್ಟಲಿಗೆ ಈಗ
ಇನ್ನೊಂದು ಸೇರ್ಪಡೆ ಆ ಲೀಲಾಮಾತ್ರನಿಗೆ

ಬರೆದ ಹೋಲಿಕೆ, ಸಾಮ್ಯವನ್ನು ತರಗತಿಯ ಒಂದಿಬ್ಬರು ವಿದ್ಯಾರ್ಥಿಗಳಲ್ಲಿ ಮಂಡಿಸಲು ಹೇಳುವುದು. ಮಕ್ಕಳು ಮಂಡಿಸಿದ ವಿಷಯವನ್ನು ಕ್ರೋಢೀಕರಿಸಿ ಅಧ್ಯಾಪಕರು ಕೊಟ್ಟ ಸಲಹೆ ಸೂಚನೆಗಳಂತೆ ಮಕ್ಕಳುಇನ್ನಷ್ಟು ಉತ್ತಮಗೊಳಿಸಿ ಬರೆಯಲಿ.

ಈ ಕೆಳಗಿನ ವಿಚಾರಗಳನ್ನು ಗಮನಿಸಲಿ.

- ಮಗ–ಸೊಸೆಯ – ಕಾರಣದಿಂದ ಫೋನು ಎತ್ತಿಕೊಳ್ಳಲು ಹೆದರುವ ಮುದುಕಿ
- ಫೋನ್‌ನ ಹತ್ತಿರ ಬಂದು ಆಚೆ ಈಚೆ ಗಮನಿಸುವ ಮುದುಕಿಗೆ ತನ್ನ ಗಂಡನ ಕರೆಯನ್ನು ಸ್ವೀಕರಿಸುವ ಸ್ವಾತಂತ್ರ್ಯ ಇಲ್ಲದಿರುವಿಕೆ
- ಹಿರಿಯ ಮಗನೊಡನೆ ತಾಯಿ.
- ದೂರದ ಅಸ್ಸಾಮಿನಲ್ಲಿ ಚಿಕ್ಕ ಮಗನೊಡನೆ ತಂದೆ.
- ಮಗ ಸೊಸೆಗೆ ಕಾಣದಂತೆ ಪರಸ್ಪರ ಫೋನ್‌ನಲ್ಲಿ ಮಾತನಾಡಬೇಕೆಂಬ ಬಯಕೆ ಮುದುಕ–ಮುದುಕಿಗೆ
- ದೂರದ ಅಮೇರಿಕದಲ್ಲಿ ಮಗ ಸೊಸೆ
- ಮುದುಕ–ಮುದುಕಿಯರು ಊರಿನಲ್ಲಿ
- ತಿಂಗಳಿಗೊಮ್ಮೆ ಬರುವ ದೂರವಾಣಿ–ಕಷ್ಟ–ಸುಖಗಳ ವಿನಿಮಯ
- ಅನ್ಯ ಸಂಸ್ಕೃತಿಯ ಮೋಹ
- ಅಪ್ಪನ ಕೋಪ
- ಅಮ್ಮನ ಹಾರೈಕೆ

- ❑ ಪದ್ಯಭಾಗದಲ್ಲಿ ಬಂದಿರುವ ಅನ್ಯದೇಶೀಯ ಪದಗಳನ್ನು ಪ್ರತಿಯೊಬ್ಬ ವಿದ್ಯಾರ್ಥಿಯಲ್ಲಿಯೂ ಬರೆಯಲು ಹೇಳುವುದು. ಆ ಪದಗಳ ಸಮಾನ ಪದಗಳನ್ನು ಬರೆದು ಓದಲು ಹೇಳುವುದು.

| **ಅನ್ಯದೇಶೀಯ** | **ಕನ್ನಡ ರೂಪ** |
|---|---|
| ಟಿ.ವಿ. | ದೂರದರ್ಶನ |
| ಪೇಪರ್ | ವಾರ್ತಾಪತ್ರಿಕೆ |
| ಫೋನು | ದೂರವಾಣಿ |

- ❑ ನುಡಿಗಟ್ಟುಗಳೆಂದರೆ ಶಾಬ್ದಿಕ ಘಟಕಗಳಿಂದ ಹೊರಡುವ ಅರ್ಥಕ್ಕಿಂತ ಬೇರೆಯಾದ ಅರ್ಥವುಳ್ಳ ಹಾಗೂ ಜನರೂಢಿಯಲ್ಲಿರುವ ವಿಶೇಷಾರ್ಥವುಳ್ಳ ಪದ ರಚನೆಯಾಗಿದೆ. ಕವಿತೆಯಲ್ಲಿ ಬಂದಿರುವ ನುಡಿಗಟ್ಟುಗಳನ್ನು ವಿದ್ಯಾರ್ಥಿಗಳು ಗುರುತಿಸಿ ಬರೆಯಲಿ.

ಇಂತಹ ಬೇರೆ ನುಡಿಗಟ್ಟುಗಳನ್ನು ಅಧ್ಯಾಪಕರ ಸಹಾಯದಿಂದ ಸಂಗ್ರಹಿಸಲಿ. ಅರ್ಥವನ್ನು ಕಂಡುಕೊಂಡು ಅವುಗಳನ್ನು ಬಳಸಿ ಸ್ವಂತವಾಕ್ಯಗಳನ್ನು ರಚಿಸಲಿ.

- ‘ಗಾಯದ ಮೇಲೆ ಬರೆ ಎಳೆ
- ನುಂಗಿ ನೀರು ಕುಡಿ’
- ಕಣ್ಣಿಗೆ ಮಣ್ಣು ಹಾಕು

**ಮಾದರಿ :**

**ಗಾಯದ ಮೇಲೆ ಬರೆ ಎಳೆ :** ಕಷ್ಟದಲ್ಲಿರುವವರಿಗೆ ಸಹಾಯ ಮಾಡುವುದನ್ನು ಬಿಟ್ಟು ಗಾಯದ ಮೇಲೆ ಬರೆ ಎಳೆದಂತೆ ಅವರಿಗೆ ಮೋಸ ಮಾಡಬಾರದು.

# ನೆರೆ

(ಮೂಲ) ತಗಳಿ ಶಿವಶಂಕರ ಪಿಳ್ಳೈ

(ಸೂಚನೆ : ಮಲೆಯಾಳದ ಸಾಹಿತಿ ತಗಳಿ ಶಿವಶಂಕರ ಪಿಳ್ಳೆಯವರ 'ಪ್ರವಾಹಂ' ಎಂಬ ಸಣ್ಣ ಕತೆಯನ್ನು ಕೆ.ಕೆ ಗಂಗಾಧರನ್ ಅವರು ಕನ್ನಡಕ್ಕೆ 'ನೆರೆ' ಎಂಬ ಹೆಸರಿನಲ್ಲಿ ಅನುವಾದಿಸಿದ್ದಾರೆ)

## ಪ್ರಸ್ತಾವನೆ

ಕನ್ನಡ ಸಾಹಿತ್ಯಕ್ಕೆ ಶ್ರೀಮಂತ ಪರಂಪರೆ ಇದೆ. ಒಂದು ಸಾಹಿತ್ಯ ಬೆಳೆಯಬೇಕಾದರೆ ಬೇರೆ ಬೇರೆ ಭಾಷೆಗಳ ಸಾಹಚರ್ಯ, ಸಂಪರ್ಕ ಅತಿ ಅಗತ್ಯ. ಆರಂಭದಲ್ಲಿ ಸಂಸ್ಕೃತ ಭಾಷೆಯ ಸಾಹಿತ್ಯ ಕೃತಿಗಳ ಪ್ರಭಾವ ಕನ್ನಡದ ಮೇಲೆ ಸಾಕಷ್ಟು ಆಗಿತ್ತು. ಹೊಸಗನ್ನಡದ ಕಾಲಘಟ್ಟದಲ್ಲಿ ಬೇರೆ ಬೇರೆ ಭಾಷೆಗಳ ಅನುವಾದ ಕೃತಿಗಳೂ ಸಾಕಷ್ಟು ಕಾಣಿಸಿಕೊಂಡುವು ಬಿ. ಯಂ. ಶ್ರೀಯವರ 'ಇಂಗ್ಲೀಷ್ ಗೀತೆಗಳು' 1921 ರಲ್ಲಿ ಅನುವಾದಿತ ಕೃತಿಯಾಗಿ ಕನ್ನಡದಲ್ಲಿ ಬಂತು ತದನಂತರ ಮಳಿಯಾಳ ಉರ್ದು ಮುಂತಾದ ಭಾಷೆಗಳ ಕವನಗಳು ಕನ್ನಡದಲ್ಲಿ ಬಂದಿವೆ. ಅನ್ಯಭಾಷಾ ಸಾಹಿತ್ಯ ಕೃತಿಗಳ ಅನುವಾದದಿಂದ ಆಯಾ ಭಾಷೆಗಳ ಸಾಹಿತ್ಯ ಹಾಗೂ ಸಂಸ್ಕೃತಿಗಳಿಗೆ ವಿಶೇಷ ಪುಷ್ಟಿ ದೊರೆಯುತ್ತದೆ.

## ಪಾಠ ಪ್ರವೇಶ

ಕೆಲವೊಂದು ಪ್ರಾಣಿಗಳಲ್ಲಿ ಕರುಣೆ, ಸಹನೆ, ಸ್ವಾಮಿನಿಷ್ಠೆ ಮುಂತಾದ ಗುಣಗಳು ಮನುಷ್ಯನಿಗಿಂತ ಅಧಿಕ ಎನ್ನಬಹುದು. ಈ ಹೇಳಿಕೆಯನ್ನು ಅಧ್ಯಾಪಕರು ಹೇಳಿ ಬಳಿಕ ವಿದ್ಯಾರ್ಥಿಗಳನ್ನು ಉದ್ದೇಶಿಸಿ ಕೆಲವೊಂದು ಪ್ರಶ್ನೆಗಳನ್ನು ಕೇಳಬಹುದು. ಸ್ವಾಮಿನಿಷ್ಠೆ, ಕರುಣೆ, ಸಹನೆ, ಸೂಕ್ಷ್ಮತೆ.... ಮೊದಲಾದ ಗುಣಗಳಿಗೆ ಹೆಸರು ಪಡೆದಿರುವ ಪ್ರಾಣಿ ವರ್ಗಗಳು ಯಾವುವು? – ಎಂಬ ಪ್ರಶ್ನೆಯನ್ನು ವಿದ್ಯಾರ್ಥಿಗಳ ಮುಂದಿರಿಸುವುದು. ವಿದ್ಯಾರ್ಥಿಗಳು ಸರಿಯಾಗಿ ಉತ್ತರಿಸದಿದ್ದಲ್ಲಿ ಸ್ವಾಮಿ ನಿಷ್ಠೆಗೆ ನಾಯಿ ಹೆಸರುವಾಸಿಯಾದರೆ, ಬೆಕ್ಕು ಸೂಕ್ಷ್ಮತೆಗೆ ಬೊಟ್ಟುಮಾಡಿ ಹೇಳುವಂತಿದೆ. ಕೆಲವು ಪ್ರಾಣಿ–ಪಕ್ಷಿಗಳಲ್ಲಿ ಒಗ್ಗಟ್ಟಿದೆ ಆಹಾರ ದೊರೆತಾಗ ಅವುಗಳು ತಮ್ಮ ಬಳಗವನ್ನು ಕೂಗಿ ಕರೆಯುತ್ತವೆ–ಎಂಬುವುದನ್ನು ನಾವು ಕಾಗೆ–ಕೋಳಿಗಳನ್ನು ನೋಡಿ ತಿಳಿಯಬಹುದು.

ಕಾಗೆಯಗುಳನು ಕಂಡು ಕೂಗುವುದು ಬಳಗವನು
ಕಾಗೆ ಕೋಳಿಗಳ ತೆರೆದುಣ್ಣದವನಿರವು
ಕಾಗೆಗೂ ಕಷ್ಟ । ಸರ್ವಜ್ಞ ।।

ಈ ವಚನದಲ್ಲಿ ಸರ್ವಜ್ಞನು ಕಾಗೆ–ಕೋಳಿಗಿಂತಲೂ ಮಾನವ ಜೀವನ ನಿಕೃಷ್ಟ ಎನ್ನುವುದನ್ನು ಸಾರಿ ಹೇಳಿದ್ದಾನೆ ಎಂಬ ನಿದರ್ಶನಗಳನ್ನು ವಿದ್ಯಾರ್ಥಿಗಳಿಗೆ ತಿಳಿಸುವುದು. ಸಾಕುಪ್ರಾಣಿಯಾದ ನಾಯಿಯು ಅಸಾಯಕ ಸ್ಥಿತಿಯನ್ನು, ಸ್ವಾಮಿ ನಿಷ್ಠೆಯನ್ನು ಮಾನವೀಯ ಅಂತಃಕರಣದಿಂದ ನಿರೂಪಿಸಿರುವ 'ನೆರೆ' ಎಂಬ ಸಣ್ಣ ಕತೆಯನ್ನು ಅಭ್ಯಸಿಸಲಿದ್ದೀರಿ ಎಂದು ಹೇಳುವ ಮೂಲಕ ಪಾಠ ಪ್ರವೇಶ ಮಾಡುವುದು. ಹಿಂದಿನ ತರಗತಿಗಳಲ್ಲಿ ವಿದ್ಯಾರ್ಥಿಗಳು ಸಣ್ಣಕತೆಯನ್ನು ಸಾಕಷ್ಟು ಓದಿರುವರು. ಪೂರ್ವ ಜ್ಞಾನವನ್ನು ಪರೀಕ್ಷಿಸುವುದಕ್ಕಾಗಿ ವಿದ್ಯಾರ್ಥಿಗಳಲ್ಲಿ ಸಣ್ಣಕತೆಗಳ ಸ್ವರೂಪದ ಕುರಿತು ಕೆಲವು ಪ್ರಶ್ನೆಗಳನ್ನು ಕೇಳುವುದು. ತಿಳಿದವರು ಹೇಳಲಿ. ಬಳಿಕ ಅಧ್ಯಾಪಕರು ತಿಳಿಸುವುದು.

- ಸಂಕ್ಷಿಪ್ತತೆ ಸಣ್ಣಕತೆಯ ಜೀವಾಳ
- ವಾಸ್ತವತೆ ಅದರ ಪರಮಗುರಿ

- ಪಾತ್ರಗಳು ಕಡಿಮೆಯಿರಬೇಕು.
- ಕಾಲೈಕ್ಯ, ಕ್ರಿಯೈಕ್ಯ, ಪರಿಣಾಮೈಕ್ಯಗಳನ್ನು ಒಳಗೊಂಡಿರಬೇಕು(ಐಕ್ಯತ್ರಯ)
- ಕತೆಯ ತಂತ್ರ ಕೊನೆಯವರೆಗೂ ಒಂದೇ ಆಗಿರಬೇಕು. ಕತೆಯಲ್ಲಿ ಉಪಕತೆ, ಪ್ರಸಂಗದಲ್ಲಿ ಉಪಪ್ರಸಂಗಗಳನ್ನು ಬೆರೆಸಿ, ಓದುಗನನ್ನು ಗೊಂದಲದಲ್ಲಿ ಮುಳುಗಿಸಬಾರದು.
- ಪಾತ್ರಗಳ ಸಂಬಂಧ ನೇರವಾಗಿದ್ದರೆ ಹೆಚ್ಚು ಅರ್ಥವತ್ತಾಗಿರುತ್ತದೆ.
- ಕತೆಯು ಕಲಾತ್ಮಕತೆಯನ್ನು ಮೈಗೂಡಿಸಿಕೊಂಡಿರಬೇಕು.
- ಕತೆಯ ಉದ್ದಕ್ಕೂ ಒಂದೇ ಭಾಷೆ ಬಳಕೆಗೊಂಡಿರಬೇಕು

ಈ ವಿಚಾರಗಳನ್ನು ವಿದ್ಯಾರ್ಥಿಗಳಿಗೆ ತಿಳಿಸಿದ ಬಳಿಕ 'ನೆರೆ' ಕತೆಯ ಮೂಲ ಕರ್ತೃ ತಗಳಿ ಶಿವಶಂಕರ ಪಿಳ್ಳೆ ಮತ್ತು ಕನ್ನಡ ಅನುವಾದಕರಾದ ಕೆ.ಕೆ ಗಂಗಾಧರನ್ ರವರ ಕುರಿತು ಪತ್ಯದಲ್ಲಿ ನೀಡಲಾದ ಪರಿಚಯ ಟಿಪ್ಪಣಿಯನ್ನು ಓದಲಿ. ತದನಂತರ ಕೆಲವೊಂದು ವಿದ್ಯಾರ್ಥಿಗಳಿಂದ ಪಾಠ ಭಾಗವನ್ನು ಬಾಯ್ದೆರೆಯಾಗಿ ಓದಿಸುವುದು. ಆಯ್ದು ವಿದ್ಯಾರ್ಥಿಗಳಿಂದ ಕಥಾಭಾಗಗಳಲ್ಲಿನ ಮುಖ್ಯಆಶಯಗಳನ್ನು ಹೇಳಿಸುವುದು. ವಿದ್ಯಾರ್ಥಿಗಳು ಎಡವಿದಲ್ಲಿ ಅಧ್ಯಾಪಕರು ಸರಿಪಡಿಸಿ ಹೇಳುವುದು.

- ಮನೆಯ ಯಜಮಾನನಿಗೆ ತನ್ನ ಜೀವನವನ್ನು ಮುಡಿಪಾಗಿಟ್ಟ ಸ್ವಾಮಿನಿಷ್ಟ ನಾಯಿ
- ನೆರೆಯಿಂದ ಆವೃತವಾದಾಗ ನಾಯಿಯನ್ನು ಅನಿರೀಕ್ಷಿತವಾಗಿ ಉಪೇಕ್ಷಿಸಿದ ಯಜಮಾನ.
- ಸಾಕುಪ್ರಾಣಿಯಾದ ನಾಯಿಯ ಅಸಹಾಯಕ ಸ್ಥಿತಿ.
- ಅದನ್ನು ಕಂಡ ಇತರ ಮಾನವರೂ ಅದನ್ನು ರಕ್ಷಿಸುವ ಮನೋಭಾವ ತಾಳದಿರುವುದು.
- ಹೊಟ್ಟೆಗೆ ಆಹಾರವಿಲ್ಲದೆ ಬಳಲಿದ ನಾಯಿಯ ದಯನೀಯ ಸ್ಥಿತಿ.
- ಮಾನವನ ಸ್ವಾರ್ಥ, ಕೃತಘ್ನತಾ ಮನೋಭಾವ......

ಇತ್ಯಾದಿ ವಿಚಾರಗಳು ಓದುಗನ ಅಂತಃಕರಣ ಮಿಡಿಯುವಂತಿದೆ ಎಂದು ಹೇಳುತ್ತಾ, ವಿದ್ಯಾರ್ಥಿಗಳ ಗಮನವನ್ನು ಪಾಠದ ಕಡೆಗೆ ಸೆಳೆಯುವುದು. ವಿದ್ಯಾರ್ಥಿಗಳನ್ನು(ನಾಲ್ಕು–ಐದು) ಗುಂಪುಗಳನ್ನಾಗಿ ಮಾಡಿ, ಕತೆಯ ಪ್ರಮುಖ ಆಶಯವು ಉತ್ತರವಾಗಿ ಬರುವಂತೆ 4–5 ಪ್ರಶ್ನೆಗಳನ್ನು ಬರೆಯಲು ಸೂಚಿಸುವುದು. ವಿದ್ಯಾರ್ಥಿಗಳು ಬರೆದ ಪ್ರಶ್ನೆಗಳನ್ನು ಗುಂಪಿಗೆ ಒಬ್ಬರಂತೆ ಓದಿಸುವುದು. ತಪ್ಪಿದ್ದರೆ ತಿದ್ದಿ ಸರಿಪಡಿಸುವುದು. ಕತೆಯ ಕೊನೆಗೆ ನೀಡಲಾದ ಆಶಯಗ್ರಹಣ ಪ್ರಶ್ನೆಯನ್ನು ವಿದ್ಯಾರ್ಥಿಗಳಲ್ಲಿ ಕೇಳಿ, ಉತ್ತರ ಹೇಳಿಸುವುದು. ಬಳಿಕ ಕಲಿಕಾ ಪುಸ್ತಕದಲ್ಲಿ ಬರೆಯಲು ಸೂಚಿಸುವುದು.

## ಆಶಯಗ್ರಹಣ ಪ್ರಶ್ನೆ (ಮಾದರಿ)

- ಪ್ರಾಣ ಕಳೆದುಹೋಗುವ ಭೀತಿಯ ನಡುವೆಯೂ ನಾಯಿಯು ತೋರಿದ ಸ್ವಾಮಿನಿಷ್ಠೆ

ಭೀಕರ ಬಿರುಗಾಳಿಯೊಂದಿಗೆ ಮಳೆಯೂ ಅಧಿಕವಾಗಿ ಸುರಿಯುತ್ತಿತ್ತು. ಅಲೆಗಳ ಹೊಡೆತದಿಂದ ಗುಡಿಸಲ ಸೂರೂ ಅಲುಗಾಡಿ ನೀರುಪಾಲಾಗುವುದರಲ್ಲಿತ್ತು. ಆಗ ಸಂದರ್ಭೋಚಿತವೆಂಬಂತೆ ಒಂದು ದೋಣಿ ತುಂಬಾ ಬಾಳೆ ಗೊನೆ,ತೆಂಗಿನಕಾಯಿಗಳನ್ನು ತುಂಬಿಕೊಂಡು ಕೆಲವೊಂದು ಜನರು ಇತ್ತ ಕಡೆ ಬರುತ್ತಿರುವುದನ್ನು ನಾಯಿಯು ನೋಡಿತು.ದೋಣಿಯಲ್ಲಿದ್ದ ಜನರತ್ತ ತಿರುಗಿ ನಾಯಿ ಕೋಪದಿಂದ ಬಾಲವೆತ್ತಿ ಬೊಗಳತೊಡಗಿತು. ಅವರಲ್ಲಿ ಒಬ್ಬಾತ ಬಾಳೆಗಿಡವನ್ನೇರಿದುದನ್ನು ಕಂಡ ನಾಯಿಯು ಇದಕ್ಕಿದಂತೆ ಮುಂದಕ್ಕೆ ನೆಗೆಯಿತು. ಬಾಳೆಗಿಡವೇರಿದವನು ನೀರಿಗೆ ಉರುಳಿ ಬಿದ್ದ. ನಾಯಿ ಕೋಪದಿಂದ ಬೊಗಳುತ್ತಿದ್ದರೂ ಕಳ್ಳರು ಅದನ್ನು ಲೆಕ್ಕಿಸದೆ ಬಾಳೆಗೊನೆಗಳನ್ನೆಲ್ಲಾ ಕಡಿದರು. ಚೇನ್ನನ ಒಣಹುಲ್ಲನ್ನು

ಬಾಳೆಗೊನೆಗಳೊಂದಿಗೆ ತುಂಬಿದರು. ತಕ್ಷಣ ನಾಯಿ ಅವನ ಬಲಗಾಲನ್ನು ಕಚ್ಚಿತು. ಬಾಯಿ ತುಂಬಾ ಮಾಂಸವನ್ನು ಕಚ್ಚಿ ಎಳೆಯಿತು. ಇದನ್ನು ಕಂಡ ದೋಣಿಯಲ್ಲಿದ್ದ ಮತ್ತೊಬ್ಬ ಹುಟ್ಟನ್ನು ಬೀಸಿ ನಾಯಿಯತ್ತ ಒಗೆದ. ಅದು ನಾಯಿಯ ಹೊಟ್ಟೆಗೆ ಬಿತ್ತು. ವೇದನೆಯಿಂದ ಅದು ನರಲತೊಡಗಿತು.ಗಡಿಬಿಡಿಯಲ್ಲಿ ನಾಯಿಯ ಇರವು ಮರೆತು ಹೋಯಿತು. ಯಜಮಾನನು ಅವಸರದ ತೀರ್ಮಾನದಿಂದ ನಾಯಿಯನ್ನು ನೆರೆಯಿಂದ ಆವೃತವಾದ ಸೂರಿನಲ್ಲಿ ಉಪೇಕ್ಷಿಸಿದರೂ ಆ ಸ್ವಾಮಿನಿಷ್ಠ ನಾಯಿಯು ಯಜಮಾನನನ್ನು ಮರೆಯಲಿಲ್ಲ. ಕಳ್ಳರು ದೋಚಿಕೊಂಡು ಹೋಗುವ ಯಜಮಾನನ ಸೊತ್ತನ್ನು 'ತಿಂದ ಅನ್ನದ ಋಣ'ವೆಂಬಂತೆ ರಕ್ಷಿಸುವ ನಾಯಿಯ ಕೃತಜ್ಞತಾ ಮನೋಭಾವವನ್ನು ಇಲ್ಲಿ ಗಮನಿಸಿಕೊಳ್ಳಬಹುದು.

## ಚಟುವಟಿಕೆ

ಚಟುವಟಿಕೆಯಲ್ಲಿ ನೀಡಿರುವ ಮೊದಲ ಎರಡು ಪ್ರಶ್ನೆಗಳನ್ನು ಗುಂಪಿನಲ್ಲಿ ಚರ್ಚಿಸಿ ಬರೆಯಲಿ. ಬರೆದುದನ್ನು ಗುಂಪಿನಿಂದ ಒಬ್ಬರು ಓದಲಿ.ಲೋಪ–ದೋಷಗಳಿದ್ದಲ್ಲಿ ಅಧ್ಯಾಪಕರು ಸರಿಪಡಿಸಿ ಹೇಳುವುದು. ಬಳಿಕ ವಿದ್ಯಾರ್ಥಿಗಳು ಕಲಿಕಾ ಪುಸ್ತಕದಲ್ಲಿ ಬರೆಯಲಿ. ಇನ್ನುಳಿದ ಎರಡು ಚಟುವಟಿಕೆಗಳನ್ನು ಮಾದರಿಯಾಗಿ ಇಲ್ಲಿ ಕೊಡಲಾಗಿದೆ. ಅಧ್ಯಾಪಕರು ಈ ಮಾಹಿತಿಗಳನ್ನು ವಿದ್ಯಾರ್ಥಿಗಳಿಗೆ ನೀಡುವುದು. ತದನಂತರ ವಿದ್ಯಾರ್ಥಿಗಳು ಚಿಂತಿಸಿ ಸ್ವತಃ ಕಲಿಕಾ ಪುಸ್ತಕದಲ್ಲಿ ದಾಖಲಿಸಿಕೊಳ್ಳಲಿ.

## ಸಮರ್ಥಿಸಿ ಬರೆಯುವುದು

'ಸಾಹಿತ್ಯ ಕೃತಿಗಳ ಅನುವಾದದಿಂದ ಆಯಾಯ ಭಾಷೆಗಳ ಸಾಹಿತ್ಯ ಹಾಗೂ ಸಂಸ್ಕೃತಿಯ ವಿನಿಮಯ (ಅರಿವು) ಸಾಧ್ಯವಾಗುತ್ತದೆ.' ಈ ಮೇಲಿನ ಹೇಳಿಕೆಯಲ್ಲಿ ಎರಡು ಮಾತಿಲ್ಲ. ಅನುವಾದಿತ ಸಾಹಿತ್ಯ ಕೃತಿಗಳು ಉತ್ತಮ ಸಂದೇಶವನ್ನು ಸಾರುತ್ತಿದ್ದಲ್ಲಿ ಮೊದಲ ಹಂತದಲ್ಲಿ ಸಹೃದಯರ ಮೆಚ್ಚುಗೆಗೆ ಪಾತ್ರವಾಗುತ್ತದೆ. ಅನುವಾದಗೊಂಡ ಕೃತಿಯ ಆಧಾರದಲ್ಲಿ ಮೂಲ ಕೃತಿಯ ಕವಿ/ಲೇಖಕರ ಬಗೆಗೆ ಓದುಗಿನಲ್ಲಿ ಒಲವು ಮೂಡುತ್ತದೆ. ಅದಲ್ಲದೆ ಅಂತಹ ಸಾಹಿತಿಗಳ ಇತರ ಕೃತಿಗಳ ಬಗೆಗೆಗೂ ತಿಳಿದುಕೊಳ್ಳುವ ಅಭಿಲಾಷೆ ಮೂಡುತ್ತದೆ. ಅನ್ಯ ಭಾಷಿಗರ ಆಚಾರ–ವಿಚಾರ, ಹಬ್ಬ–ಹರಿದಿನಗಳು, ಉಡುಗೆ–ತೊಡುಗೆ, ಮುಂತಾದ ಆಂತರಿಕ ಹಾಗೂ ಬಾಹ್ಯ ಸಂಸ್ಕೃತಿಯ ಕುರಿತು ತಿಳಇಯಲು ಸಾಧ್ಯವಾಗುತ್ತದೆ. ಮಿಗಿಲಾಗಿ ಅನ್ಯಭಾಷಾ ಸಹಿಷ್ಣುತೆ ಓದುಗರಲ್ಲಿ ಮೂಡುವುದರೊಂದಿಗೆ ಭಾಷಾ ಸಾಮರಸ್ಯಕ್ಕೂ ಅನುವಾದಿತ ಕೃತಿಗಳು ರಹದಾರಿಯನ್ನು ನಿರ್ಮಾಣ ಮಾಡುತ್ತವೆ.

ಮಲೆಯಾಳದ ಪ್ರಸಿದ್ಧ ಕವಿಯಾದ 'ಆಶಾನ್' ಅವರ 'ವೀಣಪೂ' ಎಂಬ ಖಂಡಕಾವ್ಯ 'ಬಿದ್ದ ಹೂವು' ಎಂದು ಕನ್ನಡಕ್ಕೆ ಅನುವಾದಗೊಂಡಿದೆ. ದಿನ ಬೆಳಗಾದರೆ ಅರಳಿಕೊಂಡು ಗಾಳಿಯಲ್ಲಿ ಗಿಡಿಗಂಟೆಯೊಂದಿಗೆ ತೊನೆದಾಡುತ್ತಾ ಕೈ ಬೀಸಿ ಕರೆಯುವ ಹೂವು ಸೂರ್ಯಸ್ತಮಾನದ ಹೊತ್ತಿಗೆ ನಿಸ್ತೇಜವಾಗುತ್ತದೆ, ಬಾಡಿಹೋಗುತ್ತದೆ. ಮರುದಿನ ಅದು ಗಿಡದಿಂದ ಕಳಚಲ್ಪಟ್ಟು ನೆಲವನ್ನು ಸೇರಿ ಕ್ರಮೇಣ ಗೊಬ್ಬರವಾಗುತ್ತದೆ. ಇಲ್ಲಿ ಮೇಲ್ನೋಟಕ್ಕೆ ಹೂವಿನ ಕುರಿತಾಗಿ ವಿವರಣೆ ಕಂಡು ಬಂದರೂ ವಾಸ್ತವವಾಗಿ ಅದು 'ಜೀವನ ಎಂಬ ಹೂವ'ನ್ನು ಪ್ರತಿನಿಧಿಸುತ್ತದೆ. ಪ್ರತಿಯೊಬ್ಬರ ಜೀವನವೂ ಹೂವಿನ ಬಾಳಿನಷ್ಟೆ ನಶ್ವರ. ಇಂದು ನಗುತ್ತಿದ್ದವನು ಮುಂದೊಂದು ದಿನ ಹೂವಿನಂತೆ ಬಿದ್ದುಹೋಗುವನು ಎಂಬ ವಿಚಾರವನ್ನು ಪ್ರತಿಪಾದಿಸುತ್ತದೆ. ಜೀವನ ಅಶಾಶ್ವತ ಎಂಬುದರ ಪ್ರತಿಪಾದನೆ ಮನೋಜ್ಞವಾಗಿ ಕವಿವಾಣಿಯಲ್ಲಿ ಮೂಡಿಬಂದುದನ್ನು ಸಹೃದಯನು ತಿಳಿದುಕೊಳ್ಳುತ್ತಾನೆ. ಕವಿಯಲ್ಲಿನ ತಾತ್ವಿಕ ಚಿಂತನೆಯಿಂದ ಕವಿಯ ನೈಪಿಣ್ಯವನ್ನು ಮನದಟ್ಟು ಮಾಡಿಕೊಳ್ಳುತ್ತಾನೆ.

ವೈಕಂ ಮೊಹಮ್ಮದ್ ಬಶೀರರ ಅನೇಕ ಕಥೆಗಳು ಮಲೆಯಾಳದಿಂದ ಕನ್ನಡಕ್ಕೆ ಅನುವಾದಗೊಂಡಿವೆ. ಅವುಗಳಲ್ಲಿ 'ಪಾತುಮ್ಮಯುಡೆ ಆಡ್' ಎಂಬ ಕಥೆಯೂ ಒಂದು. ಅದು ರೋಚಕವಾದ ಅನುಭವವನ್ನು ನಮಗೆ ನೀಡುತ್ತದೆ. ಪಾತುಮ್ಮಳ ಪ್ರೀತಿಗೆ ಪಾತ್ರವಾದ ಆಡು ಮರಿ ಇಡುವ ಸಂದರ್ಭದಲ್ಲಿ ಆಗುವ ಸಂಕಟವನ್ನು ಎದುರಿಸಲಾರದೆ ಕಿರುಚುವ, ಅರಚುವ,

ಎದ್ದು ಓಡುವ ದೃಶ್ಯ ಕಣ್ಣಿಗೆ ಕಟ್ಟುವಂತಿದೆ. ತಾಯಿ ಆಡು ಮತ್ತು ಹುಟ್ಟಲಿರುವ ಮರಿ ಆಡು ಇವುಗಳ ಬಗೆಗೆ ಕಾಳಜಿ ವಹಿಸಿ ಒಡತಿ ಪಾತುಮ್ಮ ಜಾಗೃತಳಾಗುವಳು. ಆದರೆ ಮರಿಗೆ ಜನ್ಮ ನೀಡುವ ವೇದನೆಯನ್ನು ಸಹಿಸಲಾರದೆ ಓಡುತ್ತಾ ಕೊನೆಗೂ ಮತುಮ್ಮಳ ಹಿಡಿತಕ್ಕೆ ಸಿಲುಕದೆ, ಡುಂ...! ಎಂಬ ಪದ ಪ್ರಯೋಗವು ಓದುಗರನ್ನು ಸೆಳೆಯುವ ಶಕ್ತಿಯನ್ನು ಹೊಂದಿದೆ. ಈ ಕಥೆಯು ಮನುಷ್ಯ ಮತ್ತು ಸಾಕುಪ್ರಾಣಿಗಳ ಪರಸ್ಪರ ಆತ್ಮೀಯತೆ–ಭವನಾತ್ಮಕ ಸಂಬಂಧವನ್ನು ಬೆಳೆಸುತ್ತದೆ ಅನ್ಯ ಭಾಷಾ–ಸಂಸ್ಕೃತಿಯ ಚಿತ್ರಣ ಈ ಕಥೆಯಲ್ಲಿ ದೊರೆಯುತ್ತದೆ. ಈಕಥೆಯನ್ನು ಓದಿದ ಬಳಿಕ ಬಶೀರರ ಇತರ ಕೃತಿಗಳತ್ತ ನಮ್ಮ ಗಮನ ಹರಿಯುತ್ತದೆ.

'ಕನ್ನಡ ಕಣ್ವ' ಎಂದು ಪ್ರಸಿದ್ಧರಾದ ಬಿ.ಎಂ.ಶ್ರೀ ಅವರು ಆಂಗ್ಲಗೀತಗಳನ್ನು ಕನ್ನಡಕ್ಕೆ ಅನುವಾದ ಮಾಡಿದ್ದರಿಂದ, ಆಂಗ್ಲಕಾವ್ಯಗಳಲ್ಲಿನ ಕವಿಗಳ ಚಿಂತನೆ, ಪಕೃತಿ ಪ್ರೇಮ, ಆದರ್ಶ, ಹೊಸ ಛಂದಸ್ಸು, ಶೈಲಿಗಳ ಪ್ರಯೋಗ ಕನ್ನಡಿಗರಾದ ನಮಗೆ ತಿಳಿದು ಬಂತು. ಹೊಸ ಯುಗಕ್ಕೆ ನಂದಿ ಹಾಡಿತು.

ಮಲೆಯಾಳ ಸಾಹಿತಿ ಜ್ಞಾನಪೀಠ ಪ್ರಶಸ್ತಿ ವಿಜೇತ ಜಿ. ಶಂಕರ ಕುರುಪ್ ರವರ ಪರಿಚಯವನ್ನು ವಿದ್ಯಾರ್ಥಿಗಳಿಗೆ ಅಧ್ಯಾಪಕರು ತಿಳಿಸುವುದು.

## ಜ್ಞಾನಪೀಠ ಪ್ರಶಸ್ತಿ ವಿಜೇತ ಜಿ. ಶಂಕರ ಕುರುಪ್

ಎರ್ನಾಕುಳಂ ಜಿಲ್ಲೆಯ ಕಾಲಡಿಯ ಸಮೀಪದ ನಾಯತ್ತೋಡು ಎಂಬ ಗ್ರಾಮದಲ್ಲಿ ಕ್ರಿ.ಶ 1901 ಜೂನ್ 3 ರಂದು ಜಿ. ಶಂಕರಕುರುಪ್ಪ್ ಜನಿಸಿದರು. ತಂದೆ ನೆಲ್ಲಿಕ್ಕಾ ಪಿಳ್ಳೆ ಶಂಕರವಾರ್ಯರ್, ತಾಯಿ–ಲಕ್ಷ್ಮಿಕುಟ್ಟಿ ಅಮ್ಮ. ಪತ್ನಿ–ಸುಭದ್ರಾಮ್ಮ. ಸೋದರಮಾವನೂ ಪ್ರಸಿದ್ಧ ಜ್ಯೋತಿಷಿಯೂ ಆಗಿದ್ದ ಗೋವಿಂದ ಕುರುಪ್ಪ್ ಮೊದಲ ಗುರು. ಶಂಕರ ಕುರುಪ್ಪ್ ಅವರ ಪ್ರಾಥಮಿಕ ವಿದ್ಯಾಭ್ಯಾಸದ ಬಳಿಕದ ಶಿಕ್ಷಣವು ಪೆರುಂಬಾವೂರು ಹಾಗೂ ಆಲುವಗಳಲ್ಲಿ ನಡೆಯಿತು. 1919ರಲ್ಲಿ ಪಂಡಿತ ಪರೀಕ್ಷೆಯಲ್ಲಿ ತೇರ್ಗಡೆ ಕೂಡಲೇ ತಿರುವಿಲಾಮಲ ಶಾಲೆಯಲ್ಲಿ ಮಲಯಾಳ ಅಧ್ಯಾಪಕನಾಗಿ ನೇಮಕ. 1937ರಲ್ಲಿ ಎರ್ನಾಕುಳಂ ಮಹಾರಾಜಾಸ್ ಕಾಲೇಜಿನಲ್ಲಿ ಮಲೆಯಾಳ ಪಂಡಿತನಾಗಿ ಪದೋನ್ನತಿ. 1956ರಲ್ಲಿ ನಿವೃತ್ತಿ. ಆ ಬಳಿಕವೂ ಆಕಾಶವಾಣಿಯ ಸಲಹೆಗಾರರಾಗಿ ಸೇವೆ . ಕೇರಳ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷತೆ ಕೂಡ. 1968ರಲ್ಲಿ ರಾಜ್ಯಸಭೆಗೆ ಪ್ರವೇಶ.

**ದೊರೆತ ಪ್ರಶಸ್ತಿಗಳು :** ಕಲ್ಯಾಣಿ ಕೃಷ್ಣ ಮೆನೋನ್ ಪ್ರಶಸ್ತಿ, ಕೇರಳ ಸಾಹಿತ್ಯ ಅಕಾಡೆಮಿ ಮತ್ತು ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿಗಳು, ಕೊಚ್ಚಿ ಮಹಾರಾಜರಿಂದ ಕವಿತಿಲಕ ಗೌರವಪ್ರಶಸ್ತಿ, ತಪ್ಪೂಣಿತ್ತುರ ಶಾಸ್ತ್ರ ಸದಸ್ಸಿನ ಸಾಹಿತ್ಯ ನಿಪುಣ ಗೌರವ ಪ್ರಶಸ್ತಿಗಳನ್ನು ಪಡೆದಿದ್ದಾರೆ. ಸಾಹಿತ್ಯ ಲೋಕದಲ್ಲಿ ಜಿ. ಶಂಕರ ಕುರುಪ್ಪು 'ಜಿ' ಎಂದೇ ಪ್ರಸಿದ್ಧರು. ಇವರ ಕೃತಿಗಳು ಹಲವಾರು ಭಾರತೀಯ ಭಾಷೆಗಳಿಗೂ, ಇಂಗ್ಲೀಷ್, ರಷ್ಯನ್, ಇಟಾಲಿಯನ್ ಮುಂತಾದ ವಿದೇಶೀ ಭಾಷಾಂತರಗೊಂಡಿವೆ.

**ಪ್ರಮುಖ ಕೃತಿಗಳು :** ಕವಿ ವಳ್ಳತೋಳರಿಂದ ತುಂಬಾ ಪ್ರಭಾವಿತರಾದ 'ಜಿ'ಯವರು ಕವಿತೆ, ನಾಟಕ, ವಿಮರ್ಶೆ, ವ್ಯಾಕ್ಯರಣ, ಜೀವನ ಚರಿತ್ರೆ ಮುಂತಾದ ಕ್ಷೇತ್ರಗಳಲ್ಲಿ ಕೃಷಿ ಮಾಡಿದ್ದಾರೆ.

ಸೂರ್ಯಕಾಂತಿ, ಮೇಘಗೀತಂ. ಪುಷ್ಪಗೀತಂ, ನಿಮಿಷಂ, ಪೂಜಾಪುಷ್ಪಂ, ಮುತ್ತುಗಳ್, ಇದಳುಗಳ್, ಚೆಂಗದಿರುಗಳ್, ನವಾತಿಥಿ, ಪದಿಶಂಡೆಪಾಟ್ಟ್, ಅಂತರ್ದಾಹಂ, ವೆಳ್ಳಿ ಪರವಗಳ್, ವಿಶ್ವ ದರ್ಶನಂ, ಮೂನ್ನರುವಿಯುಂ ಒರು ಪುವಿಯುಂ, ಜೀವನ ಸಂಗಿತಂ, ಮಧುರಂ ಸೌಮ್ಯಂ ದೀಪ್ತಂ ಮುಂತಾದುವು ಅವರ ಮುಖ್ಯ ಕವನ ಸಂಕಲನಗಳು ಜ್ಞಾನ ಪೀಠ ಪ್ರಶಸ್ತಿ ಪಡೆದ ಇವರ ಓಡಕುವಿಲ್ ಆರಂಬಕಾಲದ ಇವರ ಕವನಗಲ ಒಂದು ಸಂಕಲನ ಕೃತಿಯಾಗಿದೆ.

ಇಳಂಚುಂಡುಗಳ್, ಓಲಪ್ಪೀಪಿ–ಇವು ಮಕ್ಕಳಿಗಾಗಿ ರಚಿಸಿದ ಕವನಗಳು ರಾಧಾಮಣಿ, ರಾಜನಂದಿನಿ, ಹರಿಶ್ಚಂದ್ರನ್ ಎಂಬಿವುಗಳು ಯಾವ ಪ್ರಕಾರ ಮಕ್ಕಳಿಗಾಗಿ ರಚಿಸಿದ ಕೃತಿಗಳಾಗಿವೆ. ಸಂಧ್ಯಾ, ಇರುಟ್ಟಿನ್ಮುಂಬೆ, ಆಗಸ್ಟ್15, ಇವು ಅವರ

ನಾಟಕಗಳು. ಅವಕ್ಕೆ ಜಾಗತಿಕ ಯುದ್ಧ ಮತ್ತು ಸ್ವಾತಂತ್ರ್ಯ ಹೋರಾಟದ ಹಿನ್ನೆಲೆ ಇದೆ.

ಪೇಡಿ, ಮಧ್ಯಮವ್ಯಾಯೋಗ ಇವು ಅವರ ಭಾಷಾಂತರ ಕೃತಿಗಳು. ನೂಟ್ಟೊನ್ನ್ ಕಿರಣಂಗಳ್ ಎಂಬ ಹೆಸರಲ್ಲಿ ಠಾಗೋರರ ಅನೇಕ ಕವನಗಳನ್ನೂ, ಗೀತಾಂಜಲಿಯನ್ನೂ ಜಿಯವರು ಭಾಷಾಂತರ ಮಾಡಿದ್ದಾರೆ.

'ವಿಲಾಸಹರಿ'ಯೆಂಬುದು ಉಮರ್ಖಯಾಮನ ರುಬಾಯ್ಯತ್‌ನ ಅನುವಾದ ಕೃತಿ. ಮೇಘಛ್ಛಾಯವು ವೆಲೀಘದೂತ(ಕಾಳಿದಾಸ)ದ ಅನುವಾದ ವಿಮರ್ಶಕರಾಗಿಯೂ ಪ್ರಬಂಧಕಾರರಾಗಿಯೂ 'ಜಿ'ಪ್ರಸಿದ್ಧರು. ಗದ್ಯೋಪಹಾರಂ, ಮುತ್ತುಪ್ಪೀಪಿಯುಂ, ರಾಕುಯಿಲುಗಳ್, ಲೇಕಮೂಲ ಎಂಬ ಕೃತಿಗಳಲ್ಲಿ ಎಲ್ಲಾ ಗದ್ಯ ಬರಹಗಳೂ ಈಗ 'ಜಿ'ಯವರ ಗದ್ಯ ಲೇಖನಗಳು ಎಂಬ ಹೆಸರಲ್ಲಿ ಲಬ್ಯವಿದೆ. ಭಾರತೀಯ ಸಾಹಿತ್ಯ ಆಕಾಶದಲ್ಲಿ ಮಲೆಯಾಳಕ್ಕೆ ಒಂದು ಉಜ್ವಲವಾದ ಸ್ಥಾನವನ್ನು ಗಳಿಸಿಕೊಟ್ಟ ಜಿ. ಶಂಕರ ಕುರುಪ್ಪ್ ಅವರು 1978 ಫೆಬ್ರವರಿ 2ರಂದು ಅಸ್ತಂಗತರಾದರು.

## ಭಾಷಾಭ್ಯಾಸ

**ಸಮಾಸಗಳು :** ವಿದ್ಯಾರ್ಥಿಗಳು ಈಗಾಗಲೇ ಸಮಾಸಗಳ ಕುರಿತು ತಿಳಿದಿರುವರು. ಇದರ ಆಧಾರದಲ್ಲಿ ಕೆಳಗೆ ನೀಡಿರುವ ಪದಗಳಲ್ಲಿನ ಸಮಾಸಗಳನ್ನು ಗಮನಿಸಲಿ.

| | | | | |
|---|---|---|---|---|
| ಜಲರಾಶಿ | → | ಜಲದ ರಾಶಿ | – | ತತ್ಪುರುಷ ಸಮಾಸ. |
| ಕೆರೆದಡ | → | ಕೆರೆಯ ದಡ | – | ತತ್ಪುರುಷ ಸಮಾಸ. |
| ಮೈದೊಳೆ | → | ಮೈಯನ್ನು ತೊಳೆ | – | ಕ್ರಿಯಾಸಮಾಸ |
| ತಲೆ ಕೊಡವು | → | ತಲೆಯನ್ನು ಕೊಡವು | – | ಕ್ರಿಯಾಸಮಾಸ |
| ಗೊನೆ ಬಿಡು | → | ಗೊನೆಯನ್ನು ಬಿಡು | – | ಕ್ರಿಯಾಸಮಾಸ |
| ಕೈಮುಗಿ | → | ಕೈಗಳನ್ನು ಮುಗಿ | – | ಕ್ರಿಯಾಸಮಾಸ |

## ಧಾತು–ನಾಮ

ಕನ್ನಡ ಭಾಷೆಯಲ್ಲಿ ಕೆಲವು ಪದಗಳು ಕ್ರಿಯಾಪದಗಳಾಗಿಯೂ, ನಾಮಪದಗಳಾಗಿಯೂ ಬಳಕೆಗೊಂಡಿರುವುದನ್ನು ವಿದ್ಯಾರ್ಥಿಗಳು ಉದಾಹರಣೆಗಳ ಮೂಲಕ ತಿಳಿದಿರುವರು. ಅಂತೆಯೇ ಇನ್ನೂ ಕೆಲವು ಪದಗಳನ್ನು 'ಧಾತು–ನಾಮ' ಪದಗಳಾಗಿ ಬಳಸಿ ವಾಕ್ಯ ರಚಿಸಲಿ.

| ಪದ | ಧಾತು– ಕ್ರಿಯಾಪದ | ನಾಮಪದ |
|---|---|---|
| ಕೂಗು | ಪಕ್ಕದ ಮನೆಯಲ್ಲಿದ್ದ ಮಗನನ್ನು ತಂದೆಯು ಕೂಗಿ ಕರೆದನು. | ನೇಪಾಳದ ಭೂಕಂಪದಿಂದ ತತ್ತರಿಸಿದ ಜನರ ಕೂಗು ಎಲ್ಲರ ಮನಸ್ಸನ್ನು ತಲ್ಲಣಗೊಳಿಸಿತು. |
| ಮಾಡು | ನಿಗದಿತ ಕೆಲಸವನ್ನು ಕ್ಷಿಪ್ತ ಸಮಯದಲ್ಲಿ ಮಾಡಿ ಮುಗಿಸಿದರೆ ಯಶಸ್ಸು ಖಂಡಿತ. | ಜೋರಾಗಿ ಸುರಿದ ಮಳೆಯಿಂದಾಗಿ ಮನೆಯ ಮಾಡು ಕೆಳಗೆ ಬಿದ್ದಿತು. |
| ಕಾಡು | ಮೊಬೈಲಿಗಾಗಿ ಮಗ ತಾಯಿಯನ್ನು ಕಾಡಿದನು. | ಇತ್ತೀಚೆಗೆ ನಗರೀಕರಣ ಭರಾಟೆಯಿಂದ ಕಾಡುಗಳು ನಶಿಸಿವೆ. |

| | | |
|---|---|---|
| ತೆರೆ | ಬಾಗಿಲು ತೆರೆದು ಅತಿಥಿಯನ್ನು ಸ್ವಾಗತಿಸುತ್ತೇವೆ. | ಸಮುದ್ರ ತೆರೆಗಳು ದಡಕ್ಕೆ ಅಪ್ಪಳಿಸಿದುವು. |
| ಸುಳಿ | ಗಾಳಿಯು ಸುಳಿದು ಪ್ರಕೃತಿಯನ್ನು ಮುದಗೊಳಿಸಿತು. | ಸುಮುದ್ರದಲ್ಲಿ ಈಜಲು ಹೋದ ಬಾಲಕರು ಸುಳಿಯಲ್ಲಿ ಸಿಲುಕಿಕೊಂಡರು. |

**ಭಾಷಾಂತರ**

ವಿದ್ಯಾರ್ಥಿಗಳು ಈಗಾಗಲೇ ಇಂಗ್ಲಿಷ್ ಭಾಷೆಯಿಂದ ಕನ್ನಡಕ್ಕೆ ಭಾಷಾಂತರ ಮಾಡುವ ಕೇಶಲವನ್ನು ಮೈಗೂಡಿಸಿಕೊಂಡಿರುವರು.

ನೀಡಿರುವ ಗದ್ಯ ಭಾಗವನ್ನು ಕನ್ನಡಕ್ಕೆ ಅನುವಾದ ಮಾಡಲಿ. ಸಹಾಯವನ್ನು ಬಯಸಿದಲ್ಲಿ ಅಧ್ಯಾಪಕರು ಸಹಕರಿಸುವುದು.

**ಕನ್ನಡ ಅನುವಾದ**

ಭಾರತದ ಬಹುದೊಡ್ಡ ಚಕ್ರವರ್ತಿಗಳಲ್ಲಿ ಅಕ್ಬರನೂ ಒಬ್ಬನಾಗಿದ್ದನು. ಅವನು ಮೊಗಲ ವಂಶಕ್ಕೆಸೇರಿದವನಾಗಿದ್ದನು. ಅವನ ರಾಜಧಾನಿ ಆಗ್ರಾ. ಅವನು ಕವಿಗಳಿಗೆ, ವರ್ಣಚಿತ್ರಕಾರರಿಗೆ, ಸಂಗೀತಜ್ಞರಿಗೆ ಹಾಗೂ ವಿದ್ವಾಂಸರಿಗೆ ಆಶ್ರಯದಾತನಾಗಿದ್ದನು. ಅವನ ಆಸ್ಥಾನದಲ್ಲಿ ಹಲವಾರು ವ್ಯಕ್ತಿಗಳಿದ್ದರು. ಚಕ್ರವರ್ತಿ ಅಕ್ಬರನ ಆಸ್ಥಾನದಲ್ಲಿ ಬೀರಬಲನು ಮಂತ್ರಿಯಾಗಿದ್ದನು. ಬೀರಬಲನ ಪ್ರತ್ಯುತ್ಪನ್ನಮತಿತ್ವ ಮತ್ತು ಸೂಕ್ಷ್ಮ ಹಾಸ್ಯಪ್ರಜ್ಞೆಗಳಿಗಾಗಿ ಜನರೆಲ್ಲರೂ ಅವನನ್ನು ಮೆಚ್ಚಿಕೊಂಡಿದ್ದರು.

# 2. ನವಪಲ್ಲವ

| | | |
|---|---|---|
| ಘಟಕ 2 | : | ನವಪಲ್ಲವ |
| ಪಾಠಭಾಗಗಳು | : | ಅಪ್ಪನೂ ಒಲೆಯೂರಿಯೂ(ಕವಿತೆ)<br>ತಾಯಿ(ಕತೆ)<br>ಸಾವಿರಾರುನದಿಗಳು(ಕವಿತೆ)<br>ನೀರವ ರಾತ್ರಿಯ ಮಾಯಾಲೋಕ(ವೈಜ್ಞಾನಿಕ ಲೇಖನ) |
| ಸಮಯ | : | 24 ಪಿರೇಡುಗಳು |
| **ಕಲಿಕಾ ಸಾಮಾಗ್ರಿಗಳು** | : | ಪಠ್ಯ ಪುಸ್ತಕ<br>ಅಡಕ ಮುದ್ರಿಕೆ<br>ಪೂರಕಗ್ರಂಥಗಳು |
| **ಮೌಲ್ಯಗಳು, ಮನೋಭಾವಗಳು** | : | • ಆಧುನಿಕ ಕನ್ನಡ ಸಾಹಿತ್ಯದ ವಿವಿಧ ಪ್ರಕಾರಗಳನ್ನು ತಿಳಿದುಕೊಂಡು ಕಾವ್ಯ ಧೋರಣೆಗಳ ಬಗೆಗೆ ಅಭಿಪ್ರಾಯಗಳನ್ನು ಪ್ರಕಟಿಸುವ ಮನೋಭಾವ.<br>• ಕತೆ, ಕವಿತೆಗಳಲ್ಲಿ ವ್ಯಕ್ತವಾಗುವ ಸಾಮಾಜಿಕ ಸಮಸ್ಯೆಗಳಿಗೆ ಪ್ರತಿಕ್ರಿಯಿಸುವ ಮನೋಭಾವ.<br>• ಸಮಾಜದಲ್ಲಿ ಅವಗಣನೆಗೆ ಒಳಗಾದವರ ಬಗ್ಗೆ ವಿಶೇಷವಾದ ಕಾಳಜಿಯನ್ನು ತೋರಿಸುವುದು.<br>• ಕತೆ, ಕವಿತೆಗಳನ್ನು ಓದಿ ಆಸ್ವಾದಿಸುವ ಮನೋಭಾವ.<br>• ಕತೆ, ಕವಿತೆ ಮೊದಲಾದ ಸುಜನಾತ್ಮಕ ರಚನೆಗಳಲ್ಲಿ ತೊಡಗಿಸಿಕೊಳ್ಳುವುದು. |

# ಪ್ರಸ್ತಾವನೆ

ಸಾಹಿತ್ಯವು ವಿಲಾಸದ ವಸ್ತುವಲ್ಲ; ದೇಶೋದ್ಧಾರಕ್ಕೆ, ಆತ್ಮೋದ್ಧಾರಕ್ಕೆ ಸಾಧನವಾದುದು. ಸಾಹಿತಿಯು ತನ್ನ ಸುಪ್ತ ಚೇತನದ ಅರಿವನ್ನುಂಟುಮಾಡಿಕೊಂಡು ಅದರ ಸಂಪೂರ್ಣ ಪ್ರಯೋಜನವನ್ನು ತನ್ನ ನಾಡವರಿಗೆ ಮಾಡಿಕೊಡಬೇಕು. ಈ ಜವಬ್ದಾರಿಯ ಹಿನ್ನೆಲೆಯಲ್ಲಿ ಚಿಂತಿಸಿದಾಗ ಕನ್ನಡ ಸಾಹಿತ್ಯ ಪರಂಪರೆಯು ಪ್ರತಿಯೊಂದು ಘಟ್ಟದಲ್ಲೂ ಅನೇಕ ಬದಲಾವಣೆಗಳಿಗೆ ಚೆನ್ನಾಗಿ ಸ್ಪಂದಿಸುತ್ತಾಬಂದಿದೆ. ಸಮುಷ್ಟಿ ಮತ್ತು ವ್ಯಷ್ಟಿ ಜೀವನದ ಪ್ರತಿಯೊಂದು ಸಂವೇದನೆಯೂ ಅಲ್ಲಿ ವಸ್ತುವಾಗುತ್ತದೆ. ಈ ರೀತಿಯ ಸಾಹಿತ್ಯ ಕೃತಿಗಳನ್ನು ಓದುವ, ಆಸ್ವಾದಿಸುವ ಮನೋಭಾವವನ್ನು ಬೆಳೆಸುವುದರ ಜೊತೆಗೆ ಸೃಜನಶೀಲ ರಚನೆಗಳು ಸಾಧ್ಯವಾಗುವಂತೆ ಈ ಘಟಕದಲ್ಲಿ ಪಾಠಗಳನ್ನು ಅಳವಡಿಸಲಾಗಿದೆ.

ಸಾಹಿತ್ಯವನ್ನು ಸಾಮಾಜಿಕ ಕ್ರಾಂತಿಯ ಸಾಧನವನ್ನಾಗಿ ಕಂಡದ್ದು ದಲಿತ ಸಾಹಿತ್ಯ. ಪ್ರಜಾಪ್ರಭುತ್ವ ಮತ್ತು ನಾಡಿನ ಐಕ್ಯ ದುರ್ಬಲವಾಗಿರುವಾಗ, ನೈತಿಕ ಮೌಲ್ಯಗಳು ಕುಸಿಯುತ್ತಿರುವಾಗ, ಭ್ರಷ್ಟಾಚಾರವು ಸಾರ್ವಜನಿಕ ಬದುಕನ್ನೆಲ್ಲ ಆವರಿಸಿರುವಾಗ, ಜಾತೀಯತೆಯು ಸರಿ ತಪ್ಪುಗಳ ವ್ಯತ್ಯಾಸವನ್ನೇ ಅಳಿಸಿ ಹಾಕಿದಾಗ ದಲಿತ ಸಾಹಿತ್ಯವು ಜನತೆಯ ಮಾನಸಿಕ ಮತ್ತು ನೈತಿಕ ಆರೋಗ್ಯವನ್ನು ಕಾಪಾಡಲು ಪ್ರಯತ್ನಿಸಿತು. ವಿದ್ಯಾರ್ಥಿಗಳು ಈ ಆಶಯಗಳನ್ನು ತಿಳಿದುಕೊಂಡು ಎಲ್ಲಿ ಶೋಷಣೆ ಕಂಡುಬರುತ್ತದೋ, ಅದನ್ನು ಪ್ರತಿಭಟಿಸಿ, ಸಮಾಜದಲ್ಲಿ ಎಲ್ಲರೂ ಸಮಾನರೆಂಬ ಮನೋಭಾವವನ್ನು ಬೆಳೆಸಿಕೊಳ್ಳಲು 'ಸಾವಿರಾರು ನದಿಗಳು' ಎಂಬ ಕವನವು ಸಹಕಾರಿಯಾಗಿದೆ. ಈ ಕವನವು ದಲಿತ ಸಾಹಿತ್ಯ ಪಂಥದ ಒಂದು ಪ್ರಾತಿನಿಧಿಕ ಕವನವೂ ಹೌದು.

'ವಿಜ್ಞಾನವು ಮನುಕುಲಕ್ಕೆ ವರದಾನ' ಎಂದು ತಿಳಿಯಲಾಗುತ್ತದೆ. ವಿಜ್ಞಾನದ ಹಿಂದೆ ಸತತ ಪ್ರಯತ್ನ, ಅಪಾರವಾದ ತಾಳ್ಮೆ, ಏಕಾಗ್ರತೆ, ಅಸಾಧಾರಣ ಸಂಕಲ್ಪ ಶಕ್ತಿ ಎಲ್ಲವೂ ಸೇರಿಕೊಂಡಿರುತ್ತವೆ ಎಂಬುದು ಸಾರ್ವಕಾಲಿಕ ಸತ್ಯ. ಇಂದು ಮನುಕುಲವನ್ನು ಕಿತ್ತು ತಿನ್ನುವ ಮಾರಕ ರೋಗವಾದ ಕ್ಯಾನ್ಸರ್‌ನ ಚಿಕಿತ್ಸೆಯಲ್ಲಿ ಬಳಸುವ'ರೇಡಿಯಂ'ನ ಸಂಶೋಧನೆಯು ಮೇರಿಕ್ಯೂರಿ ಎಂಬ ಅಸಾಮಾನ್ಯ ಸಾಧಕಿಯ ಪ್ರಯತ್ನದ ಫಲವಾಗಿದೆ. ಸಮಾಜದಲ್ಲಿ ಹೆಣ್ಣು ಎಷ್ಟಕ್ಕೂ ಗಂಡಿಗೆ ಕಡಿಮೆಯಲ್ಲ. ಅವಳ ವ್ಯಕ್ತಿತ್ವವೂ ಗಂಡಸಿನ ವ್ಯಕ್ತಿತ್ವದಷ್ಟೆ ಮುಖ್ಯ. ಮಹಿಳಾ ವಿಜ್ಞಾನಿಯನ್ನು ವಿಜ್ಞಾನಿಯಾಗಿಯೂ, ವ್ಯಕ್ತಿಯಾಗಿಯೂ ಕಾಣುವ ಗಮನಾರ್ಹ ಪ್ರಯತ್ನವನ್ನು 'ನೀರವ ರಾತ್ರಿಯ ಮಾಯಾಲೋಕ' ಎಂಬ ಪಾಠದಲ್ಲಿ ಕಾಣಬಹುದು.

'ಉಪ್ಪಿಗಿಂತ ರುಚಿಯಿಲ್ಲ, ತಾಯಿಗಿಂತ ಬಂಧುವಿಲ್ಲ' ಎಂಬ ಗಾದೆ ಮಾತು ಮಾತೃ ವಾತ್ಸಲ್ಯದ ಮಹತ್ವವನ್ನು ಸಾರುವ ವೇದವಚನವೇ ಆಗಿದೆ. ಕುಟುಂಬ ಪಾಲನೆಯಲ್ಲಿ ತಾಯಿಗಿರುವ ಸ್ಥಾನ ಮಹತ್ವಪೂರ್ಣವಾದುದು. ಇಂತಹ ಅಸಾಮಾನ್ಯ ಮಾತೆಯ ವಾತ್ಸಲ್ಯದ ತುಮುಲಗಳು ವಿವಿಧ ದೃಷ್ಟಿಕೋನಗಳಲ್ಲಿ ಚಿತ್ರಿತವಾದ ಬಗೆಯನ್ನು 'ತಾಯಿ' ಕತೆಯಲ್ಲಿ ಕಾಣಬಹುದು. ಸ್ತ್ರೀ ಸಂವೇದನೆಯೊಂದಿಗೆ ಕತೆಗಾರರು ಕತೆಯೊಳಗೊಂದು ಕತೆಯನ್ನು ಬೆಸೆದ ಶೈಲಿಯು ಮನಸೆಳೆಯುತ್ತದೆ.

ಯಾವುದೇ ಕೆಲಸವನ್ನು ಮಾಡುವಾಗಲೂ ನಾವು ಏಕಾಗ್ರತೆಯಿಂದ ಮಾಡಬೇಕು. ಅದರಲ್ಲಿ ನಮ್ಮನ್ನು ನಾವು ಸಂಪೂರ್ಣವಾಗಿ ತೊಡಗಿಸಿಕೊಂಡಾಗ ದೊರಕುವ ಸಂತೋಷ ಅಪರಿಮಿತ. ಅಪ್ಪನೂ ಒಲೆಯುರಿಯೂ ಕವನದಲ್ಲಿ ಹಳೆಯ ತಲೆಮಾರು ಮತ್ತು ಹೊಸತಲೆಮಾರುಗಳ ಸಂಘರ್ಷವಿದೆ.'ಅಪ್ಪ'ನೆಂಬುವನು ಮನುಷ್ಯನಾಗುವುದಿಲ್ಲ. 'ಪೂಜ್ಯ'ನಾಗಿ ಬಿಡುತ್ತಾನೆ. ಇಲ್ಲಿ ವೈಭವೀಕರಣದ ಸ್ಪರ್ಶವಿದ್ದರೂ ಬದಲಾಗುವ ಮೌಲ್ಯಗಳ ಜೀವನ ರೀತಿಗಳ ಆಶಯವಿದೆ. ಕವಿತೆಯು ಆಸ್ವಾದನೆಯೊಂದಿಗೆ,ಸಮಾಜದಲ್ಲಿ ಇಂತಹ ಬದಲಾಗುತ್ತಿರುವ ಮೌಲ್ಯಗಳ ಶೋಧನೆಯನ್ನು ನಡೆಸಲು ವಿದ್ಯಾರ್ಥಿಗಳಿಗೆ ಪ್ರೇರಣೆಯಾಗಬಹುದು.

# UNIT FRAME

**ಘಟಕ 2 : ನವಪಲ್ಲವ** ಸಮಯ :

**ಕಲಿಕಾ ಸಾಧನೆಗಳು**

- ಹೊಸಗನ್ನಡ ಕಾಲಘಟ್ಟದ ನವೋದಯ, ನವ್ಯ, ನವ್ಯೋತ್ತರ ಮೊದಲಾದ ಪಂಥಗಳ ಸಾಹಿತ್ಯರಚನೆಗಳನ್ನು ಓದಿ ಪರಾಮರ್ಶಿಸಿ ಆಶಯ ಮತ್ತು ಸ್ವಾರಸ್ಯವನ್ನು ಲಿಖಿತ ರೂಪದಲ್ಲಿ ಮಂಡಿಸುವರು.
- ಕವಿತೆಗಳಲ್ಲಿ ಮೂಡಿ ಬಂದಿರುವ ವರ್ಣನೆಯನ್ನು ಓದಿ ಆಸ್ವಾದಿಸಿ ವಿಮರ್ಶೆ, ಆಸ್ವಾದನಾ ಟಿಪ್ಪಣಿಗಳನ್ನು ಬರೆಯುವರು.
- ಪ್ರಗತಿಶೀಲ, ದಲಿತ ಹಾಗೂ ಬಂಡಾಯ ಮನೋಧರ್ಮದ ಕೃತಿಗಳನ್ನು ಓದಿ, ಅಲ್ಲಿ ಬಂದಿರುವ ಧೋರಣೆಗಳನ್ನು ಗುರುತಿಸಿಕೊಂಡು ಆಶಯಗಳನ್ನು ಪ್ರಕಟಿಸುವರು.
- ಆತ್ಮಕಥೆ, ಜೀವನಚರಿತ್ರೆ, ವ್ಯಕ್ತಿಚಿತ್ರ ಮೊದಲಾದ ಸಾಹಿತ್ಯ ರಚನೆಗಳನ್ನು ಓದಿ, ಅಲ್ಲಿನ ಜೀವನ ನೀತಿ, ಆದರ್ಶಗಳನ್ನು ನಿತ್ಯ ಜೀವನದಲ್ಲಿ ರೂಢಿಸಿಕೊಳ್ಳುವರು.
- ಕಲೆ, ಕ್ರೀಡೆ, ವಿಜ್ಞಾನ, ತಂತ್ರಜ್ಞಾನ ಮೊದಲಾದ ವಿಷಯಗಳಿಗೆ ಸಂಬಂಧಿಸಿದ ಸಾಹಿತ್ಯ ರಚನೆಗಳನ್ನು ಓದಿ ಅವುಗಳಲ್ಲಿ ತಮ್ಮ ಆಸಕ್ತಿಯನ್ನು ಕುದುರಿಸುವರು.
- ಪೂರಕ ಗ್ರಂಥಗಳು, ಇಂಟರ್‌ನೆಟ್ ಮೊದಲಾದವುಗಳಿಂದ ಮಾಹಿತಿ ಸಂಗ್ರಹಿಸಿ, ಸ್ವರಚನೆಗೆ ಬೇಕಾದ ಭಾಷಾ ನೈಪುಣ್ಯವನ್ನು ಆರ್ಜಿಸಿಕೊಳ್ಳುವರು.
- ಸ್ತ್ರೀಪರ ಚಿಂತನೆಯ ಕೃತಿಗಳನ್ನು ಓದುವುದರ ಮೂಲಕ ಸ್ತ್ರೀ ಸಮಾನತೆಯ ಪ್ರಾಧಾನ್ಯತೆಯನ್ನು ಕಂಡುಕೊಂಡು, ಅದರ ಅಗತ್ಯವನ್ನು ಲಿಖಿತರೂಪಗಳಲ್ಲಿ ಮಂಡಿಸುವರು.
- ಸಾಹಿತ್ಯ ಕೃತಿಗಳನ್ನು ಓದಿ ವಿಶ್ಲೇಷಣೆ ಮಾಡುವುದರ ಮೂಲಕ ಪರಂಪರೆಯಿಂದ ಹರಿದು ಬಂದ ಆಚಾರ ವಿಚಾರಗಳನ್ನೂ ಸಾಂಸ್ಕೃತಿಕ ಮೌಲ್ಯಗಳನ್ನೂ ತಿಳಿದುಕೊಂಡು ಅವುಗಳನ್ನು ನಿತ್ಯಜೀವನದಲ್ಲಿ ರೂಢಿಸಿಕೊಳ್ಳುವರು.
- ಸಾಹಿತ್ಯ ಕೃತಿಗಳಲ್ಲಿ ಮೂಡಿಬಂದಿರುವ ಸಮಕಾಲೀನ ವಿಚಾರಗಳನ್ನು ಕಂಡುಕೊಂಡು ನಾಡುನುಡಿ ಚಿಂತನೆ, ಪರಿಸರ ಪ್ರಜ್ಞೆ, ಪರಸ್ಪರ ಸ್ನೇಹ ಬಾಂಧವ್ಯ – ಇವೇ ಮೊದಲಾದ ಮನೋಭಾವಗಳನ್ನು ಬೆಳೆಸಿಕೊಳ್ಳುವರು.

| ಪರಿಕಲ್ಪನೆ | ಪ್ರಕ್ರಿಯೆ / ಚಟುವಟಿಕೆ/ಮೌಲ್ಯಮಾಪನ | ಕಲಿಕಾ ಸಾಧನೆಗಳು |
|---|---|---|
| • ಪರಿಸರ ಸ್ವಚ್ಛತೆ ಮತ್ತು ಪರಿಸರ ಪ್ರಜ್ಞೆಯನ್ನು ಮೂಡಿಸುವ ಅನೇಕ ರಚನೆಗಳು ಹೊಸಗನ್ನಡ ಸಾಹಿತ್ಯದಲ್ಲಿ ಬಂದಿವೆ. | • ನವ್ಯದ ದಾಟಿಯಲ್ಲಿ ಓದುವುದು.<br>• ಆಸ್ವಾದನಾ ಟಿಪ್ಪಣಿ ಪ್ರಸ್ತುತಪಡಿಸುವುದು.<br>• ಲೇಖನ ಬರೆಯುವುದು, ಘೋಷ ವಾಕ್ಯ ಬರೆಯುವುದು.<br>• ಕವಿತಾ ರಚನೆಯ ಕಮ್ಮಟವನ್ನು ಏರ್ಪಡಿಸುವುದು. | • ಆಸ್ವಾದನಾ ಟಿಪ್ಪಣಿ<br>• ಲೇಖನ, ಘೋಷ ವಾಕ್ಯ<br>• ಕವಿತಾ ಸಂಕಲನ |

| ಪರಿಕಲ್ಪನೆ | ಪ್ರಕ್ರಿಯೆ / ಚಟುವಟಿಕೆ/ಮೌಲ್ಯಮಾಪನ | ಕಲಿಕಾ ಸಾಧನೆಗಳು |
|---|---|---|
| • ಮಾತೃವಾತ್ಸಲ್ಯದ ಪರಿಕಲ್ಪನೆ | • ಮೌನ ಓದು<br>• ವ್ಯಾಖ್ಯಾನಿಸುವುದು, ಟಿಪ್ಪಣಿ ಬರೆಯುವುದು, ವಿಮರ್ಶಾತ್ಮಕ ಲೇಖನ ಬರೆಯುವುದು.<br>• ಕಥಾರಚನಾ ಕಮ್ಮಟ ಏರ್ಪಡಿಸುವುದು<br>• ಜ್ಞಾನಪೀಠ ಪ್ರಶಸ್ತಿ ವಿಜೇತರ ಮಾಹಿತಿ ಸಂಗ್ರಹಿಸಿ ಬರೆದು ಭಿತ್ತಿಪತ್ರಿಕೆಯಲ್ಲಿ ಪ್ರಕಟಿಸುವುದು.<br>• ಕ್ರಿಯಾಪದ – ನಿಷೇಧ ರೂಪಗಳನ್ನು ತಿಳಿಯುವುದು.<br>• ನುಡಿಗಟ್ಟುಗಳನ್ನು ಬಳಸಿ ಸ್ವಂತ ವಾಕ್ಯಗಳನ್ನು ಬರೆಯುವುದು. | • ವ್ಯಾಖ್ಯಾನ ಲೇಖನ<br>• ಟಿಪ್ಪಣಿ<br>• ವಿಮರ್ಶಾತ್ಮಕ ಲೇಖನ<br>• ಕಥಾ ಸಂಕಲನ<br>• ಭಿತ್ತಿಪತ್ರಿಕೆಯಲ್ಲಿ ಪ್ರಕಟಿಸುವುದಕ್ಕೆ ಮಾಹಿತಿ ಸಂಗ್ರಹ<br>• ನಿಷೇಧ – ಕ್ರಿಯಾ ರೂಪಗಳಿರುವ ವಾಕ್ಯ ರಚನೆ |
| • ದಲಿತ ಬಂಡಾಯದ ಮನೋಧರ್ಮದ ಕೃತಿಗಳು ಸಾಕಷ್ಟು ಈ ಹಿಂದೆ ಬಂದಿವೆ. ಈಗಲೂ ಬರುತ್ತಿವೆ. | • ಸ್ವಾರಸ್ಯ ಬರೆಯುವುದು, ಆಶಯ ಬರೆಯುವುದು, ಟಿಪ್ಪಣಿ ಬರೆಯುವುದು, ಕವಿತೆಗಳ ತುಲನೆ ಮಾಡುವುದು, ಸ್ವಂತ ಕವನ ರಚಿಸುವುದು. | • ಸ್ವಂತ ವಾಕ್ಯ ರಚನೆ<br>• ಸ್ವಾರಸ್ಯ ಟಿಪ್ಪಣಿ<br>• ಆಶಯ ಟಿಪ್ಪಣಿ<br>• ತುಲನಾತ್ಮಕ ಟಿಪ್ಪಣಿ<br>• ಸ್ವರಚಿತ ಕವನ |
| • ವಿವಿಧ ಕ್ಷೇತ್ರಗಳಲ್ಲಿ ಸಾಧನೆ – ಸಂಶೋಧನೆಗಳ ಕುರಿತಾದ ಹಲವಾರು ಲೇಖನಗಳು ಈ ಹಿಂದೆ ಬಂದಿವೆ. ಈಗಲೂ ಬರುತ್ತಿವೆ. | • ಸಂಗ್ರಹಿಸಿ ಬರೆಯುವುದು, ಆತ್ಮಕಥೆ, ವಿವಿಧ ಸಾಧಕರ ಬದುಕಿನ ಕೃತಿಗಳನ್ನು ಓದಿ ಸ್ವಾರಸ್ಯಕರ ಘಟನೆಗಳನ್ನು ತರಗತಿಯಲ್ಲಿ ಮಂಡಿಸುವುದು.<br>• ಲೇಖನ ಚಿಹ್ನೆ ಅಳವಡಿಸುವುದು. | • ಸಂಗ್ರಹ ಟಿಪ್ಪಣಿ<br>• ಆತ್ಮಕಥೆ<br>• ಸ್ವಾರಸ್ಯಕರ ಘಟನೆ ಸಂಗ್ರಹ<br>• ಲೇಖನ ಚಿಹ್ನೆಗಳನ್ನೊಳಗೊಂಡ ವಾಕ್ಯ |

# ಅಪ್ಪನೂ ಒಲೆಯುರಿಯೂ

## ಪ್ರವೇಶ

ದುಡಿಮೆಯು ದೈಹಿಕ ಮತ್ತು ಮಾನಸಿಕ ಆರೋಗ್ಯವನ್ನು ನೀಡುವುದು. ಉದ್ಯೋಗವಿಲ್ಲದವನ ತಲೆ ಪಿಶಾಚಿಯ ಕಮ್ಮಟವೆಂಬ ನಾಣ್ನುಡಿ ಇದೆ. ಯಾವುದೇ ಕೆಲಸವನ್ನು ಮಾಡುವಾಗಲೂ ನಾವು ಏಕಾಗ್ರತೆಯಿಂದ (ತಾಳ್ಮೆ)ನಮ್ಮನ್ನು ಸಂಪೂರ್ಣವಾಗಿ ತೊಡಗಿಸಿಕೊಂಡರೆ ಆ ಕೆಲಸದ ಆನಂದವೇ ಬೇರೆ. 'ದುಡಿಮೆಯೇ ದೇವರು' ಎನ್ನುವ ಸಿದ್ಧಾಂತದಿಂದ ಲೌಕಿಕದಿಂದ ಅಲೌಕಿಕ್ಕೇರಿದವರು ಅದೆಷ್ಟೋ ಮಂದಿ. ಆದರೆ ಇಂದಿನ ಯಾಂತ್ರಿಕ ಯುಗದಲ್ಲಿ ಯಂತ್ರ ಮನುಷ್ಯರಾಗಿ ಬದುಕುವವರರೇ ಹೆಚ್ಚು. ಸೃಜನಶೀಲತೆಗೆ ಯಾವುದೂ ವಸ್ತುವಾಗಬಹುದು. "ರವಿ ಕಾಣದ್ದನ್ನು ಕವಿ"ಕಂಡ ಎನ್ನುವಂತೆ. ರೂಪ ಹಾಸನ ಅವರು ಬರೆದ 'ಅಪನೂ ಒಲೆಯುರಿಯೂ' ಕವಿತೆಯನ್ನು ಆರಂಭಿಸುವ ಮೊದಲು ಅಧ್ಯಾಪಕರು ಮಕ್ಕಳಲ್ಲಿ 'ಇಂದು ನಮ್ಮಿಂದ ದೂರವಾಗುತ್ತಿರುವ ಕಾಯಕಗಳು ಯಾವುವೆಂಬ ಪ್ರಶ್ನೆಯನ್ನು ಕೇಳುವುದು. ಅವರಿಂದ ಈ ಕೆಳಗಿನ ಉತ್ತರವನ್ನು ನಿರೀಕ್ಷಿಸಬಹುದು.

**ಬೇಸಾಯದ ಕೆಲಸಗಳು**

**ಪ್ರಾಣಿಗಳ ಸಾಕಣೆ**

**ಗುಡಿ ಕೈಗಾರಿಕೆ**

**ಆಹಾರ ಶೈಲಿ**

ಈ ರೀತಿಯ ಚಿಕ್ಕ ಚಿಕ್ಕ ಕೆಲಸಗಳನ್ನು ವಿದ್ಯಾರ್ಥಿಗಳು ಹೇಳುವರು. ಚಿಕ್ಕ ಕೆಲಸಗಳಾದರೂ ಇವುಗಳಿಂದ ನಾವು ಕಲಿಯ ಬೇಕಾದ ಪಾಠ ದೊಡ್ಡದು. ಇಂಥ ದುಡಿಮೆಯಿಂದ ಲಭಿಸುವ ನೆಮ್ಮದಿ(ಸಂತೋಷ)ಎಷ್ಟೆಂಬುದನ್ನು ತಿಳಿಯಲು 'ಅಪ್ಪನೂ ಒಲೆಯುರಿಯೂ' ಕವಿತೆಯನ್ನು ಓದುವುದು.

(ನವ್ಯೋತ್ತರ ಕವಿತೆಯಾದ ಕಾರಣ ಕವನ ದ ಸಾಲುಗಳ ವಾಚ್ಯಾರ್ಥವನ್ನು ಮಾತ್ರ ತಿಳಿಸಿದರೆ ಸಾಕಾಗುವುದಿಲ್ಲ. ಸೂಚ್ಯಾರ್ಥವನ್ನು ಅಧ್ಯಾಪಕರು ತಿಳಿಸುವುದು) ಆಧುನಿಕ ಕವಿತೆಗಳನ್ನು ಹಾಡುವ/ವಾಚಿಸುವ ರೀತಿಯನ್ನು ವಿದ್ಯಾರ್ಥಿಗಳಿಗೆ ತಿಳಿಸುವುದು.

ವಿದ್ಯಾರ್ಥಿಗಳು ಕವಿತೆಯನ್ನು ಓದಿ, ನವೀನ ಪದಗಳನ್ನು ಗುರುತಿಸುವರು. ನವೀನ ಪದಗಳ ಅರ್ಥವನ್ನು, ಅರ್ಥಕೋಶ, ಅಧ್ಯಾಪಕರ ಸಹಾಯದಿಂದ ತಿಳಿಯುವರು.

ಕವಿತೆಯ ಸಾರ ಸಂಗ್ರಹಕ್ಕಾಗಿ ಗುಂಪಿನಲ್ಲಿ ಚರ್ಚಿಸಲು ಹೇಳುವುದು. ಗುಂಪಿನಲ್ಲಿ ಕಂಡುಕೊಂಡ ಅಂಶಗಳನ್ನು ಮಂಡಿಸಲು ಅವಕಾಶ ಮಾಡಿ ಕೊಡುವುದು. ಉತ್ತಮವಾಗಿ ಆಶಯವನ್ನು ಮಂಡಿಸಿದ ಗುಂಪನ್ನು ಅಭಿನಂದಿಸುವುದು. ವಿದ್ಯಾರ್ಥಿಗಳು ಕವಿತೆಯನ್ನು ಎಷ್ಟರಮಟ್ಟಿಗೆ ಅರ್ಥೈಸಿರುವರು ಎನ್ನುವುದನ್ನು ತಿಳಿಯಲು ಸಂಕ್ಷಿಪ್ತವಾಗಿ ಉತ್ತರಿಸಿ ಎನ್ನುವ ಪ್ರಶ್ನೆಗಳಿಗೆ ಪ್ರತಿಯೊಬ್ಬರಿಂದಲೂ ಉತ್ತರವನ್ನು ಬರೆಸುವುದು. ಕೆಲವೊಂದು ವಿದ್ಯಾರ್ಥಿಗಳಿಂದ ಬರೆದ ಉತ್ತರವನ್ನು ಓದಿಸುವುದು.

## ಚಟುವಟಿಕೆ

ಅಧ್ಯಾಪಕರು ವಿದ್ಯಾರ್ಥಿಗಳಿಂದ ಆಸ್ವಾದನ ಟಿಪ್ಪಣಿಯನ್ನು ಬರೆಸುವುದು.

ಕವಿತೆಯ ಆಶಯ ಗ್ರಹಣಕ್ಕಾಗಿ ಗುಂಪುಗಳಿಗೆ ಈ ಕೆಳಗಿನ ಅಂಶಗಳಿರುವ ಸಾಲುಗಳನ್ನು ನಿಗದಿಪಡಿಸಬಹುದು.

1. ಒಲೆ ಉರಿಸುವ ಕಾಯಕಕ್ಕಾಗಿ
   ಅಪ್ಪ ಮಾಡುವ ತಯಾರಿ
2. ಒಲೆ ಉರಿಸುವ ತಪಸ್ಸಿನಂತಹ ಕೆಲಸದಿಂದ
   ಅಪ್ಪ ಪ್ರವಾದಿ ಪದವಿಗೇರಿದ ರೀತಿ
3. ಅಪ್ಪನ ಒಲೆ ಉರಿಸುವ ಕಾಯಕಕ್ಕೆ
   ಮಗನ ಟೀಕೆ, ಅಪ್ಪನ ಉತ್ತರ
4. ಈ ಕಾಯಕದಿಂದ ದೇಹ ಮತ್ತು ದೇಶ ಸ್ವಚ್ಛಗೊಂಡು
   ಲೌಕಿಕದಿಂದ ಅಲೌಕಿಕಕ್ಕೆ ಏರುವ ರೀತಿ

ಈ ನಾಲ್ಕು ಅಂಶಗಳಿಗೆ ಸಂಬಂಧಿಸಿದ ವಿಚಾರಗಳನ್ನು ಚರ್ಚಿಸಿ ಉತ್ತರವನ್ನು ಬರೆಯಲು ಸೂಚಿಸುವುದು.

ಪದ್ಯದ ಸಾರಾಂಶ (ಉತ್ತರ) ಹೀಗೂ ಇರಬಹುದಲ್ಲವೇ?

ಅಪ್ಪ ಒಲೆ ಉರಿಸುವುದಕ್ಕಾಗಿ ಪಡುವ ಪಾಡನ್ನು ಕವಯತ್ರಿ ಬಹಳ ಚೆನ್ನಾಗಿ ಈ ಕವಿತೆಯಲ್ಲಿ ಹೇಳಿದ್ದಾರೆ. ಬಚ್ಚಲೊಲೆ ಉರಿಸಿ ನೀರು ಕಾಯಿಸಲು ಏನೆಲ್ಲಾ ವಸ್ತುಗಳು ಅಂಗಳದಲ್ಲಿ ಬಿದ್ದಿವೆ ಅವನ್ನೆಲ್ಲಾ ಹೆಕ್ಕಿ ತಂದು ನೀರು ಕಾಯಿಸುತ್ತಾನೆ. ತೆಂಗಿನ ಮೊಟ್ಟೆ, ಚರೆಟ, ಒಣ ಮಾವಿನ ಎಲೆ, ಹಳೆ ಮದುವೆಯ ಕರೆಯೋಲೆ, ಗೀರಿ ಬಿಟ್ಟ ಬೆಂಕಿ ಕಡ್ಡಿ, ಪೇಪರು, ಪ್ಲಾಸ್ಟಿಕ್ ಕವರು, ಹಾಳುಮೂಳು ರಸೀತಿ, ಸೋಪಿನ, ಪೇಸ್ಟಿನ ಕಾಗದ, ರಬ್ಬರು, ಪ್ಲಾಸ್ಟಿಕು, ಹಳೆ ಬಟ್ಟೆ, ಪೊರಕೆ, ಕೂದಲು, ಅಳಿದುಳಿದ ಪಟಾಕಿ ಚೂರುಗಳು– ಹೀಗೆ ಸಕಲ ವಸ್ತುಗಳನ್ನು ಸಂಗ್ರಹಿಸಿ ಪರಿಸರವನ್ನು ಸ್ವಚ್ಛಗೊಳಿಸುವ ಕೆಲಸ ಆ ಅಪ್ಪನದ್ದು. ಉರಿಸಬಾರದು ಎನ್ನುವ ವಸ್ತುಗಳು ಯಾವುದೂ ಇಲ್ಲ ಎನ್ನುವುದು ಅವನ ನಂಬಿಕೆ. ಬೆಂಕಿಯಾಗುವುದೆಲ್ಲವನ್ನು ಅಗ್ನಿಗಾಹುತಿ ಕೊಟ್ಟು ಅಪ್ಪ ದಿನಾ ಹದಗೊಳ್ಳುವಾ ರೀತಿಯೇ ಬೇರೆ. ಪರಿಸರ ನಾಶಕ್ಕೆ ಕಾರಣವಾಗುವ, ಬೇಜವಾಬ್ದಾರಿಯಿಂದ ಉಪಯೋಗಿಸಿ ಬೀಸಾಡುವ ಎಲ್ಲ ವಸ್ತುಗಳು ಒಲೆ ಉರಿಯಲು ಅಗತ್ಯ.

ಪರಿಸರದ ಮೇಲಿನ ಅಪ್ಪನ ಕಾಳಜಿಯ ಕುರಿತು ವಿದ್ಯಾರ್ಥಿಗಳಿಗೆ ವಿಶೇಷವಾಗಿ ಮನವರಿಕೆ ಈ ಮೂಲಕ ಮಾಡಿಕೊಡುವುದು.

ಎರಡನೇ ದೃಶ್ಯದಲ್ಲಿ ಕವಯಿತ್ರಿ ಅಪ್ಪ ಒಲೆ ಉರಿಸುವ ನೈಜ ಚಿತ್ರಣವನ್ನು ಬಹಳ ಸೊಗಸಾಗಿ ಚಿತ್ರಿಸಿದ್ದಾರೆ. ಒಲೆ ಉರಿಸುವುದೆಂದರೆ ಅಪ್ಪನ ಪಾಲಿಗೆ ತಪಸ್ಸೇ ಸರಿ. ನಿತ್ಯ ಬೂದಿ ತೆಗೆದು ಒಲೆ ಖಾಲಿ ಮಾಡುವುದು, ಅವನೇ ಕಡಿದ ಒಣರೆಂಬೆಗಳನ್ನು ಸಂಗ್ರಹಿಸಿ, ತೆಂಗಿನ ಮೊಟ್ಟೆ, ನಾರುಗಳನ್ನಿಟ್ಟು, ನಿಧಾನಕ್ಕೆ ಹಳೆಪಳೆ ತುಂಡು ಕಾಗದಕ್ಕೆ ಬೆಂಕಿ ಹೊತ್ತಿಸಿ ಒಲೆಯೊಳಗಿಟ್ಟು ಅಪ್ಪ ಒಲೆ ಉರಿಸುತ್ತಾನೆ. ಸ್ವಲ್ಪವೂ ಸೀಮೆ ಎಣ್ಣೆ ಚಿಮುಕಿಸದೇ, ಒಂದರ ಮೇಲೊಂದು ತ್ಯಾಜ್ಯದ ಸಂಗ್ರಹವನಿಟ್ಟು, ಸೌದೆ ಹೊತ್ತುವವರೆಗೂ ತಾಳ್ಮೆಯಿಂದ ಬೆಂಕಿ ಹೊತ್ತಿಸುವ, ಊದುಗೊಳವೆಯಲ್ಲಿ ಊದಿ–ಊದಿ ಮತ್ತೆ ಮತ್ತೆ ಒಲೆಯುರಿಸುವ ಅಪ್ಪನ ಕಾಯಕವೇ ವಿಶೇಷ. "ತಾಳಿದವ ಬಾಳಿಯಾನು" ಎಂಬ ಮಾತಿಗೆ ಈ ಅಪ್ಪನೇ ಉದಾಹರಣೆ.

ಈ ಭಾಗದಲ್ಲಿ ಬಂದಿರುವ 'ತಪಸ್ಸು' ಮತ್ತು 'ಪ್ರವಾದಿ' ಎಂಬ ಪದಗಳ ಅರ್ಥದತ್ತ ವಿದ್ಯಾರ್ಥಿಗಳ ಗಮನ ಸೆಳೆಯುವುದು ಗಮನಿಸಬೇಕು. ಧಾರ್ಮಿಕ, ಆಧ್ಯಾತ್ಮಿಕ ಸಾಧನೆ ಕುರಿತು ಬಳಸುವ ಪದಗಳು. ಇವು ಸಾಧನೆಯನ್ನು ಮಾಡುವಾಗ ಎಷ್ಟೇ ಅಡೆ

ತಡೆ ಕಷ್ಟ ಕಾರ್ಪಣ್ಯಗಳು ಬರಲಿ, ಅವರು ತಮ್ಮ ಸಾಧನೆಯನ್ನು ಸಾಧಿಸಿಯೇ ಯಶಸ್ವಿಯಾಗುವರು. ಇಲ್ಲಿಯ ಅಪ್ಪನೂ ಹಾಗೆಯೇ? ತಪಸ್ಸಿನಂತೆ ಕಾಯಕ ಮಾಡಿ ಕೆಲವು ಸದುದ್ದೇಶಗಳು ನೆರವೇರುತ್ತವೆ.

1) ನೀರು ಕಾಯಿಸುವುದು.

2) ಪರಿಸರ ಸ್ವಚ್ಛಮಾಡುವುದು.

3) ತಾಳ್ಮೆಯ ಪರೀಕ್ಷೆ

4) ಕಸದಿಂದ ರಸದ ಸೃಷ್ಟಿ(ಜೈವಿಕ ಗೊಬ್ಬರ, ಬೂದಿ)

5) ಸಮಯದ ಸದುಪಯೋಗ

ಗಂಟೆ ಗಟ್ಟಲೆ ಮೈ–ಕೈ ಹಿಗ್ಗಿಸಿ ತಾಳ್ಮೆಯಿಂದ ತಪಸ್ಸು ಮಾಡುವ ಸಾಹಸದ ರೀತಿಯನ್ನು ನೋಡಿ ಹೊಸ ತಲೆಮಾರಿನ ಯುವಕ ಮಗನಿಗೆ ಕಿರಿ, ಕಿರಿ. ಆಧುನಿಕ ಯಂತ್ರ ಸಂಸ್ಕೃತಿಯ ಸೋಲಾರು, ಗೀಸರು, ಬಾಯ್ಲರು ಈ ಅನುಕೂಲಗಳಿರುವಾಗ, ಈ ಮುಪ್ಪಿನಲ್ಲಿ ಗಂಟೆ ಗಟ್ಟಲೆ ಬಿಸಿ ಕಾವಿನ ಮುಂದೆ ಕುಳಿತುಕೊಳ್ಳುವ ನರಕಯಾತನೆ ಯಾಕೆಂದು ಮಗನ ಯೋಚನೆ. ಆರಾಮದಲಿ ಕಳೆಯಬಾರದೇ ಉಳಿದ ಬದುಕ ಎನ್ನುವುದು ಮಗನ ಗೊಣಗಾಟ. ಆದರೆ ಯಾವುದೇ ಕಷ್ಟಕ್ಕೂ, ದುಃಖಕ್ಕೂ ಮನ ಸೋಲದ, ಆಡಂಬರಕ್ಕೆ ಬಲಿಯಾಗದ ಸ್ಥಿತ ಪ್ರಜ್ಞ ಅಪ್ಪ ಮಾತ್ರ ನಕ್ಕು ಮಗನಿಗೆ ಈ ಕೆಳಗಿನ ಉತ್ತರವನ್ನು ನೀಡುವನು.

ಒಲೆಯುರಿಸುವುದೆಂದರೆ  
ಬಿಸಿ ನೀರು ಕಾಯಿಸುವುದಲ್ಲ ಮಗನೇ  
ಹುಡುಕಿ ಸುಟ್ಟು ಸುತ್ತ ಮುತ್ತಲಿನ ಕೊಳೆ  
ದಿವ್ಯವಾಗುತ್ತಾ ಹದಗೊಳ್ಳುವಾ ಕಲೆ  
ಬದುಕು ಮಾಗಲು ಬೆವರು ಕಟ್ಟುವಾ ಬೆಲೆ

ಇಲ್ಲಿ ಕೇವಲ ಒಲೆ ಉರಿದು ಪರಿಸರ ಸ್ವಚ್ಛವಾಗಿ, ಬಿಸಿ ನೀರಾಗುವುದೇ ವಿಷಯವಲ್ಲ. ಅಪ್ಪನಂತೆ ನಾವು ತಾಳ್ಮೆಯಿಂದ ನಮ್ಮಲ್ಲಿರುವ ಕೊಳೆಯಂತಹ ಕೆಟ್ಟ ವಿಕಾರಗಳನ್ನು ಉರಿಸಿ ಜೀವನವನ್ನು ದಿವ್ಯತೆಯತ್ತ ಕೊಂಡು ಹೋಗಬೇಕೆಂದು ಮಗನ ಮುಖಾಂತರ ಯುವಜನತೆಗೆ ಕವಯತ್ರಿ ಸಂದೇಶವನ್ನು ನೀಡುವರು.

ಧಗ ಧಗ ಉರಿಯ ಮುಂದೆ ಬಚ್ಚಲೊಲೆ ಉರಿಸಲು ಕುಳಿತ ಅಪ್ಪನೆಂಬ ಸಂತ ಶಾಂತನಾಗಿರುವನು. ಉರಿಯುವುದರಿಂದ ನೀರು ಬಿಸಿಯಾಗುವಂತೆ, ಆ ಒಲೆಯ ಮುಂದೆ ಕುಳಿತ ಅಪ್ಪನ ಲೌಕಿಕದಿಂದ ಅಲೌಕಿಕತೆಗೇರುವ ರೀತಿ, ತಾನು ಮಾಡುವ ಕೆಲಸದಲ್ಲಿನ ಬದ್ಧತೆ, ಸಿದ್ಧತೆ, ಆತುರವಿಲ್ಲದಿರುವಿಕೆ ಗಮನಿಸಬೇಕು. ಹೇಗೋ ಉರಿಸಿದರಾಯ್ತು ಎಂಬ ಉದಾಸೀನವಿಲ್ಲದೆ ನಿಧಾನಕ್ಕೆ ಸೌದೆ ಹೊತ್ತಿಸಿ, ಕಾವು ಮೂಡಿಸಿ ಒಲೆಯುರಿಸುವ ಅಪ್ಪ – ನಿಜಕ್ಕೂ ನಮಗೆಲ್ಲರಿಗೂ ಮಾದರಿ. ಹಳೆಯ ಮತ್ತು ಹೊಸ ತಲೆಮಾರಿನ ಮುಖಾಮುಖಿ, ಕಾಯಕದ ನಿಷ್ಠೆ ಈ ಕವಿತೆಯಲ್ಲಿ ಗಮನಿಸಲೇ ಬೇಕಾದ ಅಂಶಗಳು.

### ಲೇಖನ ತಯಾರಿ

'ಮನೆಯಲ್ಲಿ ಬಳಸುವ ಆಧುನಿಕ ಯಂತ್ರ ಸಾಮಗ್ರಿಗಳು' ನಿತ್ಯ ಜೀವನದಲ್ಲುಂಟುಮಾಡುವ ಒಳಿತು ಕೆಡುಕುಗಳ ಕುರಿತು ಸಾಹಿತ್ಯ ಸಭೆಯಲ್ಲಿ ಮಂಡಿಸಲು ಲೇಖನವೊಂದನ್ನು ತಯಾರಿಸಲು ವಿದ್ಯಾರ್ಥಿಗಳಲ್ಲಿ ಹೇಳುವುದು.

ವಿದ್ಯಾರ್ಥಿಗಳು ಗುಂಪಿನಲ್ಲಿ ಚರ್ಚಿಸಿ ಮನೆಯಲ್ಲಿ ಬಳಸುವ ಆಧುನಿಕ ಯಂತ್ರ ಸಾಮಗ್ರಿಗಳನ್ನು ಪಟ್ಟಿ ಮಾಡಲಿ. ಅವುಗಳ ಒಳಿತು ಕೆಡುಕುಗಳ ಕುರಿತು ವಿಚಾರಗಳನ್ನು ಬರೆದು ಗುಂಪಿನಲ್ಲಿ ಒಬ್ಬರಂತೆ ಮಂಡಿಸಲಿ.

ಅಧ್ಯಾಪಕರು ಈ ಕೆಳಗಿನಂತೆ ಮಾರ್ಗದರ್ಶನವನ್ನು ಮಾಡುವುದು.

**ಯಂತ್ರ ಸಾಮಗ್ರಿಗಳ ಪಟ್ಟಿ**

| | | |
|---|---|---|
| 1) ಫ್ರಿಡ್ಜ್ | 2) ಎ.ಸಿ. | 3) ಬಟ್ಟೆ ತೊಳೆಯುವ ಯಂತ್ರ |
| 4) ಸೋಲಾರು | 5) ಬಾಯ್ಲರು | 6) ಕುಕ್ಕರ್ |

| **ಒಳಿತು** | **ಕೆಡುಕು** |
|---|---|
| 1) ಸಮಯದ ಲಾಭ | ಪರಿಸರ ಹಾನಿ |
| 2) ವಸ್ತುಗಳು ಕೆಡದಂತೆ ಸಂಗ್ರಹಿಸಿ ಇಡಲು | ಆರೋಗ್ಯಕ್ಕೆ ಹಾನಿಕಾರಕ |
| 3) | |
| 4) | |

**ಕಿರು ಲೇಖನ**

'ಪ್ಲಾಸ್ಟಿಕ್ ಉರಿಸಿದರೂ ಹೂತು ಹಾರಿದರೂ ದುಷ್ಪರಿಣಾಮ ತಪ್ಪಿದ್ದಲ್ಲ' ಪ್ಲಾಸ್ಟಿಕ್ ಸಾಮಗ್ರಿಗಳ ಮಿತವಾದ ಬಳಕೆಯ ಕುರಿತು ಕಿರುಲೇಖನ ಬರೆಯಲು ಹೇಳುವುದು.

- ಪ್ಲಾಸ್ಟಿಕ್ ಮಣ್ಣಿನಲ್ಲಿ ಬೆರೆಯುವುದಿಲ್ಲ
- ಪ್ಲಾಸ್ಟಿಕ್ ಉರಿಸುವುದರಿಂದ ವಾಯು ಮಾಲಿನ್ಯ
- ಪ್ಲಾಸ್ಟಿಕ್ ಉರಿಸುವುದು ರೋಗಗಳಿಗೆ ಪ್ರೇರಕ
- ಭೂಮಿಗೆ ನೀರು ಇಂಗುವುದನ್ನು ತಡೆಯುವುದು
- ಮಣ್ಣಿನ ಫಲವತ್ತತೆಯನ್ನು ನಾಶ ಗೊಳಿಸುವುದು.

ದುಷ್ಟರಿಣಾಮಗಳನ್ನು ಕುರಿತು ಕೆಲವೊಂದು ವಿಚಾರಗಳನ್ನು ವಿದ್ಯಾರ್ಥಿಗಳಿಗೆ ಅಧ್ಯಾಪಕರು ಹೇಳುವುದು. ಈ ಕಾರಣದಿಂದ ಪ್ಲಾಸ್ಟಿಕ್‌ನ ಅಮಿತ ಬಳಕೆಯನ್ನು ತಡೆಗಟ್ಟುವ ಕುರಿತಾಗಿ ಲೇಖನವನ್ನು ಪ್ರತಿಯೊಬ್ಬರಲ್ಲಿಯೂ ಬರೆಸಿ, ತರಗತಿಯಲ್ಲಿ ಓದಿಸುವುದು.

ಲೇಖನ ಬರೆಯಲು ಸಹಾಯಕವಾದ ಕೆಲವೊಂದು ಪುಸ್ತಕಗಳನ್ನು ಹೆಸರುಗಳನ್ನು ಅಧ್ಯಾಪಕರು ಹೇಳುವುದು.

- ಹಸಿರುವಾಣಿ ಲೇಖಕ–ಪಿ.ಎನ್.ಮೂಡಿತ್ತಾಯ

ಸ್ವಚ್ಛತಾ ವಾರಾಚರಣೆಯ ಅಂಗವಾಗಿ ವಿದ್ಯಾರ್ಥಿಗಳು ಕೈಗೊಳ್ಳಬಹುದಾದ ಕಾರ್ಯಕ್ರಮಗಳ ವಿವರಣೆಗಳನ್ನು ವಿದ್ಯಾರ್ಥಿಗಳಿಂದ ಬರೆಸುವುದು. ವಿದ್ಯಾರ್ಥಿಗಳು ಬರೆದ ಅಂಶಗಳನ್ನು ತರಗತಿಲ್ಲಿ ಪ್ರಸ್ತುತ ಪಡಿಸಲು ಹೇಳುವುದು.

1) ತರಗತಿ ಸ್ವಚ್ಛಗೊಳಿಸುವುದು
2) ಶಾಲಾ ಪರಿಸರ ಸ್ವಚ್ಛಗೊಳಿಸುವುದು/ಪ್ರತಿಜ್ಞೆ ಸ್ವೀಕರಿಸುವುದು
3) ತಮ್ಮ ತಮ್ಮ ಮನೆಯನ್ನು ಸ್ವಚ್ಛಗೊಳಿಸುವುದು.

4) ಸ್ವಚ್ಛತೆ ಬಗ್ಗೆ ಜನರಿಗೆ ಮನವರಿಕೆ ಮಾಡಲು ಕರಪತ್ರ ತಯಾರಿಸಿ ಹಂಚುವುದು.

5) ಬಸ್ ನಿಲ್ದಾಣದಲ್ಲಿ ಘೋಷಣ ವಾಕ್ಯ ಬರೆದು ಪ್ರದರ್ಶಿಸುವುದು.

6) ಬೀದಿ ನಾಟಕ ಪ್ರದರ್ಶನ ಮಾಡುವುದು

**ಘೋಷಣ ವಾಕ್ಯ**

1) ಇಂದಿನ ಸ್ವಚ್ಛತೆ
ನಾಳಿನ ಭವ್ಯತೆ

2) ಪ್ರಕೃತಿಯನ್ನು ಸ್ವಚ್ಛಮಾಡೋಣ
ನಮ್ಮನ್ನು ನಾವು ರಕ್ಷಿಸೋಣ

3) ಸುತ್ತುಮುತ್ತಲಿನ ಸ್ವಚ್ಛತೆ
ಇರಲಿ ಇದರಲಿ ಏಕತೆ

**ಕವಿತಾ ಕಮ್ಮಟ**

ಹೊಸ ಗನ್ನಡ ಕವಿತೆಗಳನ್ನು ಓದಿದ ಅನಂತರ ವಿದ್ಯಾರ್ಥಿಗಳ ಸೃಜನಶೀಲ ಬರಹಕ್ಕೆ ಹೆಚ್ಚಿನ ಮಹತ್ವವನ್ನು ನೀಡುವುದಕ್ಕಾಗಿ ಕವಿತಾ ರಚನಾ ಕಮ್ಮಟವನ್ನು ಏರ್ಪಡಿಸಲು ಅಧ್ಯಾಪಕರು ಹೇಳುವುದು.

ಈ ಕೆಳಗಿನ ಮಾಹಿತಿಗಳನ್ನು ಅಧ್ಯಾಪಕರು ಒದಗಿಸುವುದು.

1) ನಾಡಿನ ಪ್ರಸಿದ್ಧ ಕವಿಗಳನ್ನು ಆಮಂತ್ರಿಸುವುದು.

2) ಯಾವುದಾದರೂ ಒಂದು ವಿಷಯದ ಆಯ್ಕೆ
(ಉದಾ: ಪರಿಸರ ಸಂರಕ್ಷಣೆ, ಸ್ವಚ್ಛತೆ, ದುಡಿಮೆ, ಅನಾಥರು)

3) ರಚನೆಗೆ ಬೇಕಾದ ಮಾಹಿತಿಗಳನ್ನು ಒದಗಿಸುವುದು.

4) ವಿದ್ಯಾರ್ಥಿಗಳು ಬರೆದ ಕವಿತೆಯನ್ನು ಓದಲು/ಹಾಡಲು ಹೇಳುವುದು.

5) ಅಗತ್ಯ ತಿದ್ದುಪಡಿಗಳೊಂದಿಗೆ ಉತ್ತಮ ಪಡಿಸುವುದು.

6) ವಿದ್ಯಾರ್ಥಿಗಳು ಬರೆದ ಕವಿತೆಗಳನ್ನು ಸಂಕಲನ ರೂಪದಲ್ಲಿ ಪ್ರಕಟಿಸಲು ಯೋಗ್ಯ ವೇದಿಕೆ ಸಿದ್ಧಪಡಿಸುವುದು.

7) ಕವಿತಾ ಸಂಕಲನದ ಸ್ವರೂಪವನ್ನು ಹೇಳುವುದು. (ಸಂಪಾದಕ, ಸಂಪಾದಕ ಮಂಡಳಿ, ಹಿರಿಯರ ನುಡಿ, ಸಂಪಾದಕೀಯ, ಕವಿತೆಗಳ ಆಯ್ಕೆ,ಅನುಕ್ರಮಣಿಕೆ, ಅನುಬಂಧ....ಇತ್ಯಾದಿ)

# ತಾಯಿ

ಡಾ. ಯು. ಆರ್. ಅನಂತಮೂರ್ತಿ

ಹೊಸಗನ್ನಡ ಕಾಲಘಟ್ಟದ ನವೋದಯ ಪಂಥದ ಬಳಿಕ ಕಾಣಿಸಿಕೊಂಡ ಚಳುವಳಿ ನವ್ಯ ಸಾಹಿತ್ಯ. ಸಾಮಾಜಿಕ ಪ್ರಜ್ಞೆಗಿಂತ ವ್ಯಕ್ತಿಪ್ರಜ್ಞೆಯೇ ಇಲ್ಲಿ ಪ್ರಧಾನ. ಆಳವಾದ ಚಿಂತನೆಯಿಂದೊಡಗೂಡಿದ ಈ ಸಾಹಿತ್ಯ ಹೆಚ್ಚು ಅಂತರ್ಮುಖಿ . ಅಭಿವ್ಯಕ್ತಿಯಲ್ಲಿ ವ್ಯಂಗ್ಯಕ್ಕೆ, ಸೂಚ್ಯಾರ್ಥಕ್ಕೆ ಪ್ರಾಧಾನ್ಯ ನೀಡುತ್ತದೆ. ನವ್ಯ ಪಂಥದ ಬಹುತೇಕ ಕೃತಿಗಳಲ್ಲಿ ಪ್ರತಿಮೆಗಳೇ ಅಭಿವ್ಯಕ್ತಿಯ ಸೂಚಕಗಳಾಗಿರುತ್ತಿವೆ.

ಹೊಸಗನ್ನಡ ಕಾವ್ಯದಲ್ಲಿ ಮೊದಲಿಗೆ ನವ್ಯತೆಯನ್ನು ತಂದವರು ವಿ. ಕೃ. ಗೋಕಾಕರು. ಆದರೆ ಗೋಪಾಲಕೃಷ್ಣ ಅಡಿಗರು ನವ್ಯ ಕಾವ್ಯ ಚಳುವಳಿಯ ಪ್ರವರ್ತಕರು ಎಂದೆನಿಸಿಕೊಂಡರು. ಬಿ. ಸಿ. ರಾಮಚಂದ್ರ ಶರ್ಮ, ಯು. ಆರ್. ಅನಂತಮೂರ್ತಿ, ಲಂಕೇಶ್, ಕೆ. ವಿ. ತಿರುಮಲೇಶ್, ಎ. ಕೆ. ರಾಮಾನುಜನ್ ಮೊದಲಾದವರು ಉಲ್ಲೇಖನೀಯ ನವ್ಯ ಸಾಹಿತಿಗಳು.

ಪ್ರಸ್ತುತ ನವ್ಯ ಸಂಪ್ರದಾಯಕ್ಕೆ ಸೇರಿದ ಯು. ಆರ್. ಅನಂತಮೂರ್ತಿಯವರ 'ತಾಯಿ' ಎಂಬ ಕಥೆಯನ್ನು ಈ ಘಟಕದಲ್ಲಿ ಅಭ್ಯಾಸಕ್ಕಾಗಿ ಅಳವಡಿಸಿಕೊಳ್ಳಲಾಗಿದೆ.

## ಪ್ರವೇಶ ಚಟುವಟಿಕೆ

ವಿದ್ಯಾರ್ಥಿಗಳು ಅದಾಗಲೇ ಹಲವಾರು ಸಣ್ಣಕತೆಗಳನ್ನು ಓದಿರುತ್ತಾರೆ. ಸಣ್ಣಕತೆಗಳ ಸ್ವರೂಪ, ಲಕ್ಷಣಗಳ ಕುರಿತು ಜ್ಞಾನವನ್ನು ಹೊಂದಿರುತ್ತಾರೆ. ಅವರು ತಮಗೆ ತಿಳಿದಿರುವ ಕಥೆಗಾರರ ಹೆಸರನ್ನು ತರಗತಿಯಲ್ಲಿ ಹೇಳಲಿ.

ಹಿಂದಿನ ತರಗತಿಗಳಲ್ಲಿ ತಾವು ಓದಿದ ಕಥೆಗಳನ್ನು, ಕಥಾ ಲೇಖಕರನ್ನು ಹೇಳಲಿ. ವಿದ್ಯಾರ್ಥಿಗಳು ಹೇಳುವ ಹೆಸರುಗಳನ್ನು ಬಿಟ್ಟುಳಿದ ಹೆಸರುಗಳನ್ನು ಸೂಚಿಸುತ್ತಾ ಅವರು ಬರೆದ ಸಣ್ಣಕತೆಗಳ ವೈಶಿಷ್ಟ್ಯಗಳನ್ನು ತಿಳಿಸುತ್ತಾ ಡಾ. ಯು. ಆರ್. ಅನಂತಮೂರ್ತಿ ಹೆಸರನ್ನು ಪ್ರಸ್ತಾಪಿಸುವುದು. ಅವರ ಸಣ್ಣಕತೆ, ಕಾದಂಬರಿಗಳ ಬಗೆಗಿನ ಸಂಕ್ಷಿಪ್ತ ಮಾಹಿತಿಯನ್ನು ನೀಡುವುದು. ಹೆಚ್ಚಿನ ಮಾಹಿತಿಗೆ ಅನುಕೂಲವಾಗುವಂತೆ ಕವಿ ಕೃತಿ ಪರಿಚಯದಲ್ಲಿ ನೀಡಿರುವ ಮಾಹಿತಿಗಳನ್ನು ಓದಿಕೊಳ್ಳುವಂತೆ ಸೂಚಿಸುವುದು. ಬಳಿಕ ಪಾಠಭಾಗಕ್ಕೆ ಬರುವುದು.

## ಪಾಠ ಭಾಗದ ಓದು

'ತಾಯಿ' ಸಣ್ಣಕತೆಯಾದುದರಿಂದ ಕಥೆಯ ಆಶಯ ಗ್ರಹಣದ ಉದ್ದೇಶದಿಂದ ಬಾಯ್ದೆರೆ ಓದಿಗೆ ಅವಕಾಶ ನೀಡುವುದು. ಪ್ರತಿಯೊಬ್ಬ ವಿದ್ಯಾರ್ಥಿಯು ಒಳಗೊಳ್ಳುವಂತೆ ಸರದಿ ಓದಿಗೆ ಅವಕಾಶ ನೀಡುವುದು. ಪ್ರಾದೇಶಿಕ ಭಾಷೆಯ ಶೈಲಿಯಲ್ಲಿ ಕಥೆ ಇರುವುದರಿಂದ ಕೆಲವೊಂದು ಪದಗಳಿಗೆ ಅರ್ಥವನ್ನು ಕಂಡುಕೊಳ್ಳಬೇಕಾದೀತು. ಈ ಸಂದರ್ಭದಲ್ಲಿ ಪಾಠಭಾಗದ ಕೊನೆಯಲ್ಲಿ ಕೊಟ್ಟಿರುವ ಪದಗಳ ಅರ್ಥವನ್ನೊಮ್ಮೆ ನೋಡಿಕೊಳ್ಳುವಂತೆ ಸೂಚನೆ ನೀಡುವುದು.

## ಕಥಾ ನಿರೂಪಣೆಯ ತಂತ್ರ

'ತಾಯಿ' ಕಥೆ ವಿಶಿಷ್ಟವಾಗಿ ನಿಲ್ಲುವುದು ಅದರ ವಿಭಿನ್ನ ಕಥಾಶೈಲಿಯಿಂದ. ಪಾಠಭಾಗದ ಓದಿನ ಸಂದರ್ಭದಲ್ಲಿ ವಿದ್ಯಾರ್ಥಿಗಳು ಅದನ್ನು ಗಮನಿಸುವಂತೆ ಸೂಚಿಸುವುದು. ಕಥೆಯೊಳಗೊಂದು ಕಥೆಯನ್ನು ಬರೆದುಕೊಂಡು ಹೋಗುವ ಕಥೆಗಾರರ ನಿರೂಪಣಾ ತಂತ್ರದ ಕುರಿತು ವಿದ್ಯಾರ್ಥಿಗಳು ಪರಸ್ಪರ ಚರ್ಚಿಸಿ, ಅಲ್ಲಿರುವ ವಿಶೇಷತೆಗಳನ್ನು ಗುರುತಿಸಿಕೊಳ್ಳಲಿ. ಅಧ್ಯಾಪಕರು ಅರ್ಥೈಸಿಕೊಡುವಲ್ಲಿ ಹೆಚ್ಚಿನ ಗಮನ ಹರಿಸುವುದು.

ಚೆಲುವನ್ನು, ಸೌಂದರ್ಯವನ್ನು ವರ್ಣಿಸುವಲ್ಲಿ ಜನಪ್ರಿಯ ತ್ರಿಪದಿಯೊಂದರ ಪ್ರಭಾವವನ್ನು ಕಾಣಬಹುದು. ವಿದ್ಯಾರ್ಥಿಗಳು ಅದನ್ನು ಗುರುತಿಸಿಕೊಳ್ಳುವಂತೆ ಸೂಚಿಸುವುದು. ತ್ರಿಪದಿಯನ್ನು ಕಥೆಗಾರರು ಬಳಸಿಕೊಂಡ ರೀತಿಯನ್ನು ಗಮನಿಸುವಂತೆ ಮಾಡುವುದು.

## ಆಶಯ ಗ್ರಹಣ ಪ್ರಶ್ನೆಗಳು

ಕಥೆಯ ಆಶಯವನ್ನು ತಿಳಿದುಕೊಳ್ಳಲು ನೆರವಾಗುವಂತೆ ಅಧ್ಯಾಪಕರು ಪೂರಕ

ಪ್ರಶ್ನೆಗಳನ್ನು ಕೇಳುವುದು

- ತಾಯಿ ಅಬ್ಬಕ್ಕಳ ದುಃಖಕ್ಕೆ ಕಾರಣವೇನು?
- ಚೆಲುವನು ತಾಯಿಯನ್ನು ತೊರೆದು ಹೋದದ್ದೇಕೆ?
- ಚೆಲುವನು ತೊರೆದು ಹೋದುದಕ್ಕೆ ಶೀನನ ಪ್ರತಿಕ್ರಿಯೆ ಏನು?

ಇವೇ ಮೊದಲಾದ ಪೂರಕ ಪ್ರಶ್ನೆಗಳನ್ನು ಕೇಳುವುದರ ಮೂಲಕ ಪಾಠಭಾಗದ ಆಶಯವನ್ನು ವಿದ್ಯಾರ್ಥಿಗಳು ತಿಳಿದು ಕೊಳ್ಳುವಲ್ಲಿ ನೆರವಾಗುವುದು.

ಕಥೆಯ ಆಶಯವನ್ನು ತಿಳಿದ ಬಳಿಕ ವಿದ್ಯಾರ್ಥಿಗಳು 'ಸಂಕ್ಷಿಪ್ತವಾಗಿ ಉತ್ತರಿಸಿರಿ' ಎಂಬಲ್ಲಿ ಕೊಟ್ಟಿರುವ ಪ್ರಶ್ನೆಗಳಿಗೆ ವೈಯಕ್ತಿಕವಾಗಿ ಉತ್ತರವನ್ನು ಬರೆಯಲಿ. ಉತ್ತರಿಸಲು ಕಷ್ಟವಾದೆಡೆಯಲ್ಲಿ ಅಧ್ಯಾಪಕರು ನೆರವಾಗುವುದು. ತಾವು ಬರೆದ ಉತ್ತರವನ್ನು ತರಗತಿಯಲ್ಲಿ ಓದಲಿ. ಅಧ್ಯಾಪಕರು ವಿದ್ಯಾರ್ಥಿಗಳು ಬರೆದ ಉತ್ತರವನ್ನು ಮೌಲ್ಯಮಾಪನ ಮಾಡುವುದು. ವಿದ್ಯಾರ್ಥಿಗಳು ಸೂಕ್ತ ತಿದ್ದುಪಡಿಗಳೊಂದಿಗೆ ಉತ್ತರವನ್ನು ಪರಿಷ್ಕರಿಸಿ ಬರೆಯಲಿ.

## ಮಾದರಿ

- ಚೆಲುವನು ಮನೆ ಬಿಟ್ಟು ಹೋಗಲು ಕಾರಣವೇನು?

ಚೆಲುವನ ತಂದೆ ತೀರಿಕೊಂಡ ಬಳಿಕ ತಾಯಿ ಅಬ್ಬಕ್ಕಳು ಅವನ ಧಿಕ್ಕಾರದ ನಡುವೆಯೂ ಬೇರೊಬ್ಬನಲ್ಲಿ ಕೂಡಿಕೆ ಮಾಡಿಕೊಂಡಿದ್ದಳು. ಇದರಿಂದ ಸಿಟ್ಟುಗೊಂಡ ಚೆಲುವ ತಾಯಿಯನ್ನು ತೊರೆದು ಮನೆಬಿಟ್ಟು ಹೊರಟು ಹೋದನು.

- ಅಬ್ಬಕ್ಕಳಿಗೆ ಅಪರಾಧ ಪ್ರಜ್ಞೆ ಮೂಡಿಬರಲು ಕಾರಣ

ಅಬ್ಬಕ್ಕಳು ತನ್ನ ಎರಡನೆಯ ಮಗು ಶೀನನಿಗೆ, ಕ್ರೂರಿಯಾದ ತಾಯಿಯೊಬ್ಬಳು ಅವಳ ಕರುಳ ಬಳ್ಳಿಯನ್ನೇ ಮನೆಯಿಂದ ಹೊರದೂಡಿದ ಕಥೆಯನ್ನು ಹೇಳುತ್ತಿದ್ದಳು. ಕಥೆಯಲ್ಲಿನ ಕ್ರೂರಿ ತಾಯಿಗೆ ಪರ್ಯಾಯವಾಗಿ ತನ್ನನ್ನು ಆರೋಪಿಸಿಕೊಂಡು ತಾನೂ ತನ್ನ ಹಿರಿಯ ಮಗನೆದುರಿಗೆ ಕ್ರೂರಿಯಾಗಿ ನಡೆದುಕೊಂಡೆನೆಂದು ಪರಿತಪಿಸುವಳು. ಕಥೆಯಲ್ಲಿ ತಾಯಿ ಮಗುವನ್ನು ಮನೆಯಿಂದ ಹೊರಮಾಡಿದ ವೇಳೆಯಲ್ಲಿ ಆ ಮಗು ಮನೆಯ ಹೊರಗೆ ಇದ್ದ ಹುಲಿಯ ಬಾಯಿಗೆ ತುತ್ತಾಯಿತು. ಅಂತೆಯೇ ತನ್ನ ಮಗ ಹುಲಿಯ ಬಾಯಿಗೋ ಇನ್ನೇನೋ ವಿಪತ್ತಿಗೆ ಒಳಗಾಗಿರಬಹುದೋ ಎಂದು ಪರಿತಪಿಸುವಳು.

- ಎದೆಯಿಂದ ಸಿಹಿಯಾದ ಹಾಲು ಹರಿಯುತ್ತದೆ.... ಕಣ್ಣಿಂದ ನೀರು ಸುರಿಯುತ್ತದೆ.

  ಮಾತೃವಾತ್ಸಲ್ಯ ಭಾವನೆ ಒಂದೆಡೆಯಾದರೆ, ಹಿರಿಯ ಮಗನನ್ನು ಹೊರದಬ್ಬಿ ಅಪರಾಧ ಮಾಡಿದೆ ಎಂಬ ಕೊರಗು ಇನ್ನೊಂದೆಡೆ.

## ಚಟುವಟಿಕೆಗಳು

### ಕಥೆಯೊಳಗೊಂದು ಕಥೆ ಬೆಸೆದ ಬಗೆ

ವಿದ್ಯಾರ್ಥಿಗಳು ಈಗ ಗುಂಪಲ್ಲಿ ಕುಳಿತುಕೊಂಡು 'ತಾಯಿ' ಕಥೆಯ ನಿರೂಪಣಾ ಶೈಲಿಯ ಕುರಿತು ಚರ್ಚಿಸಲಿ.

- 'ತಾಯಿ' ಕಥೆ ಉಳಿದ ಕಥೆಗಳಿಗಿಂತ ಭಿನ್ನವಾಗಿ ನಿಲ್ಲುತ್ತದೆಯೇ?
- ಕಥೆಯ ನಿರೂಪಣೆಯ ತಂತ್ರದ ಬಗ್ಗೆ ನಿಮ್ಮ ಅನಿಸಿಕೆಗಳೇನು.

ಇದೇ ಮೊದಲಾದ ಸೂಚಕಗಳನ್ನಿರಿಸಿಕೊಂಡು ಚರ್ಚೆಯನ್ನು ಬೆಳೆಸುವಲ್ಲಿ ಅಧ್ಯಾಪಕರು ಗಮನಹರಿಸುವುದು. ಚರ್ಚೆಯ ಬಳಿಕ ಬಂದ ತೀರ್ಮಾನಗಳನ್ನು ಆಧರಿಸಿಕೊಂಡು 'ತಾಯಿ' ಕಥೆಯಲ್ಲಿ, ಕಥೆಯೊಳಗೆ ಕಥೆ ಬೆಸೆದುಕೊಂಡು ಕಥೆಯ ಆಶಯ ಪ್ರಕಟವಾದ ಬಗೆಯನ್ನು ಕುರಿತು ಟಿಪ್ಪಣಿ ಬರೆಯಲಿ. ಬರೆದುದನ್ನು ಗುಂಪಿನಲ್ಲಿ ಮಂಡಿಸಲಿ. ಪರಸ್ಪರ ಮೌಲ್ಯಮಾಪನದೊಂದಿಗೆ ಪರಿಷ್ಕರಿಸಿ ಬರೆಯಲ್ಲಿ ಚಟುವಟಿಕಾ ಪುಸ್ತಕದಲ್ಲಿ ಸೇರಿಸಿಕೊಳ್ಳಲಿ.

### ವಿಮರ್ಶಾತ್ಮಕ ಲೇಖನ

ಪಾಠಭಾಗದಲ್ಲಿ ಬಂದಿರುವ ಮೊದಲನೆಯ ಚಟುವಟಿಕೆಯೊಡನೆ ಸೇರಿಸಿಕೊಂಡು ಈ ಚಟುವಟಿಕೆಯನ್ನು ಮುಂದುವರಿಸುವುದು. ವಿದ್ಯಾರ್ಥಿಗಳನ್ನು ಎರಡು ಗುಂಪುಗಳನ್ನಾಗಿಸಿ ಒಂದು ಗುಂಪು ಕರುಳಕುಡಿಯ ಬರವಿಗಾಗಿ ತುಡಿಯುವ ಮಾತೃಹೃದಯದ ಚಿತ್ರಣ ಮೂಡಿಬಂದ ಬಗೆಯ ಕುರಿತು ಚರ್ಚಿಸಿದರೆ, ಎರಡನೆಯ ಗುಂಪು ಆ ಚಿತ್ರಣ ಎಷ್ಟರ ಮಟ್ಟಿಗೆ ಕಥೆಯಲ್ಲಿ ಪರಿಣಾಮಕಾರಿಯಾಗಿ ಮೂಡಿ ಬಂದಿದೆ. ಇಲ್ಲಿ ಕತೆಗಾರನು ಬಳಸಿಕೊಂಡ ಬಳಸಿಕೊಂಡ ತಂತ್ರವೇನು? ಇವೇ ಮೊದಲಾದವುಗಳ ಕುರಿತು ಚರ್ಚಿಸಲಿ. ಗುಂಪಿನಲ್ಲಿ ಬಂದ ಅಭಿಪ್ರಾಯಗಳನ್ನು ಆಧರಿಸಿಕೊಂಡು ಮೊದಲನೆಯ ಗುಂಪು ಕಥೆಯಲ್ಲಿ ಮಾತೃಹೃದಯದ ತುಮುಲಗಳು ಮೂಡಿ ಬಂದ ಬಗೆಯನ್ನು ವ್ಯಾಖ್ಯಾನಿಸಿ ಬರೆಯಲಿ. ಎರಡನೆಯ ಗುಂಪು ಸಂಬಂಧಿತ ವಿಷಯದ ಮೇಲೆ ವಿಮರ್ಶಾತ್ಮಕ ಲೇಖನವನ್ನು ಬರೆಯಲಿ. ಗುಂಪಿನಲ್ಲಿ ಪ್ರತಿಯೊಬ್ಬರೂ ಇದನ್ನೂ ಬರೆದುಕೊಳ್ಳುವುದು. ಎರಡೂ ಗುಂಪುಗಳಲ್ಲಿ ಒಂದಿಬ್ಬರು ತಾವು ಬರೆದುದನ್ನು ಮಂಡಿಸಲಿ. ತಪ್ಪುಗಳಿದ್ದರೆ ಸರಿಪಡಿಸುವುದು. ಬಳಿಕ ವಿಚಾರಗೋಷ್ಠಿಯನ್ನು ಏರ್ಪಡಿಸಿ ಉತ್ತಮವೆನಿಸಿದ ಎರಡು ಪ್ರಬಂಧಗಳನ್ನು (ಗುಂಪಿಗೆ ಒಂದರಂತೆ) ಮಂಡಿಸಲಿ. ಮಂಡಿಸಿದ ಪ್ರಬಂಧದ ಮೇಲೆ ಚರ್ಚೆ ನಡೆಯಲಿ.

### ಮಾದರಿ

ಯು.ಆರ್. ಅನಂತಮೂರ್ತಿಯವರ 'ತಾಯಿ' ಸಣ್ಣ ಕತೆ ತನ್ನ ನಿರೂಪಣಾ ತಂತ್ರದ ಮೂಲಕ ಗಮನ ಸೆಳೆಯುತ್ತದೆ. ಸರಳವೂ, ಹೃದ್ಯವೂ ಆದ ಶೈಲಿಯಲ್ಲಿ ಮಾತೃ ಹೃದಯದ ತುಮುಲವನ್ನು ಈ ಕಥೆಯಲ್ಲಿ ಚಿತ್ರಿಸಿದ್ದಾರೆ. ತನ್ನ ಎಳೆಯ ಮಗುವಿಗೆ ತಾಯಿಯೊಬ್ಬಳ ಕ್ರೂರತನದ ಕಥೆಯನ್ನು ಹೇಳುತ್ತಾ ಪರ್ಯಾಯವಾಗಿ ತನ್ನ ಹಿರಿಯ ಮಗನು ಮನೆ ಬಿಟ್ಟು ಹೋಗಲು ಕಾರಣವಾದ ತನ್ನ ವರ್ತನೆಗೆ ಅಸಹ್ಯಪಡುವ, ಮಗ ಬಿಟ್ಟು ಹೋದುದಕ್ಕೆ ಪರಿತಪಿಸುವ ತಾಯಿಯೊಬ್ಬಳ ವೃ–ತ್ತಾಂತ ಈ

ಕಥೆಯಲ್ಲಿದೆ. ತನ್ನ ಕ್ರೂರವಾಕ್ಯಕ್ಕೆ ರೇಗಿ ಮನೆ ಬಿಟ್ಟು ಹೊರಟ ಮಗನನ್ನು ನೆನೆಯುತ್ತಾ ಮರಳಿ ಬಂದಾನೋ, ಬಾರನೋ ಎಂದು ಪರಿತಪಿಸುವ ತಾಯಿಯ ವ್ಯಕ್ತಿತ್ವ ಇಲ್ಲಿ ಗಮನ ಸೆಳೆಯುತ್ತದೆ. ಗ್ರಾಮ್ಯ ಭಾಷೆಯ ಅಳವಡಿಕೆ, ವಿಶಿಷ್ಟ ಶೈಲಿ ಹಾಗೂ ನೂತನ ನಿರೂಪಣೆಯ ತಂತ್ರ ಇವೆಲ್ಲವುಗಳಿಂದ ಕಥೆ ಗಮನ ಸೆಳೆಯುತ್ತದೆ. ಇಲ್ಲಿ ಕಥೆಗಾರ ತಾನು ಕಥೆಯ ಹೊರಕ್ಕೆ ನಿಂತು ಪಾತ್ರಗಳ ಮೂಲಕವೇ ಭಾವ ಜಟಿಲತೆಯನ್ನು ವ್ಯಕ್ತಪಡಿಸಿರುವುದು ವಿಶೇಷವಾದುದು. ಗಾತ್ರದಲ್ಲಿ ಬಹಳ ಚಿಕ್ಕದಾದ ಈ ಕಥೆಯಲ್ಲಿ ಓದುಗನಿಗೆ ನೀರಸವಾಗದಂತೆ ಅಲ್ಲಲ್ಲಿ ಕಾವ್ಯಮಯ ಶೈಲಿಗಳಿಂದ ಬೆರಗುಗೊಳಿಸುತ್ತಾ ಸಾಗುತ್ತದೆ. ಗಂಡ ಸತ್ತ ಬಳಿಕ ಬೇರೆಯವನೊಂದಿಗೆ ಮಾಡಿಕೊಂಡ ಕೂಡಿಕೆ ಅಬ್ಬಕ್ಕಳ ವಯೋ ಸಹಜ ಭಾವನೆಗಳಿಂದ ನಡೆದರೂ, ಅದನ್ನು ಧಿಕ್ಕರಿಸಿದ ಎಂಬ ಮಾತ್ರಕ್ಕೆ ಹಿರಿಯ ಮಗ ಚೆಲುವನನ್ನು ಜರೆದದ್ದು, ಇದರಿಂದ ಸಿಟ್ಟಿಗೊಂಡು ಚೆಲುವ ಮನೆಬಿಟ್ಟು ಹೊರಟು ಹೋದದ್ದು, ಇವೆಲ್ಲವೂ ಅಬ್ಬಕ್ಕಳನ್ನು ಕಾಡುವ ರೀತಿ ವಿಶೇಷವಾಗಿ ಕಥೆಯಲ್ಲಿ ಗಮನ ಸೆಳೆಯುತ್ತವೆ. ತಾನು ಕೂಡಿಕೆ ಮಾಡಿಕೊಂಡ ಗಂಡ ಕೆಟ್ಟವನಲ್ಲ. ಚೆಲುವನ ಧಿಕ್ಕಾರವೂ ಸರಿಯಾದುದೇ ಎಂದು ಪರಿತಪಿಸುವ ತಾಯಿ ಅಬ್ಬಕ್ಕಳು ತನ್ನ ಎಳೆಯ ಕೂಸಿಗೆ ಹೇಳುವ ಮತ್ತೊಬ್ಬ ತಾಯಿಯ ಕ್ರೂರತನದಲ್ಲಿ ತನ್ನನ್ನು ಆರೋಪಿಸಿ ಬಿಡುತ್ತಾಳೆ. ಲೌಕಿಕ ಮೋಹಕ್ಕೆ ಒಳಗಾಗಿ ಹಿರಿಯ ಮಗನನ್ನು ತೊರೆದ ತನ್ನ ಸ್ಥಿತಿ, ಕ್ರೂರಿಯಾದ ಆ ತಾಯಿ ಮಗುವನ್ನು ಇರುಳ ವೇಳೆಯಲ್ಲಿ ಮನೆಯಿಂದ ಹೊರಗಟ್ಟಿ ಹುಲಿಯ ಬಾಯಿಗೆ ತುತ್ತಾಗುವಂತೆ ಮಾಡಿದ ವರ್ತನೆಯಷ್ಟೇ ಅಸಹ್ಯ ಎಂದು ಅಬ್ಬಕ್ಕ ಕಂಬನಿ ಮಿಡಿಯುವ ಸನ್ನಿವೇಶ. ಮನೆಗೆ ತಿರುಗಿ ಬಂದಾನೋ ಬಾರನೋ ಎಂದು ತವಕಿಸುವುದು, ಬೆಳೆದ ಚೆಲುವನ ರೂಪವನ್ನು ತನ್ನಲ್ಲೇ ಕಲ್ಪಿಸಿಕೊಳ್ಳುವ ರೀತಿ ಎಲ್ಲವೂ ಮಾತೃಹೃದಯದ ತಲ್ಲಣಗಳನ್ನು ಅಭಿವ್ಯಕ್ತಗೊಳಿಸುತ್ತವೆ. ಮಗನ ಬರವಿಗಾಗಿ ಕಾತರಿಸುವ ತಾಯಿ ಅಬ್ಬಕ್ಕಳಿಗೆ ಅವನು ಬಂದಂತೆ ಕನಸು ಬೀಳುವುದು, ಯಥಾ ಸ್ಥಿತಿಗೆ ಬಂದಾಗ ಕಂಬನಿಗೆರೆಯುವ ಅಬ್ಬಕ್ಕಳ ಚಿತ್ರಣ ಮಾತೃ ಹೃದಯದ ಮಿಡಿತವನ್ನೂ ಪ್ರತಿಬಿಂಬಿಸುತ್ತದೆ.

## ಕಥಾರಚನ ಕಮ್ಮಟ

ವಿದ್ಯಾರ್ಥಿಗಳು ಈಗಾಗಲೇ ಎರಡು ವಿಭಿನ್ನ ಕಥೆಗಳನ್ನು ಓದಿರುವುದರಿಂದ ಅದರ ಅನುಭವದ ಹಿನ್ನಲೆಯಲ್ಲಿ ಪ್ರತಿಯೊಬ್ಬರು ವಿಷಯವೊಂದನ್ನು ಆರಿಸಿಕೊಂಡು ಕಥೆಯೊಂದನ್ನು ಬರೆಯಲಿ. ಅದಕ್ಕೆ ವೇದಿಕೆಯಾಗುವಂತೆ ಕಥಾರಚನ ಕಮ್ಮಟವನ್ನು ಏರ್ಪಡಿಸುವುದು. ಸ್ಥಳೀಯ ಸಂಪನ್ಮೂಲ ಸಾಹಿತಿಯೊಬ್ಬರನ್ನು ಅತಿಥಿಯಾಗಿ ಆಮಂತ್ರಿಸುವುದು. ಕಥೆಯನ್ನು ಬರೆಯುವುದು ಹೇಗೆ? ಎಂಬುದರ ಕುರಿತು ಅಗತ್ಯದ ಮಾಹಿತಿಗಳನ್ನು ಅವರು ನೀಡಲಿ. ತದನಂತರ ಪ್ರತಿಯೊಬ್ಬ ವಿದ್ಯಾರ್ಥಿಯು ಕಥೆಯನ್ನು ಬರೆಯುವುದು. ಬರೆದ ಕಥೆಗಳನ್ನು ಒಟ್ಟುಗೂಡಿಸುವುದು. ಸಂಪಾದಕ, ಸಂಪಾದಕ ಮಂಡಳಿಯನ್ನು ವಿದ್ಯಾರ್ಥಿಗಳೇ ನಿರ್ಣಯಿಸಲಿ. ಸಂಪಾದಕ ಮಂಡಳಿ ಬರೆದ ಕಥೆಗಳಲ್ಲಿ ಉತ್ತಮವಾದ ಹತ್ತೋ ಹದಿನೈದೋ ಕಥೆಗಳನ್ನು ಆರಿಸಿಕೊಂಡು ಸೂಕ್ತ ತಿದ್ದುಪಡಿಗಳೊಂದಿಗೆ ಪರಿಷ್ಕರಿಸಿಕೊಳ್ಳಲಿ. ಬಳಿಕ ಕಥೆಗಳನ್ನು ಒಟ್ಟು ಸೇರಿಸಿ ಉತ್ತಮ ಸಂಪಾದಕೀಯದೊಂದಿಗೆ 'ಕಥಾಸಂಕಲನ'ವನ್ನು ಸಿದ್ಧಪಡಿಸಲಿ. ಸೂಕ್ತ ವೇದಿಕೆಯಲ್ಲಿ ಪುಸ್ತಕದ ಪ್ರಕಟಣೆಯೂ ನಡೆಯಲಿ.

## ಭಿತ್ತಿಪತ್ರಿಕೆ ಲೇಖನ

ಇದನ್ನು ಗುಂಪಿನ ಚಟುವಟಿಕೆಯನ್ನಾಗಿ ನೆರವೇರಿಸುವುದು. ಕನ್ನಡದಲ್ಲಿ ಎಂಟು ಮಂದಿ ಸಾಹಿತಿಗಳಿಗೆ ಜ್ಞಾನಪೀಠ ಪ್ರಶಸ್ತಿ ದೊರಕಿದೆ. ಅವರ ಹೆಸರುಗಳನ್ನು ಹೇಳುವಂತೆ ಸೂಚಿಸುವುದು. ಪ್ರತಿಯೊಂದು ಗುಂಪು ಇಬ್ಬರಿಬ್ಬರು ಜ್ಞಾನಪೀಠ ಪ್ರಶಸ್ತಿ ವಿಜೇತರ ಕುರಿತು ಶಾಲಾ ಗ್ರಂಥಾಲಯ, ಅಂತರ್ಜಾಲ ತಾಣ ಮೊದಲಾದ ಮೂಲಗಳಿಂದ ವಿವರಗಳನ್ನು ಸಂಗ್ರಹಿಸಿ ಲಘು ಟಿಪ್ಪಣಿ ಬರೆಯಲಿ. ಅಗತ್ಯವಿದ್ದಲ್ಲಿ ಅಧ್ಯಾಪಕರು ಸೂಕ್ತ ಮಾಹಿತಿಗಳನ್ನು ನೀಡಿ ಸಹಕರಿಸುವುದು. ಹೀಗೆ ಬರೆದುದನ್ನು ಆರಂಭದಲ್ಲಿ ಗುಂಪಿನಲ್ಲಿ ಮಂಡಿಸಲಿ. ಅಗತ್ಯವಾದ ತಿದ್ದುಪಡಿಗಳೊಂದಿಗೆ ಸರಿಪಡಿಸಿ ಓರಣವಾಗಿ ಬರೆಯಲಿ. ಬಳಿಕ ತರಗತಿಯಲ್ಲಿ

ಮಂಡಿಸಲಿ. ಅಧ್ಯಾಪಕರ ಸೂಕ್ತ ಮೌಲ್ಯ ಮಾಪನದೊಂದಿಗೆ ಅಂತಿಮಗೊಳಿಸಿ ಭಿತ್ತಿಪತ್ರಿಕೆಯಲ್ಲಿ ಸಂಚಿಕೆಯಾಗಿ ಬರಹಗಳು ಬರಲಿ.

## ಭಾಷಾಭ್ಯಾಸ

### ಕ್ರಿಯಾಪದ–ನಿಷೇಧರೂಪ

ಪಾಠಭಾಗದಲ್ಲಿ ಕೊಟ್ಟಿರುವ ನಿಷೇಧರೂಪಗಳ ಸ್ವರೂಪವನ್ನು ವಿದ್ಯಾರ್ಥಿಗಳಿಗೆ ಮನದಟ್ಟು ಮಾಡುವುದು. ಇನ್ನಷ್ಟು ಹೆಚ್ಚಿನ ಉದಾಹರಣೆಗಳನ್ನು ಇಲ್ಲಿ ಬಳಸಿಕೊಳ್ಳುವುದರ ಮೂಲಕ ಕ್ರಿಯಾಪದಗಳ ನಿಷೇಧರೂಪಗಳ ಕುರಿತು ಹೆಚ್ಚಿನ ಅರಿವನ್ನು ನೀಡುವುದು.

ಆಡು, ಕಳೆ, ಹಾರು, ನುಡಿಯು ಮೊದಲಾದ ಕ್ರಿಯಾಧಾತು ರೂಪಗಳಿಗೆ, ಮಾದರಿಯಲ್ಲಿರುವಂತೆ, ನಿಷೇಧಾರ್ಥಗಳನ್ನು ಕಂಡುಕೊಂಡು ಬರೆಯಲಿ.

ಆಡು–ಆಡಲಿಲ್ಲ, ಆಡನು, ಆಡಲಾರ, ಆಡೆನು

ಕಳೆ–ಕಳೆಯಲಿಲ್ಲ, ಕಳೆಯನು, ಕಳೆಯಲಾರ, ಕಳೆಯೆನು

ಹಾರು–ಹಾರಲಿಲ್ಲ, ಹಾರನು, ಹಾರಲಾರ, ಹಾರೆನು

ನುಡಿಯ–ನುಡಿಯಲಿಲ್ಲ, ನುಡಿಯನು, ನುಡಿಯಲಾರ, ನುಡಿಯೆನು

- ಅವನು ಗೆಳೆಯರೊಂದಿಗೆ ಸೇರಿ ಆಡಲಿಲ್ಲ
- ಅವಳಿಗೆ ಪುಸ್ತಕಗಳೇ ಎಲ್ಲ. ಅದನ್ನು ಬಿಟ್ಟು ಕಾಲ ಕಳೆಯಲಾರಳು
- ಕಾಲು ಕುಂಟುತ್ತಾ ಓಡುವ ಅವನು ಅಷ್ಟು ದೂರಕ್ಕೆ ಹಾರನು
- ನನ್ನ ನಿರ್ಧಾರಕ್ಕೆ ಎಲ್ಲರ ಒಪ್ಪಿಗೆ ಬರುವವರೆಗೆ ನಾನು ಯಾರೊಂದಿಗೂ ನುಡಿಯೆನು

ಇದೇ ರೀತಿಯಲ್ಲಿ ಹಲವು ವಾಕ್ಯಗಳನ್ನು ರಚಿಸುವಲ್ಲಿ ಅಧ್ಯಾಪಕರು ಸೂಕ್ತ ರೀತಿಯಲ್ಲಿ ನೆರವಾಗುವುದು.

## ನುಡಿಗಟ್ಟುಗಳ ಬಳಕೆ

ಸೆರಗೊಡ್ಡಿಬೇಡು, ಎದುರುಕೈಯೆತ್ತು, ಕಣ್ಣಲ್ಲಿ ಎಣ್ಣೆಯಿಟ್ಟು ಕಾಯು, ಮೊದಲಾದ ನುಡಿಗಟ್ಟುಗಳ ಅರ್ಥವನ್ನು ಅಧ್ಯಾಪಕರ ನೆರವಿನಿಂದ ಕಂಡುಕೊಳ್ಳಲಿ. ವಿಭಿನ್ನ ಪ್ರಯೋಗಗಳಲ್ಲಿ ಈ ನುಡಿಗಟ್ಟುಗಳು ಪಡೆದುಕೊಳ್ಳುವ ಅರ್ಥವನ್ನು ತಿಳಿದುಕೊಳ್ಳಲಿ.

# ಸಾವಿರಾರು ನದಿಗಳು

ಡಾ. ಸಿದ್ಧಲಿಂಗಯ್ಯ

## ಪ್ರವೇಶ

ಜಾತಿ ಪದ್ಧತಿ, ಮೇಲು ಕೀಳೆಂಬ ವರ್ಗೀಕರಣ ಭಾರತದಲ್ಲಿ ಶತಮಾನಗಳ ಕಾಲದಿಂದಲೂ ಬೆಳೆದು ಬಂದಿರುವ ರೀತಿ. ಜಾತಿಯ ಹಿನ್ನೆಲೆಯಲ್ಲಿ ವ್ಯಕ್ತಿಗಳನ್ನು ಕಾಣುವುದು, ಆ ಹಿನ್ನೆಲೆಯಲ್ಲಿ ನಡೆಯುವ ಶೋಷಣೆ ಈಗಲೂ ಕೆಲವೆಡೆಗಳಲ್ಲಿ ಕಂಡುಬರುತ್ತಿದೆ. ಶಿಕ್ಷಣ, ವಿಜ್ಞಾನದ ಬೆಳವಣಿಗೆ, ವೈಚಾರಿಕತೆ ಮುಂತಾದವುಗಳಲ್ಲಿ ಮುಂದುವರಿದರೂ ನಮ್ಮ ದೇಶ ಜಾತಿಪದ್ಧತಿಯಿಂದ ಪೂರ್ಣವಾಗಿ ಮುಕ್ತವಾಗದಿರುವುದು ದೊಡ್ಡ ದುರಂತವಾಗಿದೆ. ಜಾತಿಯ ನೆಲೆಯಲ್ಲಿ ವ್ಯಕ್ತಿ ವ್ಯಕ್ತಿಯ ನಡುವಿನ ತರತಮ ಭಾವವು ಅಳಿದು ಮಾನವರೆಲ್ಲರನ್ನೂ ಒಂದಾಗಿ ನೋಡುವ ಗುಣ ಇಂದು ನ್ನಮ್ಮಲ್ಲಿ ಇನ್ನೂ ಬೆಳೆಯಬೇಕಾಗಿದೆ. ಬದಲಾವಣೆಗಾಗಿ ಹಂಬಲಿಸುತ್ತಿರುವ ಸಮಾಜಕ್ಕೆ ಜಾತಿಪದ್ಧತಿಯೇ ಮೊದಲಾದ ಪಿಡುಗಳಿಂದ ಬಿಡುಗಡೆಯ ದಾರಿಯನ್ನು ತೋರಿಸುವ ದಿಕ್ಕಿನಲ್ಲಿ ಮುನ್ನಡೆಯಬೇಕಾಗಿದೆ. ಈ ನಿಟ್ಟಿನಲ್ಲಿ ಮುಂದುವರಿಯಲು ಹೋರಾಟದ ದಾರಿಯನ್ನು ತೋರಿಸುವ ಸಿದ್ಧಲಿಂಗಯ್ಯನವರ ಸಾವಿರಾರು ನದಿಗಳು ಕವನ ಗಮನಾರ್ಹವಾದುದು. ಶೋಷಿತ ಸಮುದಾಯಕ್ಕೆ ಸಲ್ಲಬೇಕಾದ ಸಾಮಾಜಿಕ ನ್ಯಾಯದ ಸಂಕೇತವಾಗಿ, ನೊಂದವರ ಪ್ರತಿಭಟನಾ ಮೆರವಣಿಗೆಯ ಮಾತಾಗಿ, ಕ್ರಾಂತಿಕಾರಿಗಳ ಹಕ್ಕೊತ್ತಾಯದ ಹಾಡಾಗಿ, ಅವ್ಯವಸ್ಥೆಗೆ ಎದುರಾಗಿರುವ ಧಿಕ್ಕಾರದ ಘೋಷಣೆಯಾಗಿ ಈ ಕವನ ನೆಲೆನಿಂತಿದೆ.

## ಪೂರ್ವಜ್ಞಾನ

ದಲಿತ–ಬಂಡಾಯ ಪಂಥಗಳ ಕವನ, ಕಥೆಗಳನ್ನು ವಿದ್ಯಾರ್ಥಿಗಳು ಈ ಮೊದಲೆ ಕಲಿತಿರುತ್ತಾರೆ. ಡಾ. ಸಿದ್ಧಲಿಂಗಯ್ಯನವರ 'ನನ್ನ ಜನಗಳು' ಬರಗೂರು ರಾಮಚಂದ್ರ ಪ್ಪನವರ 'ಬೆವರಿನ ಹಾಡು' ಕವನವನ್ನು ವಿದ್ಯಾರ್ಥಿಗಳು ಹಿಂದಿನ ತರಗತಿಯಲ್ಲಿ ಅಧ್ಯಯನ ಮಾಡಿದ್ದಾರೆ. ಹೀಗಾಗಿ ಸಿದ್ಧಲಿಂಗಯ್ಯನವರ ಕಿರು ಪರಿಚಯವೂ ಅವರಿಗಿರಬಹುದು. ದಲಿತ–ಬಂಡಾಯ ಸಾಹಿತ್ಯ ಮತ್ತು ಆ ಪಂಥದ ಲೇಖಕರ ಬರಹದ ಕುರಿತಾಗಿ ಅಧ್ಯಾಪಕರು ಪ್ರಶ್ನೆಗಳನ್ನು ಕೇಳುವುದು. ವಿದ್ಯಾರ್ಥಿಗಳು ತಮಗೆ ತಿಳಿದಿರುವ ವಿಚಾರಗಳನ್ನು ಬಾಯ್ದೆರೆಯಾಗಿ ಹೇಳಲಿ. ಪಾಠಭಾಗದಲ್ಲಿರುವ ಕವಿ ಪರಿಚಯವನ್ನು ಮೌನವಾಗಿ ಓದಲಿ. ಅಗತ್ಯವಿದ್ದಲ್ಲಿ' ಸಿದ್ಧಲಿಂಗಯ್ಯನವರ ಕುರಿತಾದ ಡೋಕ್ಯುಮೆಂಟರಿಯನ್ನು Youtube ನಿಂದ ಡೌನ್‌ಲೋಡ್ ಮಾಡಿ ಪ್ರದರ್ಶಿಸುವುದು.

### ಡಾ. ಸಿದ್ಧಲಿಂಗಯ್ಯ

ರಾಮನಗರ ಜಿಲ್ಲೆಯ ಮಾಗಡಿ ತಾಲೂಕಿನ ಮಂಚನ ಬೆಲೆಯವರಾದ ಡಾ. ಸಿದ್ಧಲಿಂಗಯ್ಯನವರು ಬಡ, ದಲಿತ ಕುಟುಂಬದಲ್ಲಿ 1954ರ ಫೆಬ್ರವರಿ 3ರಂದು ಜನಿಸಿದರು. ಇವರ ತಂದೆ ದೇವಯ್ಯ, ತಾಯಿ ವೆಂಕಟಮ್ಮ ಅವರ ಕಲಿಕೆ ಆರಂಭವಾದದ್ದು 1959ರಲ್ಲಿ ಮಾಗಡಿಯ ಹೊಸಹಳ್ಳಿಯ ಬಿಸಿಲಮ್ಮನ ಗುಡಿಯಲ್ಲಿ. 1976ರಲ್ಲಿ ಬೆಂಗಳೂರು ವಿಶ್ವವಿದ್ಯಾಲಯದಿಂದ ಸ್ವರ್ಣಪದಕದೊಂದಿಗೆ ಎಂ. ಎ, 1989ರಲ್ಲಿ ಪ್ರೊ. ಜಿ. ಎಸ್. ಶಿವರುದ್ರಪ್ಪನವರ ಮಾರ್ಗದರ್ಶನದಲ್ಲಿ ಮಂಡಿಸಿದ 'ಗ್ರಾಮದೇವತೆಗಳು' ಪ್ರಬಂಧಕ್ಕೆ ಪಿ. ಎಚ್. ಡಿ. ಪದವಿ, ಅನಂತರ ಬೆಂಗಳೂರು ವಿ. ವಿ. ಅಧ್ಯಾಪಕ, ಪ್ರಾಧ್ಯಾಪಕ, ಕನ್ನಡ ಅಧ್ಯಯನ ಕೇಂದ್ರದ ನಿರ್ದೇಶಕರಾಗಿ ಕಾರ್ಯ ನಿರ್ವಹಿಸಿದರು.

ಪುಟ್ಟಣ್ಣ ಕಣಗಾಲ್ ನಿರ್ದೇಶನದ 'ಧರಣಿಮಂಡಲ ಮಧ್ಯದೊಳಗೆ' ಚಿತ್ರಕ್ಕೆ ಅವರು ಬರೆದ ಹಾಡಿಗೆ 1983–84ರಲ್ಲಿ ರಾಜ್ಯಪ್ರಶಸ್ತಿ, ಸೃಜನಶೀಲ ಸಾಹಿತ್ಯ ಸಾಧನೆಗಾಗಿ ರಾಜ್ಯೋತ್ಸವ ಪ್ರಶಸ್ತಿ, ಡಾ. ಅಂಬೇಡ್ಕರ್ ಶತಮಾನೋತ್ಸವ ವಿಶೇಷ ಪ್ರಶಸ್ತಿ, ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ನಾಡೋಜ ಪ್ರಶಸ್ತಿ ಸೇರಿದಂತೆ ಹಲವಾರು ಗೌರವಗಳು ಅವರಿಗೆ ಸಂದಿವೆ. ಅವರು

ದಲಿತ ಸಂಘರ್ಷ ಸಮಿತಿ, ಬಂಡಾಯ ಸಾಹಿತ್ಯ ಸಂಘಟನೆಗಳ ಸ್ಥಾಪಕ ಸದಸ್ಯರೂ ಹೌದು. ಕರ್ನಾಟಕ ವಿಧಾನ ಪರಿಷತ್ತಿಗೆ ಎರಡು ಅವಧಿಗೆ ನಾಮಕರಣಗೊಂಡ ಸದಸ್ಯರಾಗಿದ್ದ ಸಿದ್ಧಲಿಂಗಯ್ಯವರು ಕನ್ನಡ ಅಭಿವೃದ್ಧಿ ಪ್ರಾಧಿಕಾರ, ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷರಾಗಿಯೂ ಕಾರ್ಯನಿರ್ವಹಿಸಿದ್ದಾರೆ. ಅವರ ಆತ್ಮಕಥನವಾದ 'ಊರುಕೇರಿ' ಇಂಗ್ಲೀಷ್ ಹಾಗೂ ತಮಿಳಿಗೆ ಅನುವಾದಗೊಂಡಿದೆ. 81ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆಯ ಗೌರವ ಇವರಿಗೆ ಸಂದಿದೆ.

**ಕೃತಿಗಳು :** ಊರುಕೇರಿ, ಅವತಾರಗಳು, ಹೊಲೆ ಮಾದಿಗರ ಹಾಡು, ಸಾವಿರಾರು ನದಿಗಳು, ನನ್ನ ಜನಗಳು, ಕಪ್ಪು ಕಾಡಿನ ಹಾಡು, ಮೆರವಣಿಗೆ, ಹಕ್ಕಿನೋಟ, ಜನಸಂಸ್ಕೃತಿ, ರಸಗಳಿಗೆಗಳು, ಗ್ರಾಮದೇವತೆಗಳು, ಏಕಲವ್ಯ, ಪರಾಕ್ರಮ ಇತ್ಯಾದಿ.

ಆಧುನಿಕ ಕಾಲದಲ್ಲಿ ಪ್ರತಿಭಟನೆ ಎಲ್ಲೆಂದರಲ್ಲಿ, ಹಲವು ಕಾರಣಕ್ಕಾಗಿ ನಡೆಯುತ್ತಲಿದೆ. ದೇಶದಾದ್ಯಂತ ಆಗಾಗ ನಡೆಯುತ್ತಿರುವ ಬಂದ್, ಹರತಾಳ, ಮೆರವಣಿಗೆಗಳನ್ನು ವಿದ್ಯಾರ್ಥಿಗಳು ನೋಡಿ–ಕೇಳಿ ತಿಳಿದಿರುತ್ತಾರೆ. ಪ್ರತಿಭಟನೆಯ ವಿವಿಧ ಮಜಲುಗಳನ್ನು ಅರಿತಿರುತ್ತಾರೆ. ಈ ಕುರಿತು ವಿದ್ಯಾರ್ಥಿಗಳು ತಮ್ಮ ಅಭಿಪ್ರಾಯಗಳನ್ನು ಬಾಯ್ದೆರೆಯಾಗಿ ವ್ಯಕ್ತಪಡಿಸಲಿ. ಪ್ರತಿಭಟನೆಯ ಒಳಿತು ಕೆಡುಕುಗಳ ಚರ್ಚೆಯನ್ನು ಈ ಸಂದರ್ಭದಲ್ಲಿ ನಡೆಸಬಹುದು. ಚರ್ಚೆಯಲ್ಲಿ ಬರುವ ಮುಖ್ಯ ಅಂಶಗಳನ್ನು ವಿದ್ಯಾರ್ಥಿಗಳು ತಮ್ಮ ಲಾಗ್‌ಬುಕ್‌ನಲ್ಲಿ ದಾಖಲಿಸುವಂತೆ ಅಧ್ಯಾಪಕರು ಸೂಚಿಸುವುದು. ಚರ್ಚೆಯ ಕ್ರೋಡೀಕರಣದ ಬಳಿಕ ದಲಿತ ಸಾಹಿತ್ಯ ಬೆಳೆದು ಬಂದ ಬಗೆಯನ್ನು ಪರಿಚಯಿಸುವುದು.

## ದಲಿತ ಸಾಹಿತ್ಯ

ಸಾಂಸ್ಕೃತಿಕವಾಗಿ ಮತ್ತು ಶೈಕ್ಷಣಿಕವಾಗಿ ಹಿಂದುಳಿದ ಸಮಾಜವೊಂದರ ಬರಹಗಾರರು ತಮಗಾದ ಅನುಭವಗಳನ್ನು, ಅವಮಾನ ದೌರ್ಜನ್ಯಗಳನ್ನು ನಿರೂಪಿಸುವ ಸಾಹಿತ್ಯವೇ ದಲಿತ ಸಾಹಿತ್ಯ. ಈ ಸಾಹಿತ್ಯವನ್ನು ನಾವು ಮೊದಲು ಗುರುತಿಸುವುದು 1973ರಲ್ಲಿ ಪ್ರಕಟಗೊಂಡ ದೇವನೂರು ಮಹಾದೇವ ಅವರ ಏಳು ಕಥೆಗಳ 'ದ್ಯಾವನೂರು' ಸಂಕಲನದಲ್ಲಿ. ದಲಿತ ಬರಹಗಾರರು ಪ್ರತಿಭಟನೆಯ ಮೂಲಕ ತಮ್ಮ ಮನದಾಳದ ನೋವುಗಳನ್ನು ಸ್ವಲ್ಪ ರೊಚ್ಚಿನಿಂದಲೇ ಹೇಳಬಯಸಿದರು. ದಲಿತರ ಹೋರಾಟಕ್ಕೆ ವೇದಿಕೆಯಾಗಿ 'ದಲಿತ ಸಂಘರ್ಷ ಸಮಿತಿ' ರೂಪುಗೊಂಡಿತು. ಮೈಸೂರು ವಲಯದಲ್ಲಿ ದೇವನೂರು ಮಹಾದೇವ, ಗೋವಿಂದಯ್ಯ, ಇಂದೂಧರ ಹೊನ್ನಾಪುರ, ಶಿವಾಜಿ ಗಣೇಶನ್, ರಾಮದೇವ ರಾಕೆ, ದೇವನೂರು ಶಿವಮಲ್ಲ ಇವರೆಲ್ಲ ಜತೆಗೂಡಿ ಆರಂಭಿಸಿದ 'ಪಂಚಮ' ಪತ್ರಿಕೆ ದಲಿತ ಸಾಹಿತ್ಯದ ಹೊಸ ಆಲೋಚನೆ, ಅಭಿವ್ಯಕ್ತಿಗಳಿಗೆ ವೇದಿಕೆಯಾಯಿತು. ಸಿದ್ಧಲಿಂಗಯ್ಯನವರ 'ಹೊಲೆ ಮಾದಿಗರ ಹಾಡು' ಪ್ರಕಟಗೊಂಡಲ್ಲಿಂದ (1975) ಮುಂದೆ ಕಥೆ, ಕಾವ್ಯ, ಕಾದಂಬರಿ; ನಾಟಕ ಕ್ಷೇತ್ರಗಳಲ್ಲಿ ಅತಿ ಹೆಚ್ಚು ಕೃಷಿ ನಡೆಯಿತು. ದೇವನೂರು ಮಹಾದೇವರ 'ಒಡಲಾಳ', 'ಕುಸುಮ ಬಾಲೆ', ಕಾದಂಬರಿಗಳು, ಸಿದ್ಧಲಿಂಗಯ್ಯನವರ 'ಸಾವಿರಾರು ನದಿಗಳು(1979), ಕಪ್ಪು ಕಾಡಿನ ಹಾಡು(1983), ಪಂಚಮ, ನೆಲಸಮ, ಏಕಲವ್ಯ ಎಂಬೀ ನಾಟಕಗಳು; ಅರವಿಂದ ಮಾಲಗತ್ತಿಯವರ ಮೂಕನಿಗೆ ಬಾಯಿ ಬಂದಾಗ(1981), 'ಕಪ್ಪು ಕಾವ್ಯ'(1994), ಮುಳ್ಳೂರು ನಾಗರಾಜರವರ 'ಮರಣ ಮಂಡಲ ಮಧ್ಯದೊಳಗೆ(1986), ಮ.ನ. ಜವಯನನವರ 'ಕೇಳು ಜಗಮಾದಿಗ ಹೊಲೆಯ'(1981), ಅತ್ತೆ ಸೊಸೆ (ಆತ್ಮಕಥೆ 1987), ಮಾಗಿ(ಕಾದಂಬರಿ); ಚೆನ್ನಣ್ಣ ವಾಲೀಕಾರರ 'ಪ್ಲಾಂಥರ್‌ಸಿ ಪದಗಳು;', ಮೊಗಳ್ಳಿ ಗಣೇಶ್‌ರವರ 'ಬುಗರಿ;', ಸೋಮಣ್ಣ ಹೊಂಗಳ್ಳಿಯವರ 'ತಮಟೆ'(1994), 'ಕತ್ತಲು' ಹೀಗೆ ಕೃತಿ ಪರಂಪರೆ ಮುಂದುವರಿಯಿತು. ದೇವಯ್ಯ ಹರವೆ, ಎಲ್. ಹನುಮಂತಯ್ಯ, ಲಕ್ಷ್ಮಣ ಮುಂತಾದ ದಲಿತ ಲೇಖಕರು ತಮ್ಮ ವಿಚಾರ ವಿಮರ್ಶೆ, ಕಾವ್ಯ, ಕಾದಂಬರಿ, ಕಥಾ ಸಾಹಿತ್ಯಗಳನ್ನು ವಿಪುಲವಾಗಿ ಬೆಳೆಸುತ್ತಲೆ ದಲಿತಪರ ಸಂಘಟನೆಗಳಲ್ಲಿ ತಮ್ಮನ್ನು ಗುರುತಿಸಿಕೊಂಡರು.

**ದಲಿತ ಸಾಹಿತಿಗಳ ಪಟ್ಟಿ ತಯಾರಿ**

ವಿದ್ಯಾರ್ಥಿಗಳು ತಮಗೆ ತಿಳಿದಿರುವ ದಲಿತ ಬಂಡಾಯ ಪಂಥಗಳ ಸಾಹಿತಿಗಳ ಹೆಸರುಗಳನ್ನು ಹೇಳಲಿ. ಅವರ ಪ್ರಧಾನ ಕೃತಿಗಳ ಪಟ್ಟಿಯನ್ನೂ ತಯಾರಿಸಲಿ. ತರಗತಿಯಲ್ಲಿ ಮಂಡನೆಯಾದ ಬಳಿಕ ಲಾಗ್‌ಬುಕ್‌ನಲ್ಲಿ ಸೇರಿಸಿಕೊಳ್ಳಲಿ.

| ಸಾಹಿತಿ | ಕೃತಿಗಳು |
|---|---|
| ಡಾ. ಸಿದ್ಧಲಿಂಗಯ್ಯ | |
| ದೇವನೂರು ಮಹಾದೇವ | |
| ದೇವಯ್ಯ ಹರವೆ | |

## ಆಶಯಗ್ರಹಣ

'ಸಾವಿರಾರು ನದಿಗಳು' ಕವನವನ್ನು ಮೌನವಾಗಿ ಓದುವಂತೆ ವಿದ್ಯಾರ್ಥಿಗಳಿಗೆ ಸೂಚಿಸುವುದು. ಮೌನ ಓದಿನ ಬಳಿಕ ವಿದ್ಯಾರ್ಥಿಗಳನ್ನು ಗುಂಪುಗಳಾಗಿ ಕಠಿಣ ಪದಗಳ ಅರ್ಥವನ್ನು ತಿಳಿಯುವಂತೆ ಮಾಡುವುದು ಕವನದ ಪ್ರಧಾನ ಆಶಯವನ್ನು ಅವರು ಗುರುತಿಸಲಿ. ವಿದ್ಯಾರ್ಥಿಗಳ ಆಶಯಗ್ರಹಣದ ಪರೀಕ್ಷೆಗೆ ಅಗತ್ಯವಾದ ಪ್ರಶ್ನೆಗಳನ್ನು ಕೇಳುವುದು. ವಿದ್ಯಾರ್ಥಿಗಳು ಬಾಯ್ದೆರೆಯಾಗಿ ಅವುಗಳಿಗೆ ಉತ್ತರಿಸಲಿ. ಬಳಿಕ ಕವನದ ಆಶಯವನ್ನು ಬರೆದು ಪ್ರತಿ ಗುಂಪೂ ಮಂಡಿಸಲಿ.

## ಕಿರು ವಿಮರ್ಶೆ

ಡಾ. ಸಿದ್ಧಲಿಂಗಯ್ಯನವರು ಬರೆದ 'ಸಾವಿರಾರು ನದಿಗಳು' ಒಂದು ದಲಿತ ಕವನ. ತಲತಲಾಂತರದಿಂದ ಶೋಷಣೆಗೆ ಒಳಗಾದ ಪಂಗಡಗಳ ಹೋರಾಟದ ಧ್ವನಿಯಾಗಿ ಈ ಕವನ ಹುಟ್ಟಿಕೊಂಡಿದೆ. ದಲಿತರ ಪ್ರತಿಭಟನೆಗೆ ಇನ್ನೂ ಶಕ್ತಿಯನ್ನು ಒದಗಿಸುವ ಅಗತ್ಯತೆಯೊಂದಿಗೆ, ದಲಿತ ಚಳವಳಿಗಳಿಗೆ ಇನ್ನೂ ಹೆಚ್ಚಿನ ಜನರನ್ನು ಸೇರಿಸುವ ಮನೋಭಾವವನ್ನು ಈ ಕವನ ಪ್ರತಿಪಾದಿಸುತ್ತದೆ.

"ನೆನ್ನೆ ದಿನ ನನ್ನ ಜನ ಬೆಟ್ಟದಂತೆ ಬಂದರು" ಎಂದು ಆರಂಭವಾಗುವ ಕವನವು ಕಾಲಾಂತರಗಳಿಂದ ಮೂಲೆಗುಂಪಾಗಿದ್ದ ದಲಿತರು ಶೋಷಣೆಯ ವಿರುದ್ಧ ಹೋರಾಡಲು ಸನ್ನದ್ಧರಾದ ಚಿತ್ರವನ್ನು ಒದಗಿಸುತ್ತದೆ. ಶ್ರೀಮಂತರಿಗೆ ಹೆದರಿ ಜೀವನ ನಡೆಸುತ್ತಿದ್ದ ದಲಿತರು ಈಗ ಸಮಾಜದಿಂದ ತಮಗಾಗುವ ಅನ್ಯಾಯದ ವಿರುದ್ಧ ಬೆಟ್ಟದಂತೆ ಬರುತ್ತಿದ್ದಾರೆ. ಕಪ್ಪು ಮುಖ, ಬೆಳ್ಳಿ ಗಡ್ಡದ ನಡುವೆ ಅವರ ಕಣ್ಣುಗಳು ಬೆಂಕಿಯ ಉಂಡೆಗಳಂತೆ ಉರಿಯುತ್ತಿವೆ. ನಿದ್ದೆಯನ್ನು ತೊರೆದು ಹಗಲು ರಾತ್ರಿ ಎನ್ನದೆ ಹೋರಾಡಲು ಅವರು ಸನ್ನದ್ಧರಾಗಿದ್ದಾರೆ. ಅವರ ಪ್ರತಿಭಟನೆಯ ಶಕ್ತಿಗೆ ಭೂಮಿಯ ಪದರಗಳು ಬಿರುಕು ಬಿಟ್ಟು ಭೂಕಂಪನವಾಗಿದೆ.

'ಕಂಬಳಿಗಳು ಕೊರಗಿದವು ಎದ್ದೇಳುವ ರೊಚ್ಚಿಗೆ' ಎನ್ನುವ ಸಾಲಿನಲ್ಲಿ ಕವಿ ದಲಿತರ ಹೋರಾಟದ ತೀಕ್ಷ್ಣತೆಯನ್ನು ತಿಳಿಸಿದ್ದಾರೆ. ದಿನದಿಂದ ದಿನಕ್ಕೆ ದಲಿತ ಹೋರಾಟ ಶಕ್ತಿ ವೃದ್ಧಿಸುತ್ತಿದೆ ಎಂಬುದು 'ಇರುವೆಯಂತೆ ಹರಿವ ಸಾಲು ಹುಲಿ ಸಿಂಹದ ದನಿಗಳು' – ಎಂಬಲ್ಲಿ ವ್ಯಕ್ತವಾಗುತ್ತದೆ. ಅಸಮಾನತೆಯ ವಿರುದ್ಧ, ಶ್ರೀಮಂತರ ಸೊಕ್ಕಿನ ವಿರುದ್ಧ ಧಿಕ್ಕಾರವನ್ನು ಕೂಗಿ ಹೋರಾಡುವ ಹಿಂದುಳಿದವರ ಶಕ್ತಿಯ ಸೂಚನೆ ಇಲ್ಲಿದೆ. "ಊರ ತುಂಬ ಹರಿದರು, ಪಾತಾಳಕ್ಕೆ ಇಳಿದರು, ಆಕಾಶಕ್ಕೆ ನೆಗೆದರು, ಬೀದಿಯಲ್ಲಿ, ಗಲ್ಲಿಯಲ್ಲಿ, ಬೇಲಿ ಮೆಳೆಯ ಮರೆಗಳಲ್ಲಿ, ಯಜಮಾನರ ಹಟ್ಟಿಯಲ್ಲಿ, ಧಣಿ ಕೂರುವ ಪಟ್ಟದಲ್ಲಿ"–

ಎಂಬ ಸಾಲುಗಳು ಇದುವರೆಗೆ ತಲುಪದ ಎಲ್ಲೆಡೆಗಳನ್ನು ಇಂದು ಹೋರಾಟದ ಮೂಲಕ ದಲಿತರು ತಲಪಿದ್ದಾರೆ. ಅದರ ಪರಿಣಾಮವಾಗಿ ಧಣಿಗಳು ಕೂರುವ ಪಟ್ಟವು ಅಲುಗಾಡುತ್ತಿದೆ.

ದಲಿತರನ್ನು 'ನನ್ನ ಜನ' ಎಂದು ಕರೆದಿರುವ ಡಾ. ಸಿದ್ಧಲಿಂಗಯ್ಯನವರು ದಲಿತರ ಹೋರಾಟದ ಸ್ವರೂಪವನ್ನು ಕವನದುದ್ದಕ್ಕೂ ವ್ಯಕ್ತಿಪಡಿಸಿದ್ದಾರೆ. 'ಎಲ್ಲೆಲ್ಲೂ ನನ್ನ ಜನ ನೀರಿನಂತೆ ನಿಂತರು' ಎಂಬ ಸಾಲುಗಳು ದಲಿತರ ಶಕ್ತಿಯನ್ನು ತೋರ್ಪಡಿಸುತ್ತದೆ. 'ಇವರು ಬಾಯಿ ಬಿಟ್ಟೊಡನೆ ಅವರು ಬಾಯಿ ಕಟ್ಟಿತು, ಇವರ ಕಂಠ ಕೇಳಿದೊಡನೆ ಅವರ ಕಂಠ ಇಂಗಿತು' – ಎಂಬ ಸಾಲುಗಳು ಇದುವರೆಗೆ ಸಮಾಜದಲ್ಲಿ ನಡೆಯುತ್ತಿರುವ ವ್ಯವಸ್ಥೆಯ ವಿರುದ್ಧವಾದ ಪರಿಸ್ಥಿತಿ ಇದೀಗ ಆರಂಭಗೊಂಡಿದೆ ಎಂಬುದರ ಸಂಕೇತವನ್ನು ಸೂಚಿಸುತ್ತದೆ. ಪರಿಣಾಮವಾಗಿ ಧಡಿಯ ಏಟು ತಿಂದವರು ಶ್ರೀಮಂತರ ಕುತ್ತಿಗೆಗೆ ಕೈಹಾಕುವಷ್ಟು ಮುನ್ನುಗ್ಗಿದ್ದಾರೆ. ಅವರ ಧೈರ್ಯ, ಸಾಮರ್ಥ್ಯದ ಮುಂದೆ ಪೋಲೀಸರ ದೊಣ್ಣೆಗಳು, ಏಜೆಂಟರ ಕತ್ತಿಗಳು, ಬಂದೂಕುಗಳು ತರಗೆಲೆಗಳಂತೆ ಉದುರಿ ಹೋಗಿವೆ. ದಲಿತರ ಹೋರಾಟಕ್ಕೆ 'ಸಾವಿರಾರು ನದಿಗಳು' ಸೇರಿ ಅವರ ಹೋರಾಟದ ಸ್ವರೂಪ ಬೆಳೆದು ನಿಂತಿದೆ. ಇನ್ನು ಅವರನ್ನು ತುಳಿಯುವ ಕೆಲಸ ಯಾರಿಂದಲೂ ಆಗದು ಎಂದು ಕವಿ ಡಾ. ಸಿದ್ಧಲಿಂಗಯ್ಯನವರು ಎಚ್ಚರಿಕೆಯ ಗಂಟೆಯನ್ನು ಮೊಳಗಿಸಿದ್ದಾರೆ.

## ಚಟುವಟಿಕೆಗಳು

ಚಟುವಟಿಕೆಯಲ್ಲಿ ಕೊಟ್ಟಿರುವ "ಇವರು ಬಾಯಿ ಬಿಟ್ಟೊಡನೆ ಅವರ ಬಾಯಿ ಕಟ್ಟಿತು. ಇವರ ಕಂಠ ಕೇಳಿದೊಡನೆ ಅವರ ದನಿ ಇಂಗಿತು" ಈ ಸಾಲುಗಳ ಆಶಯವನ್ನು ಆಯ್ದ ವಿದ್ಯಾರ್ಥಿಗಳಿಂದ ಹೇಳಿಸುವುದು.

ಸಮಾಜದಲ್ಲಿ ನೆಲೆನಿಂತಿರುವ ಮೇಲು ಕೀಳೆಂಬ ಭಾವನೆ ದೂರವಾಗುವ ಸಮಯ ಬಂದಿದೆ. ಈ ಭಾವನೆಯನ್ನು ಹೋಗಲಾಡಿಸುವುದಕ್ಕಾಗಿ ದಲಿತರೆಲ್ಲ ಒಗ್ಗಟ್ಟಾಗಿ ಹೋರಾಟಕ್ಕೆ ಮುಂದಾಗಿದ್ದಾರೆ. ದಲಿತರ ಒಗ್ಗಟ್ಟಿನ ಸ್ವರದ ಮುಂದೆ ಮೇಲ್ಜಾತಿಯವರಿಗೆ ಏನೂ ಮಾಡಲಾಗುತ್ತಿಲ್ಲ. ಇದುವರೆಗೆ ಕೆಳಜಾತಿಯವರೆಂದು ಕರೆಸಿಕೊಂಡವರನ್ನು ಶೋಷಿಸಿ, ದುಡಿಸಿ ತಮ್ಮ ಕಾರ್ಯ ಸಾಧನೆಯನ್ನು ಮಾಡಿಕೊಂಡು ಮೇಲ್ಜಾತಿಯವರು ಸುಖವನ್ನು ಅನುಭವಿಸುತ್ತಿದ್ದರು. ದಲಿತರು ಸಂಘಟಿತರಾಗಿ ಪ್ರಶ್ನಿಸುತ್ತಿದ್ದಾರೆ, ದನಿಯೆತ್ತುತ್ತಿದ್ದಾರೆ. ಮೇಲ್ಜಾತಿಯವರ ಬಾಯಿಯ ಸೊಲ್ಲು ಈಗ ಅಡಗಿದೆ.

ಇದೇ ರೀತಿ ಇನ್ನಷ್ಟು ಸಾಲುಗಳನ್ನು ವಿದ್ಯಾರ್ಥಿಗಳ ಚಿಂತನೆಗೆ ನೀಡುವುದು.

- ಇರುವೆಯಂತೆ ಹರಿವ ಸಾಲು ಹುಲಿಸಿಂಹದ ದನಿಗಳು
- ಕಂಬಳಿಗಳು ಕೊರಗಿದವು ಎದ್ದೇಳುವ ರೊಚ್ಚಿಗೆ
- ಕ್ರಾಂತಿಯ ಬಿರುಗಾಳಿಯಲ್ಲಿ ಕೈಬೀಸಿದ ನನ್ನ ಜನ

ಮೇಲೆ ನೀಡಿರುವ ಕವಿತೆಯ ಸಾಲುಗಳೆಲ್ಲ ಪ್ರತಿಭಟನೆಯನ್ನು ಎತ್ತಿ ತೋರಿಸುವ ವಿಶಿಷ್ಟ ಸಾಲುಗಳಾಗಿವೆ. ಅವು ಕವಿತೆಯ ಆಶಯವನ್ನು ಪರಿಣಾಮಕಾರಿಯಾಗಿ ಬಿಂಬಿಸುವಲ್ಲಿ ಎಷ್ಟರಮಟ್ಟಿಗೆ ಸಮರ್ಥವಾಗಿವೆ ಎಂಬುದನ್ನು ಕಂಡುಕೊಳ್ಳುವಂತೆ ಸೂಚಿಸುವುದು.

## ಸಂಗ್ರಹ–ಚರ್ಚೆ

ಸಮಾಜದ ನೆಮ್ಮದಿಯ ಜೀವನಕ್ಕೆ ಹಾಗೂ ಅದರ ಅಭಿವೃದ್ಧಿಗೆ ಸಮಾನತೆ ಎಂಬುದು ಅನಿವಾರ್ಯ ಅಂಶವಾಗಿದೆ. ಆದರೆ ಸಮಾಜದಲ್ಲಿ ಹಿಂದುಳಿದ ವರ್ಗಗಳ ವಿರುದ್ಧ ನಡೆಯುವ ಶೋಷಣೆ ಇಂದಿಗೂ ನಿಂತಿಲ್ಲ. ಶೋಷಣೆಗಳ ಕುರಿತು ಪತ್ರಿಕೆಗಳಲ್ಲಿ ಇಂದಿಗೂ ವರದಿಗಳು ಪ್ರಕಟವಾಗುತ್ತಿವೆ. ಇಂತಹ ವರದಿಗಳನ್ನು ಸಂಗ್ರಹಿಸುವಂತೆ ವಿದ್ಯಾರ್ಥಿಗಳಿಗೆ ಸೂಚಿಸುವುದು. ಕೆಲವು ವರದಿಗಳನ್ನು ತರಗತಿಯಲ್ಲಿ ವಾಚಿಸಿ ಆಧುನಿಕ ಸಮಾಜದಲ್ಲಿ 'ಸಮಾನತೆಯ ಅಗತ್ಯ'ವನ್ನು ಪ್ರತಿಪಾದಿಸುವ ಚರ್ಚೆಯನ್ನು ನಡೆಸುವುದು. ಬಳಿಕ ಕ್ರೋಡೀಕರಿಸುವುದು.

## ತುಲನಾತ್ಮಕ ಟಿಪ್ಪಣಿ

ದಲಿತ ಪ್ರತಿಭಟನೆಯ ಅಂಶಗಳನ್ನು ಪ್ರಚುರಪಡಿಸುವ ಆಶಯವುಳ್ಳ ಕವನಗಳನ್ನು ಸಂಗ್ರಹಿಸುವಂತೆ ವಿದ್ಯಾರ್ಥಿಗಳಿಗೆ ಸೂಚಿಸುವುದು. ಅದಕ್ಕಾಗಿ ಅಗತ್ಯವಾದ ಪುಸ್ತಕಗಳನ್ನು ವಿದ್ಯಾರ್ಥಿಗಳಿಗೆ ಒದಗಿಸುವುದು. ಕವನಗಳಲ್ಲಿ ವಿದ್ಯಾರ್ಥಿಗಳು ಸಂಗ್ರಹಿಸಿದ ಯಾವುದಾದರೂ ಎರಡನ್ನು ಕವನಗಳನ್ನು ಅವರೇ ಆಯ್ಕೆ ಮಾಡಲಿ. ಅವುಗಳಲ್ಲಿ ಅಡಕವಾಗಿರುವ ಸಮಾನ ಆಶಯಗಳನ್ನು ಗುರುತಿಸಿ ತುಲನಾತ್ಮಕವಾಗಿ ಬರೆಯಲು ಸೂಚಿಸುವುದು ಅಂತೆಯೇ ವೈರುದ್ಧ್ಯದ ಅಂಶಗಳನ್ನು ಕೂಡ ಗುರುತಿಸಲಿ. ತರಗತಿಯಲ್ಲಿ ಮಂಡಿಸಿದ ಬಳಿಕ ಅಗತ್ಯ ತಿದ್ದುಪಡಿಗಳನ್ನು ಪರಸ್ಪರ ಮೌಲ್ಯಮಾಪನದ ಮೂಲಕ ಮಾಡಿ, ಲಾಗ್ ಬುಕ್‌ನಲ್ಲಿ ಸೇರಿಸಿಕೊಳ್ಳಲಿ. ತುಲನಾತ್ಮಕ ಬರಹಕ್ಕೆ ಅಗತ್ಯವಾದ ದಲಿತ ಮನೋಭಾವದ ಎರಡು ಕವನಗಳನ್ನು ಕೆಳಗೆ ನೀಡಲಾಗಿದೆ.

### ಅಗ್ನಿಶಾಮಕರು

ಧರೆ ಹತ್ತಿ ಉರಿದಾಗ ಗಂಗೆಯನು ತಂದವರು
ಕಟ್ಟಡವು ಕುಸಿದಾಗ ಹೆಗಲು ಕೊಟ್ಟವರು
ಕೆರೆಗೆ ಬಿದ್ದವನನ್ನು ಬಿಗಿದಪ್ಪಿ ತಂದವರು
ಅಗ್ನಿಶಾಮಕರು ನಮ್ಮ ಸೋದರರು

ಹಗಲು ಸುಡುತ್ತಿದ್ದರೂ ನಡುರಾತ್ರಿಯಿದ್ದರೂ
ಕರೆಬಂದ ಕೂಡಲೇ ಮಡದಿ ಮಕ್ಕಳ ಬಿಟ್ಟು
ಓಡೋಡಿ ಬರುವವರು
ತಂಗಳೂಟವನುಂಡು ಹೊಗೆಯ ಕಾಡಿಗೆ ನುಗ್ಗಿ

ಹೋರಾಡುವವರು
ಹಲವು ದಿನಗಳಿಗೊಮ್ಮೆ ಕರುಳ ಕುಡಿಗಳ ಕಂಡು
ನಗೆ ಚೆಲ್ಲುವರು
ಅಗ್ನಿ ಶಾಮಕರು ನಮ್ಮ ಸೋದರರು

ಜಾತಿ ವೈರದ ಜ್ವರವು ಏರುತಿಹುದಣ್ಣ
ಕೋಮುದ್ವೇಷದ ಬೆಂಕಿ ಉರಿಯುತಿಹುದಣ್ಣ
ಈ ಬೆಂಕಿಯಾರಿಸಲು ಪ್ರೀತಿಗಂಗೆಯು ಬೇಕು
ಎಲ್ಲವೂ ಅಗ್ನಿಶಾಮಕರಿಂದ ಆಗಬೇಕು

ಡಾ. ಸಿದ್ಧಲಿಂಗಯ್ಯ



### ಬೆವರಿನ ಹಾಡು

ಭೂಮಿ ಒಳಗಿಂದ
ಆಕಾಶ ಕಂಡವರು
ಆಕಾಶದೊಳಗಿಂದ
ಭೂಮಿಯ ಕಡೆದವರು
ಕೆಲಸ ಕೊಟ್ಟವರನ್ನು
ಮುಂದೆ ತಂದವರು
ಕೆಲಸ ಮಾಡುತ್ತಲೇ
ಹಿಂದೆ ಉಳಿದವರು

ಮುಟ್ಟಬಾರದು ಎಂದರೂ
ಇತಿಹಾಸ ಸೆರೆಯಲ್ಲಿ
ಉಸಿರನ್ನೆ ಉಂಡವರು
ಬೆವರಿನ ಮಸಿಯಲ್ಲಿ
ಬದುಕನ್ನು ಬರೆದವರು

ಭೂಮಿ ಬಸಿರಲ್ಲಿ
ಬದುಕನ್ನು ಹೆತ್ತವರು
ಒಲೆಯ ಉರಿಯಲ್ಲಿ
ಕಲೆಯನ್ನು ಕಂಡವರು
ಕತ್ತಲಿನ ಒಡಲಲ್ಲಿ
ಬೆಳಕನ್ನು ಹುಡುಕಿದರು
ಕರುಳಾಗಿ ಅರಳಿದರು
ಕಲಿಯಾಗಿ ಕೆರಳಿದರು

ಬರಗೂರು ರಾಮಚಂದ್ರಪ್ಪ

### ಕವನ ರಚನೆ–ಸಂಕಲನ ತಯಾರಿ

ಸಮಾಜದಲ್ಲಾಗುವ ಅನ್ಯಾಯದ ವಿರುದ್ಧ ಪ್ರತಿಭಟಿಸುವ ಮನೋಭಾವವನ್ನೊಳಗೊಂಡ ಒಂದೊಂದು ಕವನವನ್ನು ಬರೆಯುವಂತೆ ವಿದ್ಯಾರ್ಥಿಗಳಿಗೆ ಸೂಚಿಸುವುದು. ಚಟುವಟಿಕೆಯ ಭಾಗದಲ್ಲಿ ನೀಡಿರುವ ಮಹಿಳಾ ಪ್ರತಿಭಟನೆಯನ್ನೂ ಇಲ್ಲಿ ಆಯ್ದು ಕೊಳ್ಳಬಹುದು. ಬರೆದ ಕವನಗಳನ್ನು ಪರಸ್ಪರ ಓದಿ ಮೌಲ್ಯಮಾಪನ ಮಾಡಿದ ಬಳಿಕ ಕವನಗಳನ್ನು ತಿದ್ದಿ ಪರಿಷ್ಕರಿಸುವಲ್ಲಿ ಅಧ್ಯಾಪಕರು ನೆರವಾಗುವುದು. ಕಂಪ್ಯೂಟರ್‌ನಲ್ಲಿ ಟೈಪ್‌ಮಾಡಿ ಕವನ ಸಂಕಲವನವನ್ನು ತಯಾರಿಸುವಂತೆ ಸೂಚಿಸುವುದು ಹಾಗೂ ಇದರ ನೇತೃತ್ವವನ್ನು ವಿದ್ಯಾರ್ಥಿಗಳಿಗೇ ನೀಡುವುದು. ಕವನ ಸಂಕಲನಕ್ಕೆ ಅಗತ್ಯವಾದ ಮುನ್ನುಡಿಯನ್ನು ವಿದ್ಯಾರ್ಥಿಗಳಿಂದಲೇ ಬರೆಸುವುದು. ಸೂಕ್ತ ವೇದಿಕೆಯಲ್ಲಿ ಸಾಹಿತಿಯೊಬ್ಬರಿಂದ ಕವನ ಸಂಕಲನವನ್ನು ಬಿಡುಗಡೆಗೊಳಿಸುವುದು.

# ನೀರವ ರಾತ್ರಿಯ ಮಾಯಾಲೋಕ

ನೇಮಿಚಂದ್ರ

## ಪ್ರವೇಶ

ಸುಖ–ದುಃಖ, ಒಳಿತು–ಕೆಡುಕು, ಸೋಲು–ಗೆಲುವು ಮನುಷ್ಯನ ಬದುಕಿನಲ್ಲಿ ಸಾಮಾನ್ಯ. ಛಲದಿಂದ ಇವೆಲ್ಲವುಗಳನ್ನು ಮೆಟ್ಟಿನಿಂತು ಮುನ್ನಡೆದಲ್ಲಿ ಯಶಸ್ಸು ದಕ್ಕುತ್ತದೆ. ಹೀಗೆ ಯಶಸ್ಸನ್ನು ಸಾಧಿಸಿ ಪ್ರಸಿದ್ಧರಾದ ಹಲವಾರು ವ್ಯಕ್ತಿತ್ವಗಳು ನಮ್ಮ ಮುಂದಿವೆ. ಅವರನ್ನು ಗೌರವಿಸಬೇಕಾದುದು ನಮ್ಮ ಕರ್ತವ್ಯ. ಅಂತಹ ಸಾಧಕರಲ್ಲಿ ಒಬ್ಬರಾಗಿದ್ದಾರೆ–ಮೇರಿಕ್ಯೂರಿ. ಅವರು ಹಟಬಿಡದೆ ಮಾಡಿದ ತಮ್ಮ ಸಂಶೋಧನೆಯಿಂದ ರೇಡಿಯಂ ಧಾತುವನ್ನು ಕಂಡು ಹಿಡಿದು ವಿಶ್ವವಿಖ್ಯಾತರಾದರು. ನೋಬೆಲ್ ಪಾರಿತೋಷಕವನ್ನು ಪಡೆದರು. ಈ ಉನ್ನತ ಪ್ರಶಸ್ತಿಯನ್ನು ಪಡೆದ ಮೊದಲ ಮಹಿಳೆ ಎನಿಸಿದರು. ಗಂಡ ಪಿಯರ್‌ಕ್ಯೂರಿಯೊಂದಿಗೆ ಸೇರಿ ಕ್ಯಾನ್ಸರ್‌ನಂತಹ ಮಾರಕ ರೋಗದ ನಿವಾರಣೆಗೆ ಅಗತ್ಯವಾದ 'ರೇಡಿಯಂ' ಅನ್ನು ಸಂಶೋಧಿಸಿದುದು ಮನುಕುಲದ ಇತಿಹಾಸದಲ್ಲೇ ಮಹತ್ವದ್ದೆನಿಸುತ್ತದೆ.

## ಪೂರ್ವಜ್ಞಾನ

ವಿದ್ಯಾರ್ಥಿಗಳು ಮನುಕುಲದ ಕಲ್ಯಾಣವನ್ನು ಸಾಧಿಸಿದ ಕೆಲವು ವಿಜ್ಞಾನಿಗಳ ಕುರಿತು ಈ ಮೊದಲೇ ಕಲಿತಿರುತ್ತಾರೆ. ಅವರ ಸಂಶೋಧನೆಯ ಕುರಿತಾದ ವಿವರಗಳನ್ನು ಅರಿತಿರುತ್ತಾರೆ. ಆದುದರಿಂದ ವಿದ್ಯಾರ್ಥಿಗಳ ಪೂರ್ವಜ್ಞಾನದ ಕುರಿತು ತಿಳಿಯುವ ಕೆಲಸವನ್ನು ಮೊದಲಾಗಿ ಮಾಡಬಹುದು. ವಿದ್ಯಾರ್ಥಿಗಳು ತಾವು ತಿಳಿದಿರುವ ವಿಜ್ಞಾನಿಯ ಹೆಸರು ಮತ್ತು ಅವರ ಸಂಶೋಧನೆಯ ವಿವರಣೆಯನ್ನು ಬಾಯ್ದೆರೆಯಾಗಿ ಹೇಳಲಿ. ಈ ಸಂದರ್ಭದಲ್ಲಿ ಉಳಿದ ವಿದ್ಯಾರ್ಥಿಗಳು ವಿವರಗಳನ್ನು ದಾಖಲಿಸಿಕೊಳ್ಳಲಿ. ಅವರ ಸಂಶೋಧನೆಯ ಸಂದರ್ಭದ ಅಪೂರ್ವವಾದ ಕೆಲವು ಘಟನೆಗಳನ್ನು ಕೂಡ ಹೇಳಲಿ. ಮೇಡಂ ಕ್ಯೂರಿಯ ಪ್ರಸ್ತಾಪವೂ ಈ ಸಂದರ್ಭದಲ್ಲಿ ಬರಬಹುದು. ಪಾಠಭಾಗದ ಕೊನೆಗೆ ನೀಡಿರುವ ಮೇರಿ ಕ್ಯೂರಿಯ ಕಿರು ಪರಿಚಯವನ್ನು ವಿದ್ಯಾರ್ಥಿಗಳು ಮೌನವಾಗಿ ಓದಲಿ. ಲೇಖಕಿ 'ನೇಮಿಚಂದ್ರ'ರ ಪರಿಚಯವನ್ನು ಗಮನಿಸಲಿ.

ವಿದ್ಯಾರ್ಥಿಗಳನ್ನು ನಾಲ್ಕು ಗುಂಪುಗಳಾಗಿ ವಿಭಾಗಿಸಿ ಜಗತ್ಪ್ರಸಿದ್ಧರಾದ ವಿಜ್ಞಾನಿಗಳ ವಿವರವನ್ನೊಳಗೊಂಡ ಪಟ್ಟಿಯನ್ನು ತಯಾರಿಸುವಂತೆ ಸೂಚಿಸುವುದು. ಅವರ ಸಂಶೋಧನೆಗಳ ವಿವರಣೆಯೂ ಇಲ್ಲಿ ದಾಖಲಾಗಬೇಕು. ಪ್ರತಿಯೊಂದು ಗುಂಪಿನಿಂದ ಓರ್ವ ವಿಜ್ಞಾನಿಯ ವಿವರಗಳು ತಯಾರಾಗಲಿ. ಬಳಿಕ ತರಗತಿಯಲ್ಲಿ ಚರ್ಚೆಯ ಬಳಿಕ ಉತ್ತಮಪಡಿಸಿ ಅದನ್ನು ಚಾರ್ಟ್ ಪೇಪರ್‌ನಲ್ಲಿ ಬರೆದು (ಸಾಧ್ಯವಿದ್ದಷ್ಟು ಚಿತ್ರ ಸಹಿತ) ತರಗತಿಯಲ್ಲಿ ತೂಗು ಹಾಕಲಿ.

**ಆಲ್ಬರ್ಟ್ ಐನ್‌ಸ್ಟೈನ್**

| | | |
|---|---|---|
| ಜನನ | : | ಮಾರ್ಚ್ 14, 1879ರಲ್ಲಿ ಜರ್ಮನಿಯಲ್ಲಿ |
| ಕಾರ್ಯಕ್ಷೇತ್ರ | : | ಭೌತಶಾಸ್ತ್ರ ಪ್ರಾಧ್ಯಾಪಕ |
| ಪ್ರಸಿದ್ಧಿಗೆ ಕಾರಣ | : | ಸಾಮಾನ್ಯ ಸಾಪೇಕ್ಷಕ ಸಿದ್ಧಾಂತ, ವಿಶೇಷ ಸಾಪೇಕ್ಷಕ ಸಿದ್ಧಾಂತ, ಫೋಟೋ ಎಲೆಕ್ಟ್ರಿಕ್ ಎಫೆಕ್ಟ್ |
| ಗಮನಾರ್ಹ ಪ್ರಶಸ್ತಿ | : | ಭೌತಶಾಸ್ತ್ರದ ನೊಬೆಲ್ ಪ್ರಶಸ್ತಿ (1921) |
| ಮರಣ | : | ಎಪ್ರಿಲ್ 1955ರಲ್ಲಿ ನ್ಯೂಜರ್ಸಿಯಲ್ಲಿ |

**ಸರ್ ಐಸಾಕ್ ನ್ಯೂಟನ್**

| | | |
|---|---|---|
| ಜನನ | : | 4 ಜನವರಿ 1643 ಇಂಗ್ಲೇಡ್‌ನಲ್ಲಿ |
| ವಾಸಸ್ಥಳ | : | ಇಂಗ್ಲೆಡ್ |
| ಕಾರ್ಯಕ್ಷೇತ್ರ | : | ಭೌತವಿಜ್ಞಾನಿ, ಗಣಿತಜ್ಞ, ಖಗೋಳ ಶಾಸ್ತ್ರಜ್ಞ, ರಸ ಸಿದ್ಧಾಂತಿ |
| ಪ್ರಸಿದ್ಧಿಗೆ ಕಾರಣ | : | ಗುರುತ್ವಾಕರ್ಷಣ ಸಿದ್ಧಾಂತ, ವರ್ಣ ಸಿದ್ಧಾಂತ |
| ಮರಣ | : | 31 ಮಾರ್ಚ್ 1727 ಇಂಗ್ಲೇಡ್‌ನಲ್ಲಿ |

### ಆಶಯ ಗ್ರಹಣ

'ನೀರವ ರಾತ್ರಿಯ ಮಾಯಾಲೋಕ' ಪಾಠಭಾಗವನ್ನು ಮೌನವಾಗಿ ಓದುವಂತೆ ವಿದ್ಯಾರ್ಥಿಗಳಿಗೆ ಅಧ್ಯಾಪಕರು ಸೂಚಿಸುವುದು. ಈ ಸಂದರ್ಭದಲ್ಲಿ ಪಾಠಭಾಗದ ಪ್ರಧಾನ ಆಶಯಗಳನ್ನು ವಿದ್ಯಾರ್ಥಿಗಳು ರಫ್ ಪುಸ್ತಕದಲ್ಲಿ ದಾಖಲಿಸಿಕೊಳ್ಳಲಿ. ಮೇರಿ – ಪಿಯರ್ ದಂಪತಿಗಳು ಕೈಗೊಂಡ ಸಂಶೋಧನೆಯ ಹಂತಗಳನ್ನು ಗುರುತಿಸಲಿ. ಬಳಿಕ ಮುಖ್ಯಾಂಶಗಳನ್ನು ತರಗತಿಯಲ್ಲಿ ಮಂಡಿಸಲಿ. ಉತ್ತಮ ಪಡಿಸಿ Log Bookನಲ್ಲಿ ದಾಖಲಿಸಿಕೊಳ್ಳಲಿ.

ಅನಂತರ ವಿದ್ಯಾರ್ಥಿಗಳ ಆಶಯಗ್ರಹಣ ಕ್ಕೆ ಸಂಬಂಧಿಸಿದ ಅಗತ್ಯವಾದ ಪ್ರಶ್ನೆಗಳನ್ನು ಅಧ್ಯಾಪಕರು ಕೇಳುವುದು.

- 'ರೇಡಿಯಂ' ಸಂಶೋಧನೆಗಾಗಿ ಮೇರಿ ಪಿಯರ್‌ಗೆ ದೊರೆತ ಪ್ರಯೋಗಾಲಯ ಸ್ಥಿತಿಗತಿ.
- ಮೇರಿಕ್ಯೂರಿಯ ಸಾಧನೆಯಲ್ಲಿ ಪಿಯರ್‌ನ ಪಾತ್ರ.
- 'ಪಿಚ್ ಬ್ಲೆಂಡ್' ಬಂದೊಡನೆ ಮೇರಿ ಪಿಯರ್‌ಳ ಪ್ರತಿಕ್ರಿಯೆ.
- 'ರೇಡಿಯಂ' ತಯಾರಿಕೆಯ ವೇಳೆ ಮೇರಿ ಪಿಯರ್‌ಗೆ ಉಂಟಾದ ತೊಡಕುಗಳು.

ಇತ್ಯಾದಿ ಪ್ರಶ್ನೆಗಳಿಗೆ ಸೂಕ್ತ ವಿವರಣೆಯನ್ನು ಆಯ್ದ ವಿದ್ಯಾರ್ಥಿಗಳಿಂದ ಪಡೆದುಕೊಳ್ಳಬೇಕು. ಪರಿಷ್ಕಾರದ ಬಳಿಕ ವಿದ್ಯಾರ್ಥಿಗಳು Log Book ನಲ್ಲಿ ಉತ್ತರಗಳನ್ನು ಬರೆದುಕೊಳ್ಳಲಿ.

### ಚಟುವಟಿಕೆ

ಸಾಮಾನ್ಯ ರೂಪದಲ್ಲಿ ಸಿಗುವಂತಹ ಯುರೇನಿಯಂ ಅದಿರಿನಲ್ಲಿ ಇನ್ನೊಂದು ವಿಕಿರಣ ಧಾತು ಇರಬೇಕೆಂದು ಮೇರಿ ಕ್ಯೂರಿ ಕಂಡುಹಿಡಿದರು. ಯುರೇನಿಯಂನ ಬರುವಿಕೆಗೆ ಅವರು ಹಗಲಿರುಳು ಪ್ರಯತ್ನಿಸಿದರು. ಈ ಸಂದರ್ಭದಲ್ಲಿ ಅವರು 'ರೇಡಿಯಂ' ಅನ್ನು ತನ್ನ ಮಗು ಎಂಬ ಭಾವನೆಯಿಂದ ನೋಡಿದರು. ಆ ಭಾವನೆ ಮೇರಿಕ್ಯೂರಿಗೆ ಉಂಟಾದ ಬಗೆಯನ್ನು ಗುರುತಿಸಿ ಬರೆಯುವಂತೆ ವಿದ್ಯಾರ್ಥಿಗಳಿಗೆ ಸೂಚಿಸುವುದು. ಆಯ್ದ ವಿದ್ಯಾರ್ಥಿಗಳಿಂದ ತರಗತಿಯಲ್ಲಿ ಮಂಡನೆ. ಉತ್ತಮ ಪಡಿಸಿದ ಬಳಿಕ ವಿದ್ಯಾರ್ಥಿಗಳು ಪುಸ್ತಕದಲ್ಲಿ ಬರೆದು ಕೊಳ್ಳಲಿ.

ರೇಡಿಯಂ ಸಂಶೋಧನೆಯಿಂದ ಜಗತ್ತಿಗಾದ ಒಳಿತೇನು? ಎಂಬುದರ ಚರ್ಚೆಯನ್ನು ಈ ಸಂದರ್ಭದಲ್ಲಿ ನಡೆಸಬಹುದು. ವೈದ್ಯಕೀಯ ರಂಗದಲ್ಲಿ ರೇಡಿಯಂನ ಪ್ರಯೋಜನದ ಕುರಿತು ಹೆಚ್ಚಿನ ಮಾಹಿತಿಯನ್ನು ಅಧ್ಯಾಪಕರು ಒದಗಿಸುವುದು.

- ಕ್ಯಾನ್ಸರ್ ರೋಗ ನಿವಾರಣೆಗಾಗಿ ರೇಡಿಯಂ (Radio Therapy) ಅನ್ನು ಬಳಸುತ್ತಾರೆ.
- X-Ray (ಕ್ಷ– ಕಿರಣ) ಸಂದರ್ಭದಲ್ಲಿ ರೇಡಿಯಂನ ಉಪಯೋಗವಿದೆ. ಇತ್ಯಾದಿ ಮಾಹಿತಿಗಳನ್ನು ನೀಡುವುದು.

## ಆತ್ಮಕಥೆ ತಯಾರಿ

ಜೀವನ ಚರಿತ್ರೆ ಹಾಗೂ ಆತ್ಮಕಥೆಯ ನಡುವಿನ ವ್ಯತ್ಯಾಸವನ್ನು ವಿದ್ಯಾರ್ಥಿಗಳು ಹಿಂದಿನ ತರಗತಿಗಳಲ್ಲಿ ತಿಳಿದಿರುತ್ತಾರೆ. ಜೀವನ ಚರಿತ್ರೆಯು ಆತ್ಮಕಥೆಯಾಗಿ ಬದಲಾದಾಗ ಹಾಗೂ ಆತ್ಮಕಥೆಯು ಜೀವನ ಚರಿತ್ರೆಯಾದಾಗ ಉಂಟಾಗುವ ವ್ಯತ್ಯಾಸಗಳು ಏನೆಲ್ಲಾ ಎಂಬುದನ್ನು ವಿದ್ಯಾರ್ಥಿಗಳು ಬಾಯ್ದೆರೆಯಾಗಿ ಹೇಳಲಿ. ಬಳಿಕ ಚಟುವಟಿಕೆಯ ಭಾಗದಲ್ಲಿ ನೀಡಿರುವ ಭಾಗವನ್ನು ಆತ್ಮಕಥೆಯಾಗಿ ಪರಿವರ್ತಿಸಿ Log Book ನಲ್ಲಿ ಬರೆದುಕೊಳ್ಳಲಿ. ಹೆಚ್ಚಿನ ಚಟುವಟಿಕೆಯಾಗಿ/ಯಾರಾದರೂ ಇಬ್ಬರು ವಿಜ್ಞಾನಿಗಳ ಮಾಹಿತಿಯ ಭಾಗವನ್ನು ಅಧ್ಯಾಪಕರು ನೀಡುವುದು. ಅದರಲ್ಲಿ ಒಂದನ್ನು ಆತ್ಮಕಥೆಯಾಗಿಯೂ ಮತ್ತೊಂದನ್ನು ಜೀವನ ಚರಿತ್ರೆಯಾಗಿಯೂ ಪರಿವರ್ತಿಸಿ ಬರೆಯುವಂತೆ ಸೂಚಿಸುವುದು. ಹಾಗೆ ಬರೆಸಿದ ಬಳಿಕ ಅವನ್ನು ತರಗತಿಯಲ್ಲಿ ಓದಿಸುವುದು.

## ವಿಜ್ಞಾನ ಸಾಧಕರನ್ನು ಗುರುತಿಸುವುದು

ವಿಜ್ಞಾನ ರಂಗದಲ್ಲಿ ಸಾಧನೆಗೈದ ಪ್ರಸಿದ್ಧರಾದ ಸಾಕಷ್ಟು ಮಂದಿ ಭಾರತೀಯ ವಿಜ್ಞಾನಿಗಳಿದ್ದಾರೆ. ಎ. ಪಿ. ಜೆ. ಅಬ್ದುಲ್ ಕಲಾಂ, ಸಿ. ಎನ್. ಆರ್. ರಾವ್, ಡಾ।ಸಿ. ವಿ. ರಾಮನ್, ವಿಕ್ರಮ್ ಸಾರಾಭಾಯ್, ಹೋಮಿ ಜಹಾಂಗೀರ್ ಬಾಬಾ ಮುಂತಾದವರು ಇವರಲ್ಲಿ ಮಹಿಳಾ ವಿಜ್ಞಾನಿಗಳೂ ಸೇರಿದ್ದಾರೆ. ಅನ್ನಾಮಣಿ, ಅಸೀಮಾ ಚಟರ್ಜಿ,ಆನಂದಿ ಬಾಯಿ ಜೋಷಿ, ಜಾನಕಿ ಅಮ್ಮಾಳ್ ಮುಂಮತಾದವರು. ವಿಜ್ಞಾನ ಕ್ಷೇತ್ರಕ್ಕೆ ಅವರ ಕೊಡುಗೆಗಳ ವಿವರವನ್ನು ಸಂಗ್ರಹಿಸುವ ಕೆಲಸವನ್ನು ಈ ಸಂದರ್ಭದಲ್ಲಿ ಮಾಡುವುದು. ವಿದ್ಯಾರ್ಥಿಗಳು ತಮಗೆ ತಿಳಿದಿರುವ ಭಾರತೀಯ ವಿಜ್ಞಾನಿಗಳ ಹೆಸರುಗಳನ್ನು ಸೂಚಿಸಲಿ. ಬಳಿಕ ವಿದ್ಯಾರ್ಥಿಗಳನ್ನು ಗುಂಪಾಗಿಸಿ ಮೊದಲೆರಡು ಗುಂಪು ವಿಜ್ಞಾನ ಸಾಧನೆಗಾಗಿ 'ಭಾರತ ರತ್ನ' ಪ್ರಶಸ್ತಿಗೆ ಭಾಜನರಾದ ಡಾ। ಎ. ಪಿ. ಜೆ. ಅಬ್ದುಲ್ ಕಲಾಂ ಹಾಗೂ ಸಿ. ಎನ್. ಆರ್. ರಾವ್ ಅವರ ವಿವರದೊಂದಿಗೆ, ಅವರ ಸಂಶೋಧನೆಯ ಮರೆಯಲಾಗದ ಅಂಶಗಳನ್ನು ಲೇಖನರೂಪದಲ್ಲಿ ಬರೆದು ತರಗತಿಯಲ್ಲಿ ಮಂಡಿಸಲಿ. ಮೂರು ಮತ್ತು ನಾಲ್ಕನೆಯ ಗುಂಪುಗಳು ಯಾರಾದರೂ ಒಬ್ಬರು ಭಾರತೀಯ ಮಹಿಳಾ ವಿಜ್ಞಾನಿಗಳ ಸಾಧನೆಗಳ ವಿವರಗಳನ್ನೊಳಗೊಂಡ ಲೇಖನವನ್ನು ಬರೆದು ತರಗತಿಯಲ್ಲಿ ಮಂಡಿಸಲಿ. ಎಲ್ಲವನ್ನೂ ಪರಿಷ್ಕರಿಸಿದ ಬಳಿಕ ಪುಸ್ತಕದಲ್ಲಿ ಬರೆದುಕೊಳ್ಳಲಿ.

ಡಾ। ಎ. ಪಿ. ಜೆ. ಅಬ್ದುಲ್ ಕಲಾಂ ಅವರ ಬದುಕು ಸಾರ್ಥಕಗೊಂಡ ನೆನಪಿನ ಲೇಖನವೊಂದನ್ನು ಕೆಳಗೆ ನೀಡಲಾಗಿದೆ.

### ಎ. ಪಿ. ಜೆ. ಅಬ್ದುಲ್ ಕಲಾಂ

### ಬದುಕು ಸಾರ್ಥಕ ಎನಿಸುವುದು ಯಾವಾಗ?

ಎ.ಪಿ.ಜೆ.ಅಬ್ದುಲ್ ಕಲಾಂ ವೈಮಾನಿಕ ತಂತ್ರಜ್ಞಾನದಲ್ಲಿ ಪದವಿ ಪಡೆದವರು. ಇಸ್ರೋ ಮತ್ತು ಡಿ.ಆರ್.ಡಿ.ಒ.ಗಳ ಮುಖ್ಯಸ್ಥರಾದವರು. ಅನೇಕ ರಾಕೆಟ್‌ಗಳನ್ನು ಯಶಸ್ವಿಯಾಗಿ ಹಾರಿಸಿದವರು. ಅವರು ಪ್ರಖ್ಯಾತ ವಿಜ್ಞಾನಿ. ಮೂವತ್ತು ವಿಶ್ವ ವಿದ್ಯಾನಿಲಯಗಳಿಂದ ಗೌರವ ಡಾಕ್ಟರೇಟ್ ಪಡೆದಿದ್ದಾರೆ. ಭಾರತದ ಅತ್ಯುನ್ನತ ಗೌರವಗಳಾದ ಪದ್ಮಭೂಷಣ, ಪದ್ಮವಿಭೂಷಣ ಹಾಗೂ ಭಾರತ ರತ್ನ ಪದವಿಗಳನ್ನೂ ಪಡೆದಿದ್ದಾರೆ.

ಭಾರತದ ರಾಷ್ಟ್ರಪತಿಯೂ ಆಗಿದ್ದವರು. ಇವರನ್ನು ನಿಮ್ಮ ಬದುಕು ಸಾರ್ಥಕ ಎನಿಸಿದ ಕ್ಷಣ ಯಾವುದು? ಎಂದು ಕೇಳಲಾಯಿತು. ಬಹು ಜನ ನಿರೀಕ್ಷಿಸಿದ್ದು ಗೌರವ ಡಾಕ್ಟರೇಟ್ ಪಡೆದಿದ್ದನ್ನೋ, ಇಸ್ರೋದ ರಾಕೆಟ್ ಯಶಸ್ವಿಯಾಗಿ ಉಡಾಯಿಸಿದ್ದನ್ನೋ ಅಥವಾ ರಾಷ್ಟಪತಿಯಾಗಿ ಅಧಿಕಾರ ಸ್ವೀಕರಿಸಿದ ಕ್ಷಣವನ್ನೋ ಹೇಳುತ್ತಾರೆಂದು ನಿರೀಕ್ಷಿಸಿದ್ದರು. ಆಧರೆ ಅಬ್ದುಲ್ ಕಲಾಂ ಅವರು ನೀಡಿದ ಉತ್ತರ ಅತಿ ಆಶ್ಚರ್ಯಕರವಾಗಿತ್ತು. ಆ ಘಟನೆ ಹೀಗಿದೆ.

'ಒಮ್ಮೆ ನಾನು ಹೈದರಾಬಾದಿನ ನಿಜಾಂ ಆಸ್ಪತ್ರೆಯ ಪೋಲಿಯೋ ಪೀಡಿತ ಮಕ್ಕಳ ವಿಭಾಗಕ್ಕೆ ಹೋಗಿದ್ದೆ. ಈ ಮಕ್ಕಳ ಕಾಲುಗಳು ನಿರ್ಬಲವಾಗಿರುತ್ತವೆ. ಅವರು ನಡೆಯುವುದಕ್ಕಾಗಿ ಕಾಲಿಗೆ ಲೋಹದ ಕ್ಯಾಲಿಪರ್ಸ್‌ಗಳನ್ನು ಹಾಕಿಕೊಂಡಿರುತ್ತಾರೆ.ಮೂರು ಕೆಜಿ ತೂಕದ ಈ ಕ್ಯಾಲಿಪರ್ಸ್‌ಗಳು ಅವರನ್ನು ಕಾಲುಗಳನ್ನು ಎಳೆದೆಳೆದು ಹಾಕುವ ಕಷ್ಟಕ್ಕೆ ಒಳಪಡಿಸುತ್ತವೆ. ವೈದ್ಯಾಧಿಕಾರಿಗಳು ಈ ನಮ್ಮ ರೋಗಿಗಳ ನೋವನ್ನು ನಿವಾರಿಸಲು ಸಾಧ್ಯವೇ ಎಂದು ಕೋರಿದರು'

ನಾನು ಅಲ್ಲಿಂದ ನೇರವಾಗಿ ಇಸ್ರೋದ ಪ್ರಯೋಗಾಲಯಕ್ಕೆ ಬಂದೆ. ತಂತ್ರಜ್ಞರಿಗೆ ಈ ಸಮಸ್ಯೆಯನ್ನು ವಿವರಿಸಿದೆ. ನಾವೆಲ್ಲಾ ಮೂರು ವಾರಗಳ ಕಾಲ ಬಿಡುವಿಲ್ಲದ ಹಾಗೆ ದುಡಿದೆವು. ರಾಕೆಟ್ ತಯಾರಿಕೆಯಲ್ಲಿ ಉಪಯೋಗಿಸುವ ಒಂದು ವಿಶಿಷ್ಟ ಪದಾರ್ಥದಿಂದ ಹೊಸ ಕ್ಯಾಲಿಪರ್ಸ್ ಅನ್ನು ತಯಾರು ಮಾಡಿದೆವು. ಈ ಹೊಸ ಕ್ಯಾಲಿಪರ್ಸ್ ಲೋಹಕ್ಕಿಂತ ಹೆಚ್ಚು ಬಲಿಷ್ಠವಾಗಿತ್ತು. ಆದರೆ ತೂಕ ಮಾತ್ರ ಕೇವಲ 300ಗ್ರಾಂನಷ್ಟು ಮತ್ತೆ ಹೈದರಾಬಾದಿನ ಆಸ್ಪತ್ರೆಗೆ ಹೋದೆವು. ಮಕ್ಕಳ ಕಾಲಿಗೆ ಹೊಸ ಕ್ಯಾಲಿಪರ್ಸ್ ತೊಡಿಸಿದೆವು. ಇದುವರೆಗೆ ಮೂರು ಕೆ.ಜಿ.ತೂಕದ ಕ್ಯಾಲಿಪರ್ಸ್‌ಗಳನ್ನು ಹೊತ್ತು ನಡೆಯಲಾಗದೆ ಬಳಲುತ್ತಿದ್ದ ಮಕ್ಕಳು ಈಗ ಕೇವಲ 300 ಗ್ರಾನಷ್ಟು ಹಗುರವಾದ ಕ್ಯಾಲಿಪರ್ಸ್‌ಗಳನ್ನು ಹಾಕಿಕೊಂಡು ನಲಿದಾಡುತ್ತಿದ್ದರು. ಮಕ್ಕಳಿಗೆ ಆನಂದವೋ ಆನಂದ. ಮಕ್ಕಳ ಕಷ್ಟ ನಿವಾರಣೆಯಾದದ್ದರಿಂದ ಅವರ ಕಣ್ಣಲ್ಲೂ, ಅವರ ತಂದೆ ತಾಯಿಗಳ ಕಣ್ಣಲ್ಲೂ ಹಾಗೂ ವೈದ್ಯಾಧಿಕಾರಿಗಳ ಕಣ್ಣಲ್ಲೂ ಆನಂದ ಭಾಷ್ಪ ಸುರಿಯುತ್ತಿತ್ತು. ಅವರ ಕಣ್ಣೀರು ನೋಡಿ ನನಗೂ ಕಣ್ಣೀರು ಬಂತು. ನನ್ನ ಬದುಕಿನ ಸಾರ್ಥಕ ಕ್ಷಣ ಅದು'

ನಾವು ಏನನ್ನೋ ಗಳಿಸಿದಾಗ, ಪದವಿ ಪಡೆದಾಗ, ಪ್ರಶಸ್ತಿ ಸ್ವೀಕರಿಸಿದಾಗ ನಮಗೆ ಸಂತೋಷವಾಗಬಹುದು. ಆದರೆ ಬದುಕು ಸಾರ್ಥಕ ಎನಿಸುವುದು ಮತ್ತೊಬ್ಬರ ಕಷ್ಟವನ್ನು ನಿವಾರಣೆ ಮಾಡಿದ ಕ್ಷಣದಲ್ಲಿ.

(ಎಸ್.ಷಡಕ್ಷರಿಯವರ 'ಕ್ಷಣಹೊತ್ತು ಅಣಿಮುತ್ತು' ಪುಸ್ತಕದಿಂದ)

**ಅಸೀಮಾ ಚಟರ್ಜಿ** (ಭಾರತೀಯ ಮಹಿಳಾ ವಿಜ್ಞಾನಿ)

ಅಸೀಮಾ ಚಟರ್ಜಿ ಅವರು ಭಾರತದ ಖ್ಯಾತ ರಸಾಯನ ಶಾಸ್ತ್ರಜ್ಞೆ. ಪಶ್ಚಿಮ ಬಂಗಾಳದಲ್ಲಿ 23 ಸೆಪ್ಟಂಬರ್ 1917 ರಂದು ಜನಿಸಿದರು. 1398ರಲ್ಲಿ ಆರ್ಗಾನಿಕ್ ಕೆಮಿಸ್ಟ್ರಿಯಲ್ಲಿ ಸ್ನಾತಕೋತ್ತರ ಪದವೀಧರೆಯಾದ ಅವರು ಕಲ್ಕತ್ತ ವಿಶ್ವವಿದ್ಯಾಲಯದಲ್ಲಿ ಪಿ. ಎಚ್. ಡಿ. ಮಾಡಲು ಪ್ರಾರಂಭಿಸಿದರು. ಸಸ್ಯಗಳಿಂದ ಉತ್ಪಾದಿಸಲ್ಪಡುವ ರಾಸಾಯನಿಕಗಳ ಕುರಿತು ಕೆಲಸ ಮಾಡಿದರು. ಭಾರತೀಯ ವಿಶ್ವ ವಿದ್ಯಾಲಯವೊಂದು ನೀಡುವ ಪಿ.ಎಚ್.ಡಿ. ಪದವಿಗೆ ಭಾಜನರಾದ ಪ್ರಪ್ರಥಮ ಭಾರತೀಯ ಮಹಿಳೆ ಅಸೀಮಾ ಚಟರ್ಜಿ. 1944ರಲ್ಲಿ ಅವರಿಗೆ ಪಿ. ಎಚ್. ಡಿ. ಪದವಿ ದೊರೆಯಿತು. ಆರ್ಗಾನಿಕ್ ರಸಾಯನ ಶಾಸ್ತ್ರ ಮತ್ತು ಫೈಟೋ ಮೆಡಿಸಿನ್ ಕ್ಷೇತ್ರಗಳಲ್ಲಿ ಅವರ ಕೊಡುಗೆ ಅಪಾರ. ಮೂರ್ಛೆ ರೋಗ ನಿರೋಧಕ ಮತ್ತು ಮಲೇರಿಯಾ ನಿರೋಧಕ ಔಷಧಗಳನ್ನು ಅಭಿವೃದ್ಧಿ ಪಡಿಸುವಲ್ಲಿ ಇವರು ಸಾಕಷ್ಟು ದುಡಿದಿದ್ದಾರೆ. ಭರತ ಖಂಡದ ಔಷಧೀಯ ಸಸ್ಯಗಳ ಬಗ್ಗೆ ಸಂಪುಟಗಳನ್ನು ರಚಿಸಿದ್ದಾರೆ.

### ಲೇಖನ ಚಿಹ್ನೆ ಬಳಸುವುದು

ಲೇಖನ ಚಿಹ್ನೆಗಳನ್ನು ಬಳಸುವ ಸಂದರ್ಭವನ್ನು ವಿದ್ಯಾರ್ಥಿಗಳು ಈ ಹಿಂದಿನ ತರಗತಿಗಳಲ್ಲಿ ಕಲಿತಿರುತ್ತಾರೆ. ಪಾಠಭಾಗದಲ್ಲಿ ನೀಡಿರುವ ಸಾಲುಗಳಿಗೆ ಸೂಕ್ತ ಲೇಖನ ಚಿಹ್ನೆಗಳನ್ನು ಅಳವಡಿಸಿ ಬರೆಯವಂತೆ ಅಧ್ಯಾಪಕರು ವಿದ್ಯಾರ್ಥಿಗಳಿಗೆ ಸೂಚಿಸುವುದು. ಓರ್ವ ವಿದ್ಯಾರ್ಥಿಯನ್ನು ಕರೆದು ಸಾಲುಗಳನ್ನು ಕರಿ ಹಲಗೆಯಲ್ಲಿ ಬರೆಸಿ ಲೇಖನ ಚಿಹ್ನೆಯನ್ನು ಅಳವಡಿಸಲು ಹೇಳುವುದು. ಇದೇ ರೀತಿ ಲೇಖನ ಚಿಹ್ನೆಯನ್ನು ಅಳವಡಿಸಲು ಯೋಗ್ಯವಾದ ಕೆಲವು ಸಾಲುಗಳನ್ನು ನೀಡಿ ಚಟುವಟಿಕೆಯನ್ನು ನಡೆಸುವುದು.

# 3. ಸಂಸ್ಕೃತಿ ಸುಮ

| | | |
|---|---|---|
| ಘಟಕ 3 | : | ಸಂಸ್ಕೃತಿ ಸುಮ |
| ಪಾಠಭಾಗಗಳು | : | ಜಾಲಿಯ ಮರದಂತೆ (ಕೀರ್ತನೆ)<br>ನಡೆಯುವುದೊಂದು ಭೂಮಿ (ಸರ್ವಜ್ಞನ ತ್ರಿಪದಿಗಳು)<br>ಸುಬ್ಬಣ (ಕಿರುಕಾದಂಬರಿಯಭಾಗ) |
| ಸಮಯ | : | 28 ಪಿರೇಡುಗಳು |
| **ಕಲಿಕಾ ಸಾಮಾಗ್ರಿಗಳು** | : | ಪಠ್ಯ ಪುಸ್ತಕ<br>ಕೀರ್ತನೆ, ತ್ರಿಪದಿಗಳನ್ನು ಹಾಡಿದ ಅಡಕ ಮುದ್ರಿಕೆ.<br>ಪೂರಕಗ್ರಂಥಗಳು. |
| **ಮೌಲ್ಯಗಳು, ಮನೋಭಾವಗಳು** | • | ಕೀರ್ತನೆ, ತ್ರಿಪದಿಗಳನ್ನು ಹಾಡಿ ಆಸ್ವಾದಿಸುವ ಮನೋಭಾವ |
| | • | ಸೃಜನಶೀಲ ರಚನೆಗಳಲ್ಲಿ ತೊಡಗಿಸಿಕೊಳ್ಳುವ ಮನೋಭಾವ. |
| | • | ಕೃತಿಗಳಲ್ಲಿ ಮೂಡಿ ಬಂದಿರುವ ಜೀವನ ಮೌಲ್ಯಗಳನ್ನು ನಿತ್ಯಜೀವನದಲ್ಲಿ ಅಳವಡಿಸಿಕೊಳ್ಳುವುದು. |
| | • | ಚರ್ಚೆ–ಸಂವಾದ ಮೊದಲಾದವುಗಳಲ್ಲಿ ಭಾಗವಹಿಸುವ ಮನೋಭಾವ |

# ಪ್ರಸ್ತಾವನೆ

ಸಹಸ್ರಾರು ವರ್ಷಗಳ ಹಿಂದೆ ನದಿ ತೀರದಲ್ಲಿ ಭಾರತೀಯ ಸಂಸ್ಕೃತಿಯು ಉದಯವಾಯಿತು ಎಂಬುದು ಸಂಶೋಧಕರ ಅಭಿಪ್ರಾಯ. ಈ ಸಂಸ್ಕೃತಿಯ ಬೆಳವಣಿಗೆಗೆ ಭಾಷೆ, ಬರಹ, ಜ್ಞಾನ ಸಂಚಯ, ವಿವಿಧ ಕಲೆಗಳು ನೆರವಾದುವು. ಸಮಾಜಕ್ಕೆ ಹಿತಕರ ಎಂದು ಭಾವಿಸಿ ಮಾಡುವುದನ್ನೆಲ್ಲಾ ಸಂಸ್ಕೃತಿ ಎನ್ನಬಹುದು. ಹಾಡಿದ ಹಾಡು, ಬಿಡಿಸಿದ ಚಿತ್ರ, ಕುಣಿದ ಕುಣಿತ, ಬರೆದ ಕಾವ್ಯ ಇವುಗಳೆಲ್ಲವೂ ಸಂಸ್ಕೃತಿಯಲ್ಲಿ ಕಾಣಿಸಿಕೊಳ್ಳುವ ವಿವಿಧ ಬಗೆಗಳಾಗಿವೆ.

ತ್ರಿಪದಿಗಳು(ಸರ್ವಜ್ಞನ ವಚನಗಳು) ಮತ್ತು ಕೀರ್ತನೆಗಳು ಜೀವನದಲ್ಲಿಯ ವಿಷಮತೆ ಮತ್ತು ಡಾಂಭಿಕತೆಯ ವಿರುದ್ಧ ಕ್ರಾಂತಿಯ ಕಹಳೆಯನ್ನು ಮೊಳಗಿಸಿದುವು. ಈ ರಚನೆಗಳು ಜನಸಾಮಾನ್ಯರ ಅಂತಃಕರಣಕ್ಕೆ ತಟ್ಟಿ ಅವರನ್ನು ಸುಸಂಸ್ಕೃತರನ್ನಾಗಿಸುವಲ್ಲಿ ಸಮರ್ಥವಾದುವು. ಹೆಚ್ಚು ಹೆಚ್ಚು ಜನಮೆಚ್ಚುಗೆಯನ್ನು ಪಡೆದುವು. ಇಂತಹ ಸಾಹಿತ್ಯ ಪ್ರಕಾರವು ತತ್ವವಿವರಣೆ, ನೀತಿಬೋಧೆ, ಸಮಾಜ ವಿಮರ್ಶೆಗಳಿಗೂ ಮಾಧ್ಯಮಗಳಾದುವು.

ಜೀವನ ಎಂಬುದು ಕ್ಷಣಿಕ–ನಶ್ವರ. ಬಾಳಿ ಬದುಕಿದುದನ್ನು ನಾಲ್ಕು ಜನರು ನೆನಪಿಸುವಂತಿರಬೇಕು. ಸಮಾಜದಲ್ಲಿ ಎರಡು ವರ್ಗದ ಜನರಿದ್ದಾರೆ. ಒಂದು ವರ್ಗದ ಜನರು ಬದುಕಿದ್ದೂ ಸತ್ತಂತೆ, ಇನ್ನೊಂದು ವರ್ಗದ ಜನರು ಸತ್ತರೂ ಅವರ ನೆನಪು ಶಾಶ್ವತವಾಗಿರುವುದು. ಈ ಎರಡನೇ ವರ್ಗ ಸಮಾಜಕ್ಕೆ ಆದರ್ಶಪ್ರಾಯವಾಗಿರುವುದು. 'ಕೆಟ್ಟ ಮಾನವರು ಸಮಾಜಕ್ಕೆ ನಿರುಪಯುಕ್ತ' ಎಂಬ ಸಂದೇಶವನ್ನು "ಜಾಲಿಯ ಮರದಂತೆ" ಎಂಬ ಕೀರ್ತನೆಯಲ್ಲಿ ಹೇಳಲಾಗಿದೆ.

'ತನ್ನಲ್ಲಿ ಜ್ಞಾನವುದಿಸಿದ ಮಹಾತ್ಮನು ಕನ್ನಡಿಯು ಜಗಕೆ'–ಇದು ಸರ್ವಜ್ಞನ ಮಾತು. ಕನ್ನಡಿಯು ತಿಳಿಯಾಗಿದ್ದು ಪರಿಶುದ್ಧವಾದ ಪ್ರತಿಬಿಂಬವನ್ನು ಬೀರುವಂತೆ ಮಹಾತ್ಮರ ದಿವ್ಯ ಸಂದೇಶವೆಂಬ ಕನ್ನಡಿಯು ಸಂಸ್ಕೃತಿ– ಸಂಸ್ಕಾರಗಳನ್ನು ಪ್ರತಿಬಿಂಬಿಸಿ ಲೋಕವನ್ನು ಬೆಳಗುತ್ತದೆ. 'ಮಾತು ಬಲ್ಲವನಿಗೆ ಜಗಳವಿಲ್ಲ' 'ತಾಯಿಗಿಂತ ಬಂಧುವಿಲ್ಲ', 'ಸತ್ಯ–ನೀತಿ ಒಂದು ನಾಣ್ಯದ ಎರಡು ಮುಖಗಳಂತೆ', 'ಪರಸ್ತ್ರೀ ತಾಯಿಗೆ ಸಮಾನ', 'ಅನ್ನದಾನ–ಮಹಾದಾನ', 'ಒಂದೇ ತಾಯಿಯ ಮಕ್ಕಳಾದ ನಮ್ಮಲ್ಲಿ ತಾರತಮ್ಯ ಸಲ್ಲದು'...... ಮುಂತಾದ ಜೀವನ ಸಂದೇಶಗಳು 'ನಡೆವುದೊಂದೇ ಭೂಮಿ'ಎಂಬ ಸರ್ವಜ್ಞನ ತ್ರಿಪದಿಗಳಲ್ಲಿ ವ್ಯಕ್ತವಾಗುತ್ತದೆ.

ಪಿಟೀಲುಗಾರನಾದ ಸುಬ್ಬಣ್ಣನ ಸಂಗೀತ ಕಲೆಗೆ ಬೆಲೆ ಸಿಗದೆ ಆತನು ಪಟ್ಟಪಾಡು, ಆತನಿಗೆ ತನ್ನ ಪಾಂಡಿತ್ಯದಲ್ಲಿ ಉಂಟಾದ ಜಿಗುಪ್ಸೆ, ಬಳಿಕ ಜೀವನೋತ್ಸಾಹ ತಾಳಿದ ರೀತಿ...ಮುಂತಾದ ವಿಚಾರಗಳು ಈ 'ಸುಬ್ಬಣ್ಣ' ಪಾಠ ಭಾಗದಲ್ಲಿ ಮಾರ್ಮಿಕವಾಗಿ ಮೂಡಿಬಂದಿದೆ. ಒಟ್ಟಿನಲ್ಲಿ 'ಸಂಸ್ಕೃತಿ ಸುಮ' ವೆಂಬ ಈ ಘಟಕವು ಜೀವನ ಸಂದೇಶವೆಂಬ ಸುಮವನ್ನು ವಿದ್ಯಾರ್ಥಿಗಳಿಗೆ ನೀಡಬಲ್ಲದು.

# UNIT FRAME

**ಘಟಕ 3 : ಸಂಸ್ಕೃತಿ ಸುಮ** ಸಮಯ :

**ಕಲಿಕಾ ಸಾಧನೆಗಳು**

- ಕನ್ನಡ ಭಾಷೆ ಹಾಗೂ ಸಾಹಿತ್ಯದ ಬೆಳವಣಿಗೆಯನ್ನು ನಡುಗನ್ನಡ ಕೃತಿಗಳ ಹಿನ್ನೆಲೆಯಲ್ಲಿ ಗುರುತಿಸಿಕೊಂಡು ಆ ಬಗೆಗೆ ತಮ್ಮ ನಿಲುವುಗಳನ್ನು ಪ್ರಕಟಿಸುವರು.
- ಹೊಸಗನ್ನಡ ಸಾಹಿತ್ಯ ಪ್ರಕಾರಗಳ ವೈಶಿಷ್ಟ್ಯವನ್ನರಿತು ವಿಮರ್ಶಾ ಲೇಖನಗಳನ್ನು ಸಿದ್ಧಪಡಿಸುವರು.
- ಸಾಹಿತ್ಯ ಕೃತಿಗಳನ್ನು ಓದಿ ವಿಶ್ಲೇಷಣೆ ಮಾಡುವುದರ ಮೂಲಕ ಪರಂಪರೆಯಿಂದ ಹರಿದು ಬಂದ ಆಚಾರ ವಿಚಾರಗಳನ್ನು, ಸಾಂಸ್ಕೃತಿಕ ಮೌಲ್ಯಗಳನ್ನು ತಿಳಿದುಕೊಂಡು ಅವುಗಳನ್ನು ನಿತ್ಯಜೀವನದಲ್ಲಿ ರೂಢಿಸಿಕೊಳ್ಳುವರು.
- ಕೀರ್ತನೆ, ತ್ರಿಪದಿಗಳಲ್ಲಿ ಮೂಡಿಬಂದಿರುವ ಜೀವನ ನೀತಿ, ಸಮಾಜ ವಿಮರ್ಶೆ ಮೊದಲಾದವುಗಳನ್ನು ತಿಳಿದುಕೊಂಡು ತಮ್ಮ ಪ್ರತಿಕ್ರಿಯೆಗಳನ್ನು ಸೂಕ್ತ ವ್ಯವಹಾರ ರೂಪಗಳಲ್ಲಿ ಪ್ರಕಟಿಸುವ ಸಾಮರ್ಥ್ಯವನ್ನು ಗಳಿಸುವರು.
- ಸಾಹಿತ್ಯ ಕೃತಿಗಳಲ್ಲಿ ಮೂಡಿಬಂದಿರುವ ಸಮಕಾಲೀನ ವಿಚಾರಗಳನ್ನು ಕಂಡುಕೊಂಡು ನಾಡು ನುಡಿಯ ಚಿಂತನೆ, ಪರಿಸರ ಪ್ರಜ್ಞೆ, ಪರಸ್ಪರ ಸ್ನೇಹ, ಬಾಂಧವ್ಯ ಇವೇ ಮೊದಲಾದ ಮನೋಭಾವಗಳನ್ನು ಬೆಳೆಸಿಕೊಳ್ಳುವರು.
- ಕಲೋಪಾಸಕನ ಬದುಕಿನ ಆದರ್ಶದಿಂದ ಪ್ರೇರಣೆ ಪಡೆಯುವರು.

| ಪರಿಕಲ್ಪನೆ | ಪ್ರಕ್ರಿಯೆ / ಚಟುವಟಿಕೆ/ಮೌಲ್ಯಮಾಪನ | ಕಲಿಕಾ ಸಾಧನೆಗಳು |
|---|---|---|
| • ಭಕ್ತಿಯ ಪ್ರತಿಪಾದನೆಯೊಂದಿಗೆ ಸಂಸ್ಕೃತಿಯ ತಿರುಳನ್ನು ಬೋಧಿಸುವ ಅಪಾರವಾದ ಕೀರ್ತನೆಗಳು ದಾಸ ಸಾಹಿತ್ಯದಲ್ಲಿವೆ. | • ವಿದ್ಯಾರ್ಥಿಗಳು ಈ ಹಿಂದಿನ ತರಗತಿಗಳಲ್ಲಿ ಓದಿರುವ, ಆಸ್ವಾದಿಸಿರುವರು ವಚನ, ಕೀರ್ತನೆಗಳ ವಿಶೇಷತೆಗಳನ್ನು ಬಾಯ್ದೆರೆಯಾಗಿ ಹೇಳಿಸುವುದು.<br>• ವಚನ–ಕೀರ್ತನೆಗಳಲ್ಲಿ ಅಡಕವಾಗಿರುವ ವಿಚಾರಗಳ ಕುರಿತು ಚರ್ಚೆ– ಅಭಿಪ್ರಾಯ ಮಂಡನೆ– ಟಿಪ್ಪಣಿ ತಯಾರಿಸುವುದು.<br>• 'ಜಾಲಿಯ ಮರದಂತೆ' ಕೀರ್ತನೆಯನ್ನು ಹಾಡುವುದು. ಕೀರ್ತನೆಯಲ್ಲಿ ಅಡಕವಾಗಿರುವ ಆಶಯವನ್ನು ಕಂಡುಕೊಳ್ಳುವುದು. ತರಗತಿಯಲ್ಲಿ ಮಂಡನೆ. ಪರಸ್ಪರ ಮೌಲ್ಯಮಾಪನ. | • ವಚನ–ಕೀರ್ತನೆಗಳಲ್ಲಿನ ವಿಶೇಷತೆಗಳ ಕುರಿತಾದ ಕಿರುಲೇಖನ<br>• ಕೀರ್ತನೆಗಳನ್ನು ರಾಗವಾಗಿ ಹಾಡುವ ಸಾಮರ್ಥ್ಯ. ಕೀರ್ತನೆಯ ಆಶಯವನ್ನೊಳಗೊಂಡ ಟಿಪ್ಪಣಿ. |

| ಪರಿಕಲ್ಪನೆ | ಪ್ರಕ್ರಿಯೆ / ಚಟುವಟಿಕೆ/ಮೌಲ್ಯಮಾಪನ | ಕಲಿಕಾ ಸಾಧನೆಗಳು |
|---|---|---|
| | • ಜಾಲಿಯ ಮರಕ್ಕೆ ದುರ್ಜನರನ್ನು ಹೋಲಿಸುವುದರ ಔಚಿತ್ಯವನ್ನು ಕಂಡುಕೊಳ್ಳುವುದರ ಜತೆಗೆ ತಮ್ಮ ಅನಿಸಿಕೆಗಳನ್ನು ಬರೆದು ಮಂಡಿಸುವುದು. ಮೌಲ್ಯಮಾಪನ.<br>• ಸಮಾನ ಆಶಯವನ್ನು ಒಳಗೊಂಡ ವಚನವನ್ನು ಕೀರ್ತನೆಯೊಂದಿಗೆ ತುಲನೆ ಮಾಡುವುದು.<br>• ಸಮಾನ ಆಶಯಗಳನ್ನು ಗುರುತಿಸುವುದು. ಸ್ವಾರಸ್ಯವನ್ನು ಬರಹದ ಮೂಲಕ ಪ್ರದರ್ಶಿಸುವುದು. ತರಗತಿಯಲ್ಲಿ ಮಂಡನೆ. ಅಧ್ಯಾಪಕರ ಮೌಲ್ಯಮಾಪನ | • ಜಾಲಿಯಮರಕ್ಕೆ ದುರ್ಜನರನ್ನು ಹೋಲಿಸಿದುದರ ಔಚಿತ್ಯವನ್ನು ಬರೆದ ಟಿಪ್ಪಣಿ.<br>• ಆಶಯಗಳನ್ನು ಕ್ರಮೀಕರಿಸಿ ಬರೆದ ತುಲನಾತ್ಮಕ ಲೇಖನ. |
| • ಲೋಕಾನುಭವವು ಕೊನೆಗಟ್ಟಿದ ಸರ್ವಜ್ಞನ ತ್ರಿಪದಿಗಳು ನೀತಿಯನ್ನು ಬೋಧಿಸುವುದರ ಜೊತೆಗೆ ಸಂಸ್ಕೃತಿಯ ಸುಗರಾಧವನ್ನು ವರದಿಸುತ್ತವೆ. | • ವಿದ್ಯಾರ್ಥಿಗಳು ತಮಗೆ ತಿಳಿದಿರುವ ಯಾವುದಾದರೂ ಎರಡು ತ್ರಿಪದಿಗಳನ್ನು ತರಗತಿಯಲ್ಲಿ ಹಾಡುವುದು, ಅವುಗಳ ಆಶಯವನ್ನು ತರಗತಿಯಲ್ಲಿ ಪ್ರಸ್ತುತಪಡಿಸುವುದು.<br>• ತ್ರಿಪದಿಗಳಲ್ಲಿ ಅಡಕವಾಗಿರುವ ವಿಚಾರಗಳ ಕುರಿತಾದ ಚರ್ಚೆ–ಸಂವಾದ.<br>• ವಚನ – ಕೀರ್ತನೆ – ಸರ್ವಜ್ಞನ ತ್ರಿಪದಿ. ಇವುಗಳ ರಚನೆಯ ಹಿಂದಿರುವ ಉದ್ದೇಶಗಳನ್ನು ಕಂಡುಕೊಳ್ಳುವುದು.<br>• ಪಾಠಭಾಗದಲ್ಲಿ ಬಂದಿರುವ ಸರ್ವಜ್ಞನ ತ್ರಿಪದಿಗಳನ್ನು ತರಗತಿಯಲ್ಲಿ ಹಾಡುವುದು.<br>• ತ್ರಿಪದಿಗಳ ಆಶಯವನ್ನು ಅಧ್ಯಾಪಕರ ನೆರವಿನಿಂದ ತಿಳಿದುಕೊಳ್ಳುವುದು. ಪ್ರತಿಪದ್ಯಗಳ ಆಶಯವನ್ನು ಬರೆದು ತರಗತಿಯಲ್ಲಿ ಮಂಡಿಸುವುದು–ಪರಸ್ಪರ ಮೌಲ್ಯಮಾಪನ | • ತ್ರಿಪದಿಗಳನ್ನು ರಾಗಪೂರ್ಣವಾಗಿ ಹಾಡುವ ಸಾಮರ್ಥ್ಯ<br>• ಚರ್ಚೆ ಸಂವಾದಗಳಲ್ಲಿ ಭಾಗವಹಿಸುವ ಸಾಮರ್ಥ್ಯ<br>• ತ್ರಿಪದಿಗಳ ಆಶಯವನ್ನೊಳಗೊಂಡ ಟಿಪ್ಪಣಿ. |
| | • ತ್ರಿಪದಿಗಳಲ್ಲಿ ಬಂದಿರುವ ವಿಶೇಷ ಪ್ರಯೋಗಗಳನ್ನು ಗುರುತಿಸುವುದು. ಅಭಿಪ್ರಾಯಗಳನ್ನು ಮಂಡಿಸುವುದು.<br>• ತ್ರಿಪದಿಗಳಲ್ಲಿ ಬಂದಿರುವ ಗಾದೆಗಳು, ನಾಣ್ನುಡಿಗಳ ಆಶಯವನ್ನು ಕಂಡುಕೊಳ್ಳುವುದು. ಆಶಯವನ್ನು ವಿಸ್ತರಿಸಿ ಹೇಳುವುದು. ತ್ರಿಪದಿಗಳಲ್ಲಿ ಅವುಗಳ ಬಳಕೆಯ ಔಚಿತ್ಯದ ಕುರಿತು ಪರಾಮರ್ಶಿಸುವುದು.<br>• ಸರ್ವಜ್ಞನ ತ್ರಿಪದಿಗಳ ವಿಶೇಷತೆಗಳನ್ನು ಗುಂಪು ಚರ್ಚೆಯ ಮೂಲಕ ಕಂಡುಕೊಳ್ಳುವುದು. ವಿಚಾರ ಗೋಷ್ಠಿಯಲ್ಲಿ ಮಂಡಿಸಲು ಅನುಕೂಲವಾಗುವಂತೆ ಸರ್ವಜ್ಞನ ತ್ರಿಪದಿಗಳ ಮಹತ್ವದ ಕುರಿತಾಗಿ ಲೇಖನವೊಂದನ್ನು ಸಿದ್ಧಪಡಿಸುವುದು. | • ಗಾದೆಮಾತುಗಳ ನಾಣ್ನುಡಿಗಳ ಆಶಯವನ್ನು ವಿಸ್ತರಿಸಿ ಬರೆದ ಟಿಪ್ಪಣಿ.<br>• ಔಚಿತ್ಯವನ್ನು ಪರಾಮರ್ಶಿಸಿ ಬರೆದ ಲೇಖನ |

| ಪರಿಕಲ್ಪನೆ | ಪ್ರಕ್ರಿಯೆ / ಚಟುವಟಿಕೆ/ಮೌಲ್ಯಮಾಪನ | ಕಲಿಕಾ ಸಾಧನೆಗಳು |
|---|---|---|
| | • ವಿಚಾರಗೋಷ್ಠಿಯಲ್ಲಿ ಮಂಡನೆ, ಅಧ್ಯಾಪಕರ ಮೌಲ್ಯಮಾಪನ.<br>• ಪದಗಳ ವ್ಯುತ್ಪತ್ತಿಯ ಕುರಿತಾದ ಚಿಂತನೆ, ಅಧ್ಯಾಪಕರ ನೆರವಿನಿಂದ ಪದಗಳ ಮೂಲರಚನೆಗಳನ್ನು ಕಂಡುಕೊಳ್ಳುವುದು. ಸಂಸ್ಕೃತ–ಪದ್ಧತಿಗಳನ್ನು ಗುರುತಿಸುವುದು. | • ಸರ್ವಜ್ಞನ ತ್ರಿಪದಿಗಳ ಮಹತ್ವವನ್ನು ತಿಳಿಯಪಡಿಸುವ ಲೇಖನ<br>• ಭಾಷಾ ಕೌಶಲಗಳು |
| • ಕಲೋಪಾಸನೆಯ ಮೂಲಕ ಬದುಕಿನ ಉನ್ನತ ಆದರ್ಶವನ್ನು ಎತ್ತಿಹಿಡಿದ ಕಲಾವಿದರ ಬದುಕಿನ ಚಿತ್ರಣವನ್ನೊಳಗೊಂಡ ಅನೇಕ ಕೃತಿಗಳು ಕನ್ನಡ ಸಾಹಿತ್ಯದಲ್ಲಿ ಬಂದಿವೆ. | • ಮಾಸ್ತಿಯವರ 'ಸುಬ್ಬಣ್ಣ' ಕಿರುಕಾದಂಬರಿಯ ಕುರಿತಾದ ಕಿರುಪರಿಚಯವನ್ನು ನೀಡುವುದು. ಕಲಾವಿದನ ಬದುಕಿನ ಚಿತ್ರಣದೊಂದಿಗೆ ಜೀವನ ಸಂಸ್ಕೃತಿಯ ದರ್ಶನವೂ 'ಸುಬ್ಬಣ್ಣ' ಕಾದಂಬರಿಯಲ್ಲಿದೆ ಎಂಬ ತೀರ್ಮಾನಕ್ಕೆ ಬರುವುದು.<br>• 'ಸುಬ್ಬಣ್ಣ' ಪಾಠಭಾಗದ ಓದು, ತೊರೆಯ ದಡಕ್ಕೆ ಸುಬ್ಬಣ್ಣನ ಆಗಮನ, ಸುಬ್ಬಣ್ಣನ ಜಂಗಮ ಬಾಳ್ವೆ, ಪಿಟೀಲು ವಾದನ, ವೆಂಕಟರಮಣನ ವಿನಯ, ವಿಧೇಯತೆ ಮೊದಲಾದ ಪ್ರಧಾನ ಘಟನೆಗಳನ್ನು ಗುರುತಿಸುವುದು.<br>• ಪಾಠಭಾಗದಲ್ಲಿ ಬಂದಿರುವ ಸನ್ನಿವೇಶಗಳಲ್ಲಿ ವ್ಯಕ್ತವಾಗುವ ಭಾವ ಮೊದಲಾದವುಗಳನ್ನು ತಿಳಿಯುವುದು. ಅಭಿಪ್ರಾಯ ಪ್ರಕಟನೆ.<br>• 'ಸುಬ್ಬಣ್ಣ' ಪಾತ್ರದ ವಿಶೇಷತೆಗಳನ್ನು ಕಂಡುಕೊಳ್ಳುವುದು–ಓರ್ವಕಲಾವಿದನಾಗಿ ಸುಬ್ಬಣ್ಣ ತನ್ನ ಬದುಕನ್ನು ಸಾರ್ಥಕ ಪಡಿಸಿಕೊಂಡ ಬಗೆ– ಆರಂಭದಲ್ಲಿ ವ್ಯಕ್ತವಾಗುವ ಸುಬ್ಬಣ್ಣನ ಒರಟುತನ, ಕಥೆಯ ಕೊನೆಯಲ್ಲಿ ಸುಬ್ಬಣ್ಣನಲ್ಲಿ ಕಾಣುವ ವಿನಯ, ಭಕ್ತಿ, ಜೀವನಪ್ರೀತಿ ಇತ್ಯಾದಿಗಳ ಕುರಿತಾಗಿ ಗುಂಪಲ್ಲಿ ಚರ್ಚಿಸುವುದು–ಪಾತ್ರಚಿತ್ರಣ ಮಾಡುವುದು.ತರಗತಿಯಲ್ಲಿ ಮಂಡನೆ– ಮೌಲ್ಯಮಾಪನ. | • ತಪ್ಪಿಲ್ಲದೆ ಓದುವ, ಗದ್ಯಭಾಗದ ಆಶಯವನ್ನು ಗ್ರಹಿಸುವ ಸಾಮರ್ಥ್ಯ<br>• ಆಶಯ ಬರವಣಿಗೆ<br>• ಪಾತ್ರದ ವಿಶೇಷತೆಗಳನ್ನು ವಿವೇಚಿಸಿಕೊಂಡು ಬರೆದ ಪಾತ್ರಚಿತ್ರಣ. |

# ಜಾಲಿಯ ಮರದಂತೆ

ಕನ್ನಡ ನಾಡಿನಲ್ಲಿ ಹಳ್ಳಿಗಳಲ್ಲಿ ದಿನ ಬೆಳಗಾದರೆ 'ದೇವರ ನಾಮ'ಗಳನ್ನು ಹಾಡಿಕೊಳ್ಳುತ್ತಾ ಬೀದಿ ಬೀದಿಗಳಲ್ಲಿ ಸುಳಿದಾಡುವ ವಿಶಿಷ್ಟ ಉಡುಪು ಅಲಂಕಾರಗಳ ದಾಸಯ್ಯನವರು ಕೆಲವೊಮ್ಮೆ ಕಾಣಿಸಿಕೊಳ್ಳುತ್ತಾರೆ. ಬೀದಿಗಳಲ್ಲಿ ಓಡಾಡುವಾಗ ಆಯಾಚಿತವಾಗಿ ಅವರ ಹಾಡಿನ ಒಂದೆರಡು ಚರಣಗಳು ನಮ್ಮ ಕಿವಿಗೆ ಬೀಳುತ್ತವೆ. ಹೂವ ತರುವರು ಮನೆಗೆ..., ಜಾಲಿಯ ಮರದಂತೆ..., ಭಾಗ್ಯಾದ ಲಕ್ಷ್ಮಿ ಬಾರಮ್ಮ... ಹೀಗೆ ಯಾವುದೇ ದೇವರ ನಾಮದ ಪಲ್ಲವಿ. ಕೊನೆಯಲ್ಲಿ ಪುರಂದರ ದಾಸ, ವಿಠಲ ಎಂದೋ, ಕಾಗಿನೆಲೆ ಆದಿಕೇಶವ ಎಂಬ ಅಂಕಿತದೊಂದಿಗೆ ಕೊನೆಯಾಗುತ್ತದೆ. 'ದೇವರ ನಾಮ' ಎಂದು ಪ್ರಸಿದ್ಧವಾಗಿ ಕನ್ನಡ ನಾಲೆಯ ಮೇಲೆ ನಲಿದಾಡಿದ ಈ ರೀತಿಯ ಹಾಡುಗಳನ್ನು 'ಕೀರ್ತನೆಗಳು' ಎಂದು ಕರೆಯುತ್ತಾರೆ.

'ಕೀರ್ತಿ', 'ಕೀರ್ತಿಸು' ಪದಗಳಿಂದ 'ಕೀರ್ತನೆ' ಹುಟ್ಟಿಕೊಂಡಿದೆ. 'ಕೀರ್ತನೆ'ಪದಕ್ಕೆ ಸ್ತುತಿ ಎಂದೂ ಸ್ತೋತ್ರವೆಂದೂ ಅರ್ಥವಿದೆ. 'ಕೀರ್ತಿಸು' ಎಂದರೆ ಸ್ತುತಿಸು, ಹೊಗಳು, ವರ್ಣಿಸು ಎಂದರ್ಥವಾಗುತ್ತದೆ. ಇದು ಒಂದು ರೀತಿಯ ತನ್ಮಯತೆಯ ಫಲ. ಇದು ಭಗವಂತನನ್ನು ಕುರಿತ ಭಕ್ತನ ತನ್ಮಯತೆ. 'ಹಾಡಿ ಹೊಗಳು'ಎಂಬ ನುಡಿಗಟ್ಟೊಂದು ಕನ್ನಡದಲ್ಲಿದೆ. ಕೀರ್ತನೆ ಈ ಬಗೆಯ ಹಾಡಿ ಹೊಗಳುವ ವಿಧಾನ. ಕೀರ್ತನೆಗಾರರು ತಮ್ಮ ಇಷ್ಟದೈವವನ್ನು ನಾನಾ ರೀತಿಗಳಿಂದ ಅರ್ಚಿಸುತ್ತಾ ತಮ್ಮ ದಾರಿಯನ್ನು ಕಂಡುಕೊಳ್ಳುವುದರೊಂದಿಗೆ ಸಮಾಜದಲ್ಲೂ ಒಂದು ಹಾದಿಯನ್ನು ಸಿದ್ಧಪಡಿಸಿದರು. ಲೌಕಿಕ ಭೋಗದಲ್ಲಿ ಮುಳುಗಿರುವ ಮನಸ್ಸನ್ನು ಭಗವಂತನ ಕಡೆಗೆ ತಿರುಗಿಸಿ ಶಾಶ್ವತವಾದ ಸುಖದ ಕಡೆಗೆ ಜನಸಾಮಾನ್ಯರನ್ನು ಒಯ್ಯುವುದು, "ಈಸಬೇಕು ಇದ್ದು ಜಯಿಸಬೇಕು"ಎಂಬ ಸಿದ್ಧಾಂತವನ್ನು ಪ್ರತಿಪಾದಿಸಲು ಶ್ರಮಿಸುವುದು–ಇವು ಹಾಡುಗಾರರ ಗುರಿಯಾಗಿತ್ತು.

ಮಧ್ವಮತಾನುಯಾಯಿಗಳಾದ ಈ ಭಾಗವತ ಸಂಪ್ರದಾಯದ ಹರಿದಾಸರಲ್ಲಿ ತುಂಬ ಪ್ರಸಿದ್ಧರಾದ ಮೂವರು ಕೀರ್ತನಕಾರರು ಪುರಂದರದಾಸ, ಕನಕದಾಸ ಮತ್ತು ಜಗನ್ನಾಥದಾಸರು. ಕೀರ್ತನ ಸಾಹಿತ್ಯದ ಉನ್ನತಿಗೆ ಕಾರಣರಾದ ಇನ್ನುಳಿದ ವ್ಯಕ್ತಿಗಳಾದ ಶ್ರೀಪಾದರಾಯರು, ವ್ಯಾಸರಾಯರು, ವಾದಿರಾಜರು, ವಿಜಯದಾಸರು, ಗೋಪಾಲದಾಸರು, ಮೋಹನದಾಸರಂಥ ಕೀರ್ತನಕಾರನ್ನು ಅಲಕ್ಷಿಸುವಂತಿಲ್ಲ. ನರಹರಿ ತೀರ್ಥರು ಕೀರ್ತನೆಗಳನ್ನು ಬರೆದ ಆದ್ಯ ಹರಿದಾಸರಾದರೂ, ಕೀರ್ತನ ಸಾಹಿತ್ಯವನ್ನು ಒಂದು ಪರಂಪರೆಯಾಗಿ ಬೆಳೆಸಿದವರು ಶ್ರೀಪಾದರಾಯರು.

ಕೀರ್ತನ ಸಾಹಿತ್ಯದಲ್ಲಿ ಪುರಂದರದಾಸರು ಬಹುದೊಡ್ಡ ಹೆಸರು. ವಚನಕಾರರಲ್ಲಿ ಬವಸಣ್ಣರಿದ್ದಂತೆ, ಹರಿದಾಸರನಲ್ಲಿ ಪುರಂದರದಾಸರು. ಯತಿವರ್ಯರಾದ ವ್ಯಾಸರಾಯರು ಪುರಂದರರ ವ್ಯಕ್ತಿತ್ವಕಕ್ಕೆ ಮಾರು ಹೋಗಿ 'ದಾಸರೆಂದರೆ ಪುರಂದರ ದಾಸರಯ್ಯ' ಎಂದು ಉದ್ಗಾರವೆತ್ತಿದ್ದಾರೆ. ಪುರಂದರ ದಾಸರು ವ್ಯಾಸರಾಯರಿಂದ ದೀಕ್ಷೆಯನ್ನು ಪಡೆದು 'ಪುರಂದರವಿಠಲ' ಎಂಬ ಅಂಕಿತವನ್ನು ಸ್ವೀಕರಿಸಿ ಮಧ್ವಮತಾನುಯಾಯಿಗಳಾದರೂ ವಿಶಾಲವಾದ ಭಾಗವತ ಮನೋಧರ್ಮವನ್ನು ಬೆಳೆಸಿಕೊಂಡರು.

ಪ್ರಸ್ತುತ ಪುರಂದರದಾಸರ 'ಜಾಲಿಯ ಮರದಂತೆ'ಕೀರ್ತನೆಯಲ್ಲಿ ಸಮಾಜ ವಿಮರ್ಶೆಯು ಸುಂದರವಾಗಿ ಮೂಡಿಬಂದಿದೆ. ಇದರಲ್ಲಿ ದುರ್ಜನರನ್ನು 'ಜಾಲಿಯ ಮರ'ಕ್ಕೆ ಹೋಲಿಸಲಾಗಿದೆ. ಜಾಲಿಯ ಮರವು ಯಾವ ಅರ್ಥದಲ್ಲಿಯೂ ಉಪಯೋಗಕ್ಕೆ ಬಾರದೆ, ಭೂಮಿಯ ಮೇಲೆ ನಿರುಪಯುಕ್ತವಾಗಿ ಬೆಳೆದಂತೆ, ಕೆಟ್ಟ ಗುಣಗಳನ್ನು ಹೊಂದಿರುವ ಸಮಾಜ ಕಂಟಕರಿಂದ ನಮ್ಮ

ಸಮಾಜಕ್ಕೆ ಕೆಟ್ಟದ್ದಲ್ಲದೆ ಒಳಿತಿಲ್ಲ. ದುರ್ಜನರ ಜೀವನ ವಿಧಾನವು ನಿಕೃಷ್ಟವಾದುದು. ಷಡ್ರಸಾನ್ನವನ್ನಿಕ್ಕಿದರೂ 'ನಾರುವ ದುರ್ಗಂಧವನ್ನು ಬಿಟ್ಟು ಹೊರ ಬರಲಾರದ ಹಂದಿಯಂತಹ' ಸ್ಥಿತಿಯವರು ಎಂದು ಅಂಥವರನ್ನು ವಿಡಂಬಿಸಲಾಗಿದೆ.

– ಪುರಂದರದಾಸರು

**ವಿಶದೀಕರಣ**

## ಸುಳಾದಿ

'ಸುಳಾದಿ' ಹರಿದಾಸರು ಕನ್ನಡ ಸಾಹಿತ್ಯಕ್ಕೆ ನೀಡಿದ ವಿಶಿಷ್ಟವಾದ ಕೊಡುಗೆ ಇದು ತಾಳ ಪ್ರಧಾನವಾಗಿದ್ದು, ವಾದ್ಯನರ್ತನಗಳಿಗೆ ಸರಿಯಾಗಿ ಸಮನ್ವಯಗೊಳ್ಳುತ್ತದೆ. ಇದಕ್ಕೆ 'ಸೂಡಾಲಿ' ಎಂದೂ ಹೆಸರಿದೆ. ಧ್ರುವ, ಮಠ್ಯ, ರೂಪಕ, ಝಂಪಕ, ತ್ರಿವುಡೆ, ಅಡ್ಡ ಮತ್ತು ಏಕ ಇಂತಹ ಸಪ್ತತಾಳ ಕ್ರಮವನ್ನು ಸುಳಾದಿಯಲ್ಲಿ ಕಾಣಬಹುದು. ಕ್ರಿ.ಶ.12ನೆಯ ಶತಮಾನದಲ್ಲಿಯೇ ಈ ಏಳೂ ತಾಳಗಳನ್ನು ಬೇರೆ ಬೇರೆಯಾಗಿ ಹಾಡುತ್ತಿದ್ದರು. ಕ್ರಿ.ಶ.15–16ನೆಯ ಶತಮಾನದಲ್ಲಿ ಈ ಸಪ್ತತಾಳಗಳನ್ನು ಕೂಡಿಸಿ ಒಂದೇ ರೂಪದಲ್ಲಿ ಜೋಡಿಸಿ 'ಸುಳಾದಿ'ಯೆಂದು ಕರೆಯಲಾಯಿತು. ಹೀಗಾಗಿ ಸುಳಾದಿ ಹದಿನೈದನೆಯ ಶತಮಾನದಲ್ಲಿ ಬಂದ ಕೀರ್ತನಕಾರರ ಸ್ವತಂತ್ರ ಕೊಡುಗೆಯಾಗಿದೆ.

**ಉಗಾಭೋಗ**

ಕೀರ್ತನೆ–ತಾಳ ರಾಗ ಪ್ರಧಾನವಾಗಿದ್ದರೆ, ಸುಳಾದಿ – ತಾಳ ಪ್ರಧಾನ. ಆದರೆ ಉಗಾಭೋಗ ಮಾತ್ರ ರಾಗ ಪ್ರಧಾನ. ಇದು ತಾಳ ರಹಿತ ಸಂಗೀತ ರಚನೆಯಾಗಿದೆ. ಇದರಲ್ಲಿ ಪಾದಗಳ ನಿರ್ದಿಷ್ಟತೆ ಇಲ್ಲ. ಇಂತಿಷ್ಟೇ ನುಡಿಗಳಿರಬೇಕೆಂಬ ಕಟ್ಟುಪಾಡಿಲ್ಲ ಇದು ಶ್ಲೋಕದ ಮಾದರಿಯಂತಿರುತ್ತದೆ. ಒಂದೊಂದು ಉಗಾಭೋಗವೂ ಒಂದೊಂದು ಮುಕ್ತಕದಂತೆ ಕಾಣುತ್ತದೆ. ಅನುಭವಕ್ಕೆ ಬಂದ ವಿಷಯಗಳನ್ನು ಸಂಕ್ಷೇಪವಾಗಿ ಮಾತಿನ ರೂಪದಲ್ಲಿ ಹೇಳಿರುವುದೇ ಉಗಾಭೋಗ ಎಂದು ವಿದ್ವಾಂಸರು ಅಭಿಪ್ರಾಯ ಪಟ್ಟಿದ್ದಾರೆ.

(ಹೆಚ್ಚಿನ ಮಾಹಿತಿಗೆ: ಶರಣರ–ದಾಸರ ಸಾಹಿತ್ಯ ರೂಪಗಳು–ಡಾ.ಬಸವರಾಜ ಸಬರದ)

**ಪ್ರವೇಶ ಚಟುವಟಿಕೆ**

ಕೀರ್ತನೆಗಳನ್ನು ವಿದ್ಯಾರ್ಥಿಗಳು ಈಗಾಗಲೇ ತಿಳಿದಿರುತ್ತಾರೆ. ಅವರಿಗೆ ನೆನಪಿರುವ ಕೀರ್ತನೆಗಳನ್ನು ಹಾಡಲು ಸೂಚಿಸುವುದು. ಅವುಗಳನ್ನು ರಚಿಸಿದವರ ಹೆಸರುಗಳನ್ನು ವಿದ್ಯಾರ್ಥಿಗಳು ಹೇಳಲಿ. ಬಳಿಕ ಪುರಂದರದಾಸರ ಕುರಿತು ಅವರಿಗೆ ತಿಳಿದಿರುವ ವಿಷಯಗಳನ್ನು ಹೇಳಲು ಸೂಚಿಸುವುದು. ತಿಳಿದವರು ಹೇಳಲಿ. ಅನಂತರ ಅಧ್ಯಾಪಕರು ಪುರಂದರದಾಸರ ಸಂಕ್ಷಿಪ್ತ ಪರಿಚಯವನ್ನು ಹೇಳುವುದು. ಪಠ್ಯದಲ್ಲಿ ಬಂದಿರುವ 'ಜಾಲಿಯ ಮರದಂತೆ'ಕೀರ್ತನೆಯನ್ನು ವಿದ್ಯಾರ್ಥಿಗಳಿಂದ ಮೌನವಾಗಿ ಓದಿಸುವುದು. ಅನಂತರ ಕೀರ್ತನೆಯನ್ನು ವಿದ್ಯಾರ್ಥಿಗಳಿಂದ ಹಾಡಿಸುವುದು. ಹಾಡುವಾಗ ಉಚ್ಚಾರ ತಪ್ಪು, ಸ್ವರಭಾರದ ವ್ಯತ್ಯಾಸಗಳು ಕಂಡು ಬಂದಲ್ಲಿ ಅಧ್ಯಾಪಕರು ತಿದ್ದುವುದು. ಬಳಿಕ ಹಾಡುವ ರೀತಿಯನ್ನು ತಿಳಿದುಕೊಳ್ಳಲು ಅಡಕ ಮುದ್ರಿಕೆಯ

ಮೂಲಕ ಕೀರ್ತನೆಯನ್ನು ಕೇಳಿಸುವುದು. ಹಾಡನ್ನು ಕೇಳಿದ ವಿದ್ಯಾರ್ಥಿಗಳಿಗೆ ಅದೇ ರೀತಿ ಹಾಡಲು ಮನಸ್ಸಾದರೆ ಪುನಃ ಹಾಡಿಸುವುದು.

### ಪದ ವಿಂಗಡನೆ

ಆಶಯ ಸ್ಪಷ್ಟತೆಗಾಗಿ ಪದ್ಯದಲ್ಲಿರುವ ಕೆಲವು ಪದಗಳನ್ನು ವಿಂಗಡಿಸಿ ಬರೆಯುವಂತೆ ಸೂಚಿಸುವುದು.

ಷಡ್ರಸಾನ್ನವನಿಕ್ಕಲು – ಷಟ್ + ರಸ + ಅನ್ನವನು + ಇಕ್ಕಲು

ಸುಜನನಾಗುವನೆ – ಸುಜನನು + ಆಗುವನೆ

### ಪ್ರಾಸ

ವಿದ್ಯಾರ್ಥಿಗಳು ಪ್ರಾಸದ ಕುರಿತು ತಿಳಿದಿರುವರೆ ಎಂದು ತಿಳಿಯಲು ಪ್ರಶ್ನೆಗಳನ್ನು ಕೇಳುವುದು. ತಿಳಿದಿರುವವರು ಹೇಳಲಿ. ಬಳಿಕ ಅಧ್ಯಾಪಕರು ಪ್ರಾಸದ ವಿಚಾರವನ್ನು ಪ್ರಸ್ತಾಪಿಸುವುದು. ಕೀರ್ತನೆಯಲ್ಲಿ ಬಂದಿರುವ ಆದಿ ಪ್ರಾಸ ಮತ್ತು ಅಂತ್ಯಪ್ರಾಸದ ಪದಗಳನ್ನು ಗುರುತಿಸಿ ಬಾಯ್ದೆರೆಯಾಗಿ ಹೇಳಿಸುವುದು. ಬಳಿಕ ಪುಸ್ತಕದಲ್ಲಿ ಬರೆಯಲಿ.

### ಆಶಯ ಬರೆಸುವುದು

ವಿದ್ಯಾರ್ಥಿಗಳನ್ನು ಗುಂಪುಗಳನ್ನಾಗಿ ಮಾಡುವುದು. ಪ್ರತಿ ಗುಂಪಿನವರು ಚರ್ಚಿಸಿ ಕೀರ್ತನೆಯ ಆಶಯ ಬರೆಯಲಿ. ಬರೆದ ಆಶಯವನ್ನು ಪ್ರತಿ ಗುಂಪಿನಿಂದಲೂ ಒಬ್ಬೊಬ್ಬರಾಗಿ ಓದಿಸುವುದು. ಉಳಿದ ಗುಂಪಿನವರು ಅದನ್ನು ಆಲಿಸಿ ತಂತಮ್ಮ ಅಭಿಪ್ರಾಯಗಳನ್ನು ಸೂಚಿಸಲಿ. ಅಗತ್ಯವಿದ್ದಲ್ಲಿ ತಿದ್ದುಪಡಿ ಮಾಡಲಿ. ಅಧ್ಯಾಪಕರ ಸೂಕ್ತ ಮಾರ್ಗದರ್ಶನದೊಂದಿಗೆ ಕೀರ್ತನೆಯ ಆಶಯದ ಕ್ರೋಡೀಕರಣ ನಡೆಯಲಿ. ಬಳಿಕ ಎಲ್ಲ ವಿದ್ಯಾರ್ಥಿಗಳೂ ಆಶಯವನ್ನು ಪುಸ್ತಕದಲ್ಲಿ ಬರೆಯುವಂತೆ ಅಧ್ಯಾಪಕರು ಸೂಚಿಸುವುದು.

### ಆಶಯ

ಸಮಾಜ ವಿಮರ್ಶೆಯ ಪುರಂದರದಾಸರ ರಚನೆಗಳಲ್ಲಿ ತಂಬ ಪ್ರಸಿದ್ಧವಾದ ಕೀರ್ತನೆಯಿದು. ಪುರಂದರದಾಸರು ದುರ್ಜನರನ್ನು 'ಜಾಲಿಯ ಮರದಂತೆ' ಎಂದು ಟೀಕೆ ಮಾಡಿದ್ದಾರೆ. ಜಾಲಿಯ ಮರವು ಬುಡದಿಂದ ತುದಿಯ ವರೆಗೂ ಮುಳ್ಳನ್ನು ತುಂಬಿಕೊಂಡಿರುತ್ತದೆ. ಇದೇ ರೀತಿ ದುರ್ಜನರು ಕೂಡಾ ಅಡಿಯಿಂದ ಮುಡಿಯವರೆಗೂ ಕೆಟ್ಟ ವಿಚಾರಗಳನ್ನೇ ತುಂಬಿಕೊಂಡಿರುತ್ತಾರೆ. ಜಾಲಿಮರ ಹೇಗೆ ನಿರುಪಯುಕ್ತವೋ ಹಾಗೆಯೇ ದುರ್ಜನರೂ ಸಮಾಜಕ್ಕೆ ನಿಷ್ಪ್ರಯೋಜಕರು. ಜಾಲಿ ಮರ ಮತ್ತು ದುರ್ಜನರು ಭೂಮಿಯ ಮೇಲಿರುವುದು. ವ್ಯರ್ಥ ಎಂಬುದು ಪುರಂದರದಾಸರ ಅಭಿಪ್ರಾಯವಾಗಿದೆ.

ಕೀರ್ತನೆಯ ಮುಂದಿನ ಭಾಗದಲ್ಲಿ ಕವಿಯು ಜಾಲಿಯ ಮರದ ಸ್ವರೂಪವನ್ನು ವಿವರಿಸಿ, ಅದರ ನಿರರ್ಥಕತೆಯನ್ನು ನಿರೂಪಿಸಿದ್ದಾರೆ. ಬಿಸಿಲಲ್ಲಿ ಬಳಲಿ ಬಂದವರಿಗೆ ಜಾಲಿಯ ಮರ ನೆರಳನ್ನು ಒದಗಿಸುವುದಿಲ್ಲ. ಹಸಿವು ಎಂದು ಬಂದವರಿಗೆ ಜಾಲಿಯ ಮರ ಹಣ್ಣನ್ನು ನೀಡಿ ಸಲಹುವುದಿಲ್ಲ. ಅದು ಹೂ ಬಿಟ್ಟು ಸುವಾಸನೆಯನ್ನು ಪಸರಿಸಿ ತನ್ನ ಸುತ್ತಲ ವಾತಾವರಣವನ್ನು

ಆಹ್ಲಾದಮಯವಾಗಿಸುವುದೂ ಇಲ್ಲ. ಜಾಲಿಯ ಮರದ ಕೆಳಗೆ ನೆರಳು ಇಲ್ಲದಿರುವುದರಿಂದ ಅದು ಯಾರಿಗೂ ಬಿಸಿಲಿನ ಬೇಗೆಯನ್ನು ಕಳೆಯಲು ಉಪಯುಕ್ತವಲ್ಲ. ಜಾಲಿಯ ಮರದ ರಸವಾದರೋ ವಿಷದಂತೆ ಕಹಿಯಾಗಿದ್ದು ಅದನ್ನು ಆಸ್ವಾದಿಸಲು ಸಾಧ್ಯವಿಲ್ಲ. ಹೀಗೆ ಜಾಲಿಯ ಮರವು ಯಾವ ಅರ್ಥದಲ್ಲಿಯೂ ಉಪಯೋಗಕ್ಕೆ ಬಾರದೆ, ಭೂಮಿಯ ಮೇಲೆ ನಿರುಪಯುಕ್ತವಾಗಿ ಬೆಳೆದಿರುತ್ತದೆ ಎಂದು ಪುರಂದರದಾಸರು ನಿರೂಪಿಸಿದ್ದಾರೆ.

ಕೆಟ್ಟಗುಣಗಳನ್ನು ಹೊಂದಿರುವ ಸಮಾಜ ಕಂಟಕರನ್ನು ಏನು ಮಾಡಿದರೂ ಅವರನ್ನು ಬದಲಾಯಿಸಲು ಸಾಧ್ಯವಿಲ್ಲವೆಂಬುದನ್ನು ಕವಿ ಮುಂದಿನ ಭಾಗದಲ್ಲಿ ವಿವರಿಸಿದ್ದಾರೆ. ಊರ ಹಂದಿಯು ಸದಾ ಕೆಸರು ಗಲೀಜುಗಳಲ್ಲಿ ವಾಸಿಸುತ್ತಿದ್ದು ದುರ್ನಾತ ಬೀರುತ್ತಿರುತ್ತದೆ. ಅದಕ್ಕೆ ಷಡ್ರಸಾನ್ನವನ್ನಿಕ್ಕಿದ ಮಾತ್ರಕ್ಕೆ ಅದು ದುರ್ಗಂಧ ಬೀರುವ ತನ್ನ ಪರಿಸರವನ್ನು ಬಿಟ್ಟು ಇತ್ತ ಬರಲಾರದು. ಇದೇ ರೀತಿಯಲ್ಲಿ ಘೋರಪಾಪಿಯಾದವನಿಗೆ ತತ್ವ ಜ್ಞಾನವನ್ನು ಹೇಳಿದರೆ ಆತ ತಾನು ಮಾಡುತ್ತಿರುವ ಕ್ರೂರವಾದ ಕೆಲಸವನ್ನು ಬಿಟ್ಟು ಒಳ್ಳೆಯವನಾಗಿ ಬಾಳುವುದಿಲ್ಲ. ಮೂಲಗುಣಗಳನ್ನು ಉಪದೇಶದ ಮಾತುಗಳಿಂದ ಬದಲಾಯಿಸುವುದು ತುಂಬಾ ಕಷ್ಟ ಎಂಬುದು ಪುರಂದರದಾಸರ ಅಭಿಮತವಾಗಿದೆ.

ಜಾಲಿಯ ಮರದಂತೆ ನಿರುಪಯುಕ್ತವಾಗಿ ಬದುಕುವ ದುರ್ಜನರಿಂದ ಸಮಾಜಕ್ಕೆ ಸ್ವಲ್ಪವೂ ಉಪಯೋಗವಿಲ್ಲ. ಆದರೂ ದುರ್ಜನರು ತಮ್ಮನ್ನು ತಾವೇ ಹೊಗಳಿಕೊಳ್ಳುವ ಬಿನ್ನಾಣದ ಮಾತುಗಳನ್ನು ಧಾರಾಳವಾಗಿ ಆಡುತ್ತಾರೆ. ದುರ್ಜನರು ಸಮಾಜಕ್ಕೆ ಹೊರೆ. ಅನ್ನ ತಿನ್ನಲು ಬೇಕಾಗಿಯೇ ಬಂದು ಸೇರಿ, ಯಾವುದೇ ಪ್ರಯೋಜನವಿಲ್ಲದ ನಾಯಿಗಳಂತೆ ದುರ್ಜನರನ್ನು ತನ್ನ ಮುಳ್ಳುಗಳಿಂದ ಜನರನ್ನು ನೋಯಿಸುವ ಜಾಲಿಯ ಮರದೊಂದಿಗೆ ಹೋಲಿಸಿರುವುದು ಔಚಿತ್ಯಪೂರ್ಣವಾಗಿದೆ.

## ಸಂಕ್ಷಿಪ್ತವಾಗಿ ಉತ್ತರಿಸುವುದು

'ಜಾಲಿಯ ಮರದಂತೆ' ಪದ್ಯದ ಆಶಯವನ್ನು ಎಲ್ಲ ವಿದ್ಯಾರ್ಥಿಗಳೂ ಬರೆದ ನಂತರ ಪಠ್ಯಭಾಗದಲ್ಲಿ ನೀಡಿರುವ ಸಂಕ್ಷಿಪ್ತ ಉತ್ತರದ ಪ್ರಶ್ನೆಗಳಿಗೆ ಉತ್ತರಿಸುವಂತೆ ಅವರಿಗೆ ಸೂಚಿಸುವುದು. ಪ್ರತಿ ಪ್ರಶ್ನೆಯ ಉತ್ತರವನ್ನು ಬಾಯ್ದೆರೆಯಾಗಿ ಹೇಳಿಸುವುದು. ಅನಂತರ ಬರೆಯಲಿ.

## ಮಾದರಿ ಉತ್ತರ

- ಜಾಲಿಯ ಮರದ ನಿರರ್ಥಕತೆಯನ್ನು ಪುರಂದರದಾಸರು ಹೇಗೆ ನಿರೂಪಿಸಿದ್ದಾರೆ?

ಅಡಿಯಿಂದ ಮುಡಿಯವರೆಗೆ ಮುಳ್ಳನ್ನೇ ತುಂಬಿಕೊಂಡಿರುವ ಜಾಲಿಯ ಮರವು ಬಿಸಿಲಲ್ಲಿ ಬಳಲಿದವರಿಗೆ ನೆರಳನ್ನು ಒದಗಿಸುವುದಿಲ್ಲ. ಹಸಿವು ಎಂದು ಬಂದವರಿಗೆ ಜಾಲಿಯ ಮರ ಹಣ್ಣನ್ನು ನೀಡಿ ಸಲಹುವುದಿಲ್ಲ. ಅದು ಹೂವನ್ನು ಬಿಟ್ಟು ಸುವಾಸನೆಯನ್ನು ಪಸರಿಸಿ ತನ್ನ ಸುತ್ತಲ ವಾತಾವರಣವನ್ನು ಆಹ್ಲಾದಮಯವಾಗಿಸುವುದೂ ಇಲ್ಲ. ಈ ಕಾರಣದಿಂದ ಜಾಲಿಯ ಮರವು ನಿರರ್ಥಕ ಎಂದು ಕವಿ ತಿಳಿಸಿದ್ದಾರೆ.

## ಸ್ವಾರಸ್ಯ ಬರೆಯುವುದು

ಕೀರ್ತನೆಯಲ್ಲಿ ಬಂದಿರುವ ಸ್ವಾರಸ್ಯಪೂರ್ಣವಾದ ಕೆಲವು ಸಾಲುಗಳನ್ನು ವಿದ್ಯಾರ್ಥಿಗಳಿಗೆ ನೀಡಿ ಅದರ ಸ್ವಾರಸ್ಯ ಬರೆಯುವಂತೆ ಸೂಚಿಸುವುದು. ಅಧ್ಯಾಪಕರು ಮಾದರಿಯೊಂದನ್ನು ನೀಡುವುದು. ಅದರಂತೆ ಇನ್ನುಳಿದ ಸಾಲುಗಳ ಸ್ವಾರಸ್ಯವನ್ನು ವಿದ್ಯಾರ್ಥಿಗಳು ಬರೆದು ತರಗತಿಯಲ್ಲಿ ಮಂಡಿಸಲಿ.

ಉದಾ: "ಮೂಲಾಗ್ರ ಪರಿಯಂತ ಮುಳ್ಳು ಕೂಡಿಪ್ಪಂತ"

"ನಾರುವ ದುರ್ಗಂಧ ಬಿಡಬಲ್ಲುದೆ"

"ಅನ್ನಕ್ಕೆ ಸೇರಿದ ಕುನ್ನಿ ಮಾನವರಂತೆ"

## ಮಾದರಿ ಉತ್ತರ

"ನಾರುವ ದುರ್ಗಂಧ ಬಿಡಬಲ್ಲುದೆ"

ಪುರಂದರದಾಸರು ರಚಿಸಿರುವ 'ಜಾಲಿಯ ಮರದಂತೆ' ಎಂಬ ಕೀರ್ತನೆಯಿಂದ ಈ ಮೇಲಿನ ವಾಕ್ಯವನ್ನು ಸ್ವೀಕರಿಸಲಾಗಿದೆ. ದುರ್ಜನರಿಗೆ ಮಾನ್ಯತೆ ನೀಡುವುದು ವ್ಯರ್ಥವೆಂಬುದನ್ನು ವಿವರಿಸುವಲ್ಲಿ ಕವಿಯು ಈ ವಾಕ್ಯವನ್ನು ಹೇಳಿದ್ದಾರೆ.

ಊರಿನ ಹೊಲಸಿನಲ್ಲಿ ಜೀವಿಸುವ ಹಂದಿಯನ್ನು ತಂದು ಅದಕ್ಕೆ ಷಡ್ರಸಾನ್ನ ಭೋಜನ ಮಾಡಿಸಿದ ಮಾತ್ರಕ್ಕೆ ಅದು ತನ್ನ ಮೂಲ ಜಾಗವನ್ನು ಬಿಟ್ಟು ಶುಚಿತ್ವದ ಪ್ರದೇಶಕ್ಕೆ ಬರುವುದಿಲ್ಲ. ಇದರಂತೆ ಸದಾ ದುಷ್ಟ ಕೆಲಸಗಳಲ್ಲಿ ಮುಳುಗಿರುವ ದುರ್ಜನರಿಗೆ ತತ್ವೋಪದೇಶವನ್ನು ಹೇಳಿದರೆ ಅವರ ಸ್ವಭಾವ ಬದಲಾಯಿಸುವುದಿಲ್ಲ. ಆದ್ದರಿಂದ ಕವಿಯು ಹಂದಿ ಮತ್ತು ದುರ್ಜನರು ತಮ್ಮ ಮೂಲ ಸ್ವಭಾವವನ್ನು ಬಿಡುವುದಿಲ್ಲ. ಅವರನ್ನು ಬದಲಾಯಿಸಲು ಪ್ರಯತ್ನಿಸುವುದು ವ್ಯರ್ಥವಾದ ಕೆಲಸವೆಂದಿದ್ದಾರೆ.

## ಟಿಪ್ಪಣಿ

ದುರ್ಜನರು ತಮ್ಮ ಸ್ವಭಾವದಲ್ಲಿ ಬದಲಾವಣೆಯನ್ನು ಇಷ್ಟಪಡುವುದಿಲ್ಲ ಯಾಕೆ? ಎಂಬ ವಿಷಯದ ಕುರಿತು ತರಗತಿಯಲ್ಲಿ ಚರ್ಚಿಸಲು ವಿದ್ಯಾರ್ಥಿಗಳಿಗೆ ಅವಕಾಶ ನೀಡುವುದು. ಅದರ ಆಧಾರದಲ್ಲಿ ಬಂದ ಪ್ರಮುಖಾಂಶಗಳನ್ನಿರಿಸಿಕೊಂಡು ಟಿಪ್ಪಣಿ ಬರೆಯಲಿ. ಕೆಲವು ವಿದ್ಯಾರ್ಥಿಗಳು ಮಂಡಿಸಲಿ.

## ಔಚಿತ್ಯ

ಜಾಲಿಯ ಮರದೊಂದಿಗೆ ದುರ್ಜನರನ್ನು ಹೋಲಿಸಿರಿವುದರಿಂದ ಔಚಿತ್ಯದ ಕುರಿತು ಚರ್ಚಿಸಲು ವಿದ್ಯಾರ್ಥಿಗಳಿಗೆ ಅವಕಾಶ ನೀಡುವುದು. ಚರ್ಚೆಯಲ್ಲಿ ಬಂದಿರುವ ಪ್ರಮುಖ ಆಶಯದ ಆಧಾರದಲ್ಲಿ ಔಚಿತ್ಯವನ್ನು ಬರೆಸುವುದು ಕೆಲವು ವಿದ್ಯಾರ್ಥಿಗಳಿಂದ ಮಂಡಿಸಲು ಹೇಳುವುದು.

## ಮಾದರಿ ಉತ್ತರ

'ಜಾಲಿಯ ಮರದಂತೆ ಧರೆಯೊಳು ದುರ್ಜನರು 'ಎಂದು ಪುರಂದರದಾಸರು ದುರ್ಜನರನ್ನು ಜಾಲಿಯ ಮರಕ್ಕೆ ಹೋಲಿಸಿರುವುದು ಅತ್ಯಂತ ಔಚಿತ್ಯಪೂರ್ಣವಾಗಿದೆ. ಏಕೆಂದರೆ ಜಾಲಿಯ ಮರದಿಂದಲೂ, ದುರ್ಜನರಿಂದಲೂ ಯಾವ ಉಪಯೋಗವೂ ಸಮಾಜಕ್ಕಿಲ್ಲ. ಎರಡೂ ನಿರರ್ಥಕವಾದವು. ಜಾಲಿಯ ಮರ ಮೈ ತುಂಬ ಮುಳ್ಳನ್ನು ಹೊಂದಿರುವಂತೆ ದುರ್ಜನರ ಮನದ ತುಂಬಾ ಕೆಟ್ಟ ವಿಚಾರಗಳೇ ತುಂಬಿರುತ್ತವೆ. ಜಾಲಿಯ ಮರ ನೆರಳನ್ನಾಗಲೀ, ಹೂವಿನ ಸುವಾಸನೆಯನ್ನಾಗಲೀ, ಹಣ್ಣನ್ನಾಗಲೀ ಲೋಕಕ್ಕೇ ಒದಗಿಸುವುದಿಲ್ಲ. ದುರ್ಜನರು ಸಮಾಜಕ್ಕೆ ಯಾವುದೇ ರೀತಿಯ ಒಳಿತನ್ನು ಮಾಡದೆ, ತಮ್ಮ ದುಷ್ಟ ಕೆಲಸಗಳಿಂದಾಗಿ ಅಪಾಯವನ್ನುಂಟುಮಾಡುತ್ತ ಹೊರೆಯಾಗಿದ್ದಾರೆ. ಆದ್ದರಿಂದ ದುರ್ಜನರನ್ನು ಜಾಲಿಯ ಮರದೊಂದಿಗೆ ಹೋಲಿಸಿರುವುದು ಸಮರ್ಪಕವಾಗಿದೆ ಎನ್ನಬಹುದು.

## ತುಲನಾತ್ಮಕ ಲೇಖನ

ನೀಡಿರುವ ವಚನವನ್ನು ವಿದ್ಯಾರ್ಥಿಯೊಬ್ಬನಿಂದ ಗಟ್ಟಿಯಾಗಿ ಓದಿಸುವುದು. ಅದರ ಆಶಯವನ್ನು ವಿದ್ಯಾರ್ಥಿಗಳಿಂದ ಬಾಯ್ದೆರೆಯಾಗಿ ಹೇಳಿಸುವುದು. ದುರ್ಜನರ ಬಗ್ಗೆ ಪುರಂದರ ದಾಸರು ಮತ್ತು ಸರ್ವಜ್ಞ ಈ ಇಬ್ಬರು ತಿಳಿಸಿರುವ ಅಭಿಪ್ರಾಯಗಳನ್ನು ಬಾಯ್ದೆರೆಯಾಗಿ ಹೇಳಿಸಿ ಬರೆಸುವುದು. ಟಿಪ್ಪಣಿಯಲ್ಲಿ ಬರಬೇಕಾದ ಪ್ರಮುಖಾಂಶಗಳನ್ನು ಅಧ್ಯಾಪಕರು ತಿಳಿಸುವುದು.

- ಪುರಂದರದಾಸರ ಕೀರ್ತನೆಯಲ್ಲಿ ಮತ್ತು ಸರ್ವಜ್ಞನ ವಚನದಲ್ಲಿ ದುರ್ಜನರ ರೀತಿ ನೀತಿಗಳ ಬಗ್ಗೆ ತಿಳಿಸಲಾಗಿದೆ.
- ಪುರಂದರದಾಸರು ಇಡೀ ಕೀರ್ತನೆಯಲ್ಲಿ ದುರ್ಜನರ ಗುಣ ಸ್ವಭಾವದ ಕುರಿತು ವಿವರಿಸಿದರೆ, ಸರ್ವಜ್ಞನು ಸಾಂದರ್ಭಿಕವಾಗಿ ತಿಳಿದ್ದಾನೆ.
- ಸರ್ವಜ್ಞ, ದುರ್ಜನರ ಗುಣ ಸ್ವಭಾವವನ್ನು ತಿಳಿಸುವಲ್ಲಿ ಸಜ್ಜನರ ಶ್ರೇಷ್ಠ ಗುಣವನ್ನು ವಿವರಿಸಿದರೆ, ಪುರಂದರದಾಸರು ಎಲ್ಲಿಯೂ ಈ ರೀತಿಯ ವಿಚಾರವನ್ನು ತಿಳಿಸಲಿಲ್ಲ.
- ಸರ್ವಜ್ಞ ದುರ್ಜನರ ಸಂಗವನ್ನು ಬಚ್ಚಲಿನ ರೊಚ್ಚಿಗೆ ಹೋಲಿಸಿದರೆ, ಪುರಂದರದಾಸರು ದುರ್ಗಂಧ ಸೂಸುವ ಊರ ಹಂದಿಗೆ ಹೋಲಿಸಿದ್ದಾರೆ.

## ಭಾಷಾಭ್ಯಾಸ

ಮಾದರಿಯಲ್ಲಿ ನೀಡಿರುವ ಪದಗಳನ್ನು ಗಮನಿಸುವಂತೆ ವಿದ್ಯಾರ್ಥಿಗಳಲ್ಲಿ ಹೇಳುವುದು. ಪದಗಳಿಗೆ ಬಾಯ್ದೆರೆಯಾಗಿ ಉತ್ತರ ಹೇಳಿಸುವುದು. ವಿದ್ಯಾರ್ಥಿಗಳು ತಪ್ಪಿದಲ್ಲಿ ಅಧ್ಯಾಪಕರು ಸರಿಪಡಿಸುವುದು.

| | | |
|---|---|---|
| ಆಚಂದ್ರಾರ್ಕ | – | ಚಂದ್ರನೂ ಅರ್ಕನೂ ಇರುವವರೆಗೆ |
| ಆಬಾಲವೃದ್ಧ | – | ಬಾಲಕರಿಂದ ವೃದ್ಧರವರೆಗೆ |
| ಆಪಾದ ಪುಸ್ತಕ | – | ಪಾದದಿಂದ ಪುಸ್ತಕದ ವರೆಗೆ |

## ಗುಣವಾಚಕ ಪದ

ಘೋರಪಾಪಿ, ಕ್ರೂರಕರ್ಮ

ಗುಣವಾಚಕ ಪದಗಳ ಕುರಿತು, ವಿದ್ಯಾರ್ಥಿಗಳು ಈ ಹಿಂದಿನ ತರಗತಿಯಲ್ಲಿ ಕಲಿತಿರುತ್ತಾರೆ. ಮೇಲೆ ತಿಳಿಸಿರುವ ಪದಗಳಲ್ಲಿರುವ ಗುಣವಾಚಕ ಪದಗಳನ್ನು ಗುರುತಿಸುವಂತೆ ಹೇಳುವುದು.

## ಪರ್ಯಾಯ ಪದ

ಪದ್ಯದಲ್ಲಿ ಬಂದಿರುವ ಪರ್ಯಾಯ ಪದಗಳಿರುವ ಪದಗಳನ್ನು ಗುರುತಿಸುವಂತೆ ವಿದ್ಯಾರ್ಥಿಗಳಲ್ಲಿ ಹೇಳುವುದು. ಅವುಗಳನ್ನು ಬಾಯ್ದೆರೆಯಾಗಿ ಹೇಳಲಿ. ಎಲ್ಲ ವಿದ್ಯಾರ್ಥಿಗಳೂ ಬರೆಯಲಿ. ಪದಕೋಶದ ಸಹಾಯದಿಂದ ಉತ್ತರಿಸಿ ಮಂಡಿಸಲಿ.

ಧರೆ – ಭೂಮಿ, ವಸುಧೆ, ಧರಣಿ

ಕುಸುಮ – ಹೂವು, ಪುಷ್ಪ, ಅಲರು

ಕರ್ಮ – ಕೆಲಸ, ಕಾರ್ಯ

ಬಿನ್ನಾಣ – ಬೆಡಗು, ಒಯ್ಯಾರ

ಕುನ್ನಿ – ನಾಯಿ, ಶ್ವಾನ, ಶುನಕ

# ನಡೆವುದೊಂದೇ ಭೂಮಿ

'ಆಡು ಮುಟ್ಟದ ಸೊಪ್ಪಿಲ್ಲ' ಎಂಬ ಮಾತು ನಮ್ಮಲ್ಲಿ ಹಾಸುಹೊಕ್ಕಾಗಿದೆ. ಅಂತೆಯೆ ಸರ್ವಜ್ಞನ ವಚನಗಳು ಪ್ರತಿಯೊಂದು ವಿಚಾರವನ್ನು ಪ್ರತಿಪಾದಿಸುತ್ತಾ ಇಂಥ ಸಾಹಿತ್ಯ ಇನ್ನೊಂದಿಲ್ಲ ಎಂಬಂತೆ ಬೆಳೆದು ಬಂದಿದೆ. ಪ್ರತಿಯೊಂದು ಕ್ಷೇತ್ರದ ವಿಚಾರವನ್ನು ಸರ್ವಜ್ಞ ಕವಿಯು ವಸ್ತುವನ್ನಾಗಿ ಮಾಡಿಕೊಂಡು ಸಾಹಿತ್ಯ ರಚಿಸಿರುತ್ತಾನೆ. "ಮಂಡೆ ಬೋಳಿಸಿ ಕೊಂಡು ತುಂಡುಗಂಬಳಿಯುಟ್ಟು ಅಂಡಲೆದು ಸರ್ವಜ್ಞನಾದೆ" ಎಂದು ತನ್ನ ಕುರಿತಾಗಿ ಹೇಳಿಕೊಂಡ ಸರ್ವಜ್ಞನ ಮಾತುಗಳಲ್ಲಿ ಸಜ್ಜನಿಕೆಯನ್ನೂ ಸರಳತೆಯನ್ನೂ ಕಾಣಬಹುದು.

ಸಮಾಜ, ದೇವರು, ಲೌಕಿಕ ಬದುಕು, ಆತ್ಮಾವಲೋಕನ, ಆತ್ಮವಿಮರ್ಶೆ, ಅನ್ಯ ವಿಮರ್ಶೆ, ಸಾಮಾಜಿಕ ರೀತಿ–ನೀತಿ, ವೃತ್ತಿ, ಉದ್ಯೋಗ, ಕೌಟುಂಬಿಕ ವಿಚಾರಗಳು, ಕೃಷಿ...ಹೀಗೆ ಎಲ್ಲಾ ಕ್ಷೇತ್ರಗಳ ವಿಚಾರಗಳನ್ನು ಮನಮುಟ್ಟುವಂತೆ ಸೂಕ್ತ ಉಪಮೆಗಳ ಮೂಲಕ ಸಾದರ ಪಡಿಸುವ ಸರ್ವಜ್ಞನ ವಚನಗಳು ಅರ್ಥಗರ್ಭಿತವಾಗಿದ್ದು ಸಾರ್ವಕಾಲಿಕ ಸತ್ಯವನ್ನು ಪ್ರತಿಪಾದಿಸುತ್ತವೆ. ಆದ್ದರಿಂದ ಎಲ್ಲ ವಯೋಮಾನದ ಜನರ ಪ್ರೀತಿ ಆದರಗಳಿಗೆ ಅವು ಪಾತ್ರವಾಗಿವೆ.

ತ್ರಿಪದಿಗಳಲ್ಲಿ ಮೂಡಿ ಬಂದ ಸರ್ವಜ್ಞನ ವಚನಗಳು ಜನಪದ ಸಾಹಿತ್ಯದಂತೆ, ಶಿವಶರಣರ ವಚನಗಳಂತೆ, ಶತಕ ಸಾಹಿತ್ಯಗಳಂತೆ ನೀತಿ ಬೋಧಕ ಅಂಶಗಳನ್ನು ಒಳಗೊಂಡಿವೆ. ಅವು ಜೀವಾನುಭವಗಳಿಂದ ತುಂಬಿದ್ದು ಜೀವನ ಮೌಲ್ಯಗಳನ್ನು ಪ್ರತಿಪಾದಿಸುತ್ತವೆ. ಆತ್ಮೀಯ ಮಿತ್ರನಂತೆ ಹಿತ ನುಡಿಯುವ ಸರ್ವಜ್ಞನ ವನಚಗಳು ಅಪ್ಯಾಯಮಾನವಾಗಿದ್ದು ಸ್ವೀಕಾರಯೋಗ್ಯ ವಾಗಿವೆ. ಅವು ಸುಶಿಕ್ಷಿತ ಸಮಾಜ ನಿರ್ಮಾಣಕ್ಕೆ ಮಹತ್ತರವಾದ ಕೊಡುಗೆಯನ್ನು ನೀಡಿವೆ. ಜೀವನಾದರ್ಶದ ಬೆಳಕಾಗಿ ಅವು ಬೆಳೆದು ಬಂದಿವೆ. ಕನ್ನಡಿಗರ ಮನ್ನಣೆಗೆ ಪಾತ್ರವಾಗಿ ನಡೆ ನುಡಿಯಲ್ಲಿ ಹಾಸುಹೊಕ್ಕಾಗಿ – ಜೀವಂತ ಸಾಹಿತ್ಯವೆನಿಸಿವೆ.

## ಪ್ರವೇಶ

ವಿದ್ಯಾರ್ಥಿಗಳು ಸರ್ವಜ್ಞನ ತ್ರಿಪದಿಗಳನ್ನು ಓದುವರು. ಪಠ್ಯದಲ್ಲಿ ನೀಡಲಾದ ಶಬ್ದಾರ್ಥಗಳನ್ನು ಗಮನಿಸಿ ತ್ರಿಪದಿಗಳಲ್ಲಿ ಅರ್ಥವನ್ನು ಮನದಟ್ಟು ಮಾಡಿಕೊಳ್ಳುವರು. ಅಗತ್ಯವೆನಿಸಿದಲ್ಲಿ ವಿದ್ಯಾರ್ಥಿಗಳಿಗೆ ಕ್ಲಿಷ್ಟಕರವಾಗದಂತೆ ಅಧ್ಯಾಪಕರು ಮಾರ್ಗದರ್ಶನ ನೀಡುವುದು.

ವಿದ್ಯಾರ್ಥಿಗಳು ಸರ್ವಜ್ಞನ ತ್ರಿಪದಿಗಳನ್ನು ಮನದಟ್ಟುಮಾಡಿಕೊಂಡರೆಂಬುದನ್ನು ಖಚಿತಪಡಿಸಿಕೊಳ್ಳಲು ಆಶಯ ಗ್ರಹಣ ಪ್ರಶ್ನೆಗಳನ್ನು ಕೇಳುವುದು. ವಿದ್ಯಾರ್ಥಿಗಳು, ಪದ್ಯಗಳ ಆಧಾರದಿಂದ ಉತ್ತರಿಸುವರು. ವಿದ್ಯಾರ್ಥಿಗಳು ನೀಡಿದ ಉತ್ತರಗಳಲ್ಲಿ ಅಗತ್ಯವಾದ ಬದಲಾವಣೆಗಳನ್ನು ಮಾಡಿಕೊಂಡು ಅಧ್ಯಾಪಕರು ಸ್ಪಷ್ಟ ಪಡಿಸುವುದು. ಸರಿಯಾದ ಉತ್ತರಗಳನ್ನು ಸೂಕ್ತ ಕ್ರಮದಲ್ಲಿ ವಿದ್ಯಾರ್ಥಿಗಳು ತಮ್ಮ 'ಲಾಗ್ ಪುಸ್ತಕ'ದಲ್ಲಿ ದಾಖಲಿಸಿಕೊಳ್ಳಲಿ.

ವಿದ್ಯಾರ್ಥಿಗಳಿಗೆ ಸೂಕ್ತ ಉತ್ತರವನ್ನು ಕಂಡುಕೊಳ್ಳಲು ಅಸಾಧ್ಯವಾದಲ್ಲಿ ಅಧ್ಯಾಪಕರು ಪದ್ಯದ ಸಾರಾಂಶವನ್ನು ಒದಗಿಸುವುದು.

## ಪದ್ಯ ಸಾರಾಂಶ

ಕನ್ನಡಿಯು ತನ್ನ ಮುಂದಿರುವ ವ್ಯಕ್ತಿ ಮತ್ತು ವಸ್ತುವಿನ ಪ್ರತಿಬಿಂಬವನ್ನು ಯಥಾವತ್ತಾಗಿ ಹೊರ ಹೊಮ್ಮಿಸುತ್ತದೆ. ಅದೇ ರೀತಿ ಸ್ವಯಂ ಜ್ಞಾನವನ್ನು ಗಳಿಸಿಕೊಂಡ ಮಹಾತ್ಮರು ಶುದ್ಧವಾದ ಕನ್ನಡಿಯಂತಿದ್ದು ಜಗದ ಜನರ ಮುಂದೆ ಸತ್ಯದ ಅರಿವನ್ನು ನೀಡಲು ಸಫಲರಾಗುವರು.

(ನಾವು ಕನ್ನಡಿಯ ಬಳಿಗೆ ಹೋಗಿ ನಿಂತಾಗ ಅದು ನಮ್ಮ ಪ್ರತಿಬಿಂಬವನ್ನು ಹೊರ ಹೊಮ್ಮಿಸುತ್ತದೆ. ಪ್ರತಿಬಿಂಬವನ್ನು ನೋಡುತ್ತಿರುವ ನಾವು ಕನ್ನಡಿಯನ್ನು ಮರೆಯುತ್ತೇವೆ. ಮಹಾತ್ಮರ ಬಳಿಗೆ ಬಂದ ಅಪೇಕ್ಷಿತ ವ್ಯಕ್ತಿಗಳಿಗೆ ಸುಜ್ಞಾನವನ್ನು ನೀಡಿ ಅವರ ಬಾಳೆಂಬ ಕನ್ನಡಿಯನ್ನು ಬೆಳಗುತ್ತಾರೆ. ದಿವ್ಯ ಸಂದೇಶವನ್ನು ನೀಡುತ್ತಾರೆ. ಜ್ಞಾನದ ಕನ್ನಡಿಯೆನಿಸುತ್ತಾರೆ. ನಾವು ಕನ್ನಡಿಯ ಬಳಿಗೆ ಹೋಗಬೇಕೇ ಹೊರತು ಕನ್ನಡಿ ನಮ್ಮ ಬಳಿಗೆ ಬರಲಾರದು. ವಿಶೇಷ ಜ್ಞಾನದ ಅಗತ್ಯವಿರುವವರು ಮಹಾತ್ಮರ ಬಳಿಗೆ ಬಂದಲ್ಲಿ ಮಾತ್ರ ಅವರ ಜ್ಞಾನದ ತಿರುಳು ನಮ್ಮದಾಗಲು ಸಾಧ್ಯ.)

ಮಾತು ಅರ್ಥಗರ್ಭಿತವಾಗಿರಬೇಕು. ಅರ್ಥಹೀನವಾದ ಮಾತುಗಳನ್ನು ಆಡಬಾರದು. ಅಂತಹ ಮಾತುಗಳು ಗುರಿಯನ್ನು ತಾಗದ ಬಾಣಗಳಿಗೆ ಸಮಾನವಾಗಿವೆ. ಆದುದರಿಂದ ಅರ್ಥಹೀನವಾದ ಮಾತುಗಳ ಬದಲು ಅರ್ಥಪೂರ್ಣವಾದ ಮಾತುಗಳನ್ನೇ ಆಡಬೇಕು.

ಎಣ್ಣೆ–ಬತ್ತಿಗಳು ಜೊತೆ ಜೊತೆಯಾಗಿ ಉರಿಯುತ್ತಾ ಬೆಳಕನ್ನು ನೀಡುವ ರೀತಿಯಲ್ಲಿ 'ಸತ್ಯ–ನೀತಿ'ಗಳು ಲೋಕವನ್ನು ಸದಾ ಬೆಳಗುತ್ತವೆ. ಸತ್ಯ–ನೀತಿಗಳು ಬೇರೆ ಬೇರೆಯಾದರೇ ಎಣೆಯಿಲ್ಲದ ಬತ್ತಿ ಆರಿಹೋಗುವಂತೆ ಜಗವು ಕತ್ತಲೆ ಎಂಬ ಅಜ್ಞಾನದಲ್ಲಿ ಮುಳುಗುತ್ತದೆ.

ಪರಸ್ತ್ರೀ ವ್ಯಾಮೋಹಕ್ಕೆ ಒಳಗಾಗದಿರು, ಅಪಮಾನಕ್ಕೆ ಸಿಲುಕದಿರು, ನೆರೆಕರೆಯವರೊಂದಿಗೆ ಜಗಳ ವಾಡದಿರು, ಅತಿಯಾಗಿ ಒಬ್ಬರನ್ನು ಓಲೈಸಲು(ಮೆಚ್ಚಿಸಲು) ಮುಂದಾಗದಿರು.

ಸತ್ಯಕ್ಕೆ ಸರಿಸಮಾನವಾದುದು ಯಾವುದೂ ಇಲ್ಲ. ಸುಳ್ಳಿಗೆ ನೆಲೆಯೂ ಇಲ್ಲ. ಮನುಷ್ಯರೊಳಗೆ ಶಾಶ್ವತರಾದ ಸತ್ಯ ಸನ್ನಿಗರು ಯಾರೂ ಇಲ್ಲ. ಹೆತ್ತ ತಾಯಿಗಿಂತ ಹಿತ ನೀಡುವವರು ಇನ್ನೊಬ್ಬರಿಲ್ಲ.

ಹಸಿವನ್ನು ನೀಗಿಸುವ 'ಅನ್ನ'ವೇ ದೇವರು. 'ಅನ್ನ'ದೇವರ ಮುಂದೆ ಇನ್ನು ದೇವರಿಲ್ಲ. ಅನ್ನವಿರುವ ತನಕ ಪ್ರಾಣ ನೆಲೆನಿಂತಿರುತ್ತದೆ. ಆದ್ದರಿಂದ ಅನ್ನವು ದೈವವೆಂದೆನಿಸಿದೆ.

ತನ್ನಿಂದಾದ ತಪ್ಪನ್ನು ತಾನು ಮನಸಾರೆ ತಿಳಿದರೆ ಒಳಿತು. ಆದರೆ ಮಾಡಿದ ತಪ್ಪನ್ನು ಮರೆತು ತಪ್ಪನ್ನು ಪದೇ ಪದೇ ಮಾಡಿದರೆ ಅದು ನಮ್ಮ ಕಣ್ಣನ್ನು ನಾವೇ ಚುಚ್ಚಿಕೊಂಡಂತೆ ಆಗುವುದು.

ತಾನು 'ಬಲ್ಲವನು'ಎಂದು ಹೇಳಿಕೊಳ್ಳುವವರೆಲ್ಲರೂ ಹಿರಿಯರೆನಿಸರು. ಮಾತಿನ ಅರ್ಥವನ್ನು ತಿಳಿದು ನುಡಿಯುವ ಕಿರಿಯನೂ ಹಿರಿಯನಾಗಬಲ್ಲ.

ಇಬ್ಬರೊಳಗಿನ ಹೊಟ್ಟೆಕಿಚ್ಚು, ದ್ವೇಷ ಅತಿಯಾಗಿ ವ್ಯಾಪಿಸಿಕೊಂಡು ಯಾರಿಗೂ ಅರಿವಿಲ್ಲದಂತೆ ಹಬ್ಬಿಕೊಂಡು ಮತ್ತೊಬ್ಬನನ್ನು ನಾಶಗೈದರೆ ಅದು ಅವರಲ್ಲಿ ಬದುಕಿ ಉಳಿದ ಒಬ್ಬನಿಗೆ ಹಬ್ಬದ ಸವಿಯನ್ನು ಉಣಿಸುವುದು; ಸಂತಸವನ್ನುಂಟುಮಾಡುವುದು.

ತನಗೆ ಕಣ್ಣುಗಳಿದ್ದರೂ ತನ್ನ ಮುಖ ಮತ್ತು ಬೆನ್ನುಗಳಲ್ಲಿರುವ ದೋಷವು ತನಗೆ ಕಾಣಿಸಲಾರದು. ತನ್ನ ಗುಣ – ದೋಷಗಳನ್ನು ಅರಿತುಕೊಳ್ಳಲು ಇನ್ನೊಬ್ಬನ ನೆರವ ಅನಿವಾರ್ಯವಾಗಿದೆ.

ನಾವು ನಡೆದಾಡುವ ಭೂಮಿ ಒಂದು; ನಾವು ಕುಡಿಯುವ ನೀರು ಒಂದು ; ಸುಡುವ ಅಗ್ನಿಯೂ ಒಂದು–ಎಂದಾದ ಬಳಿಕ ನಮ್ಮನ್ನು ಪ್ರತ್ಯೇಕಿಸುವ ಕುಲಗೋತ್ರಗಳ ಅಗತ್ಯವಾದರೂ ಏನು?

## ಸಂಕ್ಷಿಪ್ತವಾಗಿ ಉತ್ತರಿಸುವುದು

### 'ಮಹಾತ್ಮನು ಕನ್ನಡಿ ಜಗಕೆ' ಹೇಗೆ

ಶುಭ್ರವಾದ ಕನ್ನಡಿಯು ವಸ್ತುವಿನ ಪ್ರತಿಬಿಂಬವನ್ನು ಯಥಾವತ್ತಾಗಿ ಹೊರಹೊಮ್ಮಿಸುತ್ತದೆ. ಅದೇ ರೀತಿಯಲ್ಲಿ ಮಹಾತ್ಮನು

ತಾನು ಕಂಡುಕೊಂಡ ಸತ್ಯದ ಅರಿವನ್ನು ನಿಷ್ಕಲ್ಮಷವಾಗಿ ಸಹೃದಯರ ಮುಂದಿಡುವನು. ಕನ್ನಡಿಯ ಮುಂದಿನ ಬಿಂಬವು ಶುಭ್ರವಾದ ಪ್ರತಿಬಿಂಬವಾಗುವಂತೆ ಮಹಾತ್ಮನ ನುಡಿಗಳು ಸತ್ಯದಿಂದ ಬೆಳಗುತ್ತಾ ನಮಗೆ ಜೀವನಾದರ್ಶಗಳಾಗುತ್ತವೆ. ಆದ್ದರಿಂದ ಮಹಾತ್ಮನು 'ಜಗಕೆ ಕನ್ನಡಿ'ಎನಿಸಿದ್ದಾನೆ.

- ಸತ್ಯ ನೀತಿಗಳು ಜೊತೆ ಜೊತೆಯಾಗಿ ಬೆಳಗುವ ಪರಿಯನ್ನು ಸರ್ವಜ್ಞನು ಹೇಗೆ ಬಣ್ಣಿಸಿದ್ದಾನೆ?

ಸತ್ಯನೀತಿಗಳು ಉರಿಯುತ್ತಿರುವ ದೀಪದಲ್ಲಿನ ಬತ್ತಿ ಮತ್ತು ಎಣ್ಣೆಯಂತೆ ಬೆಸೆದುಕೊಂಡು ಬೆಳಗುತ್ತಿವೆ ಎಂದು ಸರ್ವಜ್ಞನು ಬಣ್ಣಿಸಿದ್ದಾನೆ.

- ಅನ್ನದ ಮಹತ್ವವನ್ನು ಸರ್ವಜ್ಞನು ಹೇಗೆ ನಿರೂಪಿಸಿದ್ದಾನೆ?

ಜಗತ್ತಿಗೆ ಪ್ರಾಣ ಮತ್ತು ಚೈತನ್ಯವನ್ನು ನೀಡುವ ಅನ್ನವು ದೇವರೇ ಸರಿ. 'ಅನ್ನ'ದ ಮುಂದೆ ಬೇರೆ ದೇವರು ಉಂಟೆ ಎಂದು ಪ್ರಶ್ನಿಸುವ ಮೂಲಕ ಅನ್ನದ ಹಿರಿಮೆ/ಮಹತ್ವವನ್ನೂ ಸರ್ವಜ್ಞನು ನಿರೂಪಿಸಿದ್ದಾನೆ.

(ಈ ಮೇಲಿನ ರೀತಿಯಲ್ಲೂ ಉತ್ತರಿಸಬಹುದು ಎಂದು ವಿದ್ಯಾರ್ಥಿಗಳಿಗೆ ತಿಳಿಸುವುದು)

## ಚಟುವಟಿಕೆಗಳು

### ಟಿಪ್ಪಣಿ ಬರೆಯುವುದು

- 'ಹೆತ್ತಮ್ಮನಿಂದ ಹಿತರಿಲ್ಲ'–ಮಾತಿನ ಟಿಪ್ಪಣಿ

'ತಾಯಿಗಿಂತ ಬಂಧುವಿಲ್ಲ; ಉಪ್ಪಿಗಿಂತ ರುಚಿಯಿಲ್ಲ' ಎಂಬ ಗಾದೆ ಮಾತು ನಮ್ಮಲ್ಲಿ ಜನಜನಿತವಾಗಿದೆ. ನಮ್ಮ ತಾಯಿ ನಮ್ಮಲ್ಲಿ ತೋರುವ ವಾತ್ಸಲ್ಯವನ್ನು ಅನ್ಯರು ತೋರಲಾರರು. ಬೇರೊಬ್ಬ ಸ್ತ್ರೀ ಅಥವಾ ಆತ್ಮೀಯ ಬಂಧು ಅಮ್ಮನಂತೆ ಪ್ರೀತಿ ವ್ಯಕ್ತಪಡಿಸಿದರೂ ಅದು ತಾಯಿಯ ಪ್ರೀತಿಗೆ ಸರಿಸಮಾನವಾಗಲಾರದು. ಇತ್ತ ತಿಂಡಿ ತಿನಸುಗಳು ರುಚಿಕರವಾಗುವುದಕ್ಕೆ ಹಿತಮಿತವಾಗಿ ಉಪ್ಪನ್ನು ಬಳಸುತ್ತೇವೆ. ಹೀಗೆ ಬಳಸುವ ಉಪ್ಪಿನ ಬದಲು ಇನ್ನೊಂದು ಲವಣಾಂಶವನ್ನು ಬಳಸಿದರೂ ಅದು ಸಹಜವಾದ ಉಪ್ಪಿನ ರುಚಿಯನ್ನು ಒದಗಿಸಲಾರದು. ಆದ್ದರಿಂದ 'ತಾಯಿ'ಯ ಸ್ಥಾನವನ್ನು ತುಂಬುವ ಬಂಧು ಇರಲಾರನೆಂದೂ, ಉಪ್ಪಿನ ಸ್ಥಾನ ತುಂಬುವ ಪದಾರ್ಥ ಇನ್ನೊಂದಿಲ್ಲವೆಂದೂ ಗಾದೆ ತಿಳಿಸುತ್ತದೆ. ಆದ್ದರಿಂದ 'ಅಮ್ಮ'ನ ಹಿರಿಮೆಯನ್ನರಿತ ಕವಿ ಸರ್ವಜ್ಞನು 'ಹೆತ್ತಮ್ಮನಿಂದ ಹಿತರಿಲ್ಲ' ಎಂದು ನುಡಿದ್ದಾನೆ.

(ಈ ಮೇಲಿನ ಟಿಪ್ಪಣಿಯನ್ನು ವಿದ್ಯಾರ್ಥಿಗಳಿಗೆ ಮಾದರಿಯಾಗಿ ಒದಗಿಸುವುದು)

### ಕಿರುಲೇಖನ

- ಮಾತೇ ಮುತ್ತು, ಮಾತೇ ಮೃತ್ಯು–ಆಶಯ ಕಿರು ಲೇಖನ

(ಲೇಖನವು ಒಂದಷ್ಟು ಮಾಹಿತಿಗಳಿಂದ ಒಡಗೂಡಿರಲಿ; ವಿವರಣಾತ್ಮಕವಾಗಿರಲಿ. ಮಾದರಿ ನೀಡಲಾಗಿದೆ.)

**ಮಾತಿನ ಮಹತ್ವ**

ನುಡಿದರೆ ಮುತ್ತಿನ ಹಾರದಂತಿರಬೇಕು

ನುಡಿದರೆ ಮಾಣಿಕ್ಯದ ದೀಪ್ತಿಯಂತಿರಬೇಕು

ನುಡಿದರೆ ಸ್ಪಟಿಕದ ಶಲಾಕೆಯುತಿರಬೇಕು
ನುಡಿದರೆ ಲಿಂಗಮೆಚ್ಚಿ ಅಹುದಹುದೆನಬೇಕು
ನುಡಿಯೊಳಗಾಗಿ ನಡೆಯದಿದ್ದರೆ
ಕೂಡಲ ಸಂಗಮದೇವನೆಂತೊಲಿವನಯ್ಯಾ

– ಬಸವಣ್ಣ

“ಮಾತೆಂಬುದು ಜ್ಯೋತಿರ್ಲಿಂಗ”

– ಅಲ್ಲಮಪ್ರಭು

“ಮಾತು ಬಿದ್ದರೆ ಹೋಯಿತು
ಮುತ್ತು ಒಡೆದರೆ ಹೋಯಿತು”

– ಜನಪದ ಗಾದೆ

ಮಾತಿನಿಂ ನಡೆನುಡಿಯು
ಮಾತಿನಿಂ ಹಗೆ ಕೆಳೆಯು
ಮಾತಿನಿಂ ಸರ್ವ ಸಂಪದವು
ಲೋಕಕ್ಕೆ ಮಾತೇ ಮಾಣಿಕ್ಯ

– ಸರ್ವಜ್ಞ

ಭಾಷಾ ಕೌಶಲಗಳಲ್ಲಿ ಒಂದಾದ ‘ಮಾತು’ ತನ್ನದೇ ಆದ ಸ್ಥಾನವನ್ನು ಪಡೆದುಕೊಂಡಿದೆ. ಕವಿ ಸರ್ವಜ್ಞನ ಹೇಳಿಕೆಯಂತೆ ಸಮಯೋಚಿತವಾಗಿ ಅರಿತು ಆಡುವ ಮಾತುಗಳು ಮುತ್ತಿನಂತೆ ಶ್ರೇಷ್ಠವಾಗಿದ್ದು ಮಾನವರೊಳಗೆ ಆತ್ಮೀಯ ಸಂಬಂಧವನ್ನು ಬೆಸೆಯುತ್ತದೆ. ಆದರೆ ಅದೇ ಮಾತು ಹಿಡಿತ ತಪ್ಪಿದರೆ ಮಾತು ಮಾರಕವಾಗಿ ಮೃತ್ಯು ಸಂಭವಿಸಬಹುದು ಎಂದು ಎಚ್ಚರಿಕೆ ನೀಡಿದ್ದಾನೆ. ವ್ಯಕ್ತಿಯೊಬ್ಬ ಆಡುವ ಮಾತಿನಿಂದ ಆತನ ಸಂಸ್ಕೃತಿ, ವ್ಯಕ್ತಿತ್ವ ವ್ಯಕ್ತವಾಗುತ್ತದೆ ಎಂದು, ಅದು ನಾಗರಿಕ ಸುಸಂಸ್ಕೃತ ಸಮಾಜದ ಪ್ರತಿಬಿಂಬವೆಂದೂ ಸರ್ವಜ್ಞ ಇನ್ನೊಂದೆಡೆ ಹೇಳಿದ್ದಾನೆ. ಆದ್ದರಿಂದ ಮಾತು ತಾಳ ತಪ್ಪಿದರೆ ಮಾತಿನಿಂ –ಹಗೆ ಹೊಳೆಯಲಿ ಎಂದು ನುಡಿಯುತ್ತಾ–ವೈರ–ವೈಷಮ್ಯವನ್ನು ಬೆಳೆಸುತ್ತದೆ ಎಂದಿದ್ದಾನೆ.

ನಮಗೆ ಸ್ವಾತಂತ್ರ್ಯವಿದೆಯೆಂದು ಮನಬಂದಂತೆ ಮಾತನಾಡಬಾರದು. ಕೈಯಲ್ಲಿರುವ ವಸ್ತುವೊಂದು ಬಿದ್ದು ಹೋದರೆ ಅದನ್ನು ಮತ್ತೆ ಎತ್ತಿಕೊಳ್ಳಬಹುದು. ಆದರೆ ತಪ್ಪಾದ ‘ನುಡಿ’ ನಮ್ಮಿಂದ ಹೊರಬಂದಲ್ಲಿ ಅದನ್ನು ಹಿಂದಕ್ಕೆ ಪಡೆದುಕೊಳ್ಳಲು ಸಾಧ್ಯವಿಲ್ಲ. ಕ್ಷಮಿಸು! ಎಂದು ಕೇಳಿಕೊಂಡರೂ ಆಡಿದ ತಪ್ಪು ಇಲ್ಲವಾಗುವುದಿಲ್ಲ. ದುಂಡಗಾಗಿರುವ ಮುತ್ತೊಡೆದು ಹೋದರೆ ತನ್ನ ಅಂದವನ್ನು ಕಳೆದುಕೊಳ್ಳುವುದಲ್ಲದೆ ಉಪಯೋಗಶೂನ್ಯವಾಗುವುದು. ಅದೇ ರೀತಿ ತಪ್ಪಾಗಿ ನುಡಿದರೆ ಸಮಾಜ ನಮ್ಮ ಮಾತಿಗೆ ಕಿವಿಕೊಡಲಾರದು, ಗೌರವ ನೀಡಲಾರದು ಎಂದು ಜನಪದ ಗಾದೆಯೂ ಮಾತಿನ ಹಿರಿಮೆಯನ್ನು ಸಾರುತ್ತದೆ.

ಅನುಭವ ಮಂಟಪದ ಸ್ಥಾಪಕನಾದ ಅಲ್ಲಮಪ್ರಭುವು ಮಾತೆಂಬುದು–ಸ್ವಯಂ ಪ್ರಕಾಶವುಳ್ಳ ‘ಜ್ಯೋತಿರ್ಲಿಂಗ’ ಎಂದು ನುಡಿಯುತ್ತಾ ಮಾತನ್ನು ದೈವತ್ವಕ್ಕೇರಿಸಿದ್ದಾನೆ. ಶ್ರೇಷ್ಠ ಎಂದಿದ್ದಾನೆ.

ಶಿವಶರಣರಲ್ಲಿ ಜನಪ್ರಿಯನಾದ ಬಸವಣ್ಣನವರು ನಮ್ಮ ನುಡಿಯು ಮುತ್ತಿನ ಹಾರದಂತೆ ಆಕರ್ಷಣೀಯವೂ ಮಾಣಿಕ್ಯದ

ಕಾಂತಿಯಂತೆ–ಸ್ವಯಂ ಚಿಂತನೆಗೆ ಅವಕಾಶ ನೀಡುವಂತದ್ದೂ, ಸ್ಪಟಿಕದಂತೆ ಪಾರದರ್ಶಕವೂ ಆಗಿರಬೇಕೆಂದು ಹೇಳುತ್ತಾ– ನಿರ್ಜೀವವಾದ ಕಲ್ಲು ಕೂಡ ತಲೆದೂಗುವಂತಹ ಮಾತನ್ನು ಬಳಸಬೇಕೆಂದು ಕರೆ ನೀಡಿದ್ದಾರೆ. ಇನ್ನೊಂದು ಮಾತಿನಲ್ಲಿ ಹೇಳುತ್ತಿದ್ದರೆ, ನಮ್ಮ ನುಡಿ ಸರಳ–ನೇರ ಸ್ಪಷ್ಟವಾಗಿರಬೇಕೆಂದು ಬಸವಣ್ಣನವರು ಕರೆ ನೀಡಿದ್ದಾರೆ.

ಒಟ್ಟಿನಲ್ಲಿ ಮಾತಾ ದೇವರು ನೀಡಿದ ವರವಾಗಿದೆ. ಅದನ್ನು ಅರಿತು ಬೆಳೆಸೋಣ– ಮಾತು ಮಲ್ಲಿಗೆಯ ಕಂಪು ನೀಡಲಿ ಎಂದು ಹಾರೈಸೋಣ.

## ತುಲನಾತ್ಮಕ ಟಿಪ್ಪಣಿ

ಅನ್ನದೇವರ ಮುಂದೆ ಇನ್ನು ದೇವರು ಉಂಟೆ
ಅನ್ನವಿರುವ ತನಕ ಪ್ರಾಣವು–ಜಗಕ್ಕೆಲ್ಲ
ಅನ್ನವೇ ದೈವ ಸರ್ವಜ್ಞ

– ಸರ್ವಜ್ಞ

ಅನ್ನದಾನ ಮಹಾಯಜ್ಞ। ಅನ್ನ ಹೀನ ಆಳನು
ಅನ್ನ ಮುಟ್ಟಿ ಬಾಳಲೆಳಸುವವನು ಮಹಾ ಖೂಳನು

– ದ.ರಾ. ಬೇಂದ್ರೆ

ಜಗದ ಜನರ ಹಸಿವನ್ನು ನೀಗಿ ನವ ಚೈತನ್ಯಮಯವಾದ ಪ್ರಾಣವನ್ನು ನೀಡುವ ಅನ್ನವು ದೇವರಲ್ಲದೆ ಮತ್ತೇನು? ಆದುದರಿಂದ 'ಅನ್ನ ದೇವರ ಮುಂದೆ ಇನ್ನು ದೇವರು ಉಂಟೆ?" ನಮ್ಮನ್ನು ಪ್ರಶ್ನಿಸುವ ಕವಿ ಸರ್ವಜ್ಞನು ನಮಗೆ ಚಿಂತನೆಗೆ ಅವಕಾಶವನ್ನು ನೀಡಿದ್ದಾನೆ.

ಅನ್ನವು ವರ್ಣನಾತೀತ ಹಿರಿಮೆಗೆ ಪಾತ್ರವಾಗಿದೆ ಎಂದು ಭಾವಿಸಿದ ಬೇಂದ್ರೆಯವರು 'ಅನ್ನದಾನ'ವನ್ನು ಮಹಾಯಜ್ಞಕ್ಕೆ ಹೋಲಿಸಿದ್ದಾರೆ. ಯಜ್ಞದಿಂದ ದೇವತೆಗಳು ತೃಪ್ತರಾಗಿ ಭೂಮಿ ಸಾಕಷ್ಟು ಮಳೆ–ಬೆಳೆಗಳಿಂದ ಸಂಪತ್ಸಮೃದ್ಧಿಯಾಗುವುದಂತೆ. ಹಸಿದವನಿಗೆ ದೊರಕುವ ಆಹಾರವು ಆತನಲ್ಲಿ ಸಂತಸದ ಕಳೆಯನ್ನು ಮೂಡಿಸುವುದು. ಹಾಗೆಯೆ ಪ್ರತಿಯೊಬ್ಬನೂ ತಿಂದು ತೇಗುತ್ತಾ ಸಂತಸದ ವಾತಾವರಣವನ್ನುಂಟುಮಾಡುವ ನಡತೆಯು ಮಹಾಯಜ್ಞದ ಫಲಕ್ಕೆ ಸಮಾನವಾಗಿರುವುದರಿಂದ 'ಅನ್ನದಾನ ಮಹಾಯಜ್ಞ' ಎಂದು ಬೇಂದ್ರೆಯವರು ನುಡಿದಿದ್ದಾರೆ. ಆದರೆ ಉಳ್ಳವನು ತನ್ನಲ್ಲಿದ್ದ ಅನ್ನವನ್ನು ಮುಟ್ಟಿ ಬಡವನನ್ನು ವಂಚಿಸ ತಿಳಿಸಿದರೆ ಆತನು ಮಹಾ ಖೂಳನೆನಿಸನು. ಹೀಗಾಗಿ ನಾವೆಲ್ಲರೂ ಮಹಾಯಜ್ಞಕ್ಕೆ ಸರಿಸಮಾನವಾದ 'ಅನ್ನದಾನ'ದಂತಹ ಮಹತ್ಕಾರ್ಯದಲ್ಲಿ ತೊಡಗಿಸಿಕೊಳ್ಳುವಂತೆ (ಕವನದಲ್ಲಿ) ಕವಿ ಕರೆ ನೀಡಿದ್ದಾರೆ,

ಸರ್ವಜ್ಞನು ಅನ್ನವನ್ನು ದೇವರೆಂದು ಚಿತ್ರಿಸಿದರೆ ಅನ್ನದಾನವು ಮಹಾಯಜ್ಞಕ್ಕೆ ಸಮಾನ ಎಂದು ಕವಿ ಬೇಂದ್ರೆಯವರು ನುಡಿದಿದ್ದಾರೆ.

(ತುಲನಾತ್ಮಕ ಟಿಪ್ಪಣಿಯನ್ನು ವಿದ್ಯಾರ್ಥಿಗಳಿಗೆ ಒದಗಿಸುವುದು)

## ಲಿಖಿತ ಭಾಷಣ

- ಸರ್ವಜ್ಞನ ವಚನಗಳ ಮಹತ್ವ

ಸರ್ವಜ್ಞನ ವಚನಗಳ ಮಹತ್ವದ ಕುರಿತು ತಯಾರು ಮಾಡುವ ಭಾಷಣದಲ್ಲಿ ಈ ಕೆಳಗಿನ ಅಂಶಗಳು ಬರುವಂತೆ

ಗಮನಿಸುವುದು. ಈ ಮಾಹಿತಿಯನ್ನು ವಿದ್ಯಾರ್ಥಿಗಳಿಗೆ ನೀಡುವುದು.

- ವಸ್ತು
- ಭಾಷೆ–ಶೈಲಿ
- ಪರಿಣಾಮ

ಸರ್ವಜ್ಞನು ಎಲ್ಲ ಸ್ತರದ ವಿಷಯಗಳನ್ನೂ ತನ್ನ ತ್ರಿಪದಿಗಳ ವಸ್ತುವಾಗಿ ಆಯ್ಕೆ ಮಾಡಿಕೊಂಡಿದ್ದಾನೆ.

ಆಯ್ಕೆ ಮಾಡಿಕೊಂಡ ವಸ್ತುಗಳನ್ನು ನುಡಿಮುತ್ತುಗಳ ರೂಪದಲ್ಲಿ/ ಮುಕ್ತಕದಂತೆ ಜನರಿಗೆ ನೀಡುವಲ್ಲಿ ಯಶಸ್ವಿಯಾಗಿದ್ದಾನೆ. ವಿವರಣೆಗಾಗಿ ಎತ್ತಿಕೊಂಡ ಉಪಮೆಗಳು ಪ್ರತಿಯೊಬ್ಬನ ಜೀವನದಲ್ಲಿ ಹಾಸುಹೊಕ್ಕಾದವುಗಳಾಗಿದ್ದು–ಸುಲಭದಲ್ಲಿ ಮನವರಿಕೆ ಮಾಡಿಕೊಡುವಲ್ಲಿ ಯಶಸ್ವಿಯಾಗಿವೆ.

ವಚನಗಳು ಆತ್ಮೀಯ ಮಿತ್ರನ ಹಿತನುಡಿಯಂತೆ ಇದ್ದು ಬೋಧಿಸುವಲ್ಲಿ ಯಶಸ್ವಿಯಾಗಿವೆ.

**ಭಾಷಾಭ್ಯಾಸ**

ಭಾಷೆಯಲ್ಲಿ ಒಂದು ಕಾಲದಲ್ಲಿ ಬಳಕೆಯಾಗುತ್ತಿದ್ದ ಪದಗಳಲ್ಲಿ ಕೆಲವು ವರ್ಷಗಳ ಬಳಿಕ ಮತ್ತೊಂದು ರೂಪವನ್ನು ತಾಳುತ್ತವೆ. ಇದರ ಹಿನ್ನಲೆಯನ್ನು ಭಾಷಾವಿಜ್ಞಾನವು ತಿಳಿಸಿಕೊಡುತ್ತದೆ.

ಎಣ್ಣೆ, ಬೆಣ್ಣೆ ಎಂಬ ಪದಗಳ ಮೂಲರೂಪ ಹೇಗಿದ್ದುವು; ಹೇಗೆ ಬದಲಾವಣೆಗೊಂಡವು ಎಂಬುದನ್ನು ಪಠ್ಯಪುಸ್ತಕದಲ್ಲಿ ನೀಡಿದ ಪದ ನಿಷ್ಪತ್ತಿಯಿಂದ ತಿಳಿಯಬಹುದು. ಇಲ್ಲಿ ನೀಡಿದ ಇತರ ಕೆಲವು ಪದಗಳ ನಿಷ್ಪತ್ತಿಯನ್ನು ಅಧ್ಯಾಪಕರು ವಿದ್ಯಾರ್ಥಿಗಳಿಗೆ ತಿಳಿಸುವುದು. ಮಕ್ಕಳು ಅಲ್ಲಿ ಕಾಣುವ ಧ್ವನಿ ವ್ಯತ್ಯಾಸಗಳನ್ನು ಗಮನಿಸಲಿ. ತಮ್ಮ ಲಾಗ್ ಪುಸ್ತಕದಲ್ಲಿ ಬರೆದುಕೊಳ್ಳಲಿ.

ಕಬ್ಬಿಣ : ಕರ್ + ಪೊನ್ > ಕರ್ಬೊನ್ > ಕಬ್ಬುನ > ಕಬ್ಬಿಣ

ಚೆಂಬು : ಚೆಂ + ಪೊನ್ > ಚೆಂಬೊನ್ > ಚೆಂಬು

ಕಣ್ಣೀರು : ಕಣ್ + ನೀರ್ > ಕಣ್ಣೀರ್ > ಕಣ್ಣೀರು

ತಣ್ಣೀರು : ತಣ್ + ನೀರು > ತಣ್ಣೀರ್ > ತಣ್ಣೀರು

ತಂಗುಳ : ತಣ್ + ಕೂಳ್ > ತಂಗೂಳ್ > ತಂಗುಳ

- ಸಂಸ್ಕೃತ–ತದ್ಭವಗಳ ಪಟ್ಟಿಯನ್ನು ಪೂರ್ತಿಗೊಳಿಸುವುದು.

ವಿದ್ಯಾರ್ಥಿಗಳು ತಾವು ಓದಿದ ನೆನಪಿನಿಂದ ನೀಡಲಾದ ಸಂಸ್ಕೃತ ಪದಗಳಿಗೆ ಸೂಕ್ತವಾದ ತದ್ಭವ ಪದಗಳನ್ನು ಯೋಚಿಸಿ ಬರೆಯಲಿ. ಅಧ್ಯಾಪಕರು ಈ ಸಂದರ್ಭದಲ್ಲಿ ಅಗತ್ಯವಾದ ಮಾಹಿತಿಯನ್ನು ನೀಡುವುದು.

| ಸಂಸ್ಕೃತ | ತದ್ಭವ |
|---|---|
| ಪ್ರಾಣ | ಹರಣ |
| ನಿತ್ಯ | ನಿಚ್ಚ |
| ಮುಖ | ಮೊಗ |
| ಜ್ಞಾನ | ಗ್ನಾನ |
| ಯೋಗ | ಜೋಗ |

- ಪರ್ಯಾಯ ಪದಗಳನ್ನು ಬರೆಯುವುದು:

ಒಂದು ಪದದ ಸಮಾನ ಅರ್ಥವನ್ನು ನೀಡುವ ಇತರ ಪದಗಳನ್ನು ಪರ್ಯಾಯ ಪದಗಳೆನ್ನುವರು. ತಖ್ತೆಯಲ್ಲಿ ನೀಡಲಾದ ಪದಗಳ ಪರ್ಯಾಯ ಪದಗಳನ್ನು ಅಧ್ಯಾಪಕರು ವಿದ್ಯಾರ್ಥಿಗಳಿಂದ ಅವುಗಳನ್ನು ಬರೆದುಕೊಳ್ಳಲಿ. ನಿಘಂಟುಗಳನ್ನು ಬಳಸಿಕೊಂಡು ಇನ್ನಷ್ಟು ಪರ್ಯಾಯ ಪದಗಳನ್ನು ಬರೆಯಲು ವಿದ್ಯಾರ್ಥಿಗಳಿಗೆ ಅಧ್ಯಾಪಕರು ಸೂಚಿಸುವುದು.

ನರ – ಮನುಷ್ಯ, ಮಾನವ, ಮನುಜ

ಕತ್ತಲು – ತಿಮಿರ, ಅಂಧಕಾರ, ತಮ

ನಯನ – ಕಣ್ಣು, ಲೋಚನ, ಅಕ್ಷಿ

ಬಾಣ – ಕಣೆ, ಸಾಯಕ, ಅಂಬು

ಅಮ್ಮ – ತಾಯಿ, ಮಾತೆ, ಜನನಿ,

ಭೂಮಿ – ಇಳೆ, ಪೃಥ್ವಿ, ಉರ್ಮಿ, ಮೇದಿನಿ

# ಸುಬ್ಬಣ್ಣ

ಮಾಸ್ತಿ

## ಪ್ರವೇಶ

ಕತೆ ಕೇಳುವುದು/ಹೇಳುವುದು ಎಂದರೆ ನಮಗೆಲ್ಲ ಖುಷಿ. ನಾವೆಲ್ಲ ಅಜ್ಜಿ ಕತೆ, ಪಂಚತಂತ್ರದ ಕತೆ, ಉಪನಿಷತ್ತಿನ ಕಥೆ, ಜಾನಪದ ಕತೆಗಳನ್ನು ಕೇಳಿದವರು. ಕವನ, ಸಣ್ಣಕತೆ, ನೀಳ್ಗತೆ, ನಾಟಕ, ಕಾದಂಬರಿ ಇವುಗಳೆಲ್ಲಾ ಹೊಸಗನ್ನಡ ಸಾಹಿತ್ಯದ ವಿವಿಧ ಪ್ರಕಾರಗಳು.

ವಿದ್ಯಾರ್ಥಿಗಳ ಪೂರ್ವಜ್ಞಾನವನ್ನು ತಿಳಿಯುವುದಕ್ಕಾಗಿ ಕೆಳಗಿನ ತರಗತಿಯಲ್ಲಿ ಓದಿದ ಕತೆಗಳನ್ನು ಮತ್ತು ಅವುಗಳ ಲೇಖಕರನ್ನು ಹೆಸರಿಸಲು ಹೇಳುವುದು.

ಒಸರು : ಫಕೀರ್ ಮಹಮ್ಮದ್ ಕಟ್ಪಾಡಿ

ಹುಗ್ಗಿ : ಕುಂ ವೀರಭದ್ರಪ್ಪ

ಸಣ್ಣಕತೆಗಳಿಗೆ ಒಂದು ಸ್ವರೂಪವನ್ನು ನೀಡಿದ ಆದ್ಯ ಲೇಖಕರು ಮಾಸ್ತಿ ವೆಂಕಟೇಶ್ ಅಯ್ಯಂಗಾರರು(ಶ್ರೀನಿವಾಸ). ನೂರಾರು ಸಣ್ಣಕತೆಗಳನ್ನು ಹಾಗೂ ಚೆನ್ನಬಸವನಾಯಕ ಮತ್ತು ಚಿಕ್ಕವೀರ ರಾಜೇಂದ್ರ ಎಂಬ ಎರಡು ಕಾದಂಬರಿಗಳನ್ನೂ ಅವರು ಬರೆದಿರುವರು. 'ಭಾವ' ಎಂಬ ಮೂರು ಸಂಪುಟಗಳ ಪುಸ್ತಕದಲ್ಲಿ ತಮ್ಮ ಬಾಳಯಾತ್ರೆ ಚಿಮ್ಮಿಸಿದ ಭಾವಗಳನ್ನು ಹೇಳಿದ್ದಾರೆ. ಸಣ್ಣಕತೆಯೂ ಅಲ್ಲದ, ಕಾದಂಬರಿಗಿಂತ ಭಿನ್ನವಾದ 'ಸುಬ್ಬಣ್ಣ' ಎನ್ನುವ ನೀಳ್ಗತೆ(ಕಿರುಕಾದಂಬರಿ) ಸಾಹಿತ್ಯ ಪ್ರಪಂಚಕ್ಕೆ ಮಾಸ್ತಿಯವರ ವಿಶಿಷ್ಟ ಕೊಡುಗೆಯಾಗಿದೆ. ಕಲಾವಿದನೊಬ್ಬನ ಜೀವನವನ್ನೇ ಕಥಾವಸ್ತುವನ್ನಾಗಿಸಿ ಬರೆದ ಅಪೂರ್ವ ಕೃತಿ ಸುಬ್ಬಣ್ಣ : ಕಷ್ಟಗಳ ಪರಂಪರೆಗೆ ಸಿಲುಕಿ, ವೈರಾಗ್ಯದಿಂದ ಬಾಳಿನ ಸಂಜೆಯಲ್ಲಿ ತನ್ನೂರಿಗೆ ಮರಳಿದ ವ್ಯಕ್ತಿ ಸುಬ್ಬಣ್ಣ.

ಪಠ್ಯ ಭಾಗವನ್ನು ವಿದ್ಯಾರ್ಥಿಗಳು ಸ್ಫುಟವಾಗಿ ಓದಲಿ. ಒಂದೊಂದು ಗುಂಪಿಗೂ ಕಥಾ ಭಾಗವನ್ನು ವಿಂಗಡಿಸಿ ಕೊಡುವುದು. ಅಗತ್ಯವಿದ್ದಲ್ಲಿ ಅಧ್ಯಾಪಕರು ಮಾರ್ಗದರ್ಶನ ನೀಡುವುದು. ನವೀನ ಪದಗಳ ಅರ್ಥವನ್ನು ಅರ್ಥಕೋಶದ ಸಹಾಯದಿಂದ ವಿದ್ಯಾರ್ಥಿಗಳು ಕಂಡುಕೊಳ್ಳಲಿ.

ಕಥಾ ಭಾಗವನ್ನು ಅರ್ಥಮಾಡಿಕೊಳ್ಳಲು ವಿದ್ಯಾರ್ಥಿಗಳ ಗುಂಪುಗಳಿಗೆ ಈ ಕೆಳಗಿನ ಭಾಗಗಳನ್ನು ವಿಭಾಗ ಮಾಡಿ ನೀಡುವುದು.

- ತೊರೆಯ ಪುರದ ದೇವಾಲಯದ ಮುಂದೆ ಸುಬ್ಬಣ್ಣನ ಜೀವನ
- ಸುಬ್ಬಣ್ಣ ಮತ್ತು ನಟುವರ ಹುಡುಗನ ನಡುವಿನ ಆರಂಭದ ಸಂಭಾಷಣೆ
- ಸುಬ್ಬಣ್ಣ ಪಿಟೀಲನ್ನು ನೀರಲ್ಲಿ ಬಿಡಲು ನಿರ್ಧರಿಸಿದ ಘಟನೆ
- ಸುಬ್ಬಣ್ಣನನ್ನು ವೆಂಕಟರಮಣನು ಪುನಃ ಪ್ರಾಪಂಚಿಕ ಜೀವನಕ್ಕೆ ಕರೆತಂದ ರೀತಿ
- ತೊರೆಯಪುರದ ಸುಬೇದಾರರು ಸುಬ್ಬಣ್ಣನಿಗೆ ಪರಿಚಯವಾದ ಹಿನ್ನಲೆ

ಸಂಗೀತ ಕಲೆಯ ಮೇಲಿನ ಅಪ್ಪಟ ಪ್ರೀತಿಯಿಂದ ಸುಬ್ಬಣ್ಣನು ಓರ್ವ ಗುರುವಾಗಲು ಸಮ್ಮತಿಸಿ ಬದುಕನ್ನು ಸಾರ್ಥಕ ಪಡಿಸಿಕೊಂಡ ರೀತಿ.

ಸುಬ್ಬಣ್ಣನವರ ಸ್ವಗತದ ಮಾತುಗಳು(ಎರಡು ಸಂದರ್ಭಗಳಲ್ಲಿ)

ಈ ಮೇಲಿನ ಭಾಗಗಳ ಕುರಿತು ವಿದ್ಯಾರ್ಥಿಗಳು ಗುಂಪಿನಲ್ಲಿ ಚರ್ಚಿಸಿ ಬರೆದು ಕೊಳ್ಳಲಿ.

ಗುಂಪಿನಲ್ಲಿ ಬರೆದ ಅಂಶಗಳನ್ನು ತರಗತಿಯಲ್ಲಿ ಒಬ್ಬನು ಮಂಡಿಸಲಿ.

ಬೇಕದಲ್ಲಿ ಸೂಕ್ತ ಬದಲಾವಣೆ ಮಾಡಲು ಅಧ್ಯಾಪಕರು ಸೂಚಿಸುವುದು.

ಬದಲಾವಣೆಯೊಂದಿಗೆ ಬರೆದ ಅಂಶಗಳನ್ನು ಚಟುವಟಿಕೆ ಪುಸ್ತಕದಲ್ಲಿ ಬರೆಯಲಿ.

## ಚಟುವಟಿಕೆಗಳು

### ಟಿಪ್ಪಣಿ ಬರೆಯುವುದು.

ನಮ್ಮ ಸಮಾಜದಲ್ಲಿ ಅದೆಷ್ಟೋ ಕಲಾವಿದರಿದ್ದಾರೆ. ಅವರಲ್ಲಿ ಕೆಲವರ ಜೀವನ ಚರಿತ್ರೆಯನ್ನು ಓದಿ ಟಿಪ್ಪಣಿ ಬರೆಯಲು ಹೇಳುವುದು. ಬರೆದ ಟಿಪ್ಪಣಿಯನ್ನು ತರಗತಿಯಲ್ಲಿ ಮಂಡಿಸಲಿ.

ಬೇಕಾದಲ್ಲಿ ಅಧ್ಯಾಪಕರು ಸೂಕ್ತವಾದ ತಿದ್ದುಪಡಿ ಮಾಡುವುದು. ಬದಲಾವಣೆಯೊಂದಿಗೆ ಬರೆದ ಟಿಪ್ಪಣಿಯನ್ನು ಚಟುವಟಿಕೆ ಪುಸ್ತಕದಲ್ಲಿ ಬರೆಯಲಿ.

### ಲೇಖನ ಬರೆಯುವುದು

ಕಾದಂಬರಿಯ ಮುಖ್ಯ ಲಕ್ಷಣಗಳನ್ನು ಕುರಿತು ಲೇಖನ ಬರೆಯಲು ಹೇಳುವುದು.

ಲೇಖನ ಬರೆಯುವಾಗ ಈ ಕೆಳಗಿನ ಅಂಶಗಳನ್ನು ಗಮನಿಸಲಿ.

- ಕಥೆ, ವಸ್ತು, ಪಾತ್ರಗಳು, ಸಂಭಾಷಣೆ, ಹಿನ್ನಲೆ, ನಿರೂಪಣೆ, ಜೀವನದೃಷ್ಟಿ.
- ಕಾದಂಬರಿಯು ಒಂದು ಜನಾಂಗದ ಇಲ್ಲವೆ ಒಂದು ಸಮಾಜದ ವಿಶಾಲ ಲೋಕದರ್ಶನದ ಪ್ರತೀಕ ಎಂಬ ಅಭಿಪ್ರಾಯ. –ಇತ್ಯಾದಿ....

ಈ ಮೇಲಿನ ಅಂಶಗಳು ಮತ್ತು ಗ್ರಂಥಾಲಯದ ಸಹಾಯದಿಂದ ಇನ್ನಷ್ಟು ಅಗತ್ಯ ಮಾಹಿತಿಗಳನ್ನು ಸಂಗ್ರಹಿಸಿ ವಿದ್ಯಾರ್ಥಿಗಳು ತಮ್ಮ ಲೇಖನವನ್ನು ಚಟುವಟಿಕೆ ಪುಸ್ತಕದಲ್ಲಿ ಬರೆಯುವುದು.

### ಪಾತ್ರ ಚಿತ್ರಣ

ಸುಬ್ಬಣ್ಣನ ಪಾತ್ರ ಚಿತ್ರಣವನ್ನು ಮಾಡಲು ಹೇಳುವುದು.

ವಿದ್ಯಾರ್ಥಿಗಳು ತಾವು ಬರೆದುದನ್ನು ತರಗತಿಯಲ್ಲಿ ಮಂಡಿಸಲಿ. ಬೇಕಾದಲ್ಲಿ ಅಧ್ಯಾಪಕರು ಸೂಕ್ತವಾದ ಬದಲಾವಣೆಗಳನ್ನು ಸೂಚಿಸುವುದು.

ವಿದ್ಯಾರ್ಥಿಗಳು ತಾವು ಪಾತ್ರ ಚಿತ್ರಣ ಬರೆದುದನ್ನು ಉತ್ತಮಪಡಿಸಿ ತಮ್ಮ ಚಟುವಟಿಕೆ ಪುಸ್ತಕದಲ್ಲಿ ಬರೆಯುವುದು.

## ಭಾಷಾಭ್ಯಾಸ

### ಸಂಕ್ಷೇಪ ಲೇಖನ

ಕೊಟ್ಟಿರುವ ಗದ್ಯಭಾಗದ ಮುಖ್ಯ ಆಶಯ ಬರುವಂತೆ ಮೂರು ಅಥವಾ ನಾಲ್ಕು ವಾಕ್ಯಗಳಲ್ಲಿ ಸಂಕ್ಷೇಪಿಸಿ ಬರೆಯಲು ವಿದ್ಯಾರ್ಥಿಗಳಲ್ಲಿ ಹೇಳುವುದು.

ಸಂಕ್ಷೇಪಿಸಿ ಈ ಕೆಳಗಿನಂತೆಯೂ ಬರೆಯಬಹುದು.

ಭಾವನೆಗಳನ್ನು ವ್ಯಕ್ತಪಡಿಸುವುದು ಮಾನವನ ಸಹಜ ಗುಣ. ಹಿಂದಿನಿಂದಲೂ ಕಾವ್ಯಕ್ಕೆ ಸ್ತ್ರೀ ವಸ್ತುವಾಗಿದ್ದಾಳೆ. ಸ್ತ್ರೀಯು ಪುರುಷರಿಗಿಂತ ಹೆಚ್ಚು ಭಾವ್ಯಕಗಳಾಗಿದ್ದರೂ ವಿದ್ಯಾಭ್ಯಾಸವಿಲ್ಲದ ಕಾರಣ ಆಕೆಗೆ ತನ್ನ ಭಾವನೆಗಳನ್ನು ವ್ಯಕ್ತಪಡಿಸುವ ಅವಕಾಶ ಹಿಂದಿನ ಕಾಲದಲ್ಲಿ ಇರಲಿಲ್ಲ. ವಿದ್ಯಾರ್ಜನೆಯ ಅವಕಾಶ ದೊರತ ಅನಂತರ ಮಹಿಳೆಯರೂ ಕಾವ್ಯ ರಚನೆ ಮಾಡಿದ್ದಾರೆ.

## ವಿಭಕ್ತಿ ಪ್ರತ್ಯಯಗಳು

ವಿಭಕ್ತಿ ಪ್ರತ್ಯಯಗಳನ್ನು ಗುರುತಿಸಿ ಪಟ್ಟಿಯನ್ನು ಭರ್ತಿ ಮಾಡಲು ವಿದ್ಯಾರ್ಥಿಗಳಲ್ಲಿ ಹೇಳುವುದು.

ಪದಗಳನ್ನು ಅರ್ತಾನುಸಾರಿಯಾಗಿ ಜೋಡಿಸುವುದರಿಂದ ವಾಕ್ಯಗಳು ನಿರ್ಮಾಣಗೊಳ್ಳುತ್ತವೆ. ವಾಕ್ಯಗಳ ಮೂಲಕವೇ ನಾವು ವಿಚಾರ ವಿನಿಮಯ ಮಾಡುತ್ತೇವೆ. ವಾಕ್ಯಗಳಲ್ಲಿ ಬಳಕೆ ಮಾಡುವ ಪದಗಳಿಗೆ ನಿರ್ದಿಷ್ಟ ಪ್ರತ್ಯಯಗಳನ್ನು ಹಚ್ಚಿದರೆ ಮಾತ್ರವೇ ಸರಿಯಾದ ಅರ್ಥ ಹೊರ ಹೊಮ್ಮುವುದು. ಅಂಥವುಗಳನ್ನು ವಿಭಕ್ತಿ ಪ್ರತ್ಯಯ ಎನ್ನುತ್ತಾರೆ.

ಈ ಕೆಳಗಿನ ಪಟ್ಟಿಯನ್ನು ಗಮನಿಸಲು ಹೇಳುವುದು.

| **ವಿಭಕ್ತಿಯ ಹೆಸರು** | **ಪದಗಳು** | **ವಿಭಕ್ತಿ ಪ್ರತ್ಯಯ** |
|---|---|---|
| ಪ್ರಥಮ | ಧಕ್ಕೆಯು, ಪ್ರೋತ್ಸಾಹವು | ಉ |
| ದ್ವಿತೀಯ | ಯುವಕನನ್ನು | ಅನ್ನು |
| ತೃತೀಯ | ಶೈವರಾಜರಿಂದ, ದೃಷ್ಟಿಯಿಂದ | ಇಂದ |
| ಚತುರ್ಥಿ | ಜೈನಮತಕ್ಕೆ | ಕ್ಕೆ |
| ಷಷ್ಠೀ | ಹೊರನಾಡಿನ | ಅ |
| ಸಪ್ತಮೀ | ಒಳನಾಡಿನಲ್ಲಿ | ಅಲ್ಲಿ |

ಈ ತಖ್ತೆಯನ್ನು ಗಮನಿಸಿ ವಾಕ್ಯ (ವಾಕ್ಯಗಳನ್ನು) ಬರೆದು ವಿಭಕ್ತಿ ಪ್ರತ್ಯಯವನ್ನು ಗುರುತಿಸಲು ಹೇಳುವುದು.

ಈ ಪತ್ಯ ಭಾಗದ ಹೆಚ್ಚಿನ ಮಾಹಿತಿಗಾಗಿ, 'ಮಾಸ್ತಿ ಸಮಗ್ರ ಸಾಹಿತ್ಯ ಅವಲೋಕನ' ಪುಸ್ತಕದಲ್ಲಿ ಬಂದ ವಿಮರ್ಶಾ ಲೇಖನಗಳನ್ನು ನೋಡಬಹುದು.

# 4. ಬೆಳ್ಳಿತೆರೆ

| | | |
|---|---|---|
| ಘಟಕ 4 | : | ಬೆಳ್ಳಿತೆರೆ |
| ಪಾಠಭಾಗಗಳು | : | ಬಣ್ಣದ ಲೋಕ (ಪರಿಚಯಾತ್ಮಕ ಲೇಖನ)<br>ಆಗದು ಎಂದು... (ಚಲನಚಿತ್ರ ಗೀತೆ)<br>ಬೂತಯ್ಯನ ಮಗ ಅಯ್ಯು (ಚಲನಚಿತ್ರ ಸಮೀಕ್ಷೆ) |
| ಸಮಯ | : | 24 ಪಿರೇಡುಗಳು |
| **ಕಲಿಕಾ ಸಾಮಾಗ್ರಿಗಳು** | : | ಪಠ್ಯ ಪುಸ್ತಕ<br>ಅಡಕ ಮುದ್ರಿಕೆ<br>ಪೂರಕಗ್ರಂಥಗಳು |
| **ಮೌಲ್ಯಗಳು, ಮನೋಭಾವಗಳು** | : | |

- ಕಲೆ, ಸಾಹಿತ್ಯದ ಶ್ರೀಮಂತಿಕೆಯನ್ನು ತಿಳಿದುಕೊಳ್ಳುವ ಮನೋಭಾವ.
- ಸಿನಿಮಾವನ್ನು ನೋಡಿ ಆಸ್ವಾದಿಸುವ ಮನೋಭಾವ
- ಚಲನಚಿತ್ರಗಳಲ್ಲಿ ಅಡಕವಾಗಿರುವ ಸಾಹಿತ್ಯಕ ಮೌಲ್ಯಗಳನ್ನು ತಿಳಿದುಕೊಳ್ಳುವ ಮನೋಭಾವ.
- ಸಿನಿಮಾಗಳಲ್ಲಿ ಅಭಿವ್ಯಕ್ತಿಸಲ್ಪಡುವ ಸಕಾರಾತ್ಮಕ ಸಂದೇಶಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳುವುದು.
- ಕಲೆ ಮತ್ತು ಸಾಹಿತ್ಯದ ಮೇಲಿನ ಗೌರವ ಮನೋಭಾವ.

# ಪ್ರಸ್ತಾವನೆ

ಚಲನಚಿತ್ರ ಮನೋರಂಜನಾತ್ಮಕ ಮಾಧ್ಯಮ. ದೂರದರ್ಶನ ಪ್ರಭಾವದಿಂದ ಕೊಂಚಮಟ್ಟಿಗೆ ಪ್ರೇಕ್ಷಕರ ಕೊರತೆಯನ್ನು ಅನುಭವಿಸುತ್ತಿದ್ದರೂ ಅದರ ಜನಪ್ರಿಯತೆ ಕಡಿಮೆಯಾಗಿಲ್ಲ. ದೂರದರ್ಶನದ ಮುಖಾಂತರ ಹಲವಾರು ಚಾನೆಲ್‌ಗಳು ವೈವಿಧ್ಯಮಯ ಮನೋರಂಜನೆಯ ಕಾರ್ಯಕ್ರಮಗಳನ್ನು ನೀಡುತ್ತಿದ್ದರೂ ಇಲ್ಲಿಯೂ ವೀಕ್ಷಕರಿಗೆ ಹಿತ ಮತ್ತು ಆನಂದವನ್ನು ನೀಡುತ್ತಿರುವುದು ಚಲನಚಿತ್ರ ಸಂಬಂಧಿ ಕಾರ್ಯಕ್ರಮಗಳೇ ಆಗಿವೆ ಎಂಬುದು ಗಮನಾರ್ಹ. ಹೀಗಾಗಿ ಬೆಳ್ಳಿತೆರೆಯಾಗಿರಬಹುದು. ಕಿರುತೆರೆಯಾಗಿರಬಹುದು ಸಿನಿಮಾ ಎಂಬ ಮನೋರಂಜನೆ ತನ್ನದೇ ಆದ ಪ್ರೇಕ್ಷಕರನ್ನು ಹೊಂದಿದೆ ಎಂದರೆ ತಪ್ಪಾಗಲಾರದು.

ಚಲನಚಿತ್ರ ಒಂದು ಶ್ರೀಮಂತ ಕಲೆ. ಕೋಟಿಗಟ್ಟಲೆ ಸುರಿದು ಅಪಾರ ವೆಚ್ಚದೊಂದಿಗೆ ತಯಾರಾಗುವ ಅದ್ದೂರಿ ಸಿನೆಮಾಗಳು ನಮ್ಮ ಮುಂದಿವೆ. ಹೊಸ ಹೊಸ ತಾಂತ್ರಿಕ ಆವಿಷ್ಕಾರಗಳೊಂದಿಗೆ ನೂತನ ಮಾದರಿಯಲ್ಲಿ ತಯಾರಿಸಲ್ಪಡುವ ಚಲನಚಿತ್ರ ಎಂಥವರನ್ನೂ ಬೆರಗುಗೊಳಿಸುವಂತಿದೆ. ಚಿತ್ರಮಂದಿರಗಳಲ್ಲಿ ಇಂದು ಸಿನಿಮಾ ಕಾಣಲು ಮೊದಲಿನಂತೆ ಮುಗಿ ಬೀಳುವ ಮಂದಿಯನ್ನು ಕಾಣಲಾರೆವು ನಿಜ. ಆದರೆ ಅಷ್ಟಕ್ಕೆ ಚಲನಚಿತ್ರ ಸೊರಗಿದೆ ಎಂದರೆ ತಪ್ಪಾಗುತ್ತದೆ. ಚಲನ ಚಿತ್ರರಂಗವನ್ನು ಬಾಧಿಸುವ ಅಂಶಗಳು ಹಲವಿರಲಿ. ಕಿರುತೆರೆಯ ಪ್ರಭಾವ ಏನೇ ಇರಲಿ ಆದರೆ ಸಿನಿಮಾ ಎಂಬ ದೃಶ್ಯಕಲೆಯ ಜಯಪ್ರಿಯತೆಗೆ ಧಕ್ಕೆ ಬಂದಿಲ್ಲ. ಇದಕ್ಕೆ ಕಾರಣ ಅದು ಕೇವಲ ಮನೋರಂಜನಾತ್ಮಕ ಕಲೆಯಾಗಿರದೆ ಜೀವನದ ನೇರ ಅಭಿವ್ಯಕ್ತಿಯಾಗಿರುವುದು.

ಊಹೆಗೆ ನಿಲುಕದ, ಕಲ್ಪನೆಗೆ ಮಾತ್ರವೇ ಸಾಧ್ಯವಾಗುವ ಅತ್ಯದ್ಭುತ ಸಾಹಸಗಳಿರಬಹುದು. ಹಕ್ಕಿಯಂತೆ ಬಾನಿನಲ್ಲಿ ಹಾರಾಡುವ, ಮೀನಿನಂತೆ ನೀರಿನಲ್ಲಿ ತೇಲಾಡುವ, ಗಂಧರ್ವರಂತೆ ಪ್ರೇಮಲೋಕದಲ್ಲಿ ವಿಹರಿಸುವ ಹೀಗೆ ಮಾನವನ ಯಾವುದೇ ಭಾವನೆಗಳಿರಲಿ ಅಥವಾ ಅತಿ ಮಾನುಷ ಕಲ್ಪನೆ ಕನಸುಗಳಿರಲಿ ಅದೆಲ್ಲವನ್ನು ಚಲನಚಿತ್ರ ಸಾಧ್ಯವಾಗಿಸಿದೆ. ಮನುಷ್ಯ ಏನನ್ನು ಬಯಸುತ್ತಾನೆಯೋ ಅದನ್ನು ಸಿನೆಮಾದ ಮೂಲಕ ಪಡೆದು ಒಂದು ವಿಧದ ಆನಂದವನ್ನು ಹೊಂದುತ್ತಾನೆ. ಈ ಕಾರಣದಿಂದಲೇ ಸಿನಿಮಾ ಅದ್ಭುತ ಕಲೆಯಾಗಿ ಇಂದಿಗೂ ನೆಲೆನಿಲ್ಲಲು ಸಾಧ್ಯವಾಗಿದೆ ಎಂದೆನ್ನಬಹುದು.

ಪ್ರಸ್ತುತ ಘಟಕದಲ್ಲಿ ಚಲನಚಿತ್ರರಂಗದ ಕಿರು ಮಾಹಿತಿಯೊಂದಿಗೆ ಸಿನೆಮಾ ನಿರ್ಮಾಣ ಕಲೆಯ ಕುರಿತಾದ ಪರಿಚಯಾತ್ಮಕ ಲೇಖನವನ್ನು ಆರಂಭದ ಪಾಠವಾಗಿ ನೀಡಲಾಗಿದೆ. ಸಿನೆಮಾರಂಗ ಬೆಳೆದು ಬಂದ ಬಗೆ, ನಾಟಕ ಮತ್ತು ಸಿನೆಮಾದೊಂದಿಗೆ ನಂಟು ಹಾಗೂ ಸಿನೆಮಾ ನಿರ್ಮಾಣಕ್ಕೆ ಅಗತ್ಯವಾದ ಮೂಲಭೂತ ವಿಚಾರಗಳ ಕುರಿತಾದ ವಿವರಣೆ ವಿದ್ಯಾರ್ಥಿಗಳಿಗೆ ಸಿನೆಮಾ ಕಲೆಯ ಕುರಿತಾದ ಮಾಹಿತಿಯನ್ನು ನೀಡಲು ನೆರವಾಗುತ್ತದೆ. ಸಿನೆಮಾ ರಂಗ ಒಂದು ಉದ್ಯಮ. ಅಲ್ಲಿ ವಿಪುಲವಾದ ಉದ್ಯೋಗ ಅವಕಾಶಗಳಿವೆ. ಅಭಿನಯ, ಚಿತ್ರಕಥೆ ಹಾಡು ಮೊದಲಾದ ಸಾಹಿತ್ಯಗಳ ರಚನೆ, ನಿರ್ದೇಶನ, ನೃತ್ಯ, ಛಾಯಾಗ್ರಹಣ, ಸಂಕಲನ, ವೇಷ ಭೂಷಣ ಹೀಗೆ ವೃತ್ತಿ ಸಂಬಂಧವಾದ ಹಲವು ಅವಕಾಶಗಳು ಇಲ್ಲಿವೆ. ಸಿನೆಮಾಕಲೆಯ ಮೇಲೆ ವಿಶೇಷ ಅಭಿರುಚಿಯನ್ನು ಮೂಡಿಸುವಲ್ಲಿ ಈ ಪಾಠ ನೆರವಾಗಬಲ್ಲದು. ಎರಡನೆಯ ಪಾಠವಾಗಿ ಬಂದಿರುವ 'ಆಗದು ಎಂದು' ಚಲನ ಚಿತ್ರ ಗೀತೆಯ ಸ್ವರೂಪವನ್ನು ಹೇಳಿಕೊಡುವುದಲ್ಲದೆ ಅಂತಹ ಗೀತೆಗಳನ್ನು ಹಾಡಿ ಆಸ್ವಾದಿಸುವ, ಸೃಜನಾತ್ಮಕ ಚಟುವಟಿಕೆಗಳಲ್ಲಿ ವಿದ್ಯಾರ್ಥಿಗಳನ್ನು ತೊಡಗಿಸಿಕೊಳ್ಳುವ ಉದ್ದೇಶದೊಂದಿಗೆ ಚಲನಚಿತ್ರ ಹಾಡನ್ನು ಪಠ್ಯವಾಗಿ ನೀಡಲಾಗಿದೆ. ಕವಿತೆ ಚಲನ ಚಿತ್ರಗೀತೆಗಳ ನಡುವಿನ ವ್ಯತ್ಯಾಸ, ಚಲನಚಿತ್ರಗೀತೆ ಮೂಡಿಬರುವ ಬಗೆ, ಸಿನೆಮಾದಲ್ಲಿ ಅವರ ಸ್ಥಾನಮಾನ ಇವುಗಳನ್ನು ಚರ್ಚಿಸುವಲ್ಲಿಯೂ ಆ ಕುರಿತಾದ ಹೆಚ್ಚಿನ ಜ್ಞಾನವನ್ನು ಪಡೆಯಲ್ಲಿಯೂ ಇದರಿಂದ ನೆರವಾಗಬಹುದು.

ಮೂರನೆಯ ಪಾಠದಲ್ಲಿ ಸಣ್ಣಕಥೆಯೊಂದು ಚಲನಚಿತ್ರವಾಗಿ ಮಾರ್ಪಾಡುವಾಗ ಹೇಗೆ ಅದು ಅಪ್ಯಾಯಮಾನ ವಾಗುವಂತಿರಬೇಕು ಎಂಬುದರ ಅರಿವನ್ನು ವಿದ್ಯಾರ್ಥಿಗಳಿಗೆ ಒದಗಿಸಲು ನೆರವಾಗುವಂತೆ ಅಳವಡಿಸಲಾಗಿದೆ. ಚಿತ್ರಕಥೆಯ ಸ್ವರೂಪ, ಕಥೆ, ಕಾದಂಬರಿ, ನಾಟಕ ಮೊದಲಾದ ಸಾಹಿತ್ಯ ಪ್ರಕಾರಗಳು ಸಿನೆಮವಾಗಿ ರೂಪುಗೊಳ್ಳುವಾಗ ಆಗುವ ರಚನಾತ್ಮಕ, ತಾಂತ್ರಿಕ ಬದಲಾವಣೆಗಳನ್ನು ತಿಳಿದುಕೊಳ್ಳುವುದು, ಚಿತ್ರಕಥೆ ರಚನೆಯ ಸ್ವರೂಪವನ್ನು ತಿಳಿದುಕೊಳ್ಳುವುದು, ಇವೇ ಮೊದಲಾದ ಪ್ರಕ್ರಿಯೆಗಳಲ್ಲಿ ವಿದ್ಯಾರ್ಥಿಗಳನ್ನು ತೊಡಗಿಸಿಕೊಳ್ಳುವುದರ ಜೊತೆಗೆ ಚಲನಚಿತ್ರ ಕಲೆಯನ್ನು ಪ್ರೋತ್ಸಾಹಿಸುವ ಮನೋಭಾವವನ್ನು ಅವರಲ್ಲಿ ಬೆಳೆಸುವಂತೆ ಈ ಪಾಠಭಾಗದಿಂದ ಸಾಧ್ಯವಾಗಬಹುದು.

# UNIT FRAME

**ಘಟಕ 4 : ಬೆಳ್ಳಿತೆರೆ** ಸಮಯ :

**ಕಲಿಕಾ ಸಾಧನೆಗಳು**

- ಕಲೆ, ಕ್ರೀಡೆ, ವಿಜ್ಞಾನ–ತಂತ್ರಜ್ಞಾನ ಮೊದಲಾದ ವಿಷಯಗಳಿಗೆ ಸಂಬಂಧಿಸಿದ ಸಾಹಿತ್ಯ ರಚನೆಗಳನ್ನು ಓದಿ ಅವುಗಳಲ್ಲಿ ತಮ್ಮ ಆಸಕ್ತಿಯನ್ನು ಬೆಳೆಸಿಕೊಳ್ಳುವರು.
- ಪೂರಕ ಗ್ರಂಥಗಳು, ಅಂತರ್ಜಾಲ ಮೊದಲಾದವುಗಳಿಂದ ಮಾಹಿತಿ ಸಂಗ್ರಹಿಸಿ ಸ್ವರಚನೆಗೆ ಬೇಕಾದ ಭಾಷಾ ನೈಪುಣ್ಯವನ್ನು ಆರ್ಜಿಸಿಕೊಳ್ಳುವರು.
- ದೃಶ್ಯಮಾಧ್ಯಮಗಳಲ್ಲಿ ಚಲನಚಿತ್ರವು ಜನಪ್ರಿಯವೂ ಶಕ್ತಿಯುತವೂ ಆದ ಸಂವಹನ ಮಾಧ್ಯಮ ಎಂಬುದನ್ನು ಕಂಡುಕೊಳ್ಳುವರು.
- ಚಲನಚಿತ್ರಕ್ಕೆ ಸಂಬಂಧಪಟ್ಟಂತೆ ಕಥೆ, ಚಿತ್ರಕಥೆ, ಸಂಭಾಷಣೆ ಇವೇ ಮೊದಲಾದವುಗಳಲ್ಲಿ ತಮ್ಮನ್ನು ತೊಡಗಿಸಿಕೊಳ್ಳುವ ಸಾಮರ್ಥ್ಯವನ್ನು ಪಡೆಯುವರು.
- ಮುದ್ರಣ ಮಾಧ್ಯಮ, ದೃಶ್ಯ ಮಾಧ್ಯಮ ಮೊದಲಾದವುಗಳ ಭಾಷೆ, ಶೈಲಿ ಇತ್ಯಾದಿಗಳನ್ನು ಕರಗತ ಮಾಡಿಕೊಂಡು ಭಾಷಾ ನೈಪುಣ್ಯವನ್ನು ಬೆಳೆಸಿಕೊಳ್ಳುವರು.

| ಪರಿಕಲ್ಪನೆ | ಪ್ರಕ್ರಿಯೆ / ಚಟುವಟಿಕೆ/ಮೌಲ್ಯಮಾಪನ | ಕಲಿಕಾ ಸಾಧನೆಗಳು |
|---|---|---|
| • ವಿಜ್ಞಾನ ತಂತ್ರಜ್ಞಾನದ ಪ್ರಧಾನ ಆವಿಷ್ಕಾರಗಳಲ್ಲಿ ಒಂದಾದ ಚಲಚ್ಚಿತ್ರವು ಶಕ್ತಿಯುತವೂ ಜನಪ್ರಿಯವೂ ಆದ ದೃಶ್ಯ ಕಲೆಯಾಗಿದೆ. | • ಚಲಚ್ಚಿತ್ರವನ್ನು ನೋಡಿದ ಅನುಭವ, ಚಲನಚಿತ್ರದ ವಿಶೇಷತೆಗಳ ಕುರಿತಾದ ಚರ್ಚೆ – ಸಂವಾದ.<br>• ಚಲನಚಿತ್ರವು ಒಂದು ಅನುಪಮ ಚಿತ್ರಕಲೆ. ನಾಟಕ ರಂಗಭೂಮಿಯನ್ನು ಮೀರಿ ಬೆಳೆದ ಸಿನೆಮಾದ ಇಂದಿನ ಸ್ಥಿತಿಗತಿಗಳ ಕುರಿತಾದ ವಿಚಾರಗಳು – ಇವೇ ಮೊದಲಾದವುಗಳನ್ನು ಸಾಂದರ್ಭಿಕವಾಗಿ ತಿಳಿಯಪಡಿಸುವುದು. ಸಿನೆಮಾದ ಹುಟ್ಟು ಬೆಳವಣಿಗೆಯ ಕುರಿತಾದ ಟಿಪ್ಪಣಿ ರಚನೆ, ತರಗತಿಯಲ್ಲಿ ಮಂಡನೆ ಆಂತರಿಕ ಮೌಲ್ಯಮಾಪನ.<br>• ಮೂಕಿ ಚಲನಚಿತ್ರಗಳ ಸ್ವರೂಪ, ಸಂವಹನ ರೀತಿ ಮೊದಲಾದವುಗಳನ್ನು ಚರ್ಚೆಯ ಮೂಲಕ ತಿಳಿದುಕೊಳ್ಳುವುದು. ಲೇಖನ ತಯಾರಿ.<br>• ಚಲನಚಿತ್ರವು ಒಂದು ಸಂಕೀರ್ಣವಾದ ಅಭಿವ್ಯಕ್ತಿ ಮಾಧ್ಯಮ ಎಂಬುದನ್ನು ಕಂಡುಕೊಳ್ಳುವುದು. ಅಭಿಪ್ರಾಯಗಳನ್ನು ಮಂಡಿಸುವುದು. | • ಚರ್ಚೆ, ಸಂವಾದಗಳಲ್ಲಿ ಸಕ್ರಿಯವಾಗಿ ಭಾಗವಹಿಸುವ ಸಾಮರ್ಥ್ಯ.<br>• ಸಿನೆಮಾದ ಹುಟ್ಟು ಬೆಳವಣಿಗೆಯ ಸಂಕ್ಷಿಪ್ತ ಮಾಹಿತಿಯನ್ನೊಳಗೊಂಡ ಟಿಪ್ಪಣಿ.<br>• ಮೂಕಿ ಚಿತ್ರಗಳ ವಿಶೇಷತೆಗಳನ್ನೊಳಗೊಂಡ ಟಿಪ್ಪಣಿ ಬರಹ. |

| ಪರಿಕಲ್ಪನೆ | ಪ್ರಕ್ರಿಯೆ / ಚಟುವಟಿಕೆ/ಮೌಲ್ಯಮಾಪನ | ಕಲಿಕಾ ಸಾಧನೆಗಳು |
|---|---|---|
| • ಕಲೆ, ಸಾಹಿತ್ಯ, ಸಂಗೀತ, ಅಭಿನಯ, ತಂತ್ರಜ್ಞಾನ ಇವೇ ಮೊದಲಾದ ಅಸಂಖ್ಯಾತ ಕಸುಬುಗಳ ದುಡಿಮೆ ಸಿನೆಮಾ ನಿರ್ಮಾಣಕ್ಕೆ ಅಗತ್ಯವಿದೆ. | • ಸಿನೆಮಾ ತೆಗೆಯುವ ಅಥವಾ ಸಿನೆಮಾ ನಿರ್ಮಾಣದ ವಿವಿಧ ಹಂತಗಳ ಬಗೆಗೆ ಮಾಹಿತಿಗಳನ್ನು ಪಡೆಯುವುದು. ಸಿನೆಮಾವೇ ಒಂದು ಭಾಷೆಯಾಗಿ ಹೇಗೆ ಸಂವಹನ ಮಾಧ್ಯಮವಾಗಿದೆ ಎಂಬುದನ್ನು ತಿಳಿಯುವುದು.<br>• ಸಿನೆಮಾ ನಿರ್ಮಾಣದಲ್ಲಿ ನಿರ್ದೇಶಕನ ಪಾತ್ರ. ಚಿತ್ರದ ಯಶಸ್ಸಿನಲ್ಲಿ ಅವನ ಶ್ರಮ ಇತ್ಯಾದಿಗಳ ಬಗ್ಗೆ ಚರ್ಚೆ. ಅಭಿಪ್ರಾಯ ಮಂಡನೆ. ಟಿಪ್ಪಣಿ ತಯಾರಿ.<br>• ಕಥೆ, ಕಾದಂಬರಿಗಳಿಗಿಂತ ಚಿತ್ರಕಥೆ ಹೇಗೆ ಭಿನ್ನ ಎಂಬುದನ್ನು ಅಧ್ಯಾಪಕರ ವಿವರಣೆಯ ಸಹಾಯದಿಂದ ತಿಳಿದುಕೊಳ್ಳುವುದು.<br>• ಕಥೆ, ಕಾದಂಬರಿಯನ್ನು ಚಿತ್ರಕಥೆಯನ್ನಾಗಿಸುವಾಗ ಆಗುವ ಬದಲಾವಣೆಯನ್ನು ಗುರುತಿಸುವುದು. ವ್ಯತ್ಯಾಸಗಳನ್ನು ತಿಳಿದುಕೊಳ್ಳುವುದು. ಸೂಕ್ತ ವ್ಯವಹಾರ ರೂಪಗಳಲ್ಲಿ ಅಭಿವ್ಯಕ್ತಿಗೊಳಿಸುವುದು. ಪರಸ್ಪರ ಮೌಲ್ಯಮಾಪನ.<br>• ಚಿತ್ರಕಥೆಯಲ್ಲಿ ಅಡಕವಾಗಿರಬೇಕಾದ ಪ್ರಧಾನ ವಿಚಾರಗಳನ್ನು ತಿಳಿದುಕೊಳ್ಳುವುದು. ಸಿನೆಮಾ ನಿರ್ಮಾಣದಲ್ಲಿ ಅದರ ಅಗತ್ಯವನ್ನು ಮನವರಿಕೆ ಮಾಡಿಕೊಡುವುದು.<br>• ಚಿತ್ರಕಥೆ ನಿರ್ದೇಶಕನಿಂದಲೇ ರಚಿತವಾದರೆ ಹೆಚ್ಚು ಪರ್ಯಾಪ್ತ ಎಂಬ ವಿಚಾರವನ್ನು ತಿಳಿದುಕೊಳ್ಳುವುದು – ಸಿನೆಮಾದ ಯಶಸ್ಸಿನಲ್ಲಿ ಚಿತ್ರಕಥೆಯ ಮಹತ್ವವೇನೆಂಬುದರ ಕುರಿತು ಚರ್ಚಿಸಿ ತೀರ್ಮಾನಕ್ಕೆ ಬರುವುದು.<br>• ಹಾಡುಗಳು ರಚಿತಗೊಳ್ಳುವ ರೀತಿ, ಸಾಹಿತ್ಯ ಸಂಭಾಷಣೆ ಚಲನಚಿತ್ರದಲ್ಲಿ ಮೂಡಿ ಬರುವ ರೀತಿ ಮೊದಲಾದವುಗಳನ್ನು ಪಾಠಭಾಗವನ್ನು ಓದುವುದರ ಮೂಲಕ ಅರ್ಥೈಸಿಕೊಳ್ಳುವರು, ಆಶಯಗ್ರಹಣ, ಪ್ರಕಟಣೆ.<br>• ಛಾಯಾಗ್ರಹಣದಿಂದ ಸಿನೆಮಾ ಯಶಸ್ಸನ್ನು ಪಡೆದ ರೀತಿ, ಚಲನಚಿತ್ರಗಳ ವಿಶ್ಲೇಷಣೆಯ ಮೂಲಕ ತಾವು ಕಂಡುಕೊಂಡ ನಿಗಮನ – ಇವುಗಳನ್ನು ಒಳಗೊಂಡ ಟಿಪ್ಪಣಿ ರಚನೆ – ಮಂಡನೆ – ಮೌಲ್ಯಮಾಪನ. | • ಚರ್ಚೆಯಲ್ಲಿ ಬಂದ ಅಭಿಪ್ರಾಯಗಳನ್ನು ಕ್ರೋಡೀಕರಿಸಿ ಬರೆದ ಟಿಪ್ಪಣಿ.<br><br>• ಚಿತ್ರಕಥೆಯ ಸ್ವರೂಪವನ್ನು ತಿಳಿಯಪಡಿಸುವ ಲಘು ಲೇಖನ.<br><br>• ಸಿನೆಮಾದಲ್ಲಿ ಹಾಡುಗಳ ಪ್ರಾಶಸ್ತ್ಯವನ್ನು ಅರಿತುಕೊಂಡು ಬರೆದ ಟಿಪ್ಪಣಿ. |

| ಪರಿಕಲ್ಪನೆ | ಪ್ರಕ್ರಿಯೆ / ಚಟುವಟಿಕೆ/ಮೌಲ್ಯಮಾಪನ | ಕಲಿಕಾ ಸಾಧನೆಗಳು |
|---|---|---|
| • ಒಂದು ಚಲನಚಿತ್ರದ ಯಶಸ್ಸಿನ ಹಿಂದೆ ಚಲನ ಚಿತ್ರಗೀತೆಗಳ ಪ್ರಭಾವವೂ ಇದೆ. | • ಚಲನಚಿತ್ರದ ಗೀತೆಗಳನ್ನು ಹಾಡುವುದು, ಚಲನಚಿತ್ರದಲ್ಲಿ ಅವುಗಳ ಮಹತ್ವವನ್ನು ತಿಳಿಯುವುದು. ಸೂಕ್ತ ವ್ಯವಹಾರ ರೂಪಗಳಲ್ಲಿ ಪ್ರಕಟಿಸುವುದು.<br>• ಹಾಡು ರಚನೆಗೊಳ್ಳುವ ಸಂದರ್ಭವನ್ನು ವಿವೇಚಿಸುವುದು, ಕವಿತೆಗಿಂತ ಹಾಡು ಹೇಗೆ ವಿಭಿನ್ನವಾಗಿ ನಿಲ್ಲುತ್ತದೆ ಎಂಬುದನ್ನು ಪಾಠಭಾಗದಲ್ಲಿ ಬಂದಿರುವ ಚಲನಚಿತ್ರ ಹಾಡನ್ನು ವಿಶ್ಲೇಷಿಸುವುದರ ಮೂಲಕ ಕಂಡುಕೊಳ್ಳುವುದು.<br>• ಹಾಡಿನಲ್ಲಿ ಪ್ರಯೋಗವಾಗಿರುವ ಗಾದೆಮಾತು, ನಾಣ್ಣುಡಿಗಳು ಹೇಗೆ ಆಶಯವನ್ನು ಸಮರ್ಥವಾಗಿ ಪ್ರತಿಬಿಂಬಿಸುತ್ತವೆ ಎಂಬುದನ್ನು ಕಂಡುಕೊಳ್ಳುವುದು – ಟಿಪ್ಪಣಿ ತಯಾರಿ, ತರಗತಿಯಲ್ಲಿ ಮಂಡನೆ. | • ತುಲನಾತ್ಮಕ ಟಿಪ್ಪಣಿ<br>• ಚಲನಚಿತ್ರ ಹಾಡುಗಳನ್ನು ವೈವಿಧ್ಯವನ್ನು ವಿಶ್ಲೇಷಿಸಿ ಬರೆದ ಟಿಪ್ಪಣಿ. |
| • ಚಿತ್ರಕಥೆ ನಿರ್ದೇಶನದಿಂದಲೇ ಮೂಡಿಬಂದರೆ ಹೆಚ್ಚು ಪರ್ಯಾಪ್ತವಾಗಿರುತ್ತದೆ. | • ಕಥೆ, ಕಾದಂಬರಿಗಳಿಗಿಂತ ಚಿತ್ರಕಥೆ ಹೇಗೆ ವಿಭಿನ್ನ ವಿದ್ಯಾರ್ಥಿಗಳು ತಮ್ಮ ಅನಿಸಿಕೆಗಳನ್ನು ಪೂರ್ವಜ್ಞಾನದ ಹಿನ್ನೆಲೆಯಲ್ಲಿ ವ್ಯಕ್ತಪಡಿಸುವುದು.<br>• ಚಿತ್ರಕಥೆಯ ಸ್ವರೂಪವನ್ನು ಅರ್ಥೈಸಿಕೊಳ್ಳುವುದು – ಬಿಗಿಯಾದ ಚಿತ್ರಕಥೆ ಸಿನೆಮಾದ ಯಶಸ್ಸಿಗೆ ಹೇಗೆ ಕಾರಣವಾಗುತ್ತದೆ ಎಂಬುದನ್ನು ತಿಳಿದುಕೊಳ್ಳುವುದು – ಅಭಿಪ್ರಾಯಗಳನ್ನು ಮಂಡಿಸುವುದು.<br>• 'ಬೂತಯ್ಯನ ಮಗ ಅಯ್ಯು' ಪಾಠಭಾಗದ ಓದು, ಅಲ್ಲಿ ಬಂದಿರುವ ವಿಚಾರಗಳನ್ನು ಗ್ರಹಿಸಿಕೊಳ್ಳುವುದು. ಸಣ್ಣ ಕಥೆಯೊಂದು ಚಲನಚಿತ್ರವಾದಾಗ ಆದ ಮಾರ್ಪಾಟುಗಳನ್ನು ತಿಳಿದುಕೊಳ್ಳುವುದು. | |

# ಬಣ್ಣದ ಲೋಕ

### ಮುನ್ನುಡಿ

ಜನಪ್ರಿಯ ದೃಶ್ಯಕಲೆಗಳಲ್ಲಿ ಚಲನ ಚಿತ್ರಚಿತ್ರವೂ ಒಂದಾಗಿದೆ. ಜಗತ್ತು ಕಂಡ ತಾಂತ್ರಿಕ ಆವಿಷ್ಕಾರಗಳಲ್ಲಿ ಅತ್ಯದ್ಭುತ ತಂತ್ರಜ್ಞಾನ ಅದಾಗಿದೆ. ಅದರ ಹುಟ್ಟು, ಬೆಳವಣಿಗೆ, ಕ್ಷಿಪ್ರಗತಿಯ ಜನಪ್ರಿಯತೆ ಎಲ್ಲವೂ ಕುತೂಹಲ ಕಾರೀ ಸಂಗತಿಗಳಾಗಿವೆ. ಪ್ರಸ್ತುಕ ಪಾಠ ಭಾಗದಲ್ಲಿ ಚಲನ ಚಿತ್ರ ಬೆಳೆದು ಬಂದ ರೀತಿ. ಭಾರತದಲ್ಲಿ ಚಲನಚಿತ್ರ, ಕನ್ನಡ ಚಿತ್ರರಂಗದ ಬೆಳವಣಿಗೆ ಮೊದಲಾದ ಮಾಹಿತಿಗಳೊಂದಿಗೆ ಚಲನಚಿತ್ರ ನಿರ್ಮಾಣ ಕಲೆಯ ಕುರಿತಾದ ವಿವರಣೆಯನ್ನು ಈ ಪಾಠ ಒಳಗೊಂಡಿದೆ. ಕತೆ, ಚಿತ್ರ ಕಥೆ, ಸಂಭಾಷಣೆ ಹಾಡು ಇವೇ ಮೊದಲಾದ ಚಲನ ಚಿತ್ರದ ಸಾಹಿತ್ಯದ ಅಂಶಗಳೊಂದಿಗೆ ಸಿನೆಮಾ ನಿರ್ದೇಶನ, ಛಾಯಾಗ್ರಹಣ, ಸಂಕಲನ ಮೊದಲಾದ ತಾಂತ್ರಿಕ ವಿಷಯಗಳ ವಿವರಣೆ ಇಲ್ಲಿದೆ.

### ಪ್ರವೇಶ ಚಟುವಟಿಕೆ

ಸಿನೇಮಾ ಥಿಯೇಟರುಗಳಲ್ಲಿ ಅಥವಾ ದೂರದರ್ಶನ ಮಾಧ್ಯಮದಲ್ಲಿ ಚಲನಚಿತ್ರಗಳನ್ನು ನೋಡಿ ಆಸ್ವಾದಿಸಿ ವಿದ್ಯಾರ್ಥಿಗಳೇ ಬಹಳವಾಗಿರುವುದರಿಂದ ಚಲನಚಿತ್ರದ ಕುರಿತಾದ ತಮ್ಮ ಅನಿಸಿಕೆಗಳನ್ನು ಹೇಳಲು ಅವರಿಗೆ ಅವಕಾಶ ನೀಡುವುದು. ಚಲನಚಿತ್ರವು ಮನೋರಂಜನೆಯ ಮಾಧ್ಯಮವಾಗಿ ರೂಪುಗೊಳ್ಳುವ ಮೊದಲು ಆ ಕಾಲದಲ್ಲಿ ಮನೋರಂಜನೆಯ ಮಾಧ್ಯಮಗಳು ಯಾವುದಾಗಿದ್ದವು? ಎಂಬುದನ್ನು ವಿದ್ಯಾರ್ಥಿಗಳು ಚಿಂತಿಸಿ ಹೇಳಲಿ. ಅಧ್ಯಾಪಕರು ಪೂರಕವಾದ ಪ್ರಶ್ನೆಗಳನ್ನು ಕೇಳುತ್ತಾ ಚಿಂತನೆಗೆ ದಾರಿಮಾಡಿಕೊಡುವುದು. ನಾಟಕ, ದೃಶ್ಯ, ಸಂಗೀತ ಇವೆಲ್ಲವೂ ಆ ಕಾಲದ ಮನೋರಂಜನೆಯ ಮಾಧ್ಯಮಗಳಾಗಿದ್ದವು ಎಂಬ ನಿಗಮನಕ್ಕೆ ಬರುವುದು. ದೃಶ್ಯಕಲೆಗಳಾದ ಬಳಿಕ ನಾಟಕ ಹಾಗೂ ಚಲನಚಿತ್ರ ಇವೆರಡು ನಡುವಿನ ಅಂತರವನ್ನು ವಿದ್ಯಾರ್ಥಿಗಳು ಹೇಳಲಿ. ಅಧ್ಯಾಪಕರು ಈ ಸಂದರ್ಭದಲ್ಲಿ ನಾಟಕ ರಂಗಭೂಮಿಯ ಹಿನ್ನೆಲೆಯೊಂದಿಗೆ ಚಲನ ಚಿತ್ರ (ಕನ್ನಡಕ್ಕೆ ಸಂಬಂಧಿಸಿದ್ದಂತೆ) ಬೆಳೆದು ಬಂದ ಬಗೆಯನ್ನು ಸಂಕ್ಷಿಪ್ತವಾಗಿ ಹೇಳುವುದು. ಬಳಿಕ ಪಾಠಭಾಗಕ್ಕೆ ಬರುವುದು.

### ಪಾಠಭಾಗದ ಓದು

ಸರಳ ಗದ್ಯದ ಪಾಠಭಾಗವಾದುದರಿಂದ ವಿದ್ಯಾರ್ಥಿಗಳಲ್ಲಿ ಬಾಯ್ದೆರೆ ಓದಿಗೆ ಇಲ್ಲಿ ಅವಕಾಶ ನೀಡುವುದು. ಸರಣಿ ಓದು ಕ್ರಮವನ್ನು ಇಲ್ಲಿ ಅಳವಡಿಸಿಕೊಳ್ಳಬಹುದು.

### ವಿಶದೀಕರಣ

ಚಲನಚಿತ್ರ ಸಂಬಂಧ ಪಟ್ಟಂತೆ ಕೆಲವೊಂದು ಮಾಹಿತಿಗಳನ್ನು ವಿಶದೀಕರಣದಲ್ಲಿ ನೀಡಲಾಗಿದೆ. ಅದನ್ನು ನೋಡಿಕೊಳ್ಳುವಂತೆ ವಿದ್ಯಾರ್ಥಿಗಳಿಗೆ ಸೂಚಿಸುವುದು. ಈ ಕೆಳಗಿನವುಗಳ ವಿಶದೀಕರಣವನ್ನು ವಿದ್ಯಾರ್ಥಿಗಳಿಗೆ ಹೇಳಿಕೊಡುವುದು. ಗದ್ಯಭಾಗದ ಅರ್ಥೈಸುವಿಕೆಗೆ ಸುಲಭವಾಗಬಹುದು.

**ಆಂಗಿಕ ಅಭಿನಯ :** ಮಾತುಗಳಿಲ್ಲದೆ ಕೇವಲ ಅಂಗಾಗಗಳ ಚಲನೆಯ ಮೂಲಕ ಭಾವಗಳನ್ನು ಅಭಿವ್ಯಕ್ತಗೊಳಿಸುವ ಅಭಿನಯ. (ಮೂಕಾಭಿನಯ)

**ವಾಚಿಕಾಭಿನಯ :** ಮಾತುಗಳಿಂದ ಭಾವಗಳನ್ನು ಪ್ರಕಟಿಸುವ ಅಭಿನಯ. ಆಲಾಪ, ಪ್ರಲಾಪ, ವಿಲಾಪ, ಅನುಲಾಪ. ಇವೇ ಮೊದಲಾದ ಮಾತಿನ ವಿಧಗಳಲ್ಲಿ ಧ್ವನಿಯ ಏರಿಳಿತ, ಮಾತಿನ ಗಾತ್ರ ಹೆಚ್ಚು ಕಡಿಮೆ ಮಾಡುವ ಮೂಲಕ ಸಾಗುವ ಅಭಿನಯ.

**ಸಾತ್ವಿಕಾಭಿನಯ :** ಮನದೊಳಗಿನ ಭಾವನೆಗಳನ್ನು ಪಾತ್ರ, ಸಮಯ, ಸಂದರ್ಭಕ್ಕೆ ತಕ್ಕಂತೆ ಅಭಿವ್ಯಕ್ತಿಗೊಳಿಸುವುದು ಸಾತ್ವಿಕಾಭಿನಯ.

**ಆಹಾರ್ಯಾಭಿನಯ :** ಪಾತ್ರಕ್ಕೆ ತಕ್ಕಂತೆ ವೇಷಭೂಷಣಗಳನ್ನು ಧರಿಸಿ ಆ ಮೂಲಕ ಭಾವಗಳನ್ನು ಪ್ರಕಟಿಸುವುದು. ನಿನ್ನ ಕುತ್ತಿಗೆ ಸೀಳುವೆ ಎಂದು ರಾಜನಾದವ ತನ್ನ ಸೊಂಟಕ್ಕೆ ಕಟ್ಟಿದ ಖಡ್ಗ ತೆಗೆಯುವುದು. ಶುಭಸಮಾಚರಣೆ ತಿಳಿಸಿದ್ದಕ್ಕೆ ಕೊರಳಿನ ಹಾರ ಕೊಡುವುದರ ಮೂಲಕ ಭಾವವನ್ನು ವ್ಯಕ್ತ ಪಡಿಸುವ ಇವೆಲ್ಲವೂ ಆಹಾರ್ಯಗಳಾಗಿವೆ.

## ಆಶಯಗ್ರಹಣ ಪ್ರಶ್ನೆಗಳು

ವಿದ್ಯಾರ್ಥಿಗಳು ಪಾಠಭಾಗವನ್ನು ಓದಿದ ಬಳಿಕ ಅಲ್ಲಿ ಬಂದಿರುವ ವಿಚಾರಗಳ ಕುರಿತು ಗುಂಪಿನಲ್ಲಿ ಚರ್ಚಿಸಲಿ. ವಿದ್ಯಾರ್ಥಿಗಳ ಸಂಖ್ಯೆಗೆ ಅನುಸಾರವಾಗಿ ನಾಲ್ಕೋ ಐದೋ ಗುಂಪುಗಳನ್ನಾಗಿಸಿ ಈ ಕೆಳಗಿನ ವಿಷಯಗಳನ್ನು ನೀಡಿ ಚರ್ಚೆಗೆ ಬಿಡುವುದು.

- ಚಲನ ಚಿತ್ರಗಳ ಹುಟ್ಟು ಬೆಳವಣಿಗೆ
- ಕನ್ನಡ ಚಿತ್ರ ರಂಗ
- ಚಲನ ಚಿತ್ರ ನಿರ್ದೇಶನ, ನಿರ್ದೇಶಕ
- ಚಿತ್ರ ಕಥೆ
- ಸಂಭಾಷಣೆ, ಹಾಡುಗಳು
- ಅಭಿನಯ

ಹೀಗೆ ಗುಂಪುಗಳಿಗೆ ನೀಡಿದ ವಿಷಯಗಳ ಮೇಲೆ ಚರ್ಚೆ ನಡೆಯಲಿ. ಚರ್ಚೆಯಲ್ಲಿ ಬಂದಿರುವ ಅಭಿಪ್ರಾಯಗಳನ್ನು ಕ್ರೋಡೀಕರಿಸಿ ಪ್ರತಿಯೊಂದು ಗುಂಪಿನಲ್ಲಿ ಒಬ್ಬ ವಿದ್ಯಾರ್ಥಿ ಓರಣವಾಗಿ ಬರೆದಿಡಲಿ. ಚರ್ಚೆಯ ಬಳಿಕ ಗುಂಪುಗಳು ಸಿದ್ಧ ಪಡಿಸಿದ ಟಿಪ್ಪಣಿಯನ್ನು ಪಾಠಭಾಗದಲ್ಲಿ ಬಂದಿರುವ ವಿಷಯಗಳಿಗೆ ಅನುಕ್ರಮವಾಗಿ ತರಗತಿಯಲ್ಲಿ ಮಂಡಿಸಲಿ.

ಆಗ ವಿದ್ಯಾರ್ಥಿಗಳಿಗೆ ಪಾಠಭಾಗದಲ್ಲಿ ಬಂದಿರುವ ಸಮಗ್ರ ವಿವರಗಳನ್ನು ಏಕಕಾಲದಲ್ಲಿ ಪಡೆದಂತಾಗುತ್ತದೆ. ಅಧ್ಯಪಕರ ಸೂಕ್ತ ಸಲಹೆಗಳು ಇಲ್ಲಿ ಮುಖ್ಯ.

ಪಾಠಭಾಗದ ವಿವರಗಳನ್ನು ತಿಳಿದ ಬಳಿಕ ಈಗ ಪ್ರತಿಯೊಬ್ಬರೂ ಆಶಯ ಗ್ರಹಣಕ್ಕಾಗಿ ಕೊಟ್ಟಿರುವ ಪ್ರಶ್ನೆಗಳಿಗೆ ತಮ್ಮ ಲಾಗ್‌ಬುಕ್ಕಿನಲ್ಲಿ ಉತ್ತರಿಸಲಿ. ಬರೆದ ಉತ್ತರವನ್ನು ತರಗತಿಯಲ್ಲಿ ಮಂಡಿಸುವುದು. ಸೂಕ್ತ ತಿದ್ದುಪಡಿಗಳೊಂದಿಗೆ ಪರಿಷ್ಕರಿಸಿ ಬರೆಯುವುದು.

## ಚಟುವಟಿಕೆಗಳು

### ವಿಶೇಷ ಬರಹ ಸಿದ್ಧಪಡಿಸುವುದು

ಪಾಠಭಾಗದಲ್ಲಿ ಬಂದಿರುವ ಮೂಕಿ ಚಿತ್ರಗಳ ಕುರಿತಾಗಿ ಅಧ್ಯಾಪಕರು ಸಾಂದರ್ಭಿಕವಾಗಿ ನೀಡಿದ ವಿವರಣೆಯನ್ನು ಗ್ರಹಿಸಿಕೊಂಡು ವಿದ್ಯಾರ್ಥಿಗಳು ಮೂಕಿ ಚಿತ್ರಗಳ ಕುರಿತು ವಿಶೇಷ ಬರಹವೊಂದನ್ನು ಸಿದ್ಧಪಡಿಸಲಿ. ಅಂತರ್ಜಾಲ ತಾಣಗಳಿಂದ,

ಗ್ರಂಥಾಲಯದ ಸಹಾಯದಿಂದ ಇನ್ನಷ್ಟು ಆ ಕುರಿತಾದ ಮಾಹಿತಿಗಳನ್ನು ಸಂಗ್ರಹಿಸಲಿ. ಲಭ್ಯ ಮಾಹಿತಿಗಳನ್ನು ಆಧರಿಸಿ ಬರೆದ ವಿಶೇಷ ಬರಹವನ್ನು ತರಗತಿಯಲ್ಲಿ ಮಂಡಿಸಲಿ. ಅಗತ್ಯವಾದ ತಿದ್ದುಪಡಿಗಳೊಂದಿಗೆ ಪರಿಷ್ಕರಿಸಿ ಬರೆದು ತಮ್ಮ ತಮ್ಮ ಚಟುವಟಿಕಾ ಪುಸ್ತಕದಲ್ಲಿ ದಾಖಲಿಸಲಿ.

**ವಿಶೇಷ ಬರಹದ ಒಂದು ಮಾದರಿಯನ್ನು ಕೆಳಗೆ ಕೊಡಲಾಗಿದೆ.**

ಚಲನಚಿತ್ರದ ಉದಯ ಕಾಲದ ಮೂಡಿಬಂದ ಎಲ್ಲಾ ಚಿತ್ರಗಳು ಮೂಕಿ ಚಿತ್ರಗಳಾಗಿದ್ದವು. ಲೂಮಿಯೇರ್ ಸೋದರರು ನಿರ್ಮಿಸಿದ ಪ್ರಪಂಚದ ಮೊದಲ ಚಲನ ಚಿತ್ರವೆಂದು ಖ್ಯಾತಿಯನ್ನು ಪಡೆದ 'ಎ ಟ್ರೇನ್ ಎಂಟರಿಂಗ್ ದ ಸ್ಟೇಷನ್' ಎಂಬ ಚಿತ್ರದಿಂದ ಹಿಡಿದು ಸುಮಾರು ಮೂರು ದಶಕಗಳ ವರೆಗೆ ಪ್ರಪಂಚದಾದ್ಯಂತ ತೆರೆಕಂಡ ಚಿತ್ರಗಳು ಮಾತಿಲ್ಲದ ಚಿತ್ರಗಳಾಗಿದ್ದವು. ಬರ್ತ್ ಆಫ್ ನೇಶನ್, ಇನ್‌ಪಿಲರೆನ್ಸ್, ಎಮಿಗ್ರಂಟ್ ಮುಂತಾದ ಆರಂಭಕಾಲದ ಚಲನಚಿತ್ರಗಳು ಮೂಕತನದಿಂದಲೇ ಜನಪ್ರಿಯಗೊಂಡಿದ್ದವು. ಚಾರ್ಲಿ ಚಾಪ್ಲಿನ್‌ನ ಮೂಕಿ ಚಿತ್ರಗಳಂತೂ ಚಲನಚಿತ್ರರಂಗದಲ್ಲಿ ದಾಖಲೆಯನ್ನೇ ನಿರ್ಮಿಸಿದ್ದವು. ಕೇವಲ ಆಂಗಿಕ ಅಭಿನಯದಿಂದಲೇ ಭಾವಗಳನ್ನು ಪ್ರಕಟಿಸಬಲ್ಲ ಚಾರ್ಲಿ ಚಾಪ್ಲಿನ್‌ನಂತಹ ಹಿರಿಯ ಕಲಾವಿದರು ಹಾಕಿಕೊಟ್ಟ ವೇದಿಕೆಯಲ್ಲಿ ಸಾಗಿ ಬಂದ ಚಲನ ಚಿತ್ರಗಳು ಅಪಾರವಾದ ಜನಾಕರ್ಷಣೆಯನ್ನು ಪಡೆದಿದ್ದವು.

ಭಾರತದಲ್ಲಿ, ದಾದಾ ಸಾಹೇಬ್ ಫಾಲ್ಕೆ ನಿರ್ಮಿಸಿ ಹೊರತಂದ 'ರಾಜಾ ಹರಿಶ್ಚಂದ್ರ' ಮೊತ್ತಮೊದಲ ಚಲನ ಚಿತ್ರವೆಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ಮಾತಿಲ್ಲದ ಚಿತ್ರ ಇದಾಗಿತ್ತು. ಫಾಲ್ಕೆಯವರು ನಿರ್ಮಿಸಿದ ಚಿತ್ರಗಳಲ್ಲಿ 90ಕ್ಕಿಂತಲೂ ಅಧಿಕ ಮೂಕಿ ಚಿತ್ರಗಳಾಗಿದ್ದವು ಎಂದು ಹೇಳಲಾಗುತ್ತಿದೆ. ಕಂಸವಧೆ, ಸತಿಸುಲೋಚನಾ, ಕಾಳಿಮರ್ಧನ್ ಮೊದಲಾದವು ಭಾರತೀಯ ಚಲನಚಿತ್ರರಂಗದ ಆರಂಭಕಾಲದ ಮೂಕೀ ಚಿತ್ರಗಳಾಗಿದ್ದವು. 'ರಾಜಾಹರಿಶ್ಚಂದ್ರ' ತೆರೆಕಂಡು ಮುಂದಿನ ಏಳೆಂಟು ವರ್ಷಗಳ ವರೆಗೆ ಮೂಡಿಬಂದ ಚಲನಚಿತ್ರಗಳೆಲ್ಲ ಮೂಕಿ ಚಿತ್ರಗಳಾಗಿದ್ದವು.

ಕನ್ನಡ ಚಿತ್ರರಂಗದಲ್ಲಿ 1924ರಿಂದಲೇ ಮೂಕಿ ಚಿತ್ರಗಳು ತೆರೆಗೆ ಬಂದಿದ್ದವು. ಗುಬ್ಬಿವೀರಣ್ಣನವರ ಭಕ್ತ ಕುಂಭಾರ, ದೇವಡು ನರಸಿಂಹಶಾಸ್ತ್ರಿ ಹಾಗೂ ಶ್ರೀನಿವಾಸ ಮೂರ್ತಿ ಜಂಟಿಯಾಗಿ ನಿರ್ಮಿಸಿದ 'ಕಳ್ಳರ ಕೂಟ', ಹರಿಮಾಯಾ, ವಾಣಿ ಮೊದಲಾದವುಗಳು ಕನ್ನಡದ ಮೂಕಿ ಚಿತ್ರಗಳಾಗಿದ್ದವು. ಕನ್ನಡ ಚಿತ್ರ ರಂಗ ಮೂಕಿಯಾಗಿದ್ದ ಹತ್ತು ವರ್ಷಗಳ ಅವಧಿಯಲ್ಲಿಯೇ ಐವತ್ತು ಚಿತ್ರಗಳು ತಯಾರಾಗಿದ್ದವು ಎಂಬುದು ವಿಶೇಷ. ರಂಗಭೂಮಿಯ ಖ್ಯಾತನಾಮರಾದ ಗುಬ್ಬಿವೀರಣ್ಣ, ಬೆಳ್ಳಾವೆ ನರಹರಿ ಶಾಸ್ತ್ರಿ, ಆರ್. ನಾಗೇಂದ್ರರಾವ್, ಹೊನ್ನಪ್ಪ ಭಾಗವತರ್ ಮೊದಲಾದವರು ಮೂಕಿ ಚಿತ್ರಗಳ ನಿರ್ಮಾಣ ಮೂಲಕ ಕನ್ನಡ ಚಲನ ಚಿತ್ರರಂಗ ಬೆಳೆಯಲು ಕಾರಣಕರ್ತರಾದರು. ಮೈಸೂರು ಮಹಾರಾಜ, ನಾಲ್ವಡಿ ಕೃಷ್ಣರಾಜ ಒಡೆಯರ್ ಕಾಲದಲ್ಲಿಯೇ ಮೃಚ್ಛಕಟಿಕ ಎಂಬ ಮೂಕಿ ಚಿತ್ರ ತಯಾರಾಗಿದೆ ಎಂದು ಹೇಳಲಾಗುತ್ತಿದೆ. ಆದರೆ ಪ್ರದರ್ಶನಗೊಂಡದ್ದರ ಬಗ್ಗೆ ಮಾಹಿತಿ ಇಲ್ಲ. ಡಾ.ಶಿವರಾಮ ಕಾರಂತರು ಕೂಡ ಎರಡು ಮೂಕಿ ಚಿತ್ರಗಳನ್ನು ತಯಾರಿಸಿದ್ದರು ಎಂದು ತಿಳಿದುಬರುತ್ತದೆ.

ಮೂಕಿ ಚಿತ್ರಗಳ ಆರಂಭದಿಂದಲೇ ರಂಗಭೂಮಿಯ ನಟನೆ, ರಂಗನಾಟಕಗಳ ಶೈಲಿ ಕನ್ನಡ ಚಿತ್ರಗಳಲ್ಲಿತ್ತು. ಅದರಲ್ಲೂ ನಾಟಕದವರೇ ಅಭಿನಯಗಾರರಾಗಿದ್ದರಿಂದ ನಟನೆಯಿಂದ ಹಿಡಿದು ಇಲ್ಲಿನ ನಿರೂಪಣಾ ಶೈಲಿ, ಹಿನ್ನೆಲೆ ತಂತ್ರಜ್ಞಾನ ಎಲ್ಲದರಲ್ಲೂ ರಂಗಭೂಮಿಯ ಪ್ರಭಾವ ದಟ್ಟವಾಗಿತ್ತು.

**ಚರ್ಚಾಕೂಟ ಏರ್ಪಡಿಸುವುದು**

ಒಂದು ಚಲನಚಿತ್ರದ ಯಶಸ್ಸಿನಲ್ಲಿ ಚಿತ್ರಕಥೆ, ಹಾಗೂ ಸಂಭಾಷಣೆ ಇವುಗಳ ಪಾತ್ರವೇನೆಂಬುದರ ಕುರಿತು ಚರ್ಚಾ ಗೋಷ್ಠಿ ಏರ್ಪಡಿಸುವುದು. ವಿದ್ಯಾರ್ಥಿಗಳನ್ನು ನಾಲ್ಕು ಗುಂಪುಗಳನ್ನಾಗಿಸಿ ಪ್ರತಿ ಎರಡು ಗುಂಪುಗಳಿಗೆ ಒಂದರಂತೆ ಚರ್ಚೆಗೆ ವಿಷಯವನ್ನು ನೀಡುವುದು. ಆರಂಭದ ಎರಡು ಗುಂಪು ಚಲನ ಚಿತ್ರದಲ್ಲಿ ಚಿತ್ರಕಥೆಯ ಮಹತ್ವದ ಕುರಿತು ಚರ್ಚಿಸಿದರೆ ಎರಡನೆಯ ಗುಂಪು ಸಿನೆಮಾದಲ್ಲಿ ಸಂಭಾಷಣೆಯ ಮಹತ್ವದ ಕುರಿತು ಚರ್ಚಿಸಲಿ. ಗುಂಪಿನಲ್ಲಿ ಮಂಡಿತವಾದ ವಿಚಾರಗಳನ್ನು ಕ್ರೋಡೀಕರಿಸಿ ಸಂಬಂಧಿತ ವಿಷಯದ ಮೇಲೆ ಟಿಪ್ಪಣಿಯೊಂದನ್ನು ಬರೆಯುವುದು.

ಬರೆದುದರಲ್ಲಿ ಒಂದರಂತೆ ಗುಂಪಿನಲ್ಲಿ ಮಂಡಿಸಿ ಪರಿಷ್ಕರಿಸುವುದು. ಬಳಿಕ ಗುಂಪಿಗೆ ಒಂದರಂತೆ ತರಗತಿಯಲ್ಲಿ ಮಂಡಿಸುವುದು ಅಧ್ಯಾಪಕರು ಸೂಕ್ತ ಸಲಹೆಗಳನ್ನು ನೀಡಿ ಬರಹಗಳನ್ನು ತಿದ್ದಿ ಪರಿಷ್ಕರಿಸುವುದು. ಪ್ರತಿಯೊಬ್ಬರು ವೈಯುಕ್ತಿಕವಾಗಿ ಟಿಪ್ಪಣಿ ಬರೆದು ಚಟುವಟಿಕಾ ಪುಸ್ತಕದಲ್ಲಿ ಸೇರಿಸುವುದು.

(ಚರ್ಚಾಗೋಷ್ಠಿಯ ದಿನವನ್ನು ಮೊದಲೇ ನಿರ್ಧರಿಸುವುದು. ಚರ್ಚಾಗೋಷ್ಠಿಯಲ್ಲಿ ಆದ ಕಲಾಪಗಳ ಕುರಿತು ವರದಿಯನ್ನು ಸಿದ್ಧ ಪಡಿಸುವಂತೆ ಆಯ್ದ ವಿದ್ಯಾರ್ಥಿಗಳಲ್ಲಿ ಮೊದಲೇ ಸೂಚಿಸುವುದು.)

## ಚಿತ್ರಕತೆ

ಪ್ರೇಕ್ಷಕನಿಗೆ ಗೊಂದಲ ಮೂಡಿಸದಂತೆ, ಕತೆ ಹಾದಿ ತಪ್ಪದಂತೆ, ಚಿತ್ರವನ್ನು ತನ್ನ ಹತೋಟಿಯಲ್ಲಿಟ್ಟುಕೊಳ್ಳಲು ನಿರ್ದೇಶಕನಿಗೆ ಸಹಾಯಕಾರಿಯಾಗುವ ಈ ಚಿತ್ರಕತೆಯಲ್ಲಿ ಕತೆಗೆ ಪೂರಕವಾಗಿ ಯಾವ ದೃಶ್ಯದ ನಂತರ ಯಾವ ದೃಶ್ಯ ಬರಬೇಕು; ಹಿಂದಿನ ದೃಶ್ಯಕ್ಕೂ, ಮುಂದಿನ ದೃಶ್ಯಕ್ಕೂ ಸಂಬಂಧ ಸರಿಯಾಗಿದೆಯೇ ಎಂಬುದು ಅರ್ಥವಾಗಿ ಬಿಡುತ್ತದೆ. ಅಷ್ಟೇ ಅಲ್ಲ ಸಂಬಂಧಿತ ದೃಶ್ಯವನ್ನು ಎಲ್ಲಿ ಚಿತ್ರೀಕರಿಸಬೇಕು ಯಾವ ಯಾವ ನಟರು ಇರಬೇಕು ಎಂಬುದನ್ನು ಇಲ್ಲೇ ತಿಳಿಯಲು ನೆರವಾಗುವುದರಿಂದ ಚಿತ್ರಕತೆ 'ಗೈಡ್ ನಂತೆ ನಿರ್ದೇಶನಿಗೆ ನೆರವಾಗುತ್ತದೆ.

ಕತೆಯ ಓಟಕ್ಕೆ ಧಕ್ಕೆ ಬಾರದಂತೆ ಚಿತ್ರಕಥೆ ಸಿದ್ಧವಾದರೆ, ಚಿತ್ರೀಕರಣ ಸರಾಗವಾಗಿ ಸಾಗಬಹುದಲ್ಲದೆ ಥಿಯೇಟರ್‌ನಲ್ಲಿ ಕೂತ ಪ್ರೇಕ್ಷಕನಿಗೂ ಸಿನಿಮಾ ಸುಲಭವಾಗಿ ಅರ್ಥವಾಗುತ್ತದೆ. ನಾಯಕ, ನಾಯಕಿ ಹಾಡೇಳಿ ಕುಣಿಯುವಾಗಲೇ ಯಾವುದೋ ದುಃಖದ ಸಂಗತಿ, ದುಃಖದ ದೃಶ್ಯದ ನಂತರವೇ ಹಾಸ್ಯದ ದೃಶ್ಯ, ನಂತರ ಹೊಡೆದಾಟದ ದೃಶ್ಯ ಹೀಗೆ, ಒಂದಕ್ಕೊಂದು ಸಂಬಂಧವಿಲ್ಲದ ದೃಶ್ಯಗಳು ಬಂದರೆ ಪ್ರೇಕ್ಷಕ ಆ ಚಿತ್ರದ ಬಗ್ಗೆ ಗೊಂದಲಗಳಲ್ಲೇ ಬೀಳುವುದು ಸಹಜ. ಇಂತಹ ಗೊಂದಲಗಳು ಉಂಟಾಗದೆ, ಚಿತ್ರದ ಓಟಕ್ಕೆ ಚ್ಯುತಿಬಾರದೆ ಅನಾವಶ್ಯಕ ದೃಶ್ಯಗಳಿಲ್ಲದಂತೆ ಸಾಗಲು ಚಿತ್ರಕತೆಯೇ ಸಿನಿಮಾಕ್ಕೆ ಆಧಾರ.

ನಾನಾ ರೀತಿಯ ಹೂವನ್ನಾಗಲೀ, ಮಣಿಯನ್ನಾಗಲಿ ಇದಾದ ನಂತರ ಇದು ಇಷ್ಟಿಷ್ಟು ಎಂದು ಪೋಣಿಸಿದಾಗಲೇ ಕೊನೆಗೆ ಸೊಗಸಾದ ಹೂವಿನ ಹಾರವಾಗಲಿ, ಮಣಿಸರವಾಗಲಿ ಸಿದ್ಧಗೊಳ್ಳಲು ಸಾಧ್ಯ. ಹೀಗೆಯೇ ದೃಶ್ಯ, ದೃಶ್ಯಗಳನ್ನು ವಿಭಜಿಸಿ ಜೋಡಿಸಿ ಚಿತ್ರಕತೆಯ ರೂಪದಲ್ಲಿ, ಕತೆ ಮಾಡುವುದೇ ಚಿತ್ರ ನಾಟಕ, ಇದನ್ನು ನಿರ್ದೇಶಕ ಮನನ ಮಾಡಿಕೊಂಡು, ಸನ್ನಿವೇಶಕ್ಕೆ ಅನುಸಾರವಾಗಿ ಚಿತ್ರೀಕರಿಸುತ್ತಾ ಇಡೀ ಸಿನಿಮಾವನ್ನು ತನ್ನ ನಿಯಂತ್ರಣದಲ್ಲಿರಿಸಿಕೊಳ್ಳಬಲ್ಲ. ಪ್ರತಿ ಪಾತ್ರದ ಪರಿಚಯ, ಬೆಳವಣಿಗೆ, ಮುಕ್ತಾಯ, ಆ ಪಾತ್ರಗಳ ಅಂಗ ವಿನ್ಯಾಸ, ಕಲಾವಿನ್ಯಾಸ, ಮ್ಯಾನರಿಸಂ, ದೃಶ್ಯದ ಆರಂಭ, ಮುಕ್ತಾಯ ಹೇಗೆ, ಎಲ್ಲವೂ ಚಿತ್ರನಾಟಕದಲ್ಲೇ ಸೂಚಕವಾಗುವುದರಿಂದ ಚಿತ್ರೀಕರಣ ಸುಲಭವಾಗುತ್ತದೆ.

ಚಲನಚಿತ್ರ ಸ್ಥಳ, ರಾತ್ರಿಯೇ, ಹಗಲೇ, ಒಳಾಂಗಣವೇ, ಹೊರಾಂಗಣವೇ ಯಾವ ಶಾಟ್‌ನಲ್ಲಿ ಚಿತ್ರೀಕರಿಸಿಕೊಳ್ಳಬೇಕು ಎಂಬುದೆಲ್ಲ 'ಸ್ಕ್ರೀನ್‌ಪ್ಲೇ'ಯಲ್ಲಿ ಅಡಕವಾಗುವುದರಿಂದ ನಿರ್ದೇಶಕನಿಗೆ ಇದೇ ಬಹುಮುಖ್ಯ ಜತೆಗಾರ.

ಚಲನಚಿತ್ರ ಹುಟ್ಟುವುದೇ ಎರಡು ಟೇಬಲ್‌ಗಳ ಮೇಲೆ. ಅಂದರೆ ಚಿತ್ರನಾಟಕ ಬರೆಯಲು ಕುಳಿತಾಗಲೇ ನಿರ್ದೇಶಕನ ಕನಸಿನ ಸಿನಿಮಾ ಹುಟ್ಟು ಪಡೆಯುತ್ತ ಸಾಗುತ್ತದೆ. ಯಾವುದೇ ಅಭಾಸ, ಗೊಂದಲ, ಅನವಶ್ಯಕವಿಲ್ಲದೆ, ಚಿತ್ರದ ಚೌಕಟ್ಟು ಹಾಗೂ ಕಥಾ ಹಂದರಕ್ಕೆ ಅನುಸಾರವಾಗಿ ಚಿತ್ರಕತೆ ಸಿದ್ಧವಾದರೆ ಆ ಚಿತ್ರದ ಹಣೆಬರಹ ಊಹಿಸಿ ಬಿಡಬಹುದು. ಹೀಗಾಗಿ ಚಿತ್ರ ಹುಟ್ಟುವ ಕಲ್ಪನೆಯ ಮೊದಲ ಟೇಬಲ್ ಇದಾದರೆ, ಸಂಕಲನಕಾರನ ಟೇಬಲ್ ಸಾಕಾರಗೊಂಡ ಕನಸಿನ ರೂಪಕ್ಕೆ ಜೀವ ತುಂಬುತ್ತದೆ. ಇದರಿಂದಾಗಿ ಚಿತ್ರಕಥೆ ಹಾಗೂ ಸಂಕಲನ ಟೇಬಲ್‌ಗಳು ಸಿನಮಾಕ್ಕೆ ಜೀವ ತುಂಬುವ ಪ್ರಬಾವೀ ಅಂಗಗಳಾಗಿವೆ.

ಸಂಕಲನ ಮಾಡುವಾಗ ಚಿತ್ರದ ರೂಪ ಕಣ್ಣೆದುರು ಇದ್ದು ಅದಕ್ಕೆ ಅಂದ ನೀಡಿದರೆ, ಚಿತ್ರಕತೆಯಲ್ಲಿ ಕಣ್ಣೆದುರು ಯಾವುದೇ ರೂಪ ಇರುವುದಿಲ್ಲ. ಬದಲಿಗೆ ಮನದೊಳಗೇ ಕಲ್ಪನೆಯನ್ನಿರಿಸಿಕೊಂಡು ಪಾತ್ರದ ಆಳ, ಹರವುಗಳನ್ನು ಅರ್ಥೈಸಿಕೊಂಡೇ ಚಿತ್ರ ನಾಟಕ ರೂಪಿಸಬೇಕು.

ಯಾವ ಸ್ಥಳದಲ್ಲಿ ಏನು ತೆಗೆಯಬೇಕು, ಕಲಾವಿದರು ಯಾರು, ಕೈಯಲ್ಲಿ ಏನಿರುತ್ತದೆ. ಯಾರು ಏನು ಮಾತನಾಡುತ್ತಾರೆ ಎಂಬುದರೆಲ್ಲದರ ವಿವರ, ಚಿತ್ರಕತೆಯಲ್ಲೇ ಸಿಕ್ಕಿ ಬಿಡುವುದರಿಂದ ಚಿತ್ರೀಕರಣ ಸುಲಭವಾಗುತ್ತದೆ. ಸಿನಿಮಾದಲ್ಲಿ ಬರುವ ಎಲ್ಲ ಅಂಶಗಳನ್ನು ಕಥೆಯ ಓಟಕ್ಕೆ ತಕ್ಕಂತೆ ಜತೆಗೆ ಚಿತ್ರೀಕರಣ ಸುಲಭವಾಗುವಂತೆ ರೂಪಿತವಾಗುವ ಚಿತ್ರಕಥೆ–ಪ್ರೇಕ್ಷಕ, ನಿರ್ದೇಶಕ,ನಿರ್ಮಾಪಕ, ಕಲಾವಿದ ಎಲ್ಲರಿಗೂ ನೆರವಾಗುತ್ತದೆ. ಇದರಿಂದಾಗಿ ಸಿನಿಮಾ ಗೆಲುವಿಗೆ ಮೊದಲನೇ ಮೆಟ್ಟಿಲಾಗುವ ಚಿತ್ರಕಥೆ, ಅಚ್ಚುಕಟ್ಟಾಗಿರಬೇಕು.

## ಟಿಪ್ಪಣಿ ಬರಹ

ಚಲನ ಚಿತ್ರದ ಗುಣಾತ್ಮಕ ಅಂಶಗಳಲ್ಲಿ ಸುಂದರ ಛಾಯಾಗ್ರಹಣವೂ ಒಂದು. ಛಾಯಾಗ್ರಾಹಕನ ಅದ್ಭುತ ಕೈಚಳಕದಿಂದ ಸೆರೆಹಿಡಿದ ದೃಶ್ಯಗಳು ಚಿತ್ರಕ್ಕೆ ವಿಶೇಷ ಮೆರುಗನ್ನು ನೀಡುವುದಲ್ಲದೆ ಅದರ ಯಶಸ್ಸಿಗೂ ಕಾರಣವಾಗಿಸುತ್ತದೆ. ಇತ್ತೀಚೆಗಿನ ದಿನಗಳಲ್ಲಿ ಸಿನೇಮಾದಲ್ಲಿ ಛಾಯಾಗ್ರಹಣ ಚಿತ್ರತಂತ್ರಗಳು ಪೈಪೋಟಿಯಲ್ಲಿ ಸಾಗುತ್ತಿವೆ. ಸುಂದರ ಛಾಯಾಗ್ರಹಣದಿಂದ ಮನಸೆಳೆದ ಚಿತ್ರಗಳನ್ನು ವಿದ್ಯಾರ್ಥಿಗಳು ಈಗ ಹೆಸರಿಸಲಿ.  ಆ ಚಿತ್ರಗಳಲ್ಲಿ ಛಾಯಾಗ್ರಾಹಕನು ಮೆರೆದ ಜಾಣ್ಮೆಯ ಕುರಿತೂ ಹೇಳಲಿ. ಯಾವ್ಯಾವ ದೃಶ್ಯಗಳಲ್ಲಿ ಯಾವ್ಯಾವ ತೆರವಾದ ಶಾಟ್‌ಗಳು ಅಥವಾ ಚಿತ್ರಿಕೆಗಳು ಗಮನ ಸೆಳೆದವು ಎಂಬುದನ್ನು ತರಗತಿಯಲ್ಲಿ ಚರ್ಚಿಸಿ ನಿಗಮನಕ್ಕೆ ಬರಲಿ. ತದನಂತರ ಪ್ರತಿಯೊಬ್ಬರೂ ಇಷ್ಟವಾದ ಸಿನೆಮಾ ಒಂದರ ಛಾಯಾಗ್ರಹಣ ತಂತ್ರದ ಕುರಿತು ಬರೆಯಲಿ. ಬರೆದುದನ್ನು ತರಗತಿಯಲ್ಲಿ ಮಂಡಿಸಲಿ.

## ಪೂರಕ ಓದಿಗೆ

### ಕಾದಂಬರಿ ಮತ್ತು ಸಿನಿಮಾ ಕತೆ

ಸಿನಿಮಾ ಇಲ್ಲದ ಕತೆ, ಕಾದಂಬರಿ ಇರಬಲ್ಲವು. ಆದರೆ ಕತೆ ಇಲ್ಲದೆ ಸಿನಿಮಾ ಇರುವುದು ಸಾಧ್ಯವೇ ಇಲ್ಲ. ಯಾವುದೋ ಸಿನಿಮಾ ನೋಡಿ ಪ್ರೇಕ್ಷಕ ಕತೇನೇ ಇಲ್ಲ ಎಂದು ಪ್ರತಿಕ್ರಿಯಿಸುತ್ತಾನಾದರೂ ಸಿನಿಮಾ ಕತೆಯೊಂದರ ಮೇಲೇ ರೂಪಿತವಾಗಿದೆ. ಆದರೆ ಆ ಕತೆ ಪ್ರೇಕ್ಷಕನಿಗೆ ಇಷ್ಟವಾಗಿಲ್ಲ ಎಂದರ್ಥವೇ ಹೊರತು ಕತೆಯೇ ಇಲ್ಲದೆ ಸಿನಿಮಾ ಆಗಿದೆ ಎಂಬುದು ಅರ್ಥಹೀನ.

ಹಿಂದೆಲ್ಲ ಸಿನಿಮಾ ಕತೆ ಸಿದ್ಧಪಡಿಸಲು, ಅದಕ್ಕೆ ಜೀವ ತುಂಬಬಲ್ಲ ನಟರನ್ನು ಆರಿಸಲು ನಿರ್ಮಾಪಕ, ನಿರ್ದೇಶಕರು ವರ್ಷಗಟ್ಟಲೆ ಚರ್ಚಿಸುವಂತಿದ್ದುದು ಈಗಿಲ್ಲ. ನಾಯಕನನ್ನು ಮನಸ್ಸಿನಲ್ಲಿಟ್ಟುಕೊಂಡೇ ಕತೆ ಎಣೆಯಾಗುತ್ತಿರುವ ವ್ಯವಸ್ಥೆ ಈಗಿದೆ.

ಸಿನಿಮಾ ಕತೆಇಷ್ಟೇ ಪುಟದಲ್ಲಿರಬೇಕೆಂಬ ಇತಿಮಿತಿಗಳೇನಿಲ್ಲ. ಐನೂರು ಪುಟಗಳ ಕಾದಂಬರಿಯಾಗಲಿ, ನಾಲ್ಕು ಪುಟದ ಕತೆಯಾಗಲೀ ಹನ್ನೆರಡು ರೀಲಿನ ಸಿನಿಮಾ ಆಗಬಹುದು. ಹೀಗಾಗಿ ಪುಟಕ್ಕಿಂತ ಕತೆ, ಕಾದಂಬರಿಯಲ್ಲಿ ಆಲ, ವಿಸ್ತಾರವೇ ಮುಖ್ಯ. ಉದಾಹರಣೆಗೆ, ಶ್ರೀಕೃಷ್ಣ ಆಲನಹಳ್ಳಿಯವರ 'ಭುಜಂಗಯ್ಯನ ದಶಾವತಾರ'ವಾಗಲಿ, ಕುವೆಂಪುರವರ 'ಸುಬ್ಬಮ್ಮ ಕಾನೂನು ಹೆಗ್ಗಡತಿ'ಯಾಗಲೀ ಬೃಹತ್ ಕಾದಂಬರಿಗಳಾದರೂ ಎರಡು ಕಾಲು ಗಂಟೆಯ ಸಿನಿಮಾ ಆದವು. ಹಾಗೆಯೇ ಜೋಷಿಯವರ ಆರು ಪುಟದ ಕತೆ 'ಮುತ್ತಿನ ಹಾರ'ವಾಗಲಿ'ನಾ ನಿನ್ನ ಮರೆಯಲಾರೆ' ಎಂಬ ಸಣ್ಣ ಕತೆಯಾಗಲಿ ಸಿನಿಮಾಗೆ ದೊಡ್ಡ ಕಾದಂಬರಿ, ಇಲ್ಲ ಸಣ್ಣ ಕತೆಯನ್ನು ಸಿನಿಮಾಗೆ ಅಳವಡಿಸಿಕೊಳ್ಳುವಾಗ ಹಲವಾರು ಸಮಸ್ಯೆ ಎದುರಾಗುತ್ತವಾದರೂ, ಅದನ್ನು ಸರಿದೂಗಿಸಿಕೊಳ್ಳುವ ಜಾಣ್ಮೆ ನಿರ್ದೇಶಕನಿಗಿರಬೇಕು.

ಕತೆ, ಕಾದಂಬರಿಯಲ್ಲಿ 'ಕಾರ್ಮೋಡ ಮುಸುಕಿದ್ದ ದಾರಿಯಲ್ಲಿ ಆಕೆಯೊಬ್ಬಳೇ ನಡೆಯುತ್ತಿದ್ದಳು. ಇದ್ದಕ್ಕಿದ್ದಂತೆ ಮಿಂಚು, ಗುಡುಗು ಬಂದು ರಭಸದಿಂದ ಮಳೆ ಬೀಳಲಾರಂಭಿಸಿತು' ಎಂದು ವರ್ಣಿಸಿ ಬರೆಯಬಹುದು. ಆದರಿದನ್ನೇ ಸಿನಿಮಾದಲ್ಲಿ ತೋರಿಸಲು ಸುಲಭವಾಗಿ ಸಾಧ್ಯವಾಗುವುದಿಲ್ಲ. ಇಂಥ ಸಂದರ್ಭದಲ್ಲಿ ಪಾತ್ರ ಹಾಗೂ ಮೂಲ ಕತೆಯ ಆಶಯಕ್ಕೆ ದಕ್ಕೆ ಬಾರದಂತೆ ನಿರ್ದೇಶಕ, ಕತೆಗಾರ ಚರ್ಚಿಸಿ ಬದಲಿ ರೂಪ ಮಾಡಿಕೊಳ್ಳಬೇಕು. ಇಲ್ಲವೇ ಸಾಂಕೇತಿಕಗಳು, ಉಪಮೆಗಳು ಇಂಥ ಸಂದರ್ಭದಲ್ಲಿ ನಿರ್ದೇಶನ ನೆರವಿಗೆ ಬರುತ್ತವಲ್ಲದೆ ಈತನ ಜಾಣ್ಮೆಗೂ ಕೈಗನ್ನಡಿಯಾಗುತ್ತವೆ.

## ನಾಟಕ ಮತ್ತು ಸಿನಿಮಾದ ಚಿತ್ರಕಥೆ

ನಾಟಕಗಳ ಚಿತ್ರ ನಾಟಕಕ್ಕೂ ಸಿನಿಮಾದ ಚಿತ್ರಕತೆಗೂ ಸಾಮ್ಯ ಇದೆಯಾದರೂ ವ್ಯತ್ಯಾಸಗಳಿವೆ. ದೃಶ್ಯಗಳ ಆರಂಭ, ಅಂತ್ಯ, ಪಾತ್ರ ಪೋಷಣೆ , ಇವೆರಡೂ ಮಾಧ್ಯಮದಲ್ಲಿ ಒಂದೇ ರೀತಿಯಾದರೂ, ನಾಟಕದಲ್ಲಿ ಸಿನಿಮಾದಂತೆ ಸ್ಥಳ ಬದಲಾವಣೆಯಾಗುವುದಿಲ್ಲ. ಹಾಗೆಯೇ ನಾಟಕದಲ್ಲಿ ಒಂದಾದ ನಂತರ ಒಂದು ದೃಶ್ಯವನ್ನು ಅಬಿನಯಿಸುತ್ತಾ ಹೋದಂತೆ, ಸಿನಿಮಾದಲ್ಲಿ ಒಂದಾದ ನಂತರ ಒಂದು ದೃಶ್ಯ ಚಿತ್ರೀಕರಿಸುವುದಿಲ್ಲ. ದೃಶ್ಯಾನುಕ್ರಮಣಿಕೆ ಇಲ್ಲದೇ ಇರುವ ಚಿತ್ರೀಕರಣದಲ್ಲಿ ಅಭಿನಯಗಾರರನ್ನು ಯಾವಯಾವ ರೀತಿ ಕ್ಯಾಮೆರಾದಲ್ಲಿ ಸೆರೆ ಹಿಡಿಯಬಹುದು ಎಂಬುದಿದ್ದರೆ, ನಾಟಕದಲ್ಲಿ ಇದಿಲ್ಲ. ದೃಶ್ಯ, ಸಂಭಾಷಣೆಗಳು ಅನುಕ್ರಮಣೆಯಿಂದಲೇ ಸಾಗುವುದು ನಾಟಕವಾದರೆ, ಈವತ್ತು ಯಾವುದೋ ದೃಶ್ಯ ಚಿತ್ರಿಸಿ, ಅದರ ಮುಂದಿನ ಭಾಗ ಮತ್ತೆ ಯಾವಾಗಲೋ ಬೇರಾವುದೋ ಸ್ಥಳದಲ್ಲಿ ಚಿತ್ರಿಸುವುದು ಬಳಿಕ ಸಂಭಾಷಣೆಯನ್ನು ಜೋಡಿಸಲಾಗುದತ್ತದೆ. ಸಂಭಾಷಣೆಗಳನ್ನು ಆಯಾ ಪಾತ್ರದ ನಂತರವೇ ಮಾತನಾಡಬೇಕು ಎಂಬುದು ಸಿನಿಮಾದಲ್ಲಿಲ್ಲ. ಯಾರ ಮಾತು ಎಲ್ಲಿ ಮತ್ತು ಹೇಗೆ ಬೇಕಾದರೂ ಬರಬಹುದು. ಶಾಟ್‌ಗಳು ಸಿನಿಮಾದಲ್ಲಿ ಮುಖ್ಯವಾದರೆ, ನಾಟಕದಲ್ಲಿ ಶಾಟ್‌ಗಳಿಲ್ಲ. ಹೀಗಾಗಿ ಚಿತ್ರ ನಾಟಕ – ಸಿನಿಮಾದ ಚಿತ್ರಕಥೆ ಸಾಮ್ಯದ ನಡುವೆಯೂ ವ್ಯತ್ಯಾಸ ಹೊಂದಿದೆ.

ಹಾಡು, ಫೈಟ್, ನೃತ್ಯ, ಹಾಸ್ಯ ಇವೆಲ್ಲವೂ ಎಲ್ಲೆಲ್ಲಿ ಬರಬೇಕೆಂಬುದು ಚಿತ್ರಕಥೆಯಲ್ಲೇ ಇರುವುದರಿಂದ ಚಿತ್ರೀಕರಣ ತಯಾರಿಕಾ ಯೋಜನೆಯನ್ನು ಹಾಕಿಕೊಳ್ಳಲು ಇದು ಉಪಕಾರಿಯಾಗುತ್ತದೆ.

# ಆಗದು ಎಂದು...

ಚಲನಚಿತ್ರ ಹಾಡುಗಳು ಸಾಹಿತ್ಯದ ದೃಷ್ಟಿಯಿಂದ ವಿಶಿಷ್ಟವಾಗಿ ನಿಲ್ಲುತ್ತವೆ. ಸಾಹಿತ್ಯದ ಎಲ್ಲ ಗುಣಗಳನ್ನು ಮೈಗೂಡಿಸಿಗೊಂಡಿರುವ ಈ ಹಾಡುಗಳು ಮನೋರಂಜನೆಯ ಸಾಧನಗಳಾಗಿವೆ. ಭಾಷೆ, ಶೈಲಿ, ಪ್ರಾಸ, ಲಯ ವಿಸ್ತಾರಗಳನ್ನು ಒಳಗೊಂಡ ಮಧುರ ಭಾವಗೀತೆಗಳು ಇವುಗಳಾಗಿದ್ದು ಜನರನ್ನು ಬೇಗನೆ ಆಕರ್ಷಿಸುವ ಗುಣವನ್ನು ಹೊಂದಿವೆ.

ಚಲನಚಿತ್ರದ ಸನ್ನಿವೇಶಗಳಿಗೆ ಪೂರಕವಾಗಿ ರಚನೆಯಾಗುವ ಈ ಹಾಡುಗಳು ಸಾಂದರ್ಭಿಕವಾಗಿ ಮೂಡಿಬಂದ ಸುಂದರ ಭಾವಗೀತೆಗಳಾಗಿವೆ. ಇವುಗಳನ್ನು ರಚಿಸಿದವರಲ್ಲಿ ವಿಶೇಷವಾದ ಕವಿ ಪ್ರತಿಭೆಯಿರುತ್ತದೆ. ಚಿ. ಉದಯಶಂಕರ್, ವಿಜಯ ನಾರಸಿಂಹ, ಗೀತಪ್ರಿಯ, ಆರ್.ಎನ್ ಜಯಗೋಪಾಲ್, ಜಿ.ವಿ ಅಯ್ಯರ್, ಹಂಸಲೇಖ, ಜಯಂತ ಕಾಯ್ಕಿಣಿ ಹೀಗೆ ಕನ್ನಡದ ಗೀತೆಗಳ ರಚನೆಮಾಡಿದವರನ್ನು ಹೆಸರಿಸುತ್ತಾ ಹೋಗಬಹುದು. ಪ್ರೀತಿ, ಪ್ರೇಮ,ಮಮತೆ,ಕರುಣೆ, ನಿರಾಶೆ, ವಿರಹ, ಪ್ರಾರ್ಥನೆ, ವೇದಾಂತ, ನಿಸರ್ಗಪ್ರೇಮ, ದೇಶಭಕ್ತಿ ಮೊದಲಾದ ನೂರೆಂಟು ವಿಷಯಗಳನ್ನು ತುಂಬಿಕೊಂಡ ಚಲನಚಿತ್ರ ಹಾಡುಗಳು ಅತ್ಯಲ್ಪ ಸಮಯದಲ್ಲಿ ವಿಪುಲವಾಗಿ ಬೆಳೆದುಬಂದವು.

ಪ್ರಸ್ತುತ ಪಾಠಭಾಗದಲ್ಲಿ ಬಂದಿರುವ 'ಆಗದು ಎಂದು..' ಎಂಬ ಹಾಡನ್ನು ಚಲನಚಿತ್ರಗೀತೆಯ ಸ್ವರೂಪ ಹಾಗೂ ವಿಶೇಷತೆಗಳ ಹಿನ್ನೆಲೆಯಲ್ಲಿ ವಿದ್ಯಾರ್ಥಿಗಳು ಗಮನಿಸುವಂತೆ ಮಾಡುವುದು ವಿದ್ಯಾರ್ಥಿಗಳಲ್ಲಿ ಅಂಥ ಗೀತೆಗಳ ಆಸ್ವಾದನೆಯ ಮನೋಭಾವವನ್ನು ಮೂಡಿಸುವ ಉದ್ದೇಶದಿಂದ ಇಲ್ಲಿ ಚಲನಚಿತ್ರಗೀತೆಯೊಂದನ್ನು ಪಠ್ಯವಾಗಿ ಅಳವಡಿಸಲಾಗಿದೆ. ಈ ಗೀತೆಯನ್ನು ರಚಿಸಿದವರು ಆರ್. ಎನ್. ಜಯಗೋಪಾಲ್ ಸುಮಾರು 1500 ರಷ್ಟು ಚಲನಚಿತ್ರ ಹಾಡುಗಳನ್ನು ರಚಿಸಿದ ಕೀರ್ತಿ ಇವರದ್ದು. ಹಲವಾರು ಚಿತ್ರಗಳಿಗೆ ಸಂಭಾಷಣೆ ಮತ್ತು ಹಾಡುಗಳನ್ನು ಬರೆದ ಇವರು ರಚಿಸಿದ ಹಾಡುಗಳು ಇಂದಿಗೂ ಜನಪ್ರಿಯವಾಗಿವೆ ಎಂಬುದನ್ನು ಮಕ್ಕಳು ಗಮನಿಸಲಿ.

'ಬಂಗಾರದ ಮನುಷ್ಯ' ಚಲನಚಿತ್ರದಲ್ಲಿ ಮೂಡಿಬಂದ ಈ ಹಾಡು ಒಂದು ಒಳ್ಳೆಯ ಕವಿತೆಯ ಎಲ್ಲಾ ಗುಣಗಳನ್ನು ಒಳಗೊಂಡಿದೆ ಎಂಬುದನ್ನು ಮನವರಿಕೆ ಮಾಡುವುದು.

## ಪ್ರವೇಶ ಚಟುವಟಿಕೆ

ವಿದ್ಯಾರ್ಥಿಗಳು ಸಿನೆಮಾ ಗೀತೆಗಳನ್ನು (ಹಿಂದಿ, ಕನ್ನಡ, ತುಳು, ತಮಿಳು, ಮಲೆಯಾಳ) ದಿನನಿತ್ಯ ಕೇಳಿ, ಹಾಡಿ ಆನಂದಿಸುತ್ತಾರೆ. ಹೀಗಾಗಿ ಸಿನೆಮಾ ಗೀತೆಗಳ ವಿಶೇಷತೆಗಳನ್ನು ಅವರು ಬಾಯ್ದೆರೆಯಾಗಿ ವ್ಯಕ್ತಪಡಿಸಲಿ. ಹಾಡುಗಳ ಆಶಯ, ಅವುಗಳು ನೀಡುವ ಸಂದೇಶಗಳ ಬಗ್ಗೆಯೂ ಹೇಳಲಿ.

ಒಂದು ಕವನ/ಕವಿತೆ ಮತ್ತು ಸಿನೆಮಾಗೀತೆಯ ನಡುವಿನ ವ್ಯತ್ಯಾಸಗಳ ಕುರಿತು ವಿದ್ಯಾರ್ಥಿಗಳು ತಮ್ಮೊಳಗೆ ಚರ್ಚಿಸಿ ಅನಿಸಿಕೆಗಳನ್ನು ಈ ಸಂದರ್ಭದಲ್ಲಿ ಪ್ರಸ್ತುತಪಡಿಸಲಿ. ಅಧ್ಯಾಪಕರು ಚಿತ್ರಗೀತೆಗಳ ಸ್ವರೂಪವನ್ನು ತಿಳಿಸಿ ಕವಿತೆಗಿಂತ ಅದು ಹೇಗೆ ಭಿನ್ನವಾಗಿದೆ ಎಂಬುದನ್ನು ಸ್ಪಷ್ಟಪಡಿಸುವುದು. ಬಳಿಕ ಪಾಠಭಾಗಕ್ಕೆ ಬರುವುದು.

ಹಾಡುವ ಸಾಮರ್ಥ್ಯವಿರುವ ವಿದ್ಯಾರ್ಥಿಗಳಿಂದ ಈ ಗೀತೆಯನ್ನು ಹಾಡಿಸುವುದು. ಲಭ್ಯವಿದ್ದಲ್ಲಿ ಹಾಡಿನ ಧ್ವನಿಸುರುಳಿಯನ್ನು ಕೇಳಿಸುವುದು, ಇಲ್ಲವೆ ಪ್ರಸ್ತುತ ಹಾಡಿನ ದೃಶ್ಯವನ್ನು ಒಳಗೊಂಡ ಚಲನಚಿತ್ರಭಾಗದ ಅಡಕಮುದ್ರಿಕೆಯನ್ನು ತರಗತಿಯಲ್ಲಿ ಪ್ರದರ್ಶಿಸುವುದು.

## ಆಶಯ ಬರೆಯುವುದು

ಪದ್ಯವನ್ನು ಹಾಡಿದ ಬಳಿಕ ಅದರ ಆಶಯದ ಕುರಿತಾಗಿ ವಿದ್ಯರ್ಥಿಗಳು ಗುಂಪಿನಲ್ಲಿ ಚರ್ಚಿಸಲಿ. ಪ್ರತಿಯೊಬ್ಬರು ಪದ್ಯದ ಆಶಯವನ್ನು ಬರೆದಿಟ್ಟುಕೊಳ್ಳಲಿ ಹಾಗೂ ಬರೆದುದನ್ನು ಗುಂಪಿನಲ್ಲಿ ಮಂಡಿಸಲಿ. ಪರಸ್ಪರ ಮೌಲ್ಯಮಾಪನ ಮಾಡಿ ಪರಿಷ್ಕರಿಸಿ ಬರೆದು ತಮ್ಮ ತಮ್ಮ ಚಟುವಟಿಕೆಯ ಪುಸ್ತಕದಲ್ಲಿ ಸೇರಿಸಲಿ.

## ಗಾದೆ ಮತ್ತು ನಾಣ್ನುಡಿ

ಪ್ರಸ್ತುತ ಗೀತೆಯಲ್ಲಿ ಪ್ರಯೋಗವಾಗಿರುವ ಗಾದೆ ಮಾತುಗಳನ್ನು ವಿದ್ಯಾರ್ಥಿಗಳು ಪದ್ಯದಲ್ಲಿ ಗುರುತಿಸುವಂತೆ ಸೂಚಿಸುವುದು. ಪದ್ಯದ ಆಶಯವನ್ನು ಪರಿಣಾಮಕಾರಿಯಾಗಿ ಅಭಿವ್ಯಕ್ತಿಸುವಲ್ಲಿ ಅವುಗಳು ಎಷ್ಟರ ಮಟ್ಟಿಗೆ ನೆರವಾಗಿವೆ ಎಂಬುದನ್ನು ಗುಂಪು ಚರ್ಚೆಯ ಮೂಲಕ ಅವರು ತಿಳಿದುಕೊಳ್ಳಲಿ. ಅವುಗಳ ಬಳಕೆಯ ಔಚಿತ್ಯವನ್ನು ಕಂಡುಕೊಂಡು ಟಿಪ್ಪಣಿಯೊಂದನ್ನು ಬರೆಯಲಿ. ತರಗತಿಯಲ್ಲಿ ಒಂದಿಬ್ಬರಲ್ಲಿ ಮಂಡಿಸುವಂತೆ ಹೇಳುವುದು. ಪರಸ್ಪರ ಮೌಲ್ಯಮಾಪನ ಮಾಡಿ ಪರಿಷ್ಕರಿಸಿ ಲಾಗ್ ಬುಕ್ಕಿನಲ್ಲಿ ಸೇರಿಸಿಕೊಳ್ಳಲಿ.

ಮಾದರಿ :

'ಆಗದು ಎಂದು......' ಆರ್ . ಎನ್. ಜಯಗೋಪಾಲ್ ಅವರು ಬರೆದ ಜನಪ್ರಿಯ ಹಾಡು. ಯಾವುದೇ ಕಠಿಣ ಕಾರ್ಯವಿರಲಿ ಪ್ರಯತ್ನವೊಂದಿದ್ದರೆ ಸಾಕು, ಅದನ್ನು ಸಾಧಿಸಿ ಬಿಡಬಹುದು–ಎಂಬ ಆಶಯವನ್ನು ಈ ಗೀತೆ ಧ್ವನಿಸುತ್ತದೆ. ಈ ಆಶಯವನ್ನು ಸಮರ್ಥವಾಗಿ ಕೇಳುಗರಿಗೆ ಮುಟ್ಟಿಸುವಂತೆ ಇಲ್ಲಿ ಪ್ರಯೋಗವಾಗಿರುವ ಗಾದೆ ಮಾತುಗಳಿಂದ ಸಾಧ್ಯವಾಗಿದೆ. ಮನಸ್ಸಿದ್ದರೆ ಮಾರ್ಗ, ಕೈಕೆಸರಾದರೆ ಬಾಯಿ ಮೊಸರು ಎಂಬೀ ಗಾದೆ ಮಾತುಗಳು ಆಶಯದ ಪರಿಣಾಮಕಾರೀ ಅಭಿವ್ಯಕ್ತಿಗೆ ದಾರಿಮಾಡಿಕೊಟ್ಟಿವೆ. ಬರಡು ಭೂಮಿಯಲ್ಲಿ ಕೃಷಿ ಹೇಗೆ ಸಾಧ್ಯ ಎಂಬ ಸವಾಲಿಗೆ ಆಗದು ಎಂದು ಕೈಕಟ್ಟಿ ಕೂತರೆ ಕೆಲಸವು ಸಾಗದು, ದುಡಿಮೆಯೆ ನೆಚ್ಚಿ ಬದುಕು ಎಂಬಲ್ಲಿ ದುಡಿಮೆಯೇ ದೇವರು ಎಂಬ ಮಾತಿನ ಪ್ರಯೋಗವು ಗೀತೆಯ ಸುಂದರ ಅಭಿವ್ಯಕ್ತಿಗೆ ದಾರಿಮಾಡಿಕೊಟ್ಟಿದೆ.

## ಚರ್ಚಾಗೋಷ್ಠಿ ಏರ್ಪಡಿಸುವುದು

ಚಲನಚಿತ್ರಗಳನ್ನು ನೋಡಿ ಆಸ್ವಾದಿಸಿರುವ ವಿದ್ಯಾರ್ಥಿಗಳಿಗೆ ಒಂದು ಚಲನಚಿತ್ರದ ಯಶಸ್ಸಿಗೆ ಕಾರಣವಾಗುವ ಅಂಶಗಳು ಯಾವುವು? ಎಂಬುದರ ಕುರಿತಾಗಿ ಸ್ಪಷ್ಟವಾದ ಅರಿವು ಇರಬಹುದು. ಹೀಗಾಗಿ ಸಿನೆಮಾದ ಯಶಸ್ಸಿಗೆ ಹಾಡುಗಳು ಎಷ್ಟರ ಮಟ್ಟಿಗೆ ಕಾರಣವಾಗುತ್ತವೆ ಎಂಬ ವಿಷಯದ ಮೇಲೆ ವಿದ್ಯಾರ್ಥಿಗಳು ಗುಂಪಿನಲ್ಲಿ ಚರ್ಚಿಸಲಿ. ಹಾಡುಗಳ ಕಾರಣದಿಂದಲೇ ಯಶಸ್ವಿಯಾದ ಚಿತ್ರಗಳು ಅನೇಕ ಇವೆ. (ಯಜಮಾನ, ಮುಂಗಾರು ಮಳೆ ಇತ್ಯಾದಿ.) ಬರಿಯ ಹಾಡುಗಳಿಂದಲೇ ಅವು ಹೇಗೆ ವಿಜಯವನ್ನು ಸಾಧಿಸಿವೆ ಎಂಬುದನ್ನು ಗುಂಪಿನಲ್ಲಿ ಚರ್ಚಿಸಿ ಅಭಿಪ್ರಾಯವನ್ನು ಹೇಳಲಿ. ಬಳಿಕ ಅಭಿಪ್ರಾಯಗಳನ್ನು ಕ್ರೋಡೀಕರಿಸಿ ಪ್ರತಿಯೊಬ್ಬ ವಿದ್ಯಾರ್ಥಿಯೂ ಕಿರು ಲೇಖನವೊಂದನ್ನು ತಯಾರಿಸಲಿ. ಗುಂಪಿನಲ್ಲಿ ಅದನ್ನು ಮಂಡಿಸಲಿ. ಬಿಟ್ಟು ಹೋಗಿರುವ ವಿಚಾರಗಳನ್ನು, ತಿದ್ದುಪಡಿಗಳನ್ನು ಗುಂಪಿನಲ್ಲಿ ಮೌಲ್ಯಮಾಪನದ ವೇಳೆ ಅಳವಡಿಸಿ ಪರಿಷ್ಕರಿಸಿ ಬರೆಯಲಿ. (ಇನ್ನಿತರ ಭಾಷೆಯ ಸಿನೆಮಾಗಳನ್ನು ಇಲ್ಲಿ ಗಣನೆಗೆ ತೆಗೆದುಕೊಳ್ಳಬಹುದು.)

## ಸಿನೆಮಾ ವೀಕ್ಷಣೆ

'ಬಂಗಾರದ ಮನುಷ್ಯ' ಚಲನಚಿತ್ರದ ಅಡಕಮುದ್ರಿಕೆಯನ್ನು ತರಗತಿಯಲ್ಲಿ ಪ್ರದರ್ಶಿಸುವುದು. ಪ್ರಸ್ತುತ ಹಾಡು ಬರುವ ಸನ್ನಿವೇಶವನ್ನು ಪ್ರಧಾನವಾಗಿ ಗುರುತಿಸುವಂತೆ ಮೊದಲೇ ಸೂಚಿಸುವುದು.

ಚಲನಚಿತ್ರ ವೀಕ್ಷಣೆಯ ಬಳಿಕ ಗುಂಪಿನಲ್ಲಿ ಚರ್ಚೆಗೆ ಅವಕಾಶ ನೀಡುವುದು. ಚಿತ್ರದಲ್ಲಿ ಹಾಡು ಬರುವ ಸನ್ನಿವೇಶವನ್ನು ನೆನಪಿಸಿಕೊಂಡು ಆ ಹಾಡು ಸನ್ನಿವೇಶಕ್ಕೆ ಪೂರಕವಾಗಿದೆಯೇ, ಹಾಡು ಪ್ರಮಾಣಬದ್ಧವಾಗಿಯೇ ಮುಂತಾದವುಗಳ ಮೇಲೆ ಚರ್ಚೆ ನಡೆಯಲಿ. ಅನೇಕ ಚಿತ್ರಗಳಲ್ಲಿ ಹಾಡುಗಳು ಅನಿವಾರ್ಯ ಎಂಬ ಭ್ರಮೆಗೊಳಗಾಗಿ ಅವನ್ನು ತುರುಕಿಸುವ ಪದ್ಧತಿಯೂ ಇದೆ ಎಂಬುದನ್ನು ಇಲ್ಲಿ ನೆನಪಿಸುವುದು. ಪದ್ಯದ ಆಶಯವನ್ನು ಸಂಭಾಷಣೆಯ ಮೂಲಕ ಹೇಳಬಹುದಿತ್ತಲ್ಲವೆ? ಹಾಡಿನ ಅಗತ್ಯವಿತ್ತೆ? ಹಾಗಿದ್ದರೆ ಹಾಡನ್ನು ಬಳಸಿಕೊಂಡ ಕಾರಣ ಏನಾಗಿರಬಹುದು? ಮೊದಲಾದ ಚರ್ಚಾ ಸೂಚಕಗಳನ್ನಿರಿಸಿಕೊಂಡು ಚರ್ಚೆಯನ್ನು ಮುಂದುವರಿಸುವುದು.

ಚರ್ಚಿತವಾದ ವಿಷಯಗಳನ್ನು ಆಧರಿಸಿಕೊಂಡು ಪ್ರತಿಯೊಬ್ಬರೂ 'ಸಿನೆಮಾದಲ್ಲಿ ಹಾಡುಗಳ ಅಗತ್ಯ' ಎಂಬ ವಿಷಯದ ಮೇಲೆ ಲಘುಲೇಖನವನ್ನು ಬರೆಯಲಿ. ಗುಂಪಿಗೆ ಒಂದು ಲೇಖನದಂತೆ ಮಂಡಿಸಿ, ಸೂಕ್ತ ತಿದ್ದುಪಡಿಗಳೊಂದಿಗೆ ಪರಿಷ್ಕರಿಸಿ ಬರೆಯಲಿ. ಬರೆಹವನ್ನು ಭಿತ್ತಿಪತ್ರಿಕೆಯಲ್ಲಿ ಪ್ರಕಟಿಸಲಿ.

### 'ಆಗದು ಎಂದು...' ಎಂಬ ಹಾಡು ಚಲನಚಿತ್ರದಲ್ಲಿ ಬಂದ ಸನ್ನಿವೇಶ

'ಬಂಗಾರದ ಮನುಷ್ಯ' ಚಿತ್ರದ ನಾಯಕ ವಿದ್ಯಾವಂತ. ಆತ ಪದವಿ ಮುಗಿಸಿದೊಡನೆ ಸರಕಾರಿ ನೌಕರಿಯ ಮೋಹಕ್ಕೆ ಬೀಳದೆ ಊರಿಗೆ ಬರುತ್ತಾನೆ. ಅಲ್ಲಿದ್ದ ರಾಚೂಟಪ್ಪ ಎಂಬಾತ ನೆರವಿನಿಂದ ಜಮೀನು ಖರೀದಿಸಿ ಕೃಷಿ ಕೆಲಸಕ್ಕೆ ಮುಂದಾಗುತ್ತಾನೆ. ಕೃಷಿ ಮಾಡಲು ಆ ಬರಡು ಭೂಮಿಯನ್ನು ಹದಗೊಳಿಸುತ್ತಿರುವಾಗ ನಾಯಕನೊಡನೆ ರಾಚೂಟಪ್ಪನು 'ಈ ಬರಡು ಭೂಮಿಯನ್ನು ಕಲ್ಲು ಒಡೆಯೋಕೆ ಅಂತ ತೆಗೊಂಡ್ಯಾ? ಈ ಜಮೀನಿನಲ್ಲಿ ವ್ಯವಸಾಯ ಮಾಡಲು ಆಗಲ್ಲ ಬಿಡಪ್ಪ' ಎನ್ನುತ್ತಾನೆ. ಈ ಸಂದರ್ಭದಲ್ಲಿ ಆಗದು ಎಂದು ಕೈಕಟ್ಟಿ ಕೂರುವುದು ಸರಿಯಲ್ಲ, ಪ್ರಯತ್ನಪಟ್ಟರೆ ಎಲ್ಲವೂ ಸಾಧ್ಯ ಎಂಬುದನ್ನು ನಾಯಕ ಮನವರಿಕೆ ಮಾಡಿಕೊಡುವುದಕ್ಕಾಗಿ ಎಂಬಂತೆ ಈ ಹಾಡು ಬರುತ್ತದೆ.

### ಹಾಡು ಹುಟ್ಟಿದ ಸಮಯ

ಟಿ.ಕೆ ರಾಮರಾವ್ ಅವರ ಕಾದಂಬರಿ ಆಧರಿಸಿದ 'ಬಂಗಾರದ ಮನುಷ್ಯ' ಚಿತ್ರಕ್ಕೆ ಹಾಡು ಬರೆದಾಗ ಆರ್. ಎನ್.ಜಯಗೋಪಾಲ್ ಎದುರಿಸಿದ ಸವಾಲು, ಅವರೊಳಗೆ ಹಾಡಿನ ಮೊದಲ ಸಾಲು ಸೃಷ್ಟಿಯಾದ ಘಳಿಗೆ ಎಲ್ಲ ಒಂದು ಸ್ವಾರಸ್ಯಪೂರ್ಣ ಘಟನೆ. ಹೇಗೆಂದರೆ ತಮ್ಮ ಚಿತ್ರ ಎಲ್ಲ ರೀತಿಯಿಂದಲೂ ಶ್ರೀಮಂತವಾಗಿರಬೇಕು ಎಂದು ಆಸೆಪಟ್ಟಿದ್ದ ನಿರ್ದೇಶಕ ಸಿದ್ದಲಿಂಗಯ್ಯ, ಗೀತೆರಚನೆಯ ಜವಾಬ್ದಾರಿಯನ್ನು ಹುಣಸೂರು ಕೃಷ್ಣಮೂರ್ತಿ,ಚಿ. ಉದಯಶಂಕರ್ ಹಾಗೂ ಆರ್.ಎನ್ ಜಯಗೋಪಾಲ್ ಅವರಿಗೆ ವಹಿಸಿದ್ದರು. ಒಂದು ಸಿನಿಮಾದ ಎಲ್ಲಾ ಹಾಡುಗಳನ್ನೂ ಒಬ್ಬನೇ ಗೀತೆರಚನೆಕಾರ ಬರೆದಾಗ,ಅವನಿಗೆ ಒಂದು ಛಾಲೆಂಜಿಂಗ್ ಮೂಡ್ ಖಂಡಿತ ಇರುವುದಿಲ್ಲ. ಆದರೆ, ಒಂದೇ ಸಿನಿಮಾಕ್ಕೆ ಇಬ್ಬರು ಅಥವಾ ಮೂರು ಮಂದಿ ಬರೆದಾಗ ಮಾತ್ರ–ಉಳಿದವರಿಗಿಂತ ಚೆನ್ನಾಗಿ ಬರೆಯಬೇಕು ಎಂಬ ಹಟ ಎಲ್ಲರಿಗೂ ತಂತಾನೇ ಬಂದುಬಿಡುತ್ತದೆ. 'ಬಂಗಾರದ ಮನುಷ್ಯ'ಚಿತ್ರಕ್ಕೆ ಹಾಡು ಬರೆಯುವ ಸಂದರ್ಭದಲ್ಲಿ ಜಯಗೋಪಾಲ್ ಅವರ ಮನದಲ್ಲೂ ಅಂಥದೊಂದು ಭಾವ ಇತ್ತು.

'ಬಂಗಾರದ ಮನುಷ್ಯ' ಚಿತ್ರದ ನಾಯಕ ವಿದ್ಯಾವಂತ. ಪದವಿ ಮುಗಿಸಿದೊಡನೆ ಆತ ಸರಕಾರಿ ನೌಕರಿಯ ಮೋಹಕ್ಕೆ ಬೀಳದೆ ಊರಿಗೆ ಬರುತ್ತಾನೆ. ಅಲ್ಲಿದ್ದ ರಾಚೂಟಪ್ಪ ಎಂಬಾತನ ನೆರವಿನಿಂದ ಜಮೀನು ಖರೀದಿಸಿ ಕೃಷಿ ಕೆಲಸಕ್ಕೆ ಮುಂದಾಗುತ್ತಾನೆ. ಈಸಂದರ್ಭ ವಿವರಿಸಿದ ಸಿದ್ಧಲಿಂಗಯ್ಯ ಹೇಳಿದರಂತೆ: 'ನೋಡಿ ಜಯಗೋಪಾಲ್' ಈ ಹಾಡಲ್ಲಿ ಒಂದು ಸಂದೇಶ ಇರಬೇಕು. ಈ ಹಾಡು ಕೇಳಿದವರಿಗೆ ಒಂದು ಸ್ಫೂರ್ತಿ ಸಿಗಬೇಕು. ವ್ಯವಸಾಯದ ಮೇಲೆ ಪ್ರೀತಿ ಹುಟ್ಟಬೇಕು. ಈ ಚಿತ್ರದಲ್ಲಿ ನಾಯಕ ಬರಡು ಭೂಮಿ ಖರೀದಿಸಿ ಅಲ್ಲಿ ಕೃಷಿ ಮಾಡಲು ಹೊರಟಿರುತ್ತಾನೆ. ಅವನ ಬಳಿ ಬಂದ ರಾಚೂಟಪ್ಪ–'ಈ ಬರಡು ಭೂಮಿಯನ್ನು ಕಲ್ಲು ಒಡೆಯೋಕೆ ಅಂತ ತಗೊಂಡ್ಯಾ? ಈ ಜಮೀನಿನಲ್ಲಿ ವ್ಯವಸಾಯ ಮಾಡಲು ಆಗಲ್ಲ ಬಿಡಪ್ಪ' ಎನ್ನುತ್ತಾನೆ. ಈ ಸಂದರ್ಭದಲ್ಲಿ ನಾಯಕ–'ಪ್ರಯತ್ನ ಪಟ್ಟರೆ ಎಲ್ಲವೂ ಸಾಧ್ಯ' ಎಂದು ಹೇಳಬೇಕು. ಅದನ್ನು ಸಂಭಾಷಣೆಯ ರೂಪದಲ್ಲಿ ಹೇಳಲು ಹೋದರೆ–'ಅದು ಜಂಭ ಕೊಚ್ಚಿಕೊಂಡ ಧಾಟಿ ಆಗಿ ಬಿಡುತ್ತೆ. ಹಾಗಾಗಿ, ಈ ಸಂದರ್ಭದ ಒಟ್ಟು ಸಾರವನ್ನು ಹೇಳುವಂಥ ಒಂದು ಹಾಡು ಬರೆದುಕೊಡಿ. ಅದು ಸರಳವಾಗಿರಬೇಕು. ತಕ್ಷಣ ಅರ್ಥವಾಗುವಂತಿರಬೇಕು ಎಂಬುದಷ್ಟೇ ನನ್ನ ಕಂಡೀಷನ್' ಅದರಂತೆ

'ಸರಿ ಬರೆದುಕೊಡುತ್ತೇನೆ' ಎಂದರು ಜಯಗೋಪಾಲ್. ಆದರೆ ಹತ್ತು ನಿಮಿಷ ಕಳೆದರೂ ಅವರಿಗೆ ಮೊದಲ ಸಾಲು ಹೊಳೆಯಲಿಲ್ಲ. ಆಗ ಪ್ಯಾಡ್ ಮುಂದಿಟ್ಟುಕೊಂಡು, ಕೈಕಟ್ಟಿಕೊಂಡು ಕೂತ ಆರ್.ಎನ್.ಜೆ. ಆಗೊಮ್ಮೆ ಈಗೊಮ್ಮೆ ತೋರುಬೆರಳಿನಿಂದ ಕೆನ್ನೆ ತಟ್ಟುತ್ತಾ–'ಛೆ, ಕೆಲಸ ಮುಂದುವರಿಯುತ್ತಲೇ ಇಲ್ವಲ್ಲ. ಹಾಡಿನ ಮೊದಲ ಸಾಲು ಹೊಳೀತಾನೇ ಇಲ್ವಲ್ಲ?' ಎಂದು ತಮ್ಮಷ್ಟಕ್ಕೇ ತಾವೇ ಹೇಳಿಕೊಂಡರಂತೆ. ಅದೇ ವೇಳೆಗೆ ಅಲ್ಲಿಗೆ ಬಂದ ನಿರ್ದೇಶಕ ಸಿದ್ಧಲಿಂಗಯ್ಯನವರು, ರೇಗಿಸುವ ದನಿಯಲ್ಲಿ – 'ಆಗಲ್ಲ ಎಂದು ಕೂತರೆ ಏನೂ ಆಗಲ್ಲ ಜಯಗೋಪಾಲ್ ಅವರೇ, ಪ್ರಯತ್ನ ಪಟ್ರೆ ಎಲ್ಲವೂ ಆಗುತ್ತೆ. ವಿಶ್ವೇಶನಯ್ಯನವರು ಆಗಲ್ಲ ಎಂದು ಕೂತಿದ್ರೆ ಅಣೆಕಟ್ಟಾಗ್ತಾ ಇತ್ತೆ?' ಶಿಲ್ಪಿಗಳು ಆಗಲ್ಲ ಅಂತ ಕೂತಿದ್ರೆ ಬೇಲೂರಾಗ್ತಿತ್ತೆ?' ಎಂದರು.

ಮರುಕ್ಷಣವೇ ಆರ್.ಎನ್.ಜೆ.ಯವರ ಕಣ್ಮುಂದೆ ಸಾವಿರ ವೋಲ್ಟ್‌ನ ಬಲ್ಬ್ ಝಗ್ಗನೆ ಮಿಂಚಿದಂತಾಯಿತು. ತಕ್ಷಣವೇ ತಮ್ಮ ಆ ಕ್ಷಣದ ಸ್ಥಿತಿಯನ್ನು ಜತೆಗಿಟ್ಟುಕೊಂಡು 'ಕೈಲಾಗದು' ಎಂದು ಕೈಕಟ್ಟಿ ಕುಳಿತರೆ ಸಾಗದು ಕೆಲಸವು ಮುಂದೆ' ಎಂದು ಬರೆದೇ ಬಿಟ್ಟರು. ನಂತರ, ಸಿದ್ಧಲಿಂಗಯ್ಯನವರು ನೀಡಿದ ಉದಾಹರಣೆಗಳನ್ನೇ ಜತೆಗಿಟ್ಟುಕೊಂಡು ಮುಂದಿನ ಇಪ್ಪತ್ತು ನಿಮಿಷಗಳಲ್ಲೇ ಎರಡು ಚರಣ ಬರೆದರು. ಈ ಸಂದರ್ಭದಲ್ಲಿಯೇ ಅವರಿಗೆ ತಂದೆ ನಾಗೇಂದ್ರರಾಯರು ಮೇಲಿಂದ ಮೇಲೆ ಹೇಳುತ್ತಿದ್ದ–'ದುಡಿಮೆಯೇ ದೇವರು, ದುಡಿಮೆಯಲ್ಲೇ ದೇವರನ್ನು ಕಾಣಬೇಕು' ಎಂಬ ಮಾತು ನೆನಪಾಯಿತು. ಅದನ್ನೂ ಜತೆಗಿಟ್ಟುಕೊಂಡು – ಕೈ ಕೆಸರಾದರೆ ಬಾಯಿ ಮೊಸರು ಎಂಬ ನಾಣ್ನುಡಿಯನ್ನೂ ಸೇರಿಸಿ ಮೂರನೇ ಚರಣ ಬರೆದು ಸಿದ್ಧಲಿಂಗಯ್ಯನವರಿಗೆ ಕೊಟ್ಟೇಬಿಟ್ಟರು.

ಅದನ್ನು ಕಂಡು ತುಂಬ ಖುಷಿಪಟ್ಟ ಸಿದ್ಧಲಿಂಗಯ್ಯನವರು–'ನನ್ನ ಮನಸ್ಸಿನಲ್ಲಿ ಇದ್ದುದನ್ನೆಲ್ಲ ಹಾಡಲ್ಲಿ ತಂದಿದ್ದೀರಿ. ಥ್ಯಾಂಕ್ಯೂ' ಎಂದರಂತೆ. ನಂತರ ಚಿತ್ರೀಕರಣದ ಸಂದರ್ಭದಲ್ಲಿ ವಿಶ್ವೇಶರಯ್ಯನವರು ಭಾರತರತ್ನ ಪ್ರಶಸ್ತಿ ಪಡೆವ ಸಂದರ್ಭ; ಕಾವೇರಿಯಿಂದ ಕೃಷಿ ಭೂಮಿಯೆಲ್ಲಾ ಹಚ್ಚ ಹಸುರಿನಿಂದ ಕಂಗೊಳಿಸುವ ರಮಣೀಯ ದೃಶ್ಯವನ್ನೆಲ್ಲ ಸೇರಿಸಿ ಆ ಸನ್ನಿವೇಶದ ತೀವ್ರತೆಯನ್ನು ಹೆಚ್ಚಿಸಿದರು. ಓದುತ್ತಾ ಹೋದರೆ ಒಂದು ಗದ್ಯದಂತೆ ಕಾಣುವ ಈ ಹಾಡನ್ನು ತಮ್ಮ ಇಂಪಿಂಪು ಸಂಗೀತದಿಂದ ಜಿ.ಕೆ.ವೆಂಕಟೇಶ್ ಒಂದು ಸ್ಮರಣೀಯ ಹಾಡಾಗಿ ಬದಲಿಸಿಬಿಟ್ಟರು.

ಎ.ಆರ್. ಮಣಿಕಾಂತ್

## ಲೇಖನ ತಯಾರಿ

ಕವಿತೆ ಹಾಗೂ ಚಲನಚಿತ್ರಗೀತೆಯ ನಡುವಿನ ವ್ಯತ್ಯಾಸಗಳನ್ನು ವಿದ್ಯಾರ್ಥಿಗಳು ಈಗಾಗಲೇ ತಿಳಿದಿರುವರು. ಚಲನಚಿತ್ರಗೀತೆ ಹೆಚ್ಚು ಆಕರ್ಷಣೀಯವಾಗಿರಲು ಕಾರಣವೇನು? ಎಂಬುದರ ಕುರಿತು ಈಗ ಗುಂಪಲ್ಲಿ ಮತ್ತೊಮ್ಮೆ ಚರ್ಚಿಸಲಿ.

- ಚಲನಚಿತ್ರ ಇಂಪಾಗಿ ಮೂಡಿಬರಲು ಸಹಾಯಕವಾದ ಘಟಕಗಳು ಯಾವುವು?
- ಕೇವಲ ರಾಗವೈವಿಧ್ಯ ಇದ್ದರೆ ಮಾತ್ರ ಸಾಕೆ?
- ಹಿನ್ನೆಲೆ ಸಂಗೀತದ ಮಹತ್ವವೇನು?
- ಯಾವೆಲ್ಲ ಸಂಗೀತ ಉಪಕರಣಗಳು ಬಳಸಲ್ಪಡುತ್ತವೆ?

ಇವೇ ಮೊದಲಾದ ಪೂರಕ ಪ್ರಶ್ನೆಗಳನ್ನೂ ಕೇಳುತ್ತಾ ಚರ್ಚೆ ವಿಷಯಬದ್ಧವಾಗಿ ಸಾಗುವಂತೆ ಅಧ್ಯಾಪಕರು ನೆರವಾಗುವುದು. ಚರ್ಚೆಯಲ್ಲಿ ಮೂಡಿಬಂದ ವಿಚಾರಗಳನ್ನು ಕ್ರೋಡೀಕರಿಸಿ ಕಿರುಲೇಖನವೊಂದನ್ನು ವಿದ್ಯಾರ್ಥಿಗಳು ಬರೆಯಲಿ.

## ಮಾದರಿ

ಚಿತ್ರಗೀತೆಯು ಸಮಾಜದ ಎಲ್ಲಾ ವರ್ಗದವರನ್ನು ಸುಲಭವಾಗಿ ಮತ್ತು ಖಚಿತವಾಗಿ ತಲುಪಬಲ್ಲ ಒಂದು ಸಾಹಿತ್ಯ ಒಳ್ಳೆಯ ಕವಿತೆಯೇ ಇದೂ ಒಂದೂ ಭಾವಗೀತೆ. ಇಲ್ಲಿ ಶಬ್ಧ ವೈಭವವಿದೆ. ಪ್ರಾಸದ ಸೊಗುಸು ಇದೆ. ಭಾವತೀವ್ರತೆ ಇದೆ. ಹೀಗಿದ್ದರೂ ಕವಿತೆಯಾಗಿ ನಿಲ್ಲದ ಈ ವಿಶಿಷ್ಟ ಪ್ರಕಾರ ಕವಿತೆಗಿಂತಲೂ ಬೇಗ ಜನಸಾಮಾನ್ಯವನ್ನು ತಲುಪಬಲ್ಲ. ಸಾಮರ್ಥ್ಯ ಹೊಂದಿದೆ ಎಂಬುದು ಎಲ್ಲರೂ ಒಪ್ಪಲೇ ಬೇಕಾದ ಸತ್ಯ.

'ಸಿನಿಮಾಗಳಿಗೆ ಹಾಡು ಬರೆಯುವ ಗೀತೆರಚನೆಕಾರನಿಗೆ ಒಂದು ವಿಶೇಷ ಶಕ್ತಿ ಇರುತ್ತಿದ್ದರೆ ಆತ ಜಾಣನಾಗಿದ್ದರೆ, ಪದಗಳೊಂದಿಗೆ ಆಟವಾಡುವ ಕುಶಲ ಕಲೆ ಬಲ್ಲವನಾಗಿದ್ದರೆ ವಿಜ್ಞಾನದ ವಿಷಯವನ್ನೂ ಒಂದು ಜನಪ್ರಿಯ ಹಾಡಾಗಿ ಕೇಳಿಸಬಲ್ಲ. ಇತಿಹಾಸದ ಪುಟಗಳನ್ನೇ ಗೀತೆಯೊಂದರಲ್ಲಿ ತೆರೆದಿಡಬಲ್ಲ. ರಾಮಾಯಣ, ಮಹಾಭಾರತದ ಇಡೀ ಕತೆಯನ್ನು ಒಂದು ಹಾಡಿನಲ್ಲಿ ತೆರೆದಿಡಬಲ್ಲ' (ಎ.ಆರ್. ಮಣಿಕಾಂತ್: ಹಾಡು ಹುಟ್ಟಿದ ಸಮಯ) ಎಂಬ ಮಾತು ನಿಜ.'ಬಬ್ರುವಾಹನ' ಚಲನ ಚಿತ್ರದ 'ಯಾರು ತಿಳಿಯರು ನಿನ್ನ...' ಎಂಬ ಗೀತೆ 'ನಾಗರಹಾವು' ಚಿತ್ರದ 'ಕನ್ನಡ ನಾಡಿನ ವೀರ ರಮಣಿಯ...' ಹಾಡು ಇದನ್ನು ಪುಷ್ಟೀಕರಿಸುತ್ತದೆ.

ಚಲನಚಿತ್ರ ಹಾಡುಗಳು ಸಿನೆಮಾದ ಜೀವಾಳ. ಬರಿಯ ಹಾಡುಗಳಿಂದಲೇ ಜನಮನ ಸೂರೆಗೊಂಡ ಅದೆಷ್ಟೇ ಚಲನ ಚಿತ್ರಗಳು ನಮ್ಮ ಮುಂದಿದೆ. ಎಷ್ಟೋ ಚಲನಚಿತ್ರಗಳು ಇಂದಿಗೆ ಹಳೆಯದ್ದೇ ಆಗಿದ್ದರೂ ಹಾಡುಗಳ ಮುಖಾಂತರವೇ ಜೀವಂತಿಕೆಯನ್ನು ಪಡೆದುಕೊಂಡು ಚಾಲ್ತಿಯಲ್ಲಿವೆ. ಅದೊಂದು ವಿಶಿಷ್ಟ ಸಾಹಿತ್ಯ. ರಾಗಸಂಯೋಜನೆಯೊಂದಿಗೆ ಅಧ್ಯಾಯನ ಹಿನ್ನೆಲೆ ಸಂಗೀತದೊಂದಿಗೆ ಆಕರ್ಷಣೀಯವಾಗಿ, ಇಂಪಾಗಿ ಕೇಳುವ ಚಲನ ಚಿತ್ರಹಾಡನ್ನು ಮೆಚ್ಚುವವರು ಯಾರು?

ಕವಿಗಳು ರಚಿಸಿದ ಭಾವಗೀತೆಗಳನ್ನು ಬಿಟ್ಟರೆ ಉಳಿದ ಕವಿತೆಗಳು ಜನರ ಆಕರ್ಷಣೆಗೆ ಒಳಗಾಗಿಲ್ಲ. ಭಾವಗೀತೆಗಳಿಗೆ ಭಾವತೀವ್ರತೆ ಮಾತ್ರವಲ್ಲದೆ ಅದಕ್ಕೆ ಒದಗಿದ ಹಿನ್ನೆಲೆ ಸಂಗೀತ ಹಾಗೂ ರಾಗಸಂಯೋಜನೆಯಿಂದಲೇ ಆ ರೀತಿ ಅವುಗಳು ಜನಪ್ರಿಯಗೊಂಡಿವೆ. ಚಲನಚಿತ್ರಗೀತೆಯು ಹಿನ್ನೆಲೆ ಸಂಗೀತ ಹಾಗೂ ರಾಗ ವೈವಿಧ್ಯಗಳಿಂದಲೇ ಜನಮನವನ್ನು ರಂಜಿಸಿದೆ ಎಂದರೆ ತಪ್ಪಾಗಲಾರದು. ಪಿ.ಬಿ. ಶ್ರೀನಿವಾಸ್, ಡಾ. ರಾಜ್‌ಕುಮಾರ್, ಎಸ್.ಪಿ. ಬಾಲಸುಬ್ರಹ್ಮಣ್ಯಂ, ಎಸ್. ಜಾನಕಿ, ಪಿ. ಸುಶೀಲ, ಬಿ.ಆರ್. ಛಾಯ ಮೊದಲಾದ ಹಿನ್ನೆಲೆ ಗಾಯಕರ ಸುಮಧುರ ಕಂಠಶ್ರೀ ಚಿತ್ರಗೀತೆಗಳ ಜನಪ್ರಿಯತೆಗೆ ಕಾರಣವಾಗಿವೆ ಎಂಬುದನ್ನು ಮರೆಯುವಂತಿಲ್ಲ.

# ಬೂತಯ್ಯನ ಮಗ ಅಯ್ಯು

ಚಲನಚಿತ್ರದ ಬಹುಮಟ್ಟಿನ ಯಶಸ್ಸಿಗೆ ಕಾರಣವಾಗುವುದು ಚಿತ್ರಕಥೆ ಎಂಬುದರಲ್ಲಿ ಎರಡು ಮಾತಿಲ್ಲ. ಸುಂದರವಾದ ಚಿತ್ರಕಥೆಯೊಂದನ್ನು ಹೆಣೆದು ಸಿನಿಮಾವಾಗಿಸುವ ಸಂಪ್ರದಾಯ ಒಂದೆಡೆಯಾದರೆ ಜನಪ್ರಿಯ ಸಾಹಿತ್ಯ ಕೃತಿಗಳನ್ನು ಚಿತ್ರ ಕಥೆಯ ರೂಪಕ್ಕೆ ತಂದು ಸಿನೆಮಾ ಮಾಡುವುದು ಇನ್ನೊಂದೆಡೆ. ಸಣ್ಣಕತೆ, ಕಾದಂಬರಿ, ನಾಟಕ ಇಲ್ಲೆಲ್ಲಾ ಇರುವುದು ಕಥೆಯೇ. ಆದರೆ ಕತೆಯನ್ನು ಹೇಳುವ, ತೋರಿಸುವ ಕ್ರಮ ಬೇರೆ. ಸಣ್ಣಕತೆ, ಕಾದಂಬರಿಯಲ್ಲಿ ಘಟನೆಗಳೆಲ್ಲವೂ ಅಕ್ಷರಗಳಲ್ಲಿರುತ್ತವೆ. ನಾಟಕದಲ್ಲಿ ಕತೆ ಗೊತ್ತಾಗುವುದು ಸಂಭಾಷಣೆ ಮತ್ತು ನಟನೆಯ ಮೂಲಕ. ದೃಶ್ಯಗಳ ಬದಲಾವಣೆ ಇಲ್ಲ. ಸಿನೆಮಾದಲ್ಲಿ ಸಂಭಾಷಣೆಯಿದೆ, ನಟನೆಯಿದೆ. ವಾಸ್ತವ ದೃಶ್ಯಗಳು ಕಣ್ಣಿಗೆ ಕಾಣಿಸುತ್ತದೆ. ಮಾತು ಕೇಳಿಸುತ್ತವೆ. ಹೀಗೆ ಕತೆ, ಕಾದಂಬರಿ, ನಾಟಕಗಳಿಂದ ಭಿನ್ನವಾಗಿ ನಿಲ್ಲುತ್ತದೆ ಸಿನೆಮಾ.

ನಾಟಕ ಅಥವಾ ಕಾದಂಬರಿಯ ಕತೆಯನ್ನು ಸಿನೆಮಾ ಮಾಡಬೇಕೆಂದರೆ ಅದನ್ನು ಅಲ್ಲಿದ್ದಂತೆ ಸಿನೆಮಾ ಮಾಡಲು ಸಾಧ್ಯವಿಲ್ಲ. ಸಿನೆಮಾ ಮಾಧ್ಯಮಕ್ಕೆ ತಕ್ಕಂತೆ ಅಲ್ಲಿಯ ಕತೆಯ ದೃಶ್ಯಗಳನ್ನು ಹಿಂದೆ ಮುಂದೆ ಮಾಡಬೇಕಾಗುತ್ತದೆ. ಅಲ್ಲಿ 15 ಪುಟಗಳಲ್ಲಿ ಬರೆದದ್ದನ್ನು ಸಿನೆಮಾದಲ್ಲಿ ತೋರಿಸಲು ಒಂದು ನಿಮಿಷ ಸಾಕು. ಹೀಗಾಗಿ ಚಲನ ಚಿತ್ರದ ಕಥೆಯ ಸ್ವರೂಪ ಬೇರೆಯೇ ಆಗಿ ನಿಲ್ಲುತ್ತದೆ. ಪ್ರಸ್ತುತ ಪಾಠಭಾಗದಲ್ಲಿ ಸಣ್ಣಕತೆಯೊಂದು ನಿರ್ದೇಶಕನ ಜಾಣ್ಮೆಯಿಂದ ಸಮರ್ಥ ಚಿತ್ರಕಥೆಯಾಗಿ ರೂಪುಗೊಂಡು ಗೆಲುವನ್ನು ಕಂಡ ಬಗೆಯನ್ನು ವಿವರಿಸಲಾಗಿದೆ.

### ಪ್ರವೇಶ ಚಟುವಟಿಕೆ

ಚಿತ್ರಕತೆಯಿಂದ ಮನ ಸೆಳೆದ ಚಿತ್ರವೊಂದರ ಹೆಸರನ್ನು ಆಯ್ದ ವಿದ್ಯಾರ್ಥಿಗಳಲ್ಲಿ ಹೇಳಿಸುವುದು. ಚಿತ್ರ ಕಥೆ ಯಾಕೆ ಮತ್ತು ಹೇಗೆ ಇಷ್ಟವಾಯಿತೆಂಬುದರ ಕುರಿತು ಹೇಳಲಿ.

ಚಿತ್ರಕಥೆ ನೀರಸವಾದರೆ ಸಿನೆಮಾ ಹದಗೆಡುತ್ತದೆಯೇ?

ಕಥೆಗೂ ಚಿತ್ರಕಥೆಗೂ ಇರುವ ವ್ಯತ್ಯಾಸವೇನು?

ಚಿತ್ರಕಥೆ ಬರೆಯುವಾಗ ಪ್ರಧಾನವಾಗಿ ಗಮನಿಸಬೇಕಾದ ಅಂಶಗಳು ಯಾವುವು?

ಇವೇ ಮೊದಲಾದ ಪೂರಕ ಪ್ರಶ್ನೆಗಳನ್ನು ಅಧ್ಯಾಪಕರು ವಿದ್ಯಾರ್ಥಿಗಳಲ್ಲಿ ಕೇಳುವುದು. ಇದೇ ಘಟಕದ ಆರಂಭದಲ್ಲಿ ಬಂದಿರುವ ಹಂತದಲ್ಲಿ ಈ ಎಲ್ಲ ವಿಷಯಗಳು ಬಂದಿರುವ ಕಾರಣದ ವಿದ್ಯಾರ್ಥಿಗಳು ಅವುಗಳನ್ನು ಗ್ರಹಿಸಿಕೊಂಡು ತಮ್ಮ ಪ್ರತಿಕ್ರಿಯೆಯನ್ನು ನೀಡಲಿ. ಬಳಿಕ ಚಲನಚಿತ್ರವಾದ ಸಣ್ಣ ಕಥೆ ಅಥವಾ ಕಾದಂಬರಿಗಳನ್ನು ಅವರು ಹೆಸರಿಸಲಿ.

- ಬಂಗಾರದ ಮನುಷ್ಯ – ಟಿ.ಕೆ. ರಾಮರಾವ್
- ಬೂತಯ್ಯನ ಮಗ ಅಯ್ಯು – ಗೊರೂರು ರಾಮಸ್ವಾಮಿ ಅಯ್ಯಂಗಾರ್
- ನಾಗರ ಹಾವು – ತರಾಸು
- ಗೆಜ್ಜೆಪೂಜೆ – ಎಂ.ಕೆ. ಇಂದಿರಾ
- ಕಾನೂರು ಹೆಗ್ಗಡತಿ – ಕುವೆಂಪು

- ಚಿಗುರಿದ ಕನಸು – ಶಿವರಾಮ ಕಾರಂತ
- ಗುಲಾಬಿ ಟಾಕೀಸು – ವೈದೇಹಿ

ಸಣ್ಣಕಥೆ, ಕಾದಂಬರಿಗಳು ಚಿತ್ರಕಥೆಯಾಗಿ ರೂಪುಗೊಳ್ಳುವಾಗ ನಿರ್ದೇಶಕರಿಗೆ ಅಥವಾ ಚಿತ್ರಸಾಹಿತಿಗೆ ಎದುರಾಗುವ ಸವಾಲುಗಳು ಯಾವುವು? ನಿರ್ದೇಶಕನು ಹೇಗೆ ಅವನ್ನು ಎದುರಿಸುತ್ತಾನೆ. ಇತ್ಯಾದಿಗಳ ಬಗ್ಗೆ ಪ್ರಸ್ತಾವಿಸುತ್ತಾ ಪಾಠ ಭಾಗದೆಡೆಗೆ ಬರುವುದು.

### ಪಾಠಭಾಗದ ಓದು

ಸಿನೆಮಾ ಒಂದರ ಸಮೀಕ್ಷೆ ಇದಾಗಿರುವುದರಿಂದ ವಿದ್ಯಾರ್ಥಿಗಳ ಬಾಯ್ದೆರೆ ಓದಿಗೆ ಅವಕಾಶ ನೀಡುವುದು. ಸರದಿಯಂತೆ ವಿದ್ಯಾರ್ಥಿಗಳ ಓದು ನಡೆಯಲಿ.

### ಆಶಯಗ್ರಹಣ ಪ್ರಶ್ನೆಗಳು

ಪಾಠಭಾಗದ ಆಶಯ ಗ್ರಹಣ ಸಾಧ್ಯವಾಗುವಂತೆ ಪೂರಕ ಪ್ರಶ್ನೆಗಳನ್ನು ಕೇಳುವುದು.

- ಚಲನಚಿತ್ರವಾಗಿ ರೂಪುಗೊಂಡ ಗೊರೂರರ ಸಣ್ಣ ಕಥೆ ಯಾವುದು?
- ಚಿತ್ರವನ್ನು ಕಂಡ ಗೊರೂರರೇ ಸ್ವತಃ ಅಚ್ಚರಿಗೊಳ್ಳಲು ಕಾರಣವೇನು?
- ಬೂತಯ್ಯನ ಮಗ ಅಯ್ಯು ಚಲನ ಚಿತ್ರ ಯಶಸ್ವಿಯಾಗಲು ಕಾರಣವಾದ ಅಂಶಗಳು ಯಾವುವಾಗಿದ್ದವು?

ಇವೇ ಮೊದಲಾದ ಪ್ರಶ್ನೆಗಳಿಗೆ ವಿದ್ಯಾರ್ಥಿಗಳಿಂದ ಸಮರ್ಪಕ ಪ್ರತಿಕ್ರಿಯೆಗಳನ್ನು ಪಡೆಯುತ್ತಾ ಪಾಠ ಮುಂದುವರಿಸುವುದು. ಪಾಠಭಾಗದಲ್ಲಿ ಬಂದಿರುವ ವಿಚಾರಗಳನ್ನು ಗ್ರಹಿಸಿಕೊಂಡು ಆಶಯ ಗ್ರಹಣಕ್ಕಾಗಿ ಪ್ರಶ್ನೆಗಳಿಗೆ ಉತ್ತರಿಸಲಿ. ಬರೆದ ಉತ್ತರಗಳನ್ನು ತರಗತಿಯಲ್ಲಿ ಓದಲಿ. ತಪ್ಪುಗಳಿದ್ದಲ್ಲಿ ಸರಿಪಡಿಸಿಕೊಂಡು ತಮ್ಮ ಚಟುವಟಿಕಾ ಪುಸ್ತಕದಲ್ಲಿ ಸೇರಿಸಿಕೊಳ್ಳಲಿ.

### ಮಾದರಿ

- ಗೊರೂರರ 'ಬೂತಯ್ಯನ ಮಗ ಅಯ್ಯು'ಕಥೆಯನ್ನು ತೆರೆಯ ಮೇಲೆ ಜೀವಂತವಾಗಿ ಮೂಡಿಸಲು ಸಾಧ್ಯವಾದ ಬಗೆ.

ನಿರ್ದೇಶದ ಸಿದ್ಧಲಿಂಗಯ್ಯನವರು ಗ್ರಾಮೀಣ ಪರಿಸರದಲ್ಲಿ ಬೆಳೆದು ಬಂದವರಾದುದರಿಂದ ಅವರು ಕಂಡುಕೊಂಡ ಗ್ರಾಮೀಣ ಬದುಕಿನ ಅನುಭವಗಳು ಅವರಲ್ಲಿ ಅಚ್ಚಳಿಯದೆ ಉಳಿದಿದ್ದವು. ಈ ಜೀವನಾನುಭವಗಳೇ ಗ್ರಾಮೀಣ ಬದುಕಿನ ಅಭಿವ್ಯಕ್ತಿಯಾದ 'ಬೂತಯ್ಯನ ಮಗ ಅಯ್ಯು'ಕಥೆಯನ್ನು ತೆರೆಯ ಮೇಲೆ ಜೀವಂತವಾಗಿ ಮೂಡಿಸಲು ಅವರಿಗೆ ನೆರವಾಗಿತು.

### ಸಿನೆಮಾ ವೀಕ್ಷಣೆ

'ಬೂತಯ್ಯನ ಮಗ ಅಯ್ಯು' ಚಿತ್ರದ್ರ ಅಡಕಮುದ್ರಿಕೆಯನ್ನು ತರಗತಿಯಲ್ಲಿ ಪ್ರದರ್ಶಿಸುವುದು. ಚಿತ್ರವನ್ನು ವೀಕ್ಷಿಸಿದ ಬಳಿಕ ವಿದ್ಯಾರ್ಥಿಗಳು ಪಾಠ ಭಾಗವನ್ನು ಮತ್ತೊಮ್ಮೆ ಓದಿಕೊಳ್ಳಲಿ. ಪಾಠಭಾಗದಲ್ಲಿ ಹೇಳಿರುವ ವಿಚಾರಗಳು ಎಷ್ಟರಮಟ್ಟಿಗೆ ಹೊಂದಿಕೊಳ್ಳುತ್ತವೆ ಎಂಬುದರ ಕುರಿತು ವಿದ್ಯಾರ್ಥಿಗಳು ಚರ್ಚಿಸಿ ಅದರ ಕುರಿತು ಪ್ರತಿಯೊಬ್ಬರೂ ಟಿಪ್ಪಣಿಯೊಂದನ್ನು ಬರೆಯಲಿ. ಬಳಿಕ ಆಯ್ದ ಕೆಲವರಲ್ಲಿ ಮಂಡಿಸಲು ಹೇಳುವುದು.

## ವಿಮರ್ಶಾತ್ಮಕ ಲೇಖನ

ವಿದ್ಯಾರ್ಥಿಗಳು ತಾವು ನೋಡಿದ ಯಾವುದಾದರೂ ಒಂದು ಚಲನಚಿತ್ರದ ಕುರಿತು ಈ ಕೆಳಗಿನ ವಿಷಯಗಳನ್ನು ಗಮನದಲ್ಲಿರಿಸಿಕೊಂಡು ವಿಮರ್ಶೆಯೊಂದನ್ನ ಬರೆಯಲಿ.

- ಚಿತ್ರಕಥೆ
- ಹಾಡುಗಳು–ಸಂಗೀತ
- ಛಾಯಾಗ್ರಹಣ
- ಅಭಿನಯ
- ನಿರ್ದೇಶನ

ಅಧ್ಯಾಪಕರು ಈ ಹಂತದಲ್ಲಿ ವಿಮರ್ಶೆಯು ಹೇಗಿರಬೇಕೆಂಬುದರ ಕುರಿತು ಮಾಹಿತಿ ನೀಡುವುದು ಉತ್ತಮ. ಪ್ರತಿಯೊಬ್ಬ ವಿದ್ಯಾರ್ಥಿಯು ವಿಮರ್ಶಾಲೇಖನವನ್ನು ಬರೆದುಕೊಂಡು ಬರಲಿ. ವಿದ್ಯಾರ್ಥಿಗಳ ಸಂಖ್ಯೆಗನುಗುಣವಾಗಿ ಗುಂಪನ್ನು ರಚಿಸಲಿ. ಅಲ್ಲಿ ಪ್ರತಿಯೊಬ್ಬ ವಿದ್ಯಾರ್ಥಿಯೂ ತಾನು ಬರೆದುದನ್ನು ಓದಿ ಹೇಳಲಿ. ಪರಸ್ಪರ ಮೌಲ್ಯಮಾಪನದ ಮೂಲಕ ತಪ್ಪುಗಳನ್ನು, ವಾಕ್ಯ ಪ್ರಯೋಗಗಳನ್ನು ಸರಿಪಡಿಸಿಕೊಂಡು ಉತ್ತಮಪಡಿಸಲಿ. ಗುಂಪಿನಲ್ಲಿ ಒಂದರಂತೆ ಅಥವಾ ಎರಡರಂತೆ ಬರಹಗಳನ್ನು ಆಯ್ದು ಸಿನಿವಿಮರ್ಶೆಯನ್ನೊಳಗೊಂಡ ಸಂಕಲನವೊಂದನ್ನು ಸಿದ್ಧಪಡಿಸಲಿ. ಸೂಕ್ತ ಸಂದರ್ಭದಲ್ಲಿ ಪ್ರಕಟಿಸಲಿ. ತರಗತಿಯ ಗ್ರಂಥಾಲಯದಲ್ಲಿ ಸೇರಿಸಿಕೊಳ್ಳಲಿ.

## ಟಿಪ್ಪಣಿ ಬರಹ

ಚಲನಚಿತ್ರ ನಿರ್ದೇಶಕನ ಪಾತ್ರವೇನೆಂಬುದರ ಕುರಿತು ವಿದ್ಯಾರ್ಥಿಗಳು ಘಟಕದ ಮೊದಲನೆಯ ಪಾಠದಲ್ಲಿ ಓದಿ ತಿಳಿದಿರುವರು. ಲೇಖಕರು 'ಬೂತಯ್ಯನ ಮಗ ಅಯ್ಯು' ಎಂದು ಡೈರೆಕ್ಟರ್ ಫಿಲ್ಮ್ ಎಂದು ಹೇಳಿರುವರು. ಆ ಹೇಳಿಕೆಯ ಕುರಿತು ವಿದ್ಯಾರ್ಥಿಗಳು ಗುಂಪಿನಲ್ಲಿ ಚರ್ಚಿಸಲಿ. ತಮ್ಮ ತಮ್ಮ ಅಭಿಪ್ರಾಯಗಳನ್ನು ಹೇಳಲಿ. ಒಂದು ಸಿನೆಮಾದ ಯಶಸ್ಸಿನಲ್ಲಿ ನಿರ್ದೇಶಕನ ಪಾತ್ರವೇನೆಂಬುದರ ಕುರಿತು ತಮ್ಮ ತಮ್ಮ ನಿಲುವುಗಳನ್ನು ವ್ಯಕ್ತಪಡಿಸಲಿ. ಬಳಿಕ ಅಭಿಪ್ರಾಯಗಳನ್ನು ಕ್ರೋಡೀಕರಿಸಿ ಈ ಕುರಿತು ಟಿಪ್ಪಣಿಯೊಂದನ್ನು ಬರೆಯಲಿ. ಬರೆದುದನ್ನು ಗುಂಪಿನಲ್ಲಿ ಮಂಡಿಸಲಿ.

## ಲಘು ಲೇಖನ – ವಿಮರ್ಶೆ

'ಬೂತಯ್ಯನ ಮಗ ಅಯ್ಯು' ಗೊರೂರರ ಸಣ್ಣಕತೆಯನ್ನು ಆಧರಿಸಿಕೊಂಡು ನಿರ್ಮಿತವಾದ ಚಿತ್ರವಾಗಿದೆ. ಕನ್ನಡದ ಅನೇಕ ಕಾದಂಬರಿ ಹಾಗೂ ಸಣ್ಣಕತೆಗಳು ಚಲನಚಿತ್ರವಾಗಿದೆ. ವಿದ್ಯಾರ್ಥಿಗಳು ತಮಗೆ ತಿಳಿದಿರುವ ಹೀಗೆ ಚಲನಚಿತ್ರವಾದ ಕಾದಂಬರಿ ಅಥವಾ ಸಣ್ಣ ಕತೆಗಳನ್ನು ಹೆಸರಿಸಿರಿ. ಅವುಗಳಲ್ಲಿ ಯಾವುದಾದರೂ ಒಂದರ ಕುರಿತು ಲಘು ಲೇಖನವನ್ನು ಬರೆಯುವಂತೆ ಹೇಳುವುದು.

ಮಾದರಿಯಾಗಿ ತ್ರಿವೇಣಿಯವರ 'ಬೆಳ್ಳಿಮೋಡ'ವನ್ನು ಆಧರಿಸಿ ಪುಟ್ಟಣ್ಣ ಕಣಗಾಲ್ ನಿರ್ಮಿಸಿದ ಚಿತ್ರದ ಕಿರುವಿಮರ್ಶೆ ಇಲ್ಲಿದೆ.

# ಬೆಳ್ಳಿ ಮೋಡ

ಪ್ರತಿಭಾವಂತ ನಿರ್ದೇಶಕನೊಬ್ಬ ಒಂದು ಸಿನಿಮಾ ರೂಪಿಸುತ್ತಲೇ ಸಾಂಸ್ಕೃತಿಕ ನೆಲೆಗಳನ್ನು ಅದರಲ್ಲಿ ನಿರ್ವಚಿಸಲು ಯತ್ನಿಸಿರುತ್ತಾನೆ. ತಮ್ಮ ಮೊದಲ ಸಿನಿಮಾಕ್ಕೆ 'ವಸ್ತು'ವನ್ನಾಗಿ ತ್ರಿವೇಣಿಯಿಂದ ಈ ಕಾದಂಬರಿಯನ್ನು ಆಯ್ಕೆ ಮಾಡಿಕೊಳ್ಳುವ ಮೂಲಕ ಪುಟ್ಟಣ್ಣ ಒಂದೇ ಏಟಿಗೆ ಎರಡು ಹಕ್ಕಿ ಹೊಡೆದರು. ಸಾಹಿತ್ಯ ಕೃತಿಯೊಂದನ್ನು ರೂಪಾಂತರಿಸುವ ಯತ್ನದಲ್ಲಿ ಅದು ಹೊಮ್ಮಿಸುವ ಸಾಮಾಜಿಕ ಸಂದರ್ಭಗಳನ್ನು ಅವರು ನಿರೂಪಿಸಿದರು. 1960ರ ಅವಧಿ ಶಿಕ್ಷಣ, ಸಂಸ್ಕೃತಿ, ಕೌಟುಂಬಿಕ ನೆಲೆಗಳಲ್ಲಿ ಬದಲಾವಣೆಗೆ ಕಾರಣವಾಗಿದೆ. ಭಾಷಾವಾರು ಪ್ರಾಂತ್ಯಗಳಾದ ಮೇಲೆ 'ದೇಸೀ' ಅಭಿವ್ಯಕ್ತಿ ಕಾಡತೊಡಗಿತು. ಈ ನೆಲೆಯಲ್ಲಿ ಸಾಹಿತ್ಯ ಕೃತಿಯನ್ನು ಚಿತ್ರಪಟವಾಗಿಸಿದ ಪುಟ್ಟಣ್ಣ, ಬೇಂದ್ರೆಯವರ ಸಾಹಿತ್ಯವನ್ನು ಬಳಸಿಕೊಳ್ಳುವ ಮೂಲಕ ಮತ್ತೊಂದು ಆಯಾಮ ದಕ್ಕಿಸಿಕೊಂಡರು. ಚಿಕ್ಕಮಗಳೂರಿನ ನಿಸರ್ಗದಲ್ಲಿ ಅದನ್ನು ಚಿತ್ರೀಕರಿಸಿದ್ದು, ನಾಯಕಿ ಕೇಂದ್ರಿತ ದೃಷ್ಟಿಕೋನ ಹೊಮ್ಮಿಸಿದ್ದು ಈ ಚಿತ್ರದ ವಿಶೇಷ, ಹಾಗಾಗಿ ಸಿನಿಮಾ–ನೋಡುಗರನ್ನು ಸೆಳೆದಂತೆ, ವಿಮರ್ಶಕರಿಂದಲೂ ಮೆಚ್ಚುಗೆ ಗಳಿಸಿತು. 'ಗಲ್ಲಾಪೆಟ್ಟಿಗೆ' ತುಂಬಿಸಿತು. ಈ ಸಿನಿಮಾ ಪುಟ್ಟಣ್ಣನವರ ಅಪೂರ್ವ ಅಭಿವ್ಯಕ್ತಿಯಾಗಿದೆ. ಹೆಣ್ಣಿನ ಭಿನ್ನ ಮನಸ್ಥಿತಿ, ಉದ್ವೇಗ, ಅಶೋತ್ತರಗಳ ನಿರ್ವಚನದ ಮೂಲಕ ಈ ಸಿನಿಮಾ ವಿಶೇಷ ಅನುಭೂತಿಗೆ ಪಕ್ಕಾಯಿತು.

ಸಾಹಿತ್ಯ ಕೃತಿಯನ್ನು ಆಧರಿಸಿದ್ದರೂ, ಅದನ್ನು ತೆರೆಗೆ ಅಳವಡಿಸುವಲ್ಲಿ ಪುಟ್ಟಣ್ಣ ಸ್ವಾತಂತ್ರ್ಯ ವಹಿಸಿದ್ದಾರೆ. ಮೂಲ ಕೃತಿಯನ್ನು ತಮ್ಮ ಆಶಯಕ್ಕೆ ಒಗ್ಗಿಸುವಲ್ಲಿ, ಕಾದಂಬರಿಯ ಸಂಭಾಷಣೆ ಉಳಿಸಿಕೊಳ್ಳುವಲ್ಲಿ, ಹಾಸ್ಯಪಾತ್ರ(ದ್ವಾರಕೀಶ್) ನಿರೂಪಿಸುವಲ್ಲಿ ಅವರು ಮಾಡಿದ ಪ್ರಯತ್ನ ಯಶಸ್ವಿಯಾಯಿತು. ಈ ಹಂತದ ಸಿನಿಮಾಗಳಲ್ಲಿನ 'ಹಾಸ್ಯಕ್ಕಾಗಿ ಹಾಸ್ಯ' ಎಂಬ ನಿಲುವನ್ನು ಬಿಟ್ಟು, ಪುಟ್ಟಣ್ಣ 'ಹಾಸ್ಯ ಸನ್ನಿವೇಶ' ಚಿತ್ರಕತೆಯ ಅಂಗವಾಗುವಂತೆ ನಿರೂಪಿಸಿರುವುದು ಎದ್ದು ಕಾಣುತ್ತದೆ. ಕಾದಂಬರಿಯ ಅಂತ್ಯ ಸಿನಿಮಾದಲ್ಲಿ ಭಿನ್ನ ರೂಪು ಪಡೆದಿದೆ. ನಾಯಕಿ ಕೊನೆಗೆ ಭ್ರಮಾಧೀನ ಸ್ಥಿತಿ ತಲುಪುವುದು, ದ್ವಂದ್ವಕ್ಕೆ ಒಳಗಾಗುವುದು, ತನ್ನ ಭಾವನೆಗಳನ್ನು ಅಭಿವ್ಯಕ್ತಿಸುವುದು, ತನ್ನದೇ ನಿರ್ಧಾರ ಕೈಗೊಳ್ಳುವ ಮೂಲಕ ವಿಭಿನ್ನ ಪಾತ್ರವಾಗಿ ಸಂವೇದಿಸುತ್ತಾಳೆ. ಇದು ಪುಟ್ಟಣ್ಣನವರ ಕಾಣ್ಕೆ. ಈ ಕಾರಣಕ್ಕೆ ಬೆಳ್ಳಿಮೋಡ ಈ ಹೊತ್ತಿಗೂ ಒಂದು ಅಭಿಜಾತ ಸಿನಿಮಾ ಎನಿಸುತ್ತದೆ.

ನಾಯಕಿ ಇಂದಿರ(ಕಲ್ಪನ), ನಾಯಕ ಮೋಹನ (ಕಲ್ಯಾಣಕುಮಾರ್)ನ ಜೊತೆ ಸುಂದರವಾಗಿ ಬದುಕುವ ಕನಸು ಕಾಣುತ್ತಾಳೆ. ಆಗ ನಾಯಕ ನಟನಾಗಿದ್ದ ಕಲ್ಯಾಣ್‌ಗೆ ಈ ಪಾತ್ರ ಒಂದು ಬಗೆಯಲ್ಲಿ ಭಿನ್ನ; ಇಂತ ಪಾತ್ರವನ್ನು ಜನಪ್ರಿಯತೆಯ ಉತ್ತುಂಗದಲ್ಲಿದ್ದ ಕಲ್ಯಾಣ್ ಏಕೆ, ಹೇಗೆ ಒಪ್ಪಿಕೊಂಡರು ಎನ್ನುವುದು ಪ್ರಶ್ನೆಯಾಗಿಯೇ ಉಳಿದಿದೆ; ಇದು ಅವರ ವೃತ್ತಿ ಬದ್ಧತೆಯನ್ನು ತೋರಿದೆ. ಮುಂದೆ ಗಂಗಾಧರ್ 'ಶರಪಂಜರ'ದಲ್ಲಿ ಇಂತದೇ ಪಾತ್ರ ಅಭಿನಯಿಸಿದರು; ಜನಪ್ರಿಯತೆಯ ದೃಷ್ಟಿಯಿಂದ ಅವರು ಕಲ್ಯಾಣ್‌ಗೆ ಎರಡನೆಯವರು.

ಸಿನಿಮಾ ಆರಂಭಗೊಳ್ಳುವುದು ಮೋಹನನ ಆಗಮನದಿಂದ. ಸುಂದರ ತರುಣ 'ಬೆಳ್ಳಿಮೋಡ' ಎಸ್ಟೇಟ್‌ಗೆ (ಚಿಕ್ಕಮಗಳೂರು ಸಮೀಪ) ಕಾಲಿಟ್ಟಿದ್ದಾನೆ. ಅಲ್ಲಿ ಇಂದಿರಾ ಮೋಹನನತ್ತ ಆಕರ್ಷಿತಳಾಗುತ್ತಾಳೆ. ಅವಳ ತಾಯಿ ಅವನನ್ನು ಇಂದಿರೆಗೆ ಸೂಕ್ತ ಜೋಡಿ ಎಂದುಕೊಂಡು, ಅವನು ಅಮೇರಿಕದಿಂದ ಬಂದ ಮೇಲೆ ಮಗಳನ್ನು ಕೊಟ್ಟು ಮದುವೆ ಮಾಡುವ ಬಯಕೆ ವ್ಯಕ್ತಪಡಿಸಿರುತ್ತಾಳೆ. ಇಲ್ಲಿನ ಇಂದಿರೆಯ ಪಾತ್ರ ಆಂತರಿಕ ಸೌಂದರ್ಯದಿಂದ ಗಮನ ಸೆಳೆಯುತ್ತದೆ. ಉಳಿದ ಸಿನಿಮಾಗಳ ನಾಯಕಿಯರಂತೆ ಇವಳು ಅಪ್ರತಿಮ ಸುಂದರಿಯಲ್ಲ. ಇಂದಿರೆಯ ತಂದೆ ತಾಯಿ

ಪಾತ್ರಗಳ ನಡುವೆ 'ರಮ್ಯ ಸಂಬಂಧ' ಇರುವುದನ್ನು ಪುಟ್ಟಣ್ಣ ಇಲ್ಲಿ ತುಸು ವೈಭವೀಕರಿಸಿದ್ದಾರೆ; ಇದು ಉದ್ದೇಶಪೂರ್ವಕ; ಕತೆಯ ಅಗತ್ಯ. ಮುಂದೆ ಇಂದಿರೆಯ ತಾಯಿ ಗರ್ಭಿಣಿ ಆಗುತ್ತಾಳೆ. ಮಗ 'ಗಿರಿ' ಹುಟ್ಟುತ್ತಾನೆ. ಈ ಅಂಶ ಸಿನಿಮಾದ ಹೊಸ ತಿರುವಿಗೆ ಕಾರಣವಾಗುತ್ತದೆ.

ಪುಟ್ಟಣ್ಣ ಈ ಸಿನಿಮಾದಲ್ಲಿ ಹಾಡುಗಳನ್ನು ಭಿನ್ನ ರೀತಿಯಲ್ಲಿ ಚಿತ್ರಿಸಿದ್ದಾರೆ. ಸಂಯೋಜಿಸಿದ್ದಾರೆ; ಇದು ಕನ್ನಡಕ್ಕೆ ಹೊಸ ಬಗೆ. ಈ ಬಗೆ ಚಿತ್ರಕತೆಗೆ ಪೂರಕವಾಗಿದೆ; ಮೆಲೋಡ್ರಾಮಾದಿಂದ ಕೂಡಿದ ದೃಶ್ಯೀಕರಣ ಸಿನಿಮಾದ ಓಟಕ್ಕೆ, ಭಾವತೀವ್ರತೆಗೆ ಕಾರಣವಾಗಿದೆ. 'ಮುದ್ದಿನ ಗಿಣಿಯೇ ಬಾರೊ' ಹಾಡು ಇಂದಿರೆಗೆ ತಮ್ಮನ ಮೇಲಿರುವ ಪ್ರೀತಿಯನ್ನು ಹೇಳುತ್ತಲೆ, ಈ ವೇಳೆಗೆ ಕುಟುಂಬದಲ್ಲಿ ಅವಳ ಸ್ಥಾನ ಪಲ್ಲಟವಾಗಿರುವುದನ್ನೂ ಧ್ವನಿಸಿದೆ. ಮುಂದೆ ಮೋಹನ ಇಂದಿರೆಯನ್ನು ನಿರಾಕರಿಸಲು 'ತಮ್ಮನ ಹುಟ್ಟು' ಕಾರಣವಾಗುವುದು ಗಮನಾರ್ಹ.

'ಆಸ್ತಿ' ಇನ್ನು ದಕ್ಕದು ಎಂಬ ನಿಲುವಿಗೆ ಬಂದ(ಅಮೇರಿಕಾದಿಂದ ಹಿಂತಿರುಗಿದ) ಮೋಹನ ಇಂದಿರೆಯನ್ನು ಅದೇ ಕಾರಣಕ್ಕೆ ಮದುವೆ ಆಗಲು ನಿರಾಕರಿಸುತ್ತಾನೆ. ಅಪಘಾತಕ್ಕೀಡಾದ ಮೋಹನ ಇಂದಿರೆಯ ಸೇವೆಯಿಂದ ಗುಣಮುಖನಾಗಿ, ಅವಳನ್ನು ನಿಜವಾಗಿ ಪ್ರೀತಿಸಲು ಆರಂಭಿಸುತ್ತಾನೆ. ಆದರೆ ಅದಾಗಲೇ ತಡವಾಗಿರುತ್ತದೆ. ಇಂದಿರೆಯ ಎದೆ ಚೂರಾಗಿರುತ್ತದೆ. ತನ್ನ ಪ್ರೀತಿಯ ಮರವನ್ನು ಕತ್ತರಿಸುವ ಅವಳ ಕೃತ್ಯ ಅದನ್ನು ಸಂವಹಿಸುತ್ತದೆ. ಆ ಮರದ ಮೇಲೆ ಅವರು ತಮ್ಮ ಹೆಸರು ಕೆತ್ತಿರುತ್ತಾರೆ!

ಹಳೆ ಮೈಸೂರಿನ ಸಂಸ್ಕೃತಿಯ ಅನಾವರಣ ಮಾಡುವ ಸಿನಿಮಾದಲ್ಲಿ ನರಸಿಂಹಯ್ಯ (ಬಾಲಕೃಷ್ಣ), ಪಾಪಣ್ಣ (ದ್ವಾರಕೀಶ್)ರ ಲಘು ತಮಾಷೆ ಇನ್ನೊಂದು ಸಾಮಾಜಿಕ ಸ್ತರದ ನಿರ್ವಚನಕ್ಕೆ ಕಾರಣವಾಗಿದೆ. ನಾಯಕನ ದುರಾಸೆ ಅವನ ವ್ಯಕ್ತಿತ್ವವನ್ನು ನಿರೂಪಿಸುತ್ತದೆ. ಸಹಾಯ ಪಡೆದೂ ಕೃತಘ್ನತೆ ತೋರುವ ಅವನ ಸಣ್ಣತನ ನಾಯಕಿಯ ತಿರಸ್ಕಾರದೊಂದಿಗೆ ಬಯಲಾಗುತ್ತದೆ. ಪುಟ್ಟಣ್ಣ ಮುಖ್ಯ ಕತೆಯನ್ನು ನಿರೂಪಿಸುತ್ತಲೇ ಅದರೊಂದಿಗೆ ಕಟ್ಟಿ ಕೊಡುವ ಸಣ್ಣಪುಟ್ಟ ಪಾತ್ರಗಳ ಭಿನ್ನತೆ; ಸ್ಥಾನಮಾನ, ಭಾಷಿಕ ವ್ಯತ್ಯಾಸ ಗಮನಾರ್ಹ.

ಕಾದಂಬರಿಯಲ್ಲಿ ಇಲ್ಲದ ಅನೇಕ ದೃಶ್ಯಗಳು ಸಿನಿಮಾದಲ್ಲಿವೆ; ಹಾಸ್ಯ ಸನ್ನಿವೇಶಗಳು ಇದಕ್ಕೆ ನಿದರ್ಶನ. ಇಲ್ಲಿನ ನಾಯಕಿ ನೈತಿಕವಾಗಿ ನಾಯಕನನ್ನು ಮೀರುವುದು ಗಮನಾರ್ಹ. ಸಮಕಾಲೀನ ಹಿಂದಿ ಸಿನಿಮಾಗಳು ನಾಯಕನನ್ನು ವೈಭವೀಕರಿಸಿದರೆ, ಪುಟ್ಟಣ್ಣ ತಮ್ಮ ಸಿನಿಮಾದಲ್ಲಿ ಹೆಣ್ಣಿನ ಅಂತಃಶಕ್ತಿಯನ್ನು ನಿರೂಪಿಸಿದ್ದಾರೆ. ಗಂಡಿನ ಅಪ್ರಾಮಾಣಿಕತೆಯನ್ನು ಒಪ್ಪದ ಇಂದಿರೆ ಮೋಹನನ್ನು ತಿರಸ್ಕರಿಸುವಲ್ಲಿ ಸ್ತ್ರೀನಿಲುವು ಎದ್ದು ಕಾಣುತ್ತದೆ.

ಕುಟುಂಬ, ಅದರಲ್ಲಿ ಹೆಣ್ಣಿನ ಸ್ಥಾನ, ಕೌಟುಂಬಿಕ ಧರ್ಮ, ಸ್ತ್ರೀ ಧರ್ಮ, ಪುರುಷ ಧರ್ಮ, ಸಾಮಾಜಿಕ ಧರ್ಮ (ಮೌಲ್ಯಗಳಾಗಿ) ಸಿನಿಮಾದಲ್ಲಿ ಪ್ರಶ್ನಿಸಲ್ಪಟ್ಟಿವೆ!

ಅಲ್ಲಲ್ಲಿ ಅತಿ ನಾಯಕೀಯ ಎನಿಸಿದರೂ ಒಟ್ಟು ಪರಿಣಾಮದಲ್ಲಿ ಬೆಳ್ಳಿಮೋಡ ಗಮನಾರ್ಹ. ಚಿತ್ರದ ಅಂತಿಮ ದೃಶ್ಯ ಪಡೆದಿದೆ. ತಮ್ಮ ಗಿರಿ ಇಂದಿರೆಗೆ ಮಗನಂತೆ ಆಗಿದ್ದಾನೆ. ಅವನ ಪೋಷಣೆ ಅವಳಿಗೆ ಮುಖ್ಯ ಎನಿಸುವುದು. ಆ ಕಾರಣಕ್ಕೆ ಅವಳು ತನ್ನ ವೈಯಕ್ತಿಕ ಆಸೆಗಳನ್ನು ಬದಿಗೊತ್ತುತ್ತಾಳೆ. ಪುಟ್ಟಣ್ಣನವರ ಒಳನೋಟದಿಂದಾಗಿ ಕಾದಂಬರಿಗಿಂತಲೂ ಹೆಚ್ಚಿನ ಆಯಾಮಗಳನ್ನು ಸಿನಿಮಾ ಬಿಂಬಿಸಿದೆ. ಮಧು, ಅರ್ಥಪೂರ್ಣ ಹಾಡು, ಸರಳ–ಸುಮಧುರ ಸಂಗೀತ. ರಮ್ಯತೆ, ಹೊಸತನವುಳ್ಳ ಹಾಡಿನ ಲಯ(ಇದೇ ನನ್ನ ಉತ್ತರ) ಬೇಂದ್ರೆಯವರ ಗೀತೆ (ಮೂಡಲ ಮನೆಯ) ಸಿನಿಮಾದ ವಿಶಿಷ್ಟತೆಗಳಾಗಿದ್ದಂತೆ, ಒಟ್ಟೂ ಪರಿಣಾಮಕ್ಕೆ ಪೂರಕವಾಗಿವೆ.

| | | |
|---|---|---|
| ನಿರ್ಮಾಪಕರು | : | ಜೆಮಿನಿ ಶ್ರೀನಿವಾಸನ್, ಶ್ರೀನಿವಾಸ ಆರ್ಟ್ ಪ್ರೊಡಕ್ಷನ್ ಮದ್ರಾಸ್ |
| ಕತೆ | : | ತ್ರಿವೇಣಿ |
| ಚಿತ್ರಕತೆ–ನಿರ್ದೇಶನ | : | ಎಸ್.ಆರ್. ಪುಟ್ಟಣ್ಣ ಕಣಗಾಲ್ |
| ಸಂಭಾಷಣೆ | : | ಆರ್.ಎನ್. ಜಯಗೋಪಾಲ್ |
| ಹಾಡುಗಳು | : | ಆರ್.ಎನ್. ಜಯಗೋಪಾಲ್, ದ.ರಾ. ಬೇಂದ್ರೆ |
| ಸಂಗೀತ | : | ವಿಜಯ ಭಾಸ್ಕರ್ |
| ಛಾಯಾಗ್ರಹಣ | : | ಆರ್.ಎನ್.ಕೆ. ಪ್ರಸಾದ್ |
| ಸಂಕಲನ | : | ವಿ.ಪಿ. ಕೃಷ್ಣನ್ |
| ಹಿನ್ನೆಲೆ ಗಾಯನ | : | ಪಿ.ಬಿ. ಶ್ರೀನಿವಾಸ್, ಎಸ್. ಜಾನಕಿ, ಬಿ.ಕೆ. ಸುಮಿತ್ರ, ಪಿ. ಸುಶೀಲ |
| ಪಾತ್ರವರ್ಗ | : | ಕಲ್ಪನ, ಕಲ್ಯಾಣ ಕುಮಾರ್, ಅಶ್ವತ್, ಪಂಡರಿಬಾಯಿ, ಬಾಲಕೃಷ್ಣ, ದ್ವಾರಕೀಶ್, ಜಯ. |

# 5. ನುಡಿಸಿರಿ

| | | |
|---|---|---|
| ಘಟಕ 5 | : | ನುಡಿಸಿರಿ |
| **ಪಾಠಗಳು** | : | ನಾಡಸಿರಿ |
| | | ಸಕ್ಕರೆಗುಪ್ಪಂ ಸರಿಮಾಳ್ಪರೇ? |
| | | ತರುಣ ಸೂರ್ಯಂ ಕತ್ತಲೆಯನೆ ಹೊಕ್ಕಂತ್ತಾಯ್ತು |
| | | ಗುರುವಚನಮಲಂಘನೀಯಮ್ |
| **ಕಲಿಕಾ ಸಾಮಗ್ರಿಗಳು :** | 1. | ಪಾಠ ಪುಸ್ತಕಗಳು |
| | 2. | ಪರಾಮರ್ಶನ ಗ್ರಂಥಗಳು |
| | 3. | ಧ್ವನಿ ಸುರುಳಿ |
| | 4. | ಪ್ರಾದೇಶಿಕ ಸಂಪನ್ಮೂಲ (ಗಮಕಿಗಳು) |

**ಮೌಲ್ಯಗಳು ಹಾಗೂ ಮನೋಭಾವಗಳು:**

1. ಕನ್ನಡ ಭಾಷೆ–ಸಾಹಿತ್ಯವನ್ನು ಗೌರವಿಸುವ ಮನೋಭಾವ.
2. ಕನ್ನಡ ನಾಡು–ನುಡಿಯ ವೈಶಿಷ್ಟ್ಯಗಳನ್ನು ತಿಳಿದು ಗೌರವ ತಾಳುವ ಮನೋಭಾವ
3. ಶತಕ ಸಾಹಿತ್ಯದ ಮೂಲಕ ಜೀವನ ಮೌಲ್ಯವನ್ನು ತಿಳಿಯುವ ಮನೋಭಾವ.
4. ಸತ್ಯ–ಧರ್ಮ ಮುಂತಾದ ಮೌಲ್ಯಗಳನ್ನು ಜೀವನದಲ್ಲಿ ಅಳವಡಿಸುವುದು.
5. ಪರಿಸರ ಪ್ರಜ್ಞೆ, ಪರಿಸರ ಸ್ನೇಹ, ಉತ್ತಮ ಬಾಂಧವ್ಯಗಳನ್ನು ಬೆಳೆಸುವ ಮನೋಭಾವ.

# ಪ್ರಸ್ತಾವನೆ

ಒಂದು ಕಾಲದಲ್ಲಿ ಆಡುನುಡಿಯಾಗಿದ್ದ ಕನ್ನಡ ಭಾಷೆಯು ಕ್ರಮೇಣ ಸಂಸ್ಕೃತ ಭಾಷೆಯ ಪ್ರಭಾವಕ್ಕೆ ಒಳಗಾಗಿ ಅದರ ವರ್ಚಸ್ಸಿನಿಂದ ಅಭಿವೃದ್ಧಿಗೊಂಡಿರಬಹುದು ಎಂದು ವಿದ್ವಾಂಸರು ಅಭಿಪ್ರಾಯಪಟ್ಟಿದ್ದಾರೆ. ಕದಂಬ ರಾಜನಾದ ಕಾಕುಸ್ಥವರ್ಮನ 'ಹಲ್ಮಿಡಿ' ಶಾಸನದಲ್ಲಿ ಕನ್ನಡ ಭಾಷೆಯ ಚಾಕ್ಷುಷ ರೂಪವನ್ನು ನಾವು ಮೊದಲಿಗೆ ಕಾಣುತ್ತೇವೆ. ಇದರ ಕಾಲವು ಕ್ರಿ.ಶ. ಸುಮಾರು 450 ಎಂದು ತಿಳಿಯಲಾಗಿದೆ. ಕನ್ನಡಿಗರ ಮತ್ತು ಕನ್ನಡ ನಾಡನ್ನಾಳಿದ ರಾಜರ ಪೋಷಣೆಯಿಂದ ಕನ್ನಡ ಭಾಷೆಯು ಹತ್ತನೆಯ ಶತಮಾನದ ಕಾಲಘಟ್ಟದಲ್ಲಿ ಮಹಾಕಾವ್ಯಗಳನ್ನು ನೀಡುವಲ್ಲಿ ಸಮರ್ಥವಾಗಿದೆ. ಈ ಕಾಲವು ಕನ್ನಡ ಸಾಹಿತ್ಯದ 'ಸುವರ್ಣಯುಗ' ಎಂದು ಗುರುತಿಸಲ್ಪಟ್ಟಿದೆ. ಆದರೆ ಹತ್ತನೆಯ ಶತಮಾನಕ್ಕಿಂತ ಪೂರ್ವದಲ್ಲಿ ಸಾಕಷ್ಟು ಸಾಹಿತ್ಯ ಕೃತಿಗಳು ಸೃಷ್ಟಿಯಾಗಿದ್ದರೂ ಅವೆಲ್ಲ ಕಾಲಗರ್ಭದಲ್ಲಿ ಅಡಗಿಹೋಗಿದ್ದು ಅವುಗಳ ತುಣುಕುಗಳು ಮಾತ್ರ ನಮಗೆ ಲಭ್ಯವಾಗಿವೆ. 'ಕವಿರಾಜಮಾರ್ಗ' ಎಂಬ ಲಕ್ಷಣ ಗ್ರಂಥವು ಪಂಪ ಪೂರ್ವ ಕೃತಿಯಾಗಿದ್ದು ಅನೇಕ ಕವಿ ಹಾಗೂ ಸಾಹಿತ್ಯ ಕೃತಿಗಳ ಬಗ್ಗೆ ಮಾಹಿತಿಯನ್ನು ಒದಗಿಸುತ್ತದೆ ಎಂಬುದು ಗಮನಿಸಬೇಕಾದ ಅಂಶವಾಗಿದೆ. 'ವಡ್ಡಾರಾಧನೆ'ಯು ಪಂಪಪೂರ್ವದಲ್ಲಿ ರಚಿಸಲ್ಪಟ್ಟ ಒಂದು ಗದ್ಯ ಕೃತಿಯಾಗಿದೆ. ಒಟ್ಟಿನಲ್ಲಿ ಗದ್ಯ–ಪದ್ಯಗಳೆರಡರಲ್ಲಿಯೂ ಕನ್ನಡ ಸಾಹಿತ್ಯ ಕೃತಿಗಳು ಮೂಡಿಬಂದುದನ್ನು ನಾವು ಕಾಣಬಹುದು.

ಭಾಷಾಚರಿತ್ರಕಾರರು ಸುಮಾರು ಎರಡು ಸಾವಿರ ವರ್ಷಗಳಿಗೂ ಮಿಗಿಲಾದ ಬೆಳವಣಿಗೆಯುಳ್ಳ ಕನ್ನಡ ಭಾಷೆಯಲ್ಲಿ 'ಪೂರ್ವದ ಹಳಗನ್ನಡ, ಹಳಗನ್ನಡ, ನಡುಗನ್ನಡ ಮತ್ತು ಹೊಸಗನ್ನಡ' ಎಂಬ ಅವಸ್ಥಾಂತರಗಳನ್ನು ಗುರುತಿಸಿದ್ದಾರೆ.

ಹತ್ತನೆಯ ಶತಮಾನದ ಬಳಿಕ ಶಿವಶರಣರ ವಚನಗಳು, ಶತಕ ಸಾಹಿತ್ಯ ಕೃತಿಗಳು, ದಾಸವರೇಣ್ಯರ ಕೀರ್ತನೆಗಳು, ಸಾಂಗತ್ಯ, ರಗಳೆ, ಷಟ್ಪದಿ ಸಾಹಿತ್ಯ ಕೃತಿಗಳು ರಚನೆಗೊಂಡು ಕನ್ನಡ ಸಾಹಿತ್ಯವನ್ನು ಮತ್ತಷ್ಟು ಶ್ರೀಮಂತಗೊಳಿಸಿವೆ.

ಸುಮಾರು 1500 ವರ್ಷಗಳ ಚರಿತ್ರೆಯುಳ್ಳ ಕನ್ನಡ ಸಾಹಿತ್ಯವು ಜನಮನ್ನಣೆಗೆ ಪಾತ್ರವಾಗಿ ಗ್ರಾಂಥಿಕ ಹಾಗೂ ವ್ಯಾವಹಾರಿಕ ಭಾಷೆಯಾಗಿ ಬೆಳೆದು ಬಂದಿರುವುದು ಕನ್ನಡಿಗರ ಭಾಷಾ ಪ್ರೇಮವನ್ನು ವ್ಯಕ್ತಪಡಿಸುತ್ತದೆ. ದೀರ್ಘ ಪರಂಪರೆಯುಳ್ಳ ಕನ್ನಡ ಸಾಹಿತ್ಯದ ಪರಿಚಯವನ್ನು ಇಂದಿನ ವಿದ್ಯಾರ್ಥಿಗಳು ಮಾಡಿಕೊಳ್ಳಬೇಕಾಗಿದೆ. ಈ ಹಿನ್ನೆಲೆಯಲ್ಲಿ 'ನುಡಿಸಿರಿ' ಘಟಕದಲ್ಲಿ ವಿವಿಧ ಸಾಹಿತ್ಯ ಕೃತಿಗಳ ಆಯ್ದ ಭಾಗಗಳನ್ನು ನೀಡಲಾಗಿದೆ. ಅಧ್ಯಾಪಕರು ಈ ಆಶಯವನ್ನು ಮನಗಂಡು ಇಲ್ಲಿನ ಪಾಠಗಳ ಮೂಲಕ ಕನ್ನಡ ಭಾಷೆ ಮತ್ತು ಸಾಹಿತ್ಯದ ಬಗೆಗೆ ವಿದ್ಯಾರ್ಥಿಗಳಲ್ಲಿ ಒಲವು ಮೂಡುವಂತೆ ಮಾಡಬೇಕಾಗಿದೆ.

ನಂಜುಂಡ ಕವಿಯ ಕುಮಾರರಾಮನ ಸಾಂಗತ್ಯದಿಂದ ಆಯ್ದ 'ನಾಡಸಿರಿ' ಎಂಬ ಪದ್ಯಭಾಗದಲ್ಲಿ ಕನ್ನಡ ನಾಡಿನ ವರ್ಣನೆ, ಭೌಗೋಳಿಕ ವಿಸ್ತಾರ, ಪ್ರಕೃತಿ ಸಂಪತ್ತು, ವಿದ್ಯಾಭ್ಯಾಸ, ಜನರ ನಡೆನುಡಿ, ಸಂಸ್ಕೃತಿ ಮೊದಲಾದವುಗಳು ಸುಂದರವಾಗಿ ಮೂಡಿಬಂದಿದ್ದು ನಾಡು–ನುಡಿಯ ಬಗೆಗೆ ಸಹೃದಯರಲ್ಲಿ ಅಭಿಮಾನವನ್ನು ಉಂಟುಮಾಡುತ್ತವೆ. ಪುಲಿಗೆರೆ ಸೋಮಕವಿಯ ಸೋಮೇಶ್ವರ ಶತಕದಿಂದ ಆಯ್ದ 'ಸಕ್ಕರೆಗುಪ್ಪಂ ಸರಿಮಾಳ್ಪರೇ' ಎಂಬ ಶೀರ್ಷಿಕೆಯಲ್ಲಿನ ಪದ್ಯಗಳು ನೀತಿಬೋಧಕವಾಗಿವೆ. 'ಸತ್ಯಂ–ಶಿವಂ–ಸುಂದರಂ' ಎಂಬ ಸಂದೇಶವನ್ನು ಸಾರುವ ರಾಘವಾಂಕನ ಹರಿಶ್ಚಂದ್ರ ಕಾವ್ಯವು ನಾಟಕೀಯತೆಗೆ ಹೆಸರನ್ನು ಪಡೆದಿದೆ. 'ತರುಣ ಸೂರ್ಯಂ ಕತ್ತಲೆಯನೆ ಹೊಕ್ಕಂತಾಯ್ತು' ಎಂಬ ಪ್ರಕೃತ ಪದ್ಯ ಭಾಗದಲ್ಲಿ ಸತ್ಯದ ಹಿರಿಮೆ, ಪಾತಿವ್ರತ್ಯದ ಮಹಿಮೆಗಳನ್ನು ಎತ್ತಿ ಹಿಡಿದುದಲ್ಲದೆ ಉತ್ತಮರ ಮುಂದೆ ಯಾವುದೇ ಠಕ್ಕು ಹೆಚ್ಚು ಕಾಲ ನಿಲ್ಲಲಾರಂಬುದು ಸ್ಥಾಪಿತವಾದುದನ್ನು ಮನಗಾಣಬಹುದು. ತಾಯ್ತಂದೆಯರು ಯಾವತ್ತೂ ಮಕ್ಕಳ ಕ್ಷೇಮವನ್ನೂ, ಸಾಮೀಪ್ಯವನ್ನೂ ಬಯಸುವ ವಾತ್ಸಲ್ಯಮಯಿಗಳಾಗಿರುವುದರಿಂದ ಅವರ ಮಾತುಗಳನ್ನು ಕಿರಿಯರು ಶಿರಸಾವಹಿಸಬೇಕು ಎಂಬುದನ್ನು ರನ್ನನ ಗದಾಯುದ್ಧದಿಂದ ಆಯ್ದ 'ಗುರುವಚನಮಲಂಘನೀಯಂ' ಎಂಬ ಕಾವ್ಯಭಾಗದಲ್ಲಿ ಕಾಣಬಹುದಾಗಿದೆ.

ಹಳೆಗನ್ನಡ – ನಡುಗನ್ನಡದ ಈ ಸಾಹಿತ್ಯ ಭಾಗಗಳಲ್ಲಿ ಹುದುಗಿರುವ ಈ ಮೇಲಿನ ಅಂಶಗಳನ್ನು ವಿದ್ಯಾರ್ಥಿಗಳು ಓದಿ ತಿಳಿದುಕೊಳ್ಳುವುದರ ಮೂಲಕ ಅವರನ್ನು ಇನ್ನಷ್ಟು ಸಾಹಿತ್ಯಾಸಕ್ತರನ್ನಾಗಿಸುವುದು ಮತ್ತು ಉತ್ತಮ ಜೀವನ ಮೌಲ್ಯಗಳನ್ನು ಅವರಲ್ಲಿ ತುಂಬುವುದು ಪ್ರಕೃತ ಪಠ್ಯಭಾಗಗಳ ಉದ್ದೇಶವಾಗಿದೆ.

# UNIT FRAME

**ಘಟಕ 3 : ನುಡಿಸಿರಿ** ಸಮಯ :

**ಕಲಿಕಾ ಸಾಧನೆಗಳು**

- ಕನ್ನಡ ಭಾಷೆ ಹಾಗೂ ಸಾಹಿತ್ಯದ ಬೆಳವಣಿಗೆಯನ್ನು ಹಳೆಗನ್ನಡ, ನಡುಗನ್ನಡ ಕೃತಿಗಳ ಹಿನ್ನಲೆಯಲ್ಲಿ ಗುರುತಿಸಿಕೊಂಡು ಆ ಬಗ್ಗೆ ತಮ್ಮ ಅನಿಸಿಕೆಗಳನ್ನು ಪ್ರಕಟಿಸುವರು.
- ಸಾಹಿತ್ಯ ಕೃತಿಗಳನ್ನು ಓದಿ ವಿಶ್ಲೇಷಣೆ ಮಾಡುವುದರ ಮೂಲಕ ಪರಂಪರೆಯಿಂದ ಹರಿದು ಬಂದ ಆಚಾರ ವಿಚಾರಗಳನ್ನು ಸಾಂಸ್ಕೃತಿಕ ಮೌಲ್ಯಗಳನ್ನು ತಿಳಿದುಕೊಂಡು ಅವುಗಳನ್ನು ನಿತ್ಯ ಜೀವನದಲ್ಲಿ ರೂಢಿಸಿಕೊಳ್ಳುವರು.
- ಪದ ನಿಷ್ಪತ್ತಿ, ವಾಕ್ಯ ಪ್ರಯೋಗ, ಕ್ರಿಯಾ ಧಾತು, ನಾಮ ವಿಶೇಷಣ, ಸಂಧಿ, ಸಮಾಸ, ದೇಶ್ಯ–ಅನ್ಯದೇಶ್ಯ ಪದಗಳು ಇವೇ ಮೊದಲಾದ ವ್ಯಾಕರಣ ವಿಶೇಷತೆಗಳನ್ನು ತಿಳಿದುಕೊಂಡು ಭಾಷಾ ಪ್ರಯೋಗಗಳಲ್ಲಿ ಅಳವಡಿಸಿಕೊಳ್ಳುವರು.
- ಶತಕ, ಕೀರ್ತನೆ, ತ್ರಿಪದಿಗಳಲ್ಲಿ ಮೂಡಿ ಬಂದಿರುವ ಜೀವನ ನೀತಿ, ಸಮಾಜ ವಿಮರ್ಶೆ ಮೊದಲಾದವುಗಳನ್ನು ತಿಳಿದುಕೊಂಡು ತಮ್ಮ ಪ್ರತಿಕ್ರಿಯೆಗಳನ್ನು ಸೂಕ್ತ ವ್ಯವಹಾರ ರೂಪಗಳಲ್ಲಿ ಪ್ರಕಟಿಸುವ ಸಾಮರ್ಥ್ಯಗಳನ್ನು ಗಳಿಸುವರು.
- ಸಾಹಿತ್ಯ ಕೃತಿಗಳಲ್ಲಿ ಮೂಡಿಬಂದಿರುವ ಸಮಕಾಲೀನ ವಿಚಾರಗಳನ್ನು ಕಂಡುಕೊಂಡು ನಾಡು–ನುಡಿ ಚಿಂತನೆ, ಪರಿಸರ ಪ್ರಜ್ಞೆ, ಪರಿಸರ ಸ್ನೇಹ, ಬಾಂಧವ್ಯ ಇವೇ ಮೊದಲಾದ ಮನೋಭಾವಗಳನ್ನು ಬೆಳೆಸಿಕೊಳ್ಳುವರು.
- ಚಂಪೂ ಸಾಹಿತ್ಯ ಸ್ವರೂಪವನ್ನು ಅಧ್ಯಯನ ಮಾಡಿ, ಹಳೆಗನ್ನಡ ಪದ್ಯ–ಗದ್ಯಗಳ ಆಶಯಗಳನ್ನು ಅರ್ಥ ಮಾಡಿಕೊಂಡು ಸೂಕ್ತ ಸಂದರ್ಭಗಳಲ್ಲಿ ಬಳಸಲು ಸಮರ್ಥರಾಗುವರು.
- ಹಳೆ ಗನ್ನಡ ಕಾವ್ಯ ಭಾಗಗಳನ್ನು ಸ್ವರ ಭಾರಯುಕ್ತವಾಗಿ, ಸ್ಫುಟವಾಗಿ ವಾಚನ ಮಾಡುವರು.
- ಕಾವ್ಯಭಾಗಗಳಲ್ಲಿ ಬಳಕೆಯಾದ ಛಂದಸ್ಸನ್ನು(ಷಟ್ಪದಿ, ಕಂದ, ವರ್ಣವೃತ್ತ) ಗುರುತಿಸಲು ಸಮರ್ಥರಾಗುತ್ತಾರೆ.
- ಕಾವ್ಯಭಾಗಗಳಲ್ಲಿ ಬರುವ ವ್ಯಾಕರಣ, ಛಂದಸ್ಸು ಅಲಂಕಾರ ಇತ್ಯಾದಿಗಳನ್ನು ಗುರುತಿಸಿ ಭಾಷೆಯ ಬಳಕೆಯ ಸಂದರ್ಭದಲ್ಲಿ ಅವುಗಳನ್ನು ಅಳವಡಿಸಿಕೊಳ್ಳುವರು.

| ಪರಿಕಲ್ಪನೆ | ಪ್ರಕ್ರಿಯೆ / ಚಟುವಟಿಕೆ/ಮೌಲ್ಯಮಾಪನ | ಕಲಿಕಾ ಸಾಧನೆಗಳು |
|---|---|---|
| • ನಡುಗನ್ನಡ ಕಾಲದ ಸಾಹಿತ್ಯಗಳ ಸಮೃದ್ಧವಾಗಿದೆ<br>• ನಾಡು–ನುಡಿಗಳ ವರ್ಣನೆ | • ಸಾಂಗತ್ಯವನ್ನು ಹಾಡುವುದು<br>• ಚರ್ಚಿಸಿ ಪ್ರಬಂಧ ಬರೆಯುವುದು<br>• ಅಲಂಕಾರ ವೈಶಿಷ್ಟ್ಯವನ್ನು ತಿಳಯುವುದು. | • ಪ್ರಬಂಧ ರಚನೆ<br>• ಲೇಖನಗಳ ಸಂಕಲನ |

| ಪರಿಕಲ್ಪನೆ | ಪ್ರಕ್ರಿಯೆ / ಚಟುವಟಿಕೆ/ಮೌಲ್ಯಮಾಪನ | ಕಲಿಕಾ ಸಾಧನೆಗಳು |
|---|---|---|
| | • ಕನ್ನಡ ನಾಡಿನ ಪ್ರೇಕ್ಷಣೀಯ ಸ್ಥಳಗಳ ಕುರಿತಾಗಿ ಮಾಹಿತಿ ಸಂಗ್ರಹಿಸಿ ಲೇಖನಗಳ ಸಂಕಲನವನ್ನು ತಯಾರಿಸುವುದು.<br>• ನಾಡು ನುಡಿಗಳ ಕುರಿತಾದ ಹಾಡುಗಳನ್ನು ಸಂಗ್ರಹಿಸುವುದು.<br>• ನಾಮಪದ, ನಾಮ ವಿಶೇಷಣ, ಕ್ರಿಯಾ ವಿಶೇಷಣ ಮತ್ತು ಕ್ರಿಯಾ ಪದಗಳನ್ನು ಗುರುತಿಸಿ ಬರೆಯುವುದು<br>• ವಿಭಕ್ತಿ ಪ್ರತ್ಯಯಗಳನ್ನು ಸೇರಿಸಿ ಬರೆಯುವುದು.<br>• ಅಕ್ಷರ ಪಲ್ಲಟಗೊಂಡ ಪದಗಳನ್ನು ಸಂಗ್ರಹಿಸುವುದು. | |
| • ಶತಕ ಸಾಹಿತ್ಯವು ವೈಶಿಷ್ಟ್ಯಪೂರ್ಣವಾಗಿದೆ. ನೀತಿಯನ್ನು ಸಾರುತ್ತದೆ. | • ಶತಕದ ಪದ್ಯಗಳನ್ನು ರಾಗವಾಗಿ ಹಾಡುವುದು<br>• ವಿಶದೀಕರಣ ಬರೆಯುವುದು<br>• ಸಮರ್ಥಿಸಿ ಬರೆಯುವುದು<br>• ಆಶಯ ಸಂಗ್ರಹಿಸಿ ಬರೆಯುವುದು<br>• ಟಿಪ್ಪಣಿ ಬರೆಯುವುದು<br>• ಕರಪತ್ರ ತಯಾರಿಸುವುದು<br>• ಕಥೆ ಸಂಗ್ರಹಿಸುವರು<br>• ಪದ ವಿಂಗಡಿಸಿ ಬರೆಯುವರು<br>• ಸಮಾಸ ಪದಗಳನ್ನು ಗುರುತಿಸುವರು<br>• ಧ್ವನಿ ವ್ಯತ್ಯಾಸಗಳನ್ನು ತಿಳಿಯುವರು<br>• ಛಂದಸ್ಸನ್ನು ಗುರುತಿಸುವರು. | • ಟಿಪ್ಪಣಿ<br>• ಕರಪತ್ರ, ಕಥೆ<br>• ಛಂದಸ್ಸಿನ ತಖ್ತೆ |

| ಪರಿಕಲ್ಪನೆ | ಪ್ರಕ್ರಿಯೆ / ಚಟುವಟಿಕೆ/ಮೌಲ್ಯಮಾಪನ | ಕಲಿಕಾ ಸಾಧನೆಗಳು |
|---|---|---|
| • ನಡುಗನ್ನಡ ಸಾಹಿತ್ಯದಲ್ಲಿ ಷಟ್ಪದಿಗೆ ವಿಶಿಷ್ಟ ಸ್ಥಾನವಿದೆ.<br>• ಹರಿಶ್ಚಂದ್ರ ಕಾವ್ಯದಲ್ಲಿನ ಜೀವನ ಮೌಲ್ಯಗಳು<br>• ಕಾವ್ಯದಲ್ಲಿನ ನಾಟಕೀಯತೆ | • ಕಾವ್ಯ ವಾಚನ ಮಾಡುವುದು<br>• ನಾಟಕೀಯ ಅಂಶಗಳನ್ನು ಗುರುತಿಸಿ ಸಂಭಾಷಣೆ ಬರೆಯುವುದು<br>• ಅನುವಾದ ಬರೆಯುವುದು<br>• ಪರ್ಯಾಯ ಪದಗಳನ್ನು ಹೆಸರಿಸುವುದು<br>• ಪದ ವಿಂಗಡಿಸಿ ಬರೆಯುವುದು<br>• ಸಮಾಸ, ಅಲಂಕಾರಗಳನ್ನು ಗುರುತಿಸುವುದು<br>• ಛಂದಸ್ಸನ್ನು ಗುರುತಿಸುವುದು | • ಸಂಭಾಷಣಾ ಬರಹ<br>• ಅನುವಾದಿಸುವುದು<br>• ಛಂದಸ್ಸಿನ ತಖ್ತೆ |
| • ಕನ್ನಡ ಸಾಹಿತ್ಯದಲ್ಲಿ ಹಳೆಗನ್ನಡಕ್ಕೆ ವಿಶಿಷ್ಟವಾದ ಸ್ಥಾನವಿದೆ.<br>• ಚಂಪೂ ಶೈಲಿಯ ಪ್ರತ್ಯೇಕತೆ<br>• ಕನ್ನಡ ಸಾಹಿತ್ಯಕ್ಕೆ ರನ್ನನ ಕೊಡುಗೆ | • ಚಂಪೂವನ್ನು ವಾಚಿಸುವ ಕ್ರಮವನ್ನು ತಿಳಿಯುವರು. ಪಾತ್ರ ಚಿತ್ರಣ ಮಾಡುವರು<br>• ವಿಶಿಷ್ಟ ಸಾಲುಗಳ ಸ್ವಾರಸ್ಯವನ್ನು ತಿಳಿಯುವರು<br>• ಗಾದೆ ಮಾತಿನ ವಿಸ್ತರಣೆ– ಲಘು ಲೇಖನ<br>• ಹಳೆಗನ್ನಡದಿಂದ–ಹೊಸಗನ್ನಡಕ್ಕೆ ರೂಪಾಂತರ<br>• ಸಂಧಿ ವಿಂಗಡಿಸಿ ಹೆಸರಿಸುವುದು<br>• ಛಂದಸ್ಸನ್ನು ಅರಿಯುವರು<br>• ಅಲಂಕಾರ ಗುರುತಿಸುವರು | • ಪಾತ್ರ ಚಿತ್ರಣ<br>• ಲೇಖನ<br>• ರೂಪಾಂತರ ಬರಹ<br>• ಛಂದಸ್ಸು ತಖ್ತೆ |

# ನಾಡಸಿರಿ

ನಂಜುಂಜ ಕವಿ

## ಪ್ರವೇಶ

ಕನ್ನಡ ಸಾಹಿತ್ಯ ಪರಂಪರೆಯನ್ನು ಗಮನಿಸಿದಾಗ, ಅದು ವಿವಿಧ ಕಾಲಘಟ್ಟಗಳಲ್ಲಿ ಪರಿವರ್ತನೆ ಹೊಂದುತ್ತಾ ಬಂದುದನ್ನು ಕಾಣಬಹುದು. ಕಾಲಕಾಲಕ್ಕೆ ಕನ್ನಡ ಸಾಹಿತ್ಯದಲ್ಲಿ ನವೀನ ಪ್ರಯೋಗಗಳು ಸಾಕಷ್ಟು ನಡೆದಿವೆ. ಕನ್ನಡ ಕಾವ್ಯ ಇನ್ನೇನು ತಟಸ್ಥವಾಗತೊಡಗಿತು ಎಂದು ತೋರಿದಾಗಲೆಲ್ಲಾ ಅದು ಹೊಸ ತಿರುವುಗಳನ್ನು ಪಡೆದುಕೊಂಡು ಉತ್ಸಾಹದಿಂದ ಹೆಜ್ಜೆ ಹಾಕಿದೆ. ಚಂಪೂಕಾವ್ಯ ತನ್ನ ಅಭಿವ್ಯಕ್ತಿ ಸಾಧ್ಯತೆಗಳನ್ನು ಸೂರೆಮಾಡಿ ನಿಂತ ನೀರಾದಾಗ ಷಟ್ಪದಿಯ ನವೋತ್ಸಾಹದ ಕಾಯಕಲ್ಪವಾಯಿತು. ಚಂಪೂ, ಷಟ್ಪದಿ, ತ್ರಿಪದಿ ಮತ್ತು ರಗಳೆಗಳ ಪರಂಪರೆಯಲ್ಲಿ ಹೊಸತನವನ್ನು ಬಯಸಿದ ಕವಿಗಳು ಸಾಂಗತ್ಯಕ್ಕೆ ನಾಂದಿ ಹಾಡಿದರು ಎನ್ನಬಹುದು.

ಸಾಂಗತ್ಯವು ವರ್ಣಕ ಕಾವ್ಯ. 'ಸಂಗತಿ'ಎಂದರೆ 'ಮೇಳದೊಡನೆ ಸಾಗುವ ಗತಿ'ಎಂಬ ದೃಷ್ಟಿಯಿಂದಲೂ ಸಾಂಗತ್ಯಕ್ಕೆ ಸಮಂಜಸವಾದ ಅರ್ಥವನ್ನು ಮಾಡಬಹುದು. ಶಿಶುಮಾಯಣನ 'ಅಂಜನಾಚರಿತ್ರೆ, 'ತ್ರಿಪುರ ದಹನ ಸಾಂಗತ್ಯ', ದೇಪರಾಜನ 'ಸೊಬಗಿನ ಸೋನೆ', ತೆಂಕಣಾಂಬಿ ಬೊಮ್ಮರಸನ 'ಜೀವಂಧರ ಸಾಂಗತ್ಯ', ಮಂಗರಸನ 'ನೇಮಿಜಿನೇಶ ಸಾಂಗತ್ಯ', ನಂಜುಂಡಕವಿಯ 'ಕುಮಾರ ರಾಮನ ಸಾಂಗತ್ಯ', ಕನಕದಾಸರ 'ಮೋಹನ ತರಂಗಿಣಿ' ಮುಂತಾದವುಗಳು ಸಾಂಗತ್ಯವನ್ನು ರಚಿತವಾದ ಕಾವ್ಯಗಳು. ಈ ಕೃತಿಗಳ ಸಾಲಿನಲ್ಲಿ ರತ್ನಾಕರ ವರ್ಣಿಯ 'ಭರತೇಶ ವೈಭವ'ಕ್ಕೆ ವಿಶಿಷ್ಟವಾದ ಸ್ಥಾನವಿದೆ.

16ನೇ ಶತಮಾನದಲ್ಲಿ ಬಾಳಿದ ಕನ್ನಡದ ಪ್ರಮುಖ ಸಾಂಗತ್ಯ ಕವಿಗಳಲ್ಲಿ ಒಬ್ಬನು ನಂಜುಂಡ ಕವಿ. ಅವನು ರಚಿಸಿದ 'ರಾಮನಾಥ ಚರಿತೆ'ಯು 'ಕುಮಾರ ರಾಮನ ಸಾಂಗತ್ಯ' ಎಂಬ ಹೆಸರಿನಿಂದ ಪ್ರಸಿದ್ಧವಾಗಿದೆ. ಕನ್ನಡ ಕಾವ್ಯ ಪರಂಪರೆಯಲ್ಲಿ ಇದು ಮೊದಲ ಐತಿಹಾಸಿಕ ಕಾವ್ಯ ಎಂದು ಗುರುತಿಸಲ್ಪಟ್ಟಿದೆ. ಕವಿ ತೋರುವ ಕನ್ನಡದ ಕಸುವು, ಜನ ಜೀವನದ ಸಹಜ ಚಿತ್ರಣ, ನಾಡಿನ ಬಗೆಗೆ ಕವಿಗಿರುವ ಅಭಿಮಾನ–ಈ ಕಾವ್ಯದ ಮುಖ್ಯ ಗುಣಗಳು.

ಪ್ರಸ್ತುತ ಪದ್ಯಭಾಗದಲ್ಲಿ ಕನ್ನಡ ನಾಡಿನ ವಿಸ್ತಾರ, ಅಲ್ಲಿ ನಿರಂತರವಾಗಿ ತುಂಬಿ ಹರಿಯುತ್ತಿರುವ ನದಿಗಳು, ಫಲ ಪುಷ್ಪ ಸಮೃದ್ಧಿಯಿಂದ ಕೂಡಿರುವ ಉದ್ಯಾನವನ, ಅಲ್ಲಿ ವಿಹರಿಸುವ ಪಕ್ಷಿ ಸಂಕುಲ, ಅಲ್ಲಿನ ಜನಜೀವನ ಮುಂತಾದವು ಸಹಜವಾಗಿ ಚಿತ್ರಣಗೊಂಡಿವೆ.

## ಪೂರ್ವಜ್ಞಾನ

- ಕನ್ನಡ ನಾಡು ನುಡಿಯ ಬಗ್ಗೆ ಬರೆದಿರುವ ಕವನಗಳನ್ನು ವಿದ್ಯಾರ್ಥಿಗಳು ಓದಿರುವರು.
- ಕವಿ ನಿಸಾರ್ ಅಹಮ್ಮದ್ ಅವರ 'ನಿತ್ಯೋತ್ಸವ', ಕುವೆಂಪು ಬರೆದಿರುವ ನಾಡಗೀತೆಯಾದ 'ಜಯಹೇ ಕರ್ನಾಟಕ ಮಾತೆ' ಮುಂತಾದ ಪದ್ಯಗಳನ್ನು ವಿದ್ಯಾರ್ಥಿಗಳಿಂದ ಹಾಡಿಸುವುದು. ಇದೇ ರೀತಿಯ ಆಶಯಗಳನ್ನೊಳಗೊಂಡ ನಡುಗನ್ನಡ ಕಾಲಘಟ್ಟದಲ್ಲಿ ರಚಿತವಾದ ಕಾವ್ಯಭಾಗವೊಂದನ್ನು ಅಭ್ಯಾಸ ಮಾಡುವ ಎಂದು ವಿದ್ಯಾರ್ಥಿಗಳನ್ನು ಪಾಠ ಪ್ರವೇಶ ಮಾಡಿಸುವುದು.

## ಓದುವುದು

ವಿದ್ಯಾರ್ಥಿಗಳನ್ನು ಗುಂಪುಗಳನ್ನಾಗಿ ಮಾಡಿ ಪದ್ಯದ ಭಾಗಗಳನ್ನು ವಿವಿಧ ಗುಂಪುಗಳಿಗೆ ಹಂಚುವುದು. ಗುಂಪಿನಿಂದ ಒಬ್ಬೊಬ್ಬರಂತೆ ಸರದಿಯಲ್ಲಿ ಬಾಯ್ದೆರೆಯಾಗಿ, ಭಾವಪೂರ್ಣವಾಗಿ ಓದಲಿ. ಅರ್ಥ ಸ್ಪಷ್ಟತೆಗಾಗಿ ಪದಗಳನ್ನು ವಿಂಗಡಿಸಬೇಕಾಗಿದ್ದಲ್ಲಿ ವಿದ್ಯಾರ್ಥಿಗಳಿಂದ ವಿಂಗಡಿಸಿ ಹೇಳಿಸುವುದು. ಪಠ್ಯದಲ್ಲಿ ಕೊಟ್ಟಿರುವ ಪದವಿಂಗಡಣೆಯನ್ನು ಮಕ್ಕಳು ಗಮನಿಸಲಿ. ಅರ್ಥವನ್ನು ಮಕ್ಕಳು ಕಂಡುಕೊಳ್ಳಲಿ. ಕಠಿಣ ಎನಿಸಿದ ಕಡೆಗಳಲ್ಲಿ ಅಧ್ಯಾಪಕರು ವಿಂಗಡಿಸಿ ತೋರಿಸುವುದು. ಅಗತ್ಯವಿದ್ದಲ್ಲಿ ಕರಿಹಲಗೆಯಲ್ಲಿ ಬರೆದು ತೋರಿಸಬಹುದು. ಕೆಲವು ಪದಗಳನ್ನು ವಿದ್ಯಾರ್ಥಿಗಳಿಂದಲೇ ಕರಿಹಲಗೆಯಲ್ಲಿ ಬರೆಸಬಹುದು.

- ದಕ್ಷಿಣ ಭಾಗದೊಳಭಿರಾಮತೆವಡೆದೆಸೆದಿರ್ಪ

  ದಕ್ಷಿಣ ಭಾಗದೊಳು + ಅಭಿರಾಮತೆ + ಪಡೆದು + ಎಸೆದು + ಇರ್ಪ

- ಭೂಮಿಗಳೆಡೆಯೊಳಿರ್ಪುದು

  ಭೂಮಿಗಳ + ಎಡೆಯೊಳು + ಇರ್ಪುದು

- ಗೋದಾವರಿವರೆಗಮಿರ್ದಾ

  ಗೋದಾವರಿವರೆಗಂ + ಇರ್ದ + ಆ

- ಕರ್ನಾಟಕಭೂಮಿಯೊಳೋರಂತೆ

  ಕರ್ನಾಟಕಭೂಮಿಯೊಳು + ಓರಂತೆ

- ಶರಧಿಯನೊಲಿದಮರ್ದಪ್ಪಲಾ

  ಶರಧಿಯನು + ಒಲಿದು + ಅಮರ್ದು + ಅಪ್ಪಲು + ಆ

- ಕರಮೆಸೆದಿಪ್ಪವು

  ಕರಮ್ + ಎಸೆದು + ಇಪ್ಪವು

- ನಾರಿಕೇಳಾಮ್ರ

  ನಾರಿಕೇಳ + ಆಮ್ರ

- ಧಾನ್ಯದಕ್ಷಯನಿಧಿಯಂತಾವಗಮೆಸೆದಿರುತಿಹುದು

  ಧಾನ್ಯದ + ಅಕ್ಷಯನಿಧಿಯಂತೆ + ಆವಗಂ + ಎಸೆದು + ಇರುತಿಹುದು

- ನೆಲೆವನೆಯಾಗಿಹುದೆಲ್ಲಿ

  ನೆಲೆ + ಮನೆ + ಆಗಿಹುದು + ಎಲ್ಲಿ

- ಪೊಡವಿಯೊಳೆಸೆದಿರುತಿಹವು

  ಪೊಡವಿಯೊಳು + ಎಸೆದು + ಇರುತಿಹವು

- ಕಣ್ಪಱಿಮೆಗಳ್ಪಥಿಕರೆರ್ದೆಗಳ

  ಕಣ್ + ಪಱಿಮೆಗಳ್ + ಪಥಿಕರ + ಎರ್ದೆಗಳ

- ಕೊಱೆದಲರ್ಗಣೆಗಳಿಗವರಂತರಂಗವ

  ಕೊಱೆದು + ಅಲರ್ + ಕಣೆಗಳಿಗೆ + ಅವರ + ಅಂತರಂಗವ

- ನೀಱೆಯರಲ್ಲದಱಿಯದ

  ನೀಱೆಯರು + ಅಲ್ಲದೆ + ಅಱಿಯದ

## ಸಾರಾಂಶ ಬರೆಯುವುದು

ವಿದ್ಯಾರ್ಥಿಗಳು ಕಾವ್ಯಭಾಗವನ್ನು ಎಷ್ಟು ಅರ್ಥೈಸಿಕೊಂಡಿರುವರು ಎಂಬುದನ್ನು ತಿಳಿಯಲು ಆಶಯಗ್ರಹಣ ಪ್ರಶ್ನೆಗಳನ್ನು ಅಧ್ಯಾಪಕರು ಕೇಳುವರು. ವಿದ್ಯಾರ್ಥಿಗಳು ಉತ್ತರವನ್ನು ಬಾಯ್ದೆರೆಯಾಗಿ ಹೇಳಲಿ. ಈ ಚಟುವಟಿಕೆಯಲ್ಲಿ ಎಲ್ಲರೂ ಭಾಗವಹಿಸಲಿ. ಬಳಿಕ ಇಡಿ ಪದ್ಯದ ಆಶಯವನ್ನು ಪ್ರತಿಯೊಬ್ಬರೂ ಬರೆಯುವಂತೆ ಸೂಚಿಸುವುದು.

## ಸಾರಾಂಶ

1. ಮೇರು ಪರ್ವತದ ತೆಂಕುಭಾಗದಲ್ಲಿ ಕನ್ನಡ ನಾಡು ಮನೋಹರವಾಗಿ ಶೋಭಿಸುತ್ತದೆ.
2. ಕಾವೇರಿಯಿಂದ ಗೋದಾವರಿಯವರೆಗೆ ಹಬ್ಬಿರುವ ವಿಶಾಲವಾದ ಈ ಕನ್ನಡ ನಾಡನ್ನೂ, ಕನ್ನಡ ಜನರನ್ನೂ ವರ್ಣಿಸಲಸಾಧ್ಯ.
3. ಭೂರಮೆಯು(ಭೂದೇವಿಯು) ಉಟ್ಟು ಬೇಡ ಎಂದು ಬಿಡಿಸಿಟ್ಟ ರೇಶ್ಮೆ ಸೀರೆಯಂತೆ ಶೋಭಿಸುವ ವಿಶಾಲವಾದ ನದಿಗಳು ಆ ಕರ್ನಾಟಕ ಭೂಮಿಯಲ್ಲಿ ಸದಾ ತುಂಬಿ ಹರಿಯುತ್ತಾ ಶೋಭಿಸುತ್ತವೆ.
4. ಸಮುದ್ರವನ್ನು ಪ್ರೀತಿಯಿಂದ ಆಲಂಗಿಸಿಕೊಳ್ಳಲು ನದಿಯೆಂಬ ಸ್ತ್ರೀಯು ನೀಡಿದ ಕೈಗಳೋ ಎಂಬಂತೆ ಕನ್ನಡ ನಾಡಿನ ಕಾಲುವೆಗಳು ಶೋಭಿಸುತ್ತವೆ.
5. ಎಂದೆಂದೂ ಕಡಿಮೆಯಾಗದ ಫಲಸಮೃದ್ಧಿಯಿಂದ ಕೂಡಿ ಶೋಭಿಸುತ್ತಿರುವ ಉದ್ಯಾನವನಗಳು ದೇವೇಂದ್ರನ ನಂದನ ವನದಂತೆ ನೋಡುಗರ ಕಣ್ಣುಗಳಿಗೆ ಆನಂದವನ್ನುಂಟುಮಾಡುತ್ತಿವೆ.
6. ತೆಂಗು, ಮಾವು, ಹಲಸು, ಕದಳಿ, ಖರ್ಜೂರ, ಶ್ರಿಗಂಧ, ಸಂಪಿಗೆಗಳ ತೋಟದಿಂದ ಶೋಭಿಸುತ್ತಿರುವ ಈ ಉದ್ಯಾನವು ದಾರಿಹೋಕರ ಕಣ್ಣುಗಳಿಗೆ ಹಬ್ಬದ ಸಂಭ್ರಮವನ್ನು ನೀಡುತ್ತಿದೆ.
7. ದೇವನದೀ ಮಾತೃಕೆಯ ಭೂಮಿಯಾಗಿರುವುದರಿಂದ ದೇವಲೋಕವನ್ನು ಮೀರಿಸುತ್ತಾ ಕನ್ನಡ ಭೂಮಿಯು ಧಾನ್ಯದ ಅಕ್ಷಯ ನಿಧಿಯಂತೆ ಸದಾ ಶೋಭಿಸುತ್ತದೆ.
8. ದುಂಬಿಯಿಲ್ಲದ ತಾವರೆ, ತಾವರೆಯಿಲ್ಲದ ಕೊಳ, ಕೊಳವಿಲ್ಲದ ಉದ್ಯಾನವನ, ಅರಳಿರುವ ಹೂಗಳಿಲ್ಲದ ಗ್ರಾಮಗಳು ಆ ಪ್ರಸಿದ್ಧವಾದ ನಾಡಿನಲ್ಲಿ ಎಲ್ಲಿ ನೋಡಿದರೂ ಇಲ್ಲ.
9. ಚಿಗುರಿದ ಮಾವು, ಮಾವಿಲ್ಲದ ಮಲ್ಲಿಗೆ, ಮಲ್ಲಿಗೆ ಬಳ್ಳಿಯಿಲ್ಲದ ವನ, ವನವಿಲ್ಲದ ಭೋಗಿಗಳು ಆ ನಾಡಿನೆಡೆಯಲ್ಲಿ ಇಲ್ಲ.
10. ಹಂಸ, ಗಿಳಿ, ಸಾರಸ, ಚಕ್ರವಾಕ, ಕೋಗಿಲೆ, ನವಿಲು ಮುಂತಾದ ಪಕ್ಷಿಗಳು ಆ ನೆಲದ ಬನದಲ್ಲಿ ಇವೆ.
11. ಹಗಲು ಅರಳಿರುವ ತಾವರೆ, ರಾತ್ರಿ ಚೆನ್ನಾಗಿ ಅರಳಿರುವ ಕೆನ್ನೈದಿಲೆಗಳಿರುವ ಕೆರೆಗಳಿಗೆ, ಭತ್ತದ ಗದ್ದೆಗಳಿಗೆ ಆ ನೆಲವು ನೆಲೆಮನೆಯಾಗಿರುವುದು. ಆ ನೆಲದ ಸೌಂದರ್ಯವನ್ನು ವರ್ಣಿಸಲು ಸಾಧ್ಯವೇ?
12. ನಡೆಯುವ ಹಂಸ, ನುಡಿವ ಅರಗಿಳಿಗಳು, ಕುಣಿಯುವ ಸುಂದರ ನವಿಲುಗಳು, ಇಂಪಾದ ದನಿಯನ್ನು ಹೊರಡಿಸುವ ಕೋಗಿಲೆಗಳು, ಝೇಂಕರಿಸುವ ದುಂಬಿಗಳು ಅಲ್ಲಿನ ದಾರಿಹೋಕರನ್ನು ಮಾರುಹೋಗುವಂತೆ ಮಾಡುತ್ತಿದ್ದವು.

13. ಕಡಲುಗಳು ಆ ನಾಡಿನ ಸೌಂದರ್ಯವನ್ನು ನೋಡಲು ಓಡಿ ಬಂದು ಕೆರೆಯ ರೂಪದಲ್ಲಿ ನೆಲೆಸಿದವೋ ಎಂಬಂತೆ ಕಡೆಗೋಡಿಗಳಿಂದ ಕೂಡಿರುವ ದೊಡ್ಡ ಕೆರೆಗಳು ಅಲ್ಲಿ ಶೋಭಿಸುತ್ತವೆ.
14. ಕನ್ನಡ ನಾಡಿನ ಸ್ತ್ರೀಯರು ಮೊಳಕೆ ಬಂದ ಗಿಡಗಳನ್ನು ಕೀಳುವ, ಕಳೆ ತೆಗೆಯುವ, ಒತ್ತೊತ್ತಾಗಿರುವ ಗಿಡಗಳನ್ನು ಬಿಡಿಸಿ ವಿರಳಗೊಳಿಸುವ, ಗಿಡಗಳಿಗೆ ಪ್ರಮಾಣವರಿತು ನೀರನ್ನು ಹಾಕುವ, ಸಸಿಯನ್ನು ತೆಗೆಯುವ ಮತ್ತು ನೆಡುವ ಕೆಲಸಗಳಲ್ಲಿ ತೊಡಗಿರುವ ನಗುಮೊಗದ ಸುಂದರಿಯರ ರೀತಿ ಸೊಗಸಾಗಿರುವುದು
15. ಅರವಟ್ಟಿಗೆಯಲ್ಲಿ ನೀರನ್ನು ಎರೆಯುವ ಹೆಣ್ಣು ಮಕ್ಕಳ ಕಣ್ಣಕಾಂತಿಯು ದಾರಿಹೋಕರ ಅಂತರಂಗವನ್ನು ಕೊರೆಯುವ ಪುಷ್ಪಬಾಣಗಳಾಗಿ ತೋರುತ್ತಿವೆ.
16. ಸರಸ ಸಂಭಾಷಣೆಯಲ್ಲಿ ಮತ್ತು ಸಂಗೀತ ಕಲೆಯಲ್ಲಿ ಪ್ರೌಢಿಮೆಯನ್ನು ಹೊಂದಿದ, ಸುಂದರರಾದ ಜಾಣರಿಗೆ ಪ್ರಾಣವನ್ನೇ ತುಂಬಲು ಸಿದ್ಧರಾದ ತರುಣಿಯರೇ ಕನ್ನಡ ನಾಡಿನಲ್ಲಿ ಶೋಭಿಸುತ್ತಿದ್ದರು.
17. ಕನ್ನಡ ನಾಡಿನ ಪುರುಷರೆಲ್ಲ ವೀರರು ಹೊರತು ಹೇಡಿಗಳಲ್ಲ. ದಾನಶೂರರು ಹೊರತು ಲೋಭಿಗಳಲ್ಲ. ಸತ್ವಯುತವಾದ ಗುಣಗಳನ್ನೇ ಆಸ್ವಾದಿಸಬಲ್ಲವರು ಅಲ್ಲದೆ ಕೆಟ್ಟ ಸ್ವಭಾವದವರಲ್ಲ.

## ಸಂಕ್ಷೇಪವಾಗಿ ಉತ್ತರಿಸುವುದು

ವಿದ್ಯಾರ್ಥಿಗಳು ಗುಂಪುಗಳಾಗಿ ಪಠ್ಯಭಾಗದಲ್ಲಿ ಕೇಳಲಾದ ಪ್ರಶ್ನೆಯ ಕುರಿತು ಸಂಕ್ಷಿಪ್ತವಾಗಿ ಬರೆಯಲಿ. ಸೂಕ್ತ ತಿದ್ದುಪಡಿಯೊಂದಿಗೆ ಉತ್ತಮವಾದುದನ್ನು ಆರಿಸಿ ಓದಲಿ. ಮಾದರಿಯನ್ನು ಕೆಳಗೆ ನೀಡಲಾಗಿದೆ.

❑ ಕನ್ನಡ  ನಾಡಿನ ನದಿಗಳು ಹೇಗಿವೆಯೆಂದು ಕವಿ ವರ್ಣಿಸಿದ್ದಾನೆ?

ಭೂರಮೆಯು ಒಮ್ಮೆ ಉಟ್ಟು 'ಇದು ಬೇಡ' ಎಂದು ಬಿಡಿಸಿಟ್ಟ ರೇಶ್ಮೆ ಸೀರೆಗಳಂತೆ (ರೇಶ್ಮೆ ಬಟ್ಟೆಯನ್ನು ಒಮ್ಮೆ ಉಪಯೋಗಿಸಿದರೆ ಅದನ್ನು ಬಿಡಿಸಿ ಒಣಗಿಸಿ ಇಡಬೇಕು)ಶೋಭಿಸುವ ವಿಶಾಲವಾದ ನದಿಗಳು, ಆ ಕರ್ನಾಟಕ ಭೂಮಿಯಲ್ಲಿ ಸದಾ ತುಂಬಿ ಹರಿಯುತ್ತಿದ್ದುವು.

ಮೇಲಿನ ಮಾದರಿಯ ಹಾಗೆ ಉಳಿದ ಪ್ರಶ್ನೆಗಳಿಗೆ ಉತ್ತರಗಳನ್ನು ವಿದ್ಯಾರ್ಥಿಗಳು ಸಂಕ್ಷಿಪ್ತವಾಗಿ ಬರೆಯಲಿ.

## ಚಟುವಟಿಕೆಗಳು

### ಪ್ರಬಂಧ ರಚನೆ

ಪ್ರಬಂಧ ರಚನೆಯ ಹಂತಗಳನ್ನು ಹಿಂದಿನ ಪಾಠದಲ್ಲಿ ಸೂಚಿಸಲಾಗಿದೆ. ಅದನ್ನು ಗಮನಿಸಲಿ.

ಕನ್ನಡ ನಾಡಿನ ಪ್ರಸ್ತುತ ಪರಿಸ್ಥಿತಿಯು ನಂಜುಂಡ ಕವಿ ಹೇಳಿದಂತಿದೆಯೇ? ತರಗತಿಯಲ್ಲಿ ಚರ್ಚಿಸಿ ಪ್ರಬಂಧವನ್ನು ಬರೆಯಿರಿ. ಪ್ರಬಂಧವನ್ನು ಈ ಕೆಳಗಿನ ಅಂಶಗಳು ಅಡಕವಾಗಿರಲಿ.

- ನಂಜುಂಡ ಕವಿ ಹೇಳಿದ ಕನ್ನಡ ನಾಡಿನ ವಿಸ್ತಾರ, ನಿರಂತರವಾಗಿ ತಂಬಿ ಹರಿಯುತ್ತಿರುವ ನದಿಗಳು, ವಿಹರಿಸುವ ಪಕ್ಷಿಸಂಕುಲ, ಫಲಪುಷ್ಪ ಸಮೃದ್ಧಿಯಿಂದ ಕೂಡಿರುವ ಉದ್ಯಾನವನ, ಸರಳ ಜನಜೀವನ, ಮುಗ್ಧತೆ ಇತ್ಯಾದಿ.
- ಇಂದು ಭಾಷೆಯ ಆಧಾರದಲ್ಲಿ ರೂಪುಗೊಂಡ ಕನ್ನಡ ಪ್ರಾಂತ್ಯ(ಕರ್ನಾಟಕ)ದ ಗಡಿಗಳು–ಹೂಳೆತ್ತದಿರುವುದರಿಂದ ನದಿಗಳೆಲ್ಲ ಬತ್ತಿ ಹೋಗಿರುವುದು. – ಪ್ರಕೃತಿಯ ಮೇಲೆ ಮಾನವನ ದೌರ್ಜನ್ಯದಿಂದಾಗಿ ಪಕ್ಷಿ, ಸಸ್ಯ ಲತಾದಿಗಳ ಕಣ್ಮರೆ– ಇವುಗಳ ಮರುಸೃಷ್ಟಿಗೆ ನಾವೇನು ಮಾಡಬೇಕು ಎಂಬ ನಿಗಮನಕ್ಕೆ ವಿದ್ಯಾರ್ಥಿಗಳು ಬಂದು ಪ್ರಬಂಧ ಬರೆಯಲಿ.

- ಉಪಮೆಗಳ ವೈಶಿಷ್ಟ್ಯ/ಅಲಂಕಾರ ಗುರುತಿಸುವುದು.

ಕವಿ ಬಳಸಿದ ಉಪಮೆಯ ವೈಶಿಷ್ಟ್ಯವನ್ನು ಸ್ಪಷ್ಟ ಪಡಿಸುವುದು.

ಭೂರಮೆಯುಟ್ಟೊಲ್ಲದಿಟ್ಟ ದುಕೂಲದ ಸೀರೆಗಳಂತೆ ಕಂಗೊಳಿಪ ಭೂರಿನದಿಗಳ್ ಓರಂತೆ ಪರಿದೆಸೆದಿಹವು..

ಇಲ್ಲಿ ಕರ್ನಾಟಕದ ನದಿಗಳನ್ನು ಭೂದೇವಿ ಉಟ್ಟು ಬೇಡ ಎಂದು ಬಿಟ್ಟ ರೇಶ್ಮೆ ಸೀರೆಗಳಿಗೆ ಹೋಲಿಸಲಾಗಿದೆ.

| | | |
|---|---|---|
| ಭೂರಿನದಿಗಳು | – | ಉಪಮೇಯ |
| ಸೀರೆಗಳು | – | ಉಪಮಾನ |
| ಅಂತೆ | – | ಉಪಮಾವಾಚಕ |
| ಕಂಗೊಳಿಸುವಿಕೆ | – | ಸಮಾನಧರ್ಮ |

ಆದುದರಿಂದ ಇದು ಉಪಮಾಲಂಕಾರ.

ಹೀಗೆ ಮುಂದಿನ ಪದ್ಯದ ಅಲಂಕಾರವನ್ನು ವಿದ್ಯಾರ್ಥಿಗಳು ಗುರುತಿಸಿ, ಸ್ಪಷ್ಟಪಡಿಸಲಿ.

- ಕನ್ನಡ ನಾಡು ನುಡಿಗಳ ಬಗೆಗೆ ಬಂದಿರುವ ಹಾಡುಗಳ ಸಂಗ್ರಹ

ನಾಡುನುಡಿಗಳ ಬಗೆಗೆ ಬಂದಿರುವ ಹಾಡುಗಳನ್ನು ವಿದ್ಯಾರ್ಥಿಗಳು ಸಂಗ್ರಹಿಸಲಿ. ಸಂಗ್ರಹಿಸಿದ ಪದ್ಯಗಳನ್ನು ಕ್ರೋಡೀಕರಿಸಿ ಸಂಚಿಕೆಯೊಂದನ್ನು ಸಿದ್ಧಪಡಿಸಲಿ.

ಮಾದರಿಗಾಗಿ ಹುಯಿಲುಗೋಳ ನಾರಾಯಣ ರಾಯರು ಕನ್ನಡ ನಾಡಿನ ಬಗ್ಗೆ ಬರೆದಿರುವ ಕವನವೊಂದನ್ನು ಕೆಳಗೆ ಕೊಡಲಾಗಿದೆ.

ಉದಯವಾಗಲಿ ನಮ್ಮ ಚೆಲುವ ಕನ್ನಡ ನಾಡು
ಬದುಕು ಬಲುಹಿನ ನಿಧಿಯು ಸದಭಿಮಾನದ ಗೂಡು।।

ರಾಜನ್ಯರಿಪು ಪರಶುರಾಮನಮ್ಮನ ನಾಡು
ಆ ಜಲಧಿಯನೆ ಜಿಗಿದ ಹನುಮನುದಿಸಿದ ನಾಡು
ಓಜೆಯಂ ಮೆರೆದರಸುಗಳ ಸಾಹಸದ ಸೂಡು
ತೇಜವನು ನಮಗೀವ ವೀರವೃಂದದ ಬೀಡು

ಲೆಕ್ಕಿಗ ಮಿತಾಕ್ಷರರು ಬೆಳೆದು ಮೆರೆದಿಹನಾಡು
ಜಕ್ಕಣನ ಶಿಲ್ಪಕಲೆಯಚ್ಚರಿಯ ಕರುಗೋಡು
ಚೊಕ್ಕ ಮತಗಳ ಸಾರಿದವರಿಗಿದು ನೆಲೆವೀಡು
ಬೊಕ್ಕಸದ ಕಣಜವೈ ವಿದ್ವತ್ತೆಗಳ ಕಾಡು

ಪಾವನೆಯರಾ ಕೃಷ್ಣಭೀಮೆಯರ ತಾಯ್ನಾಡು
ಕಾವೇರಿ ಗೋದೆಯರು ಮೈದೊಳೆವ ನಲುನಾಡು
ಆವಗಂ ಸ್ಫೂರ್ತಿಸುವ ಕಬ್ಬಿಗರ ನಡೆಮಾಡು
ಕಾವ ಗದುಗಿನ ವೀರನಾರಾಯಣನ ಬೀಡು

## ಭಾಷಾಭ್ಯಾಸ

- ನಾಮಪದ, ನಾಮವಿಶೇಷಣ, ಕ್ರಿಯಾಪದ, ಕ್ರಿಯಾವಿಶೇಷಣವನ್ನು ಗುರುತಿಸುವುದು.

ಅಧ್ಯಾಪಕರು ಒಂದೆರಡು ವಾಕ್ಯಗಳನ್ನು ಕರಿಹಲಗೆಯಲ್ಲಿ ಬರೆದು ನಾಮಪದ, ನಾಮವಿಶೇಷಣ, ಕ್ರಿಯಾಪದ, ಕ್ರಿಯಾವಿಶೇಷಣದ ಸಂಕ್ಷಿಪ್ತ ಪರಿಚಯವನ್ನು ನೀಡುವುದು. ವಿದ್ಯಾರ್ಥಿಗಳು ಅದನ್ನು ತಿಳಿದುಕೊಂಡು ಪಠ್ಯಭಾಗದಲ್ಲಿರುವ ಪ್ರಶ್ನೆಗೆ ಉತ್ತರಿಸಲಿ.

- ಭೂರಿನದಿಗಳು ಕರ್ನಾಟಕ ಭೂಮಿಯೊಳ್ ಓರಂತೆ ಪರಿದೆಸೆದಿಹವು

| | | |
|---|---|---|
| ಕರ್ನಾಟಕ, ಭೂಮಿ, ನದಿಗಳು | – | ನಾಮಪದ |
| ಭೂರಿ | – | ನಾಮವಿಶೇಷಣ |
| ಪರಿದು ಎಸೆದಿಹವು | – | ಕ್ರಿಯಾ ಪದ |
| ಓರಂತೆ | – | ಕ್ರಿಯಾವಿಶೇಷಣ |

- ವಿಭಕ್ತಿ ಪ್ರತ್ಯಯಗಳನ್ನು ಹೆಸರಿಸುವುದು

ಇಳೆಯೊಳ್, ಪೊಡವಿಯೊಳ್–ಇಲ್ಲಿರುವ ವಿಭಕ್ತಿ ಪ್ರತ್ಯಯ ‘ಒಳ್’ ಇದು ಸಪ್ತಮೀ ವಿಭಕ್ತಿಯಾಗಿದೆ.

| | | |
|---|---|---|
| ಇಳೆಯು | – | ಪ್ರಥಮಾ(ಉ) |
| ಇಳೆಯನ್ನು | – | ದ್ವಿತೀಯಾ(ಅನ್ನು) |
| ಇಳೆಯಿಂದ | – | ತೃತೀಯೆ(ಇಂದ) |
| ಇಳೆಗೆ | – | ಚತುರ್ಥಿ(ಗೆ,ಕೆ) |
| ಇಳೆಯ | – | ಷಷ್ಠಿ |
| ಇಳೆಯಲ್ಲಿ | – | ಸಪ್ತಮೀ (ಅಲ್ಲಿ) |

- ಪಕ್ಕಿ ಪದವು ಪರಪದವಾಗಿರುವ ಕೆಲವು ಪದಗಳು

| | | |
|---|---|---|
| ನಡೆಯುವ ಪಕ್ಕಿ | – | ನಡೆವಕ್ಕಿ |
| ನುಡಿಯುವ ಪಕ್ಕಿ | – | ನುಡಿವಕ್ಕಿ |
| ಪೊಣರ್ವ ಪಕ್ಕಿ | – | ಪೊಣರ್ವಕ್ಕಿ |
| ಗರಿಗಳಲ್ಲಿ ಕಣ್ಣುಳ್ಳ ಪಕ್ಕಿ | – | ಗರಿಗಣ್ವಕ್ಕಿ |

- **ಅಕ್ಷರ ಪಲ್ಲಟ**

ಪದದ ಅರ್ಥವು ವ್ಯತ್ಯಾಸಗೊಳ್ಳದೆ, ಅದರಲ್ಲಿನ ಅಕ್ಷರಗಳ ಸ್ಥಾನವು ಬದಲಾಗುವುದನ್ನು ‘ಅಕ್ಷರ ಪಲ್ಲಟ’ ಎನ್ನುತ್ತಾರೆ. ಇಂತಹ ಪದಗಳನ್ನು ವಿದ್ಯಾರ್ಥಿಗಳಲ್ಲಿ ಸಂಗ್ರಹಿಸಿ ಬರೆದಿಟ್ಟುಕೊಳ್ಳಲು ಸೂಚಿಸುವುದು.

**ಮಾದರಿ:**

| | | |
|---|---|---|
| ನಾಳಿಕೇರ | – | ನಾರಿಕೇಳ |
| ಅರಲ್ | – | ಅಲರ್ |
| ಮಲರ್ | – | ಮರಲ್ |
| ಮರಳು | – | ಮಳಲು |
| ಕಾಲುವೆ | – | ಕಾವಲಿ |
| ಅಹುದು | – | ಹೌದು |
| ಕಾದಗ | – | ಕಾಗದ |

ಪಾರದರಸ > ಪಾರದಸ > ಪಾದರಸ

ಫಲಹಾರ > ಫಲಾರ > ಪಳಾರ > ಪರಾಳ

# ಸಕ್ಕರೆಗುಪ್ಪಂ ಸರಿಮಾಳ್ಪರೇ

ಪುಲಿಗೆರೆ ಸೋಮನಾಥ

## ಪ್ರಸ್ತಾವನೆ

ಕನ್ನಡದ ವಿವಿಧ ಸಾಹಿತ್ಯ ಪ್ರಕಾರಗಳಲ್ಲಿ ಶತಕವು ಒಂದು. ಈ ಸಾಹಿತ್ಯ ಪ್ರಕಾರವು ಸಂಸ್ಕೃತದಲ್ಲಿ ಹುಟ್ಟಿ ಇನ್ನುಳಿದ ಭಾರತೀಯ ಭಾಷೆಗಳಿಗೆ ಬಂದಿದೆ. ಸಂಸ್ಕೃತದಲ್ಲಿ ಈ ಪ್ರಕಾರದ ಜನಕ 'ಭರ್ತೃಹರಿ'. ಈತನು ಶೃಂಗಾರ, ನೀತಿ ಮತ್ತು ವೈರಾಗ್ಯ ಶತಕಗಳನ್ನು ರಚಿಸಿರುವನು. ಕನ್ನಡ ಸಾಹಿತ್ಯದಲ್ಲಿ ನಾಗವರ್ಮಾಚಾರ್ಯನ ಚಂದ್ರ ಚೂಡಾಮಣಿ ಶತಕ, ಹರಿಹರನ ರಕ್ಷಾ ಶತಕ, ಪಂಪಾಶತಕ, ಪುಲಿಗೆರೆಯ ಸೋಮನಾಥ ಕವಿಯ ಸೋಮೇಶ್ವರ ಶತಕ, ರತ್ನಾಕರವರ್ಣಿಯ ತ್ರಿಲೋಕ ಶತಕ ಮೊದಲಾದವು ಕನ್ನಡದ ಪ್ರಸಿದ್ಧ ಶತಕಗಳಾಗಿವೆ. ಈ ಶತಕಗಳಲ್ಲಿ ಭಕ್ತಿ, ಜ್ಞಾನ, ವೈರಾಗ್ಯಗಳ ಬೋಧನೆಯಿದೆ. ಎಲ್ಲಿಯೂ ಶೃಂಗಾರಕ್ಕೆ ಎಡೆಯಿಲ್ಲ. ಈ ಶತಕಗಳೆಲ್ಲ ಅಕ್ಷರವೃತ್ತಗಳಲ್ಲಿವೆ.

## ಪ್ರವೇಶ

ನೀತಿ, ವೈರಾಗ್ಯ, ಜ್ಞಾನ, ವಿಶಾಲವಾದ ಜೀವನಾನುಭವ, ಮುಂತಾದ ವಿಚಾರಗಳನ್ನು ಒಳಗೊಂಡ ಸರ್ವಜ್ಞನ ವಚನಗಳು, ಶಿವಶರಣರ ವಚನಗಳು, ದಾಸರ ಕೀರ್ತನೆಗಳು, ಮಂಕುತಿಮ್ಮನ ಕಗ್ಗ, ಮರುಳಮುನಿಯನ ಕಗ್ಗ ಇವುಗಳ ಪರಿಚಯವು ಈಗಾಗಲೇ ವಿದ್ಯಾರ್ಥಿಗಳಿಗೆ ಲಭಿಸಿರುತ್ತದೆ. ವಿದ್ಯಾರ್ಥಿಗಳ ಪೂರ್ವಜ್ಞಾನವನ್ನು ಅರಿಯುವ ಉದ್ದೇಶದಿಂದ ಅವರಲ್ಲಿ ಕೆಲವು ಪ್ರಶ್ನೆಗಳನ್ನು ಕೇಳುವುದು.

ಅನಂತರ ವಿದ್ಯಾರ್ಥಿಗಳು ಹೇಳಿದ ವಿಚಾರಗಳನ್ನು ಕ್ರೋಡೀಕರಿಸಿ ನಿಗಮನಕ್ಕೆ ಬರುತ್ತಾ, ಇದೇ ರೀತಿಯಲ್ಲಿ ಭಕ್ತಿ, ಜ್ಞಾನ, ವೈರಾಗ್ಯ, ಮಾನವನ ನಡೆನುಡಿ ಮುಂತಾದ ವಿಚಾರಗಳನ್ನು ಕೇಂದ್ರೀಕರಿಸಿ ರಚಿತವಾದ ಇನ್ನೊಂದು ಸಾಹಿತ್ಯಪ್ರಕಾರವಾದ 'ಶತಕ' ಸಾಹಿತ್ಯದ ಕುರಿತು ಪ್ರಸ್ತಾಪಿಸುವುದು. ತಿಳಿದ ವಿದ್ಯಾರ್ಥಿಗಳು ಬಾಯ್ದೆರೆಯಾಗಿ ಉತ್ತರಿಸಲಿ. ಅನಂತರ ಅಧ್ಯಾಪಕರು ಶತಕ ಸಾಹಿತ್ಯದ ಸಂಕ್ಷಿಪ್ತವಾದ ಪರಿಚಯವನ್ನು ಮಾಡುವುದು.

## ಪ್ರವೇಶ ಚಟುವಟಿಕೆ

"ಸಕ್ಕರೆಗುಪ್ಪಂ ಸರಿಮಾಳ್ಪರೇ" ಪದ್ಯದ ಓದು ಮತ್ತು ಸಾರಾಂಶ ತಿಳಿಯುವುದು. ಪಾಠಭಾಗದಲ್ಲಿ ಬಂದ ಆರು ಪದ್ಯಗಳನ್ನು ಆರು/ಮೂರು ಗುಂಪುಗಳಿಗೆ ಹಂಚುವುದು. ಒಂದೊಂದು ಪದ್ಯವನ್ನು ಒಬ್ಬೊಬ್ಬ ವಿದ್ಯಾರ್ಥಿಯಿಂದ ಬಾಯ್ದೆರೆಯಾಗಿ ಓದಿಸುವುದು. ಅರ್ಥ ಸ್ಪಷ್ಟತೆಗಾಗಿ ಪದಗಳನ್ನು ವಿಂಗಡಿಸಬೇಕಾದಲ್ಲಿ ವಿದ್ಯಾರ್ಥಿಗಳಿಂದ ವಿಂಗಡಿಸಿ ಹೇಳಿಸುವುದು. ಉಚ್ಚಾರದೋಷ ಕಂಡಲ್ಲಿ ಅಧ್ಯಾಪಕರು ಸರಿಪಡಿಸುವುದು. ಅವರು ಓದಿದ ಬಳಿಕ ಅಡಕ ಮುದ್ರಿಕೆಯ ಮೂಲಕ ಹಾಡನ್ನು ಕೇಳಿಸುವುದು. ವಿದ್ಯಾರ್ಥಿಗಳು ಗಮನವಿರಿಸಿ ಕೇಳಲಿ. ಅನಂತರ ಅವರಿಂದ ಹಾಡಿಸುವುದು. ಪ್ರತಿಗುಂಪಿನವರೂ ತಮಗೆ ದೊರೆತ ಪದ್ಯದ ಆಶಯದ ಕುರಿತು ಚರ್ಚಿಸಿ ಅಧ್ಯಾಪಕರ ಸಹಕಾರದೊಂದಿಗೆ ಬರೆಯಲಿ. ಪ್ರತಿ ಗುಂಪಿನವರೂ ಕ್ರಮವಾಗಿ ಪದ್ಯವನ್ನು ಬಾಯ್ದೆರೆಯಾಗಿ ಓದಿ ಆಶಯವನನ್ನು ಮಂಡಿಸಲಿ. ಚರ್ಚೆಗೆ ಅವಕಾಶ ನೀಡುವುದು. ಆ ಮೂಲಕ 'ಸಕ್ಕರೆಗುಪ್ಪಂ ಸರಿಮಾಳ್ಪರೇ' ಪದ್ಯದ ಆಶಯವು ವಿದ್ಯಾರ್ಥಿಗಳಿಗೆ ತಿಳಿಯುವಂತೆ ಮಾಡುವುದು.

## ಸಾರಾಂಶ

ಉಪಯೋಗಿಸದಿರುವ ಹಣವೂ ಮುಪ್ಪಿನಲ್ಲಿ ಸಲಹದ ಮಗನೂ, ಪೈರು ಒಣಗುತ್ತಿರುವ ಕಾಲದಲ್ಲಿ ಬಾರದಿರುವ ಮಳೆಯೂ ಕಷ್ಟಕಾಲದಲ್ಲಿ ಬಂದು ವಿಚಾರಿಸಿಕೊಳ್ಳದ ನಂಟನೂ ನಿಷ್ಪ್ರಯೋಜಕ, ಸಮಯಕ್ಕೆ ದೊರೆತ ಸಹಾಯವು ಅಲ್ಪವಾದರೂ ಅದು ಮಹತ್ತರವಾದದ್ದು ಎನಿಸುತ್ತದೆ ಎನ್ನುವ ಮೂಲಕ ಕವಿಯು ಅತ್ಯಂತ ಅಗತ್ಯವಾದ ಸಂದರ್ಭಗಳಲ್ಲಿ ಸಿಗಬೇಕಾದ ವಸ್ತು ಅಥವಾ ವ್ಯಕ್ತಿಗಳು ಸಿಗದಿದ್ದಲ್ಲಿ ಅವುಗಳು ನಿಷ್ಪ್ರಯೋಜಕ ಎಂಬುದನ್ನು ಪ್ರತಿಪಾದಿಸಿದ್ದಾನೆ.

ಹೆಂಡ ಕುಡುಕನು ಯೋಗಿಯನ್ನು ಪೂಜ್ಯನೆಂದು ತಿಳಿದು ಎಂದೂ ಗೌರವಿಸಲಾರ. ದೊರೆಯಲ್ಲಿ ಸ್ನೇಹವನ್ನು ಸಂಪಾದಿಸಿಕೊಂಡಿರುವವನು ಬಡವರನ್ನು ಪ್ರೀತಿಯಿಂದ ಕಾಣಲಾರ. ಗೌರವಕ್ಕೆ ಪಾತ್ರರಾದವರನ್ನು ಇವರು ದೊಡ್ಡವರು, ಇವರು ಪೂಜ್ಯರು ಎಂದು ದುರ್ಮಾರ್ಗದಲ್ಲಿ ನಡೆಯುವವನು ಗೌರವಿಸಲಾರ. ಸಭ್ಯರಾಗಿ ಬಾಳುವವರನ್ನು ದುಷ್ಟನು ಬಾಧಿಸದೆ ಬಿಡಲಾರ, ಎಂದು ದುರ್ಜನರ ಸ್ವಭಾವದ ದೋಷವನ್ನು ಕವಿಯು ತಿಳಿಸುತ್ತಾನೆ.

ದ್ರುಪದನು ದೊರೆಯಾಗಿದ್ದಾಗ ಬಾಲ್ಯ ಸ್ನೇಹಿತನಾದ ದ್ರೋಣನು ದಾರಿದ್ರ್ಯದಿಂದ ತನ್ನಲ್ಲಿಗೆ ಬರಲು, ಮೊದಲಿನ ಸ್ನೇಹವನ್ನು ನೆನೆದು ಅವನನ್ನು ಆದರಿಸಿದನೆ? ಪಾಂಡವರು ಧರ್ಮಿಷ್ಠರೆಂದು ತಿಳಿದಿದ್ದರೂ ಅವರಿಗೆ ದುರ್ಯೋಧನನು ರಾಜ್ಯವನ್ನು ಕೊಟ್ಟನೆ? ಕಂಸನು ಕೃಷ್ಣನನ್ನು ತನ್ನ ತಂಗಿಯ ಮಗನೆಂದು ದ್ವೇಷಿಸದೆ ಬಿಟ್ಟನೆ? ಆದಕಾರಣ ದೊರೆಗಳಿಗೆ ನಂಟರು ಎಂಬ ಮಮತೆಯು ಎಂದೂ ಬರಲಾರದು ದುರಹಂಕಾರಿಗಳಾದ ಅರಸರಿಗೆ ಬಂಧುಗಳು, ನೆಂಟರು ಎಂಬ ಬಾಂಧವ್ಯ ಇರುವುದಿಲ್ಲ ಎನ್ನುವುದನ್ನು ಕವಿ ಇಲ್ಲಿ ಸ್ಪಷ್ಟಪಡಿಸಿದ್ದಾನೆ.

ಒಡೆಯನ ಬಳಿಯಲ್ಲಿ ಸ್ವಲ್ಪವೂ ಆಸೆಯನ್ನು ತೋರಿಸದೆ, ಹೊರಗಡೆ ಲಂಚಕ್ಕೊಪ್ಪಿಕೊಂಡು, ತಾನು ಮಾಡುವ ಸರಕಾರದ ಕೆಲಸಕ್ಕೆ ಜನರಿಂದ ಪ್ರತಿಫಲವನ್ನು ತೆಗೆದುಕೊಂಡು, ದೊರೆಗೆ ಬರುವ ಹೆಚ್ಚು ಲಾಭವನ್ನು ಕೆಡಿಸಿ, ಇತರ ಮೇಲೆ ಚಾಡಿ ಹೇಳಿ ಅವರಿಗೆ ದ್ರೋಹ ಮಾಡಿ ಅವರ ಜೀವನವನ್ನು ಹಾಳು ಮಾಡಿ, ಯಾರೂ ಕಾಣದಂತೆ ರಾಜಾದಾಯವನ್ನು ತಾನೇ ತಿಂದು ಹಾಕುವ ಲೆಕ್ಕಿಗನು ತನ್ನದ್ದಲ್ಲದ್ದನ್ನು ತಿನ್ನುವ ಹೆಗ್ಗಣಕ್ಕೆ ಸಮಾನನು. ಈ ಪದ್ಯದ ಮೂಲಕ ಕವಿಯು ಲಂಚಬಡುಕರು ಮತ್ತು ಚಾಡಿಕೋರರು ಸಮಾಜದ ಸ್ವಾಸ್ಥ್ಯವನ್ನು ಕೆಡಿಸುವುದರಿಂದ ಅವರು ಹೆಗ್ಗಣಕ್ಕೆ ಸಮಾನರು ಎಂದು ಸೂಚಿಸಿದ್ದಾನೆ.

ಚಂದ್ರನು ಕೃಷ್ಣಪಕ್ಷದಲ್ಲಿ ಕಳೆಗುಂದಿ ಶುಕ್ಲಪಕ್ಷದಲ್ಲಿ ವೃದ್ಧಿ ಹೊಂದುವನು. ಬಹಳ ಸಣ್ಣದಾಗಿರುವ ಆಲದ ಬೀಜವು ಸಿಡಿದು ನೆಲದ ಮೇಲೆ ಬಿದ್ದು ಮೊಳೆತು ದೊಡ್ಡ ಮರವಾಗುತ್ತದೆ. ಎಳೆಗರು ಬೆಳೆದು ದೊಡ್ಡ ಗೂಳಿಯಾಗುತ್ತದೆ. ಸಣ್ಣ ಹೀಚು ಬಲಿತು ದೊಡ್ಡ ಹಣ್ಣಾಗುತ್ತದೆ. ಹಾಗೆಯೇ, ಬಡವನು ದೇವರ ದಯೆಯಿದ್ದರೆ ಒಂದಾನೊಂದು ಕಾಲಕ್ಕೆ ಭಾಗ್ಯವಂತನಾಗುವನು ಎನ್ನುವಲ್ಲಿ ಕವಿಯು ದುರ್ಬಲರಾದವರು, ಬಡವರು ದೇವರ ಅನುಗ್ರಹವಿದ್ದಲ್ಲಿ ಸಬಲರೂ ಶ್ರೀಮಂತರೂ ಆಗಬಹುದು ಎಂಬುದನ್ನು ತಿಳಿಸುತ್ತಾನೆ.

ಮಿಂಚು ಹುಳುಗಳು ಕೋಟಿಯಿದ್ದರೂ ಒಬ್ಬ ಸೂರ್ಯನಿಗೆ ಸಮಾನವಾಗಲಾರವು. ನಕ್ಷತ್ರಗಳೆಷ್ಟಾದರೂ ಚಂದ್ರನಿಗೆ ಸಮನಾಗಿ ನಿಲ್ಲವು. ಒಳ್ಳೆಯು ಆದಿಶೇಷನಿಗೆ ಸರಿಸಾಟಿಯಾಗಿ ನಿಲ್ಲಲಾರದು . ಸಾಮಾನ್ಯವಾದ ಕಲ್ಲುಗಳು ರತ್ನಕ್ಕೆ ಸರಿಸಾಟಿಯಲ್ಲ. ಕಾಗೆಗಳ ಗುಂಪು ಗರುಡನಿಗೆ ಸಮವಲ್ಲ, ಉಪ್ಪನ್ನು ಸಕ್ಕರೆಯೊಂದಿಗೆ ಹೋಲಿಸಲು ಎಂದೂ ಸಾಧ್ಯವಿಲ್ಲ ಎನ್ನುವ ಮೂಲಕ ಕವಿಯು ಪ್ರಪಂಚದಲ್ಲಿ ನಿಕೃಷ್ಟವಾದ ವಸ್ತು ಅಥವಾ ವ್ಯಕ್ತಿಗಳೂ ಇರುವುದು ಪ್ರಕೃತಿ ನಿಯಮ. ನಿಕೃಷ್ಟ ವಸ್ತು/ವ್ಯಕ್ತಿಗಳು ಉತ್ಕೃಷ್ಟ ವಸ್ತು/ವ್ಯಕ್ತಿಗಳಿಗೆ ಎಂದಿಗೂ ಸಮಾನವಾಗಲಾರವು ಎಂದು ತಿಳಿಸುತ್ತಾನೆ.

## ಸಂಕ್ಷಿಪ್ತವಾಗಿ ಉತ್ತರಿಸಿರಿ

ಸಂಕ್ಷಿಪ್ತವಾಗಿ ಉತ್ತರಿಸುವ ವಿಧಾನವು ವಿದ್ಯಾರ್ಥಿಗಳಿಗೆ ತಿಳಿದಿರುವ ಕಾರಣ ಪದ್ಯಭಾಗದಲ್ಲಿ ನೀಡಿರುವ ಪ್ರಶ್ನೆಗಳಿಗೆ

ಉತ್ತರಿಸುವ ಚಟುವಟಿಕೆಯನ್ನು ನಡೆಸುವುದು. ಪ್ರತಿ ಪ್ರಶ್ನೆಯ ಉತ್ತರವನ್ನು ಒಂದಿಬ್ಬರು ವಿದ್ಯಾರ್ಥಿಗಳು ಬಾಯ್ದೆರೆಯಾಗಿ ಮಂಡಿಸಲಿ. ಅಧ್ಯಾಪಕರು ಸೂಕ್ತ ಮಾಹಿತಿ ನೀಡುವುದು.

## ಮಾದರಿ ಉತ್ತರ

ಮನುಷ್ಯ ಸ್ವಭಾವದ ವಿಶೇಷತೆಗಳನ್ನು ಕವಿ ಹೇಗೆ ವರ್ಣಿಸಿದ್ದಾನೆ?

ಸುರೆಯನ್ನು ಸೇವಿಸಿದಾತನು ಯೋಗೀಂದ್ರರ ಹಿರಿಮೆಯನ್ನು ತಿಳಿಯದೆ ತಾನೇ ಯೋಗೀಂದ್ರನೆಂದು ಭಾವಿಸುವನು. ಶ್ರೀಮಂತರ ಒಡನಾಟದಲ್ಲಿ ಲೀನನಾದ ಬಡವನು ಸಾಮಾನ್ಯ ಬಡವರ ಕಷ್ಟವನ್ನು ಅರ್ಥಮಾಡಿಕೊಳ್ಳಲಾರ. ಕೆಟ್ಟನಡತೆಯಲ್ಲಿ ತಲ್ಲೀನನಾದವನು ಪೂಜ್ಯರನ್ನು ಗೌರವಾನ್ವಿತರೆಂದು ಬಗೆಯಲಾರ ದುರುಳನು ಯಾರನ್ನೂ ನೆಮ್ಮದಿಯಿಂದ ಬಾಳಲು ಬಿಡಲಾರ. ಈ ಮೇಲಿನ ಮಾತುಗಳ ಮೂಲಕ ಮನುಷ್ಯ ಸ್ವಭಾವದ ವಿಶೇಷತೆಗಳನ್ನು ಕವಿ ವರ್ಣಿಸಿದ್ದಾನೆ.

ಇದೇ ರೀತಿ ಉಳಿದ ಪ್ರಶ್ನೆಗಳಿಗೆ ಉತ್ತರಿಸಲಿ.

## ಪುರಾಣ ಕಥೆಗಳ ಸಂಗ್ರಹ

'ದೊರೆಗಳ್ಗೆತ್ತಣ ನಂಟರ್ಕೆ' ಎಂಬುದನ್ನು ಸಮರ್ಥಿಸಲು ಕವಿಯು ನೀಡಿದ ಉಲ್ಲೇಖಗಳು ಯಾವುವು? ಎಂಬುದಾಗಿ ವಿದ್ಯಾರ್ಥಿಗಳಲ್ಲಿ ಪ್ರಶ್ನಿಸುವುದು. ವಿದ್ಯಾರ್ಥಿಗಳು ಬಾಯ್ದೆರೆಯಾಗಿ ಉತ್ತರಿಸಲಿ. ದ್ರೋಣ ದ್ರುಪದ, ಕೌರವ–ಪಾಂಡವರು, ಕಂಸ–ಕೃಷ್ಣ ಇವರ ಸಂಬಂಧದ ಕುರಿತಾದ ಪುರಾಣ ಕಥೆಯನ್ನು ವಿದ್ಯಾರ್ಥಿಗಳಲ್ಲಿ ಬಾಯ್ದೆರೆಯಾಗಿ ಮಂಡಿಸುವಂತೆ ಸೂಚಿಸುವುದು. ಹಿರಿಯರಿಂದಲೋ, ಗ್ರಂಥ ಭಂಡಾರದ ಸಹಾಯದಿಂದಲೋ ಕಥೆ ಸಂಗ್ರಹಿಸಿ ಬರುವಂತೆ ಸೂಚಿಸುವುದು. ಸಿಗದಿದ್ದರೆ ಅಧ್ಯಾಪಕರು ಸಹಕರಿಸುವುದು.

## ಮಾದರಿ ಉತ್ತರ

### ದ್ರೋಣ–ದ್ರುಪದ

ಭಾರದ್ವಾಜ ಮುನಿಗಳಿಗೆ ಘೃತಾಚಿ ಎಂಬ ಅಪ್ಸರ ಸ್ತ್ರೀಯಲ್ಲಿ ಹುಟ್ಟಿದವನು ದ್ರೋಣ. ಅವನಿಗೆ ಶಸ್ತ್ರಾಸ್ತ್ರ ವಿದ್ಯೆಯನ್ನು ಕಲಿಸುವ ಸಂದರ್ಭದಲ್ಲಿ ಪಾಂಚಾಲ ದೇಶದ ರಾಜಕುಮಾರ ದ್ರುಪದನು ಕೂಡಾ ಭಾರದ್ವಾಜರ ಬಳಿ ವಿದ್ಯಾಭ್ಯಾಸಕ್ಕಾಗಿ ಬಂದನು. ದ್ರುಪದನು ದ್ರೋಣನ ಸಹಪಾಠಿಯಾದನು. ವಿದ್ಯೆ ಕಲಿಯುವಾಗ ಮಿತ್ರನಾದ ದ್ರುಪದನು ದ್ರೋಣನಿಗೆ 'ನಾನು ರಾಜನಾಗ ನಿನಗಂ ಅರ್ಧರಾಜ್ಯವನ್ನು ಕೊಡುತ್ತೇನೆ' ಎಂದು ಹೇಳಿ ವಿದ್ಯಾಭ್ಯಾಸ ಮುಗಿಸಿ ಅರಮನೆಗೆ ಹಿಂತಿರುಗಿದ್ದನು. ಇತ್ತ ದ್ರೋಣಾಚಾರ್ಯರು ಕೃಪಾಚಾರ್ಯರ ತಂಗಿ ಕೃಪಿಯನ್ನು ಮದುವೆಯಾದರು. ಅಶ್ವತ್ಥಾಮನು ಹುಟ್ಟಿದ ಸಂದರ್ಭದಲ್ಲಿ ಬಡತನದ ಬೇಗೆಯಲ್ಲಿ ಬೆಂದು, ತಾಳಲಾರದೆ ದ್ರುಪದನಲ್ಲಿ ಏನಾದರೂ ಪಡೆಯಬೇಕೆಂಬ ಉದ್ದೇಶದಿಂದ ಪಾಂಚಾಲ ದೇಶಕ್ಕೆ ಬಂದರು. ಆ ಸಮಯದಲ್ಲಿ ದ್ರುಪದನು ರಾಜನಾಗಿದ್ದನು. ಅರಮನೆಗೆ ಬಂದ ಮಿತ್ರನನ್ನು ದ್ರುಪದನು ಗೌರವಿಸಲಿಲ್ಲ ಎಂಬುದು ಮಾತ್ರವಲ್ಲ, ಯಾರು ನೀನು? ಏಕೆ ಬಂದೆ? ಎಂದು ಅವಮಾನಿಸಿ ಸೇವಕರಿಂದ ಹೊರದೂಡಿಸಿದನು. ವಿದ್ಯೆಗಳನ್ನು ಅವರಿಗೆ ಕಲಿಸಿದ ಬಳಿಕ ಗುರುದಕ್ಷಿಣೆಯಾಗಿ ಶಿಷ್ಯನಾದ ಅರ್ಜುನನಿಂದ ದ್ರುಪದನನ್ನು ಸೆರೆ ಹಿಡಿಸಿ, ತರಿಸಿ ಆತನಿಂದ ಅರ್ಧರಾಜ್ಯವನ್ನು ಕಿತ್ತುಕೊಂಡರು.

ಇದೇ ರೀತಿಯಲ್ಲಿ ಉಳಿದ ಕಥೆಯನ್ನು ಸಂಗ್ರಹಿಸುವುದು. ಅಪಮಾನಿತನಾದ ದ್ರೋಣನು ದ್ರುಪದನನ್ನು ತನ್ನ ಶಿಷ್ಯರಿಂದಲೇ ಸೆರೆಹಿಡಿಸುವುದಾಗಿ ಪ್ರತಿಜ್ಞೆ ಮಾಡುತ್ತಾನೆ. ಬಳಿಕ ಕೆಲಕಾಲವಾದ ಮೇಲೆ ಹಸ್ತಿನಾವತಿಯಲ್ಲಿ ಕೌರವ ಪಾಂಡವರಿಗೆ ಗುರುವಾಗಿ ನೇಮಕಗೊಳ್ಳುತ್ತಾನೆ.

## ಟಿಪ್ಪಣಿ

ಪದ್ಯಭಾಗದಲ್ಲಿ ಪ್ರಸ್ತಾಪಗೊಂಡಿರುವ ಸಾಮಾಜಿಕ ಪಿಡುಗುಗಳ ಕುರಿತು ವಿದ್ಯಾರ್ಥಿಗಳಲ್ಲಿ ಪ್ರಶ್ನಿಸುವುದು. ಮದ್ಯಪಾನ ಮತ್ತು ಲಂಚದ ಕುರಿತು ಅವರಿಗೆ ತಿಳಿದಿರುವ ಅಂಶಗಳನ್ನು ಹೇಳಲಿ. ಪ್ರಮುಖ ವಿಚಾರಗಳನ್ನು ಅಧ್ಯಾಪಕರು ಕರಿಹಲಗೆಯಲ್ಲಿ ಬರೆಯುವುದು. ಅದರ ಆಧಾರದಲ್ಲಿ ವಿದ್ಯಾರ್ಥಿಗಳು ಟಿಪ್ಪಣಿ ಬರೆಯಲಿ.

## ಮಾದರಿ ಟಿಪ್ಪಣಿ

### ಮದ್ಯಪಾನ

ಇದೊಂದು ಸಮಾಜಕಂಟಕವೆನಿಸಿದ ಪಿಡುಗು. ಬಡವ–ಬಲ್ಲಿದರೆಲ್ಲರನ್ನೂ ಈ ಪಿಡುಗು ಸಾಂಕ್ರಾಮಿಕ ರೋಗದಂತೆ ಪೀಡಿಸುತ್ತಿದೆ. ಯುವಕರಲ್ಲಿಯೇ ಹೆಚ್ಚಾಗಿ ಕಾಣಿಸಿಕೊಳ್ಳುವ ಮದ್ಯಪಾನ, ಧೂಮಪಾನಗಳು ಸಮಾಜದ ಅಧಃಪತನಕ್ಕೆ ಕಾರಣಗಳಾಗಿವೆ ಎಂದರೆ ತಪ್ಪಾಗಲಾರದು. ಮದ್ಯಪಾನ ಬಡಜನರಿಗೆ ತಮ್ಮ ದೈನಿಕ ದಣಿವಿನ ಪರಿಹಾರದ ಸಾಮಗ್ರಿ ಎಂಬ ತಪ್ಪು ಕಲ್ಪನೆಯಿಂದ ನಡೆಯುತ್ತಿದ್ದರೆ, ಶ್ರೀಮಂತರಿಗೆ ತಮ್ಮ ವೈಭವವನ್ನು ಮೆರೆಯುವ ಸಾಧನವಾಗಿ ಕಂಡು ಬರುತ್ತಿದೆ. ಇದರಿಂದ ಈ ಪಿಡುಗಿಗೆ ಒಳಗಾದವರ ಕುಟುಂಬಗಳು ಸರ್ವನಾಶವಾಗುತ್ತದೆ. ಬಡವನ ಮಕ್ಕಳ ಹೊಟ್ಟೆ–ಬಟ್ಟೆ ವಿದ್ಯಾಭ್ಯಾಸಗಳಿಗೆ ಇದರಿಂದ ಧಕ್ಕೆಯೂ ಕುಡಿಯುವವರ ಆರೋಗ್ಯಕ್ಕೆ ಹಾನಿಯೂ ಉಂಟಾಗುತ್ತದೆ . ಇದು ತಿಳಿದಿದ್ದೂ ಸಹ ನಮ್ಮ ಶಿಕ್ಷಿತ ಜನರೇ ಇದನ್ನು ರೂಢಿಸಿಕೊಳ್ಳುತ್ತಿರುವುದನ್ನು ಕಂಡಾಗ ನಿಜಕ್ಕೂ ವ್ಯಥೆಯಾಗುತ್ತದೆ. ಎಷ್ಟೇ ಗೌರವದ ಸ್ಥಾನದಲ್ಲಿದ್ದರೂ ಒಬ್ಬ ವ್ಯಕ್ತಿ ಮದ್ಯಪಾನದಿಂದ ತನ್ನ ಗೌರವವನ್ನು ಕಳೆದುಕೊಳ್ಳುತ್ತಾನೆ . ಸಮಾಜಕ್ಕೆ ಅವನು ಕಂಟಕ ಪ್ರಾಯನಾಗುತ್ತಾನೆ. ಹೀಗೆಮದ್ಯಪಾನ ಎಂಬುದು ಆರ್ಥಿಕವಾಗಿಯೂ ಸಾಮಾಜಿಕವಾಗಿಯೂ ಆರೋಗ್ಯದ ದೃಷ್ಟಿಯಿಂದಲೂ ಜನತೆಯನ್ನು ಅಧೋಗತಿಗೆ ತರುತ್ತಿದೆ. ಮದ್ಯಪಾನ ಸರ್ವತ್ರ ಕಂಡು ಬರುತ್ತಿದೆ. ಸರ್ಕಾರಗಳು ಮದ್ಯದಂಗಡಿ, ಬಾರ್, ಪಬ್‌ಗಳನ್ನು ಪೂರ್ಣವಾಗಿ ನಿಷೇಧಿಸುವುದರ ಬದಲು ಹೊಸತಾಗಿ ತೆರೆಯಲು ಅವಕ್ಕೆ ಅವಕಾಶ ಮಾಡಿಕೊಡುತ್ತಿರುವುದು ಒಂದು ದುರಂತವೇ ಸರಿ. ಸಮಾಜದ ಆರೋಗ್ಯಕ್ಕೆ ಹಾನಿಕಾರಕವೆನಿಸಿದ ಪಿಡುಗುಗಳಿಗೆ ತುತ್ತಾಗದಂತೆ ಎಚ್ಚರವಹಿಸುವುದು ಪ್ರತಿಯೊಬ್ಬರ ಕರ್ತವ್ಯವಾಗಿದೆ.

## ಕರಪತ್ರ

ಮದ್ಯಪಾನದಿಂದುಂಟಾಗುವ ದುಷ್ಪರಿಣಾಮದ ಕುರಿತು ಮಾಧ್ಯಮಗಳ ಮೂಲಕವೂ ಪರಿಸರದಿಂದಲೂ ವಿದ್ಯಾರ್ಥಿಗಳು ನೋಡಿ, ಕೇಳಿ ತಿಳಿದಿರುತ್ತಾರೆ. ಅದರ ಕುರಿತಾಗಿ ವಿದ್ಯಾರ್ಥಿಗಳಲ್ಲಿ ಪ್ರಶ್ನಿಸುವುದು. ಅವರು ತಿಳಿದ ಅಂಶಗಳನ್ನು ಬಾಯ್ದೆರೆಯಾಗಿ ಹೇಳಲಿ. ಕರಪತ್ರ ರಚನಾ ವಿಧಾನದ ಕುರಿತು ವಿದ್ಯಾರ್ಥಿಗಳಿಂದ ಹೇಳಿಸುವುದು. ಮದ್ಯಪಾನದ ವಿರುದ್ಧ ಜನಜಾಗೃತಿ ಮೂಡಿಸುವಂತಹ ಕರಪತ್ರವನ್ನು ಗುಂಪಲ್ಲಿ ತಯಾರಿಸಲು ಸೂಚಿಸುವುದು. ಅದರ ಮೌಲ್ಯಮಾಪನವನ್ನು ಅಧ್ಯಾಪಕರ ಸಹಕಾರದೊಂದಿಗೆ ವಿದ್ಯಾರ್ಥಿಗಳು ಮಾಡಿ, ಉತ್ತಮ ಬರವಣಿಗೆಯನ್ನು ಭಿತ್ತಿಪತ್ರಿಕೆಯಲ್ಲಿ ಪ್ರದರ್ಶಿಸಲಿ.

(ಕರಪತ್ರದ ಮಾದರಿಯನ್ನು ಪ್ಲಸ್‌ವನ್ ತರಗತಿಯ ಅಧ್ಯಾಪಕ ಪತ್ರದ ಪುಟ ಸಂಖ್ಯೆ 169ರಲ್ಲಿ ನೀಡಲಾಗಿದೆ.)

### ಕಥೆ ಸಂಗ್ರಹಿಸಿ ಬರೆಯುವುದು

ಸುವರ್ಣಗೀಡೆ ಕಾಕಾಳಿ ಎಂಬ ಶತಕದ ಹೇಳಿಕೆಗೆ ಸಂಬಂಧಿಸಿದಂತೆ ಪಂಚತಂತ್ರದಲ್ಲಿ ಒಂದು ಕಥೆಯಿದೆ. ಪಂಚತಂತ್ರದ ಕಥೆಯ ವೈಶಿಷ್ಟ್ಯಗಳ ಕುರಿತು ಅಧ್ಯಾಪಕರು ವಿದ್ಯಾರ್ಥಿಗಳಲ್ಲಿ ಪ್ರಶ್ನಿಸುವುದು. ಪಂಚತಂತ್ರದ ಒಂದೆರಡು ಕಥೆಗಳನ್ನು

ವಿದ್ಯಾರ್ಥಿಗಳಿಂದ ಬಾಯ್ದೆರೆಯಾಗಿ ಹೇಳಿಸುವುದು. ಗರುಡ ಮತ್ತು ಕಾಗೆ ಈ ಎರಡು ಪಕ್ಷಿಗಳ ವಿಶೇಷತೆಯ ಕುರಿತು ವಿದ್ಯಾರ್ಥಿಗಳಲ್ಲಿ ಪ್ರಶ್ನಿಸುವುದು. ಈ ಎರಡು ಪಕ್ಷಿಗಳಿಗೆ ಸಂಬಂಧಿಸಿದ ಕಥೆಯೊಂದು ಪಂಚತಂತ್ರದಲ್ಲಿದೆ. ಆ ಕಥೆ ತಿಳಿದಿದೆಯೇ? ಎಂಬುದಾಗಿ ವಿದ್ಯಾರ್ಥಿಗಳಲ್ಲಿ ಪ್ರಶ್ನಿಸುವುದು. ತಿಳಿದ ವಿದ್ಯಾರ್ಥಿಗಳು ಬಾಯ್ದೆರೆಯಾಗಿ ಉತ್ತರಿಸಲಿ. ನಂತರ ಕಥೆಯನ್ನು ಬರೆಯುವಂತೆ ಸೂಚಿಸುವುದು.

## ಗರುಡನೊಂದಿಗೆ ಸ್ಪರ್ಧಿಸಿ ಸೋತ ಕಾಗೆಯ ಕಥೆ

ಒಂದಾನೊಂದು ಕಾಲದಲ್ಲಿ ಕೊಬ್ಬಿದ ಕಾಗೆಯೊಂದು ಅಹಂಕಾರದಿಂದ ತನಗೆ ಸರಿಸಮಾನರು ಯಾರೂ ಇಲ್ಲ ಎಂಬುದಾಗಿ ಗರ್ವಪಡುತ್ತಿತ್ತು. ಹೀಗಿರಲು ಒಂದು ದಿನ ತನ್ನ ಶಕ್ತಿ ಸಾಮರ್ಥ್ಯವನ್ನೂ ಹಾರಾಟದ ಪಟುತ್ವವನ್ನೂ ಎಲ್ಲರಿಗೆ ತಿಳಿಸುವ ಸಲುವಾಗಿ ಗರುಡನೊಂದಿಗೆ ಸ್ಪರ್ಧಿಸಲು ಯೋಚಿಸಿತು. ತನ್ನವರು ಹೇಳಿದ ಬುದ್ಧಿಮಾತುಗಳನ್ನು ಕೇಳದ ಆ ಕಾಗೆ ತನ್ನ ನಿಲುವನ್ನು ಬದಲಾಯಿಸಲಿಲ್ಲ. ಅಷ್ಟೇನೂ ಉತ್ಸಾಹವಿಲ್ಲದಿದ್ದರೂ ಗರುಡವು ಸ್ಪರ್ಧೆಗೆ ಒಪ್ಪಿಗೆ ನೀಡಿತು. ಸಮುದ್ರ ತೀರದಲ್ಲಿ ಸ್ಪರ್ಧೆ ಆರಂಭವಾಯಿತು. ಕಾಗೆಯು ತನ್ನ ರೆಕ್ಕೆಗಳನ್ನು ಬಡಿಯುತ್ತಾ ನಾನಾ ವಿಧದ ಕಸರತ್ತುಗಳನ್ನು ಮಾಡುತ್ತಾ ಹಾರಾಟ ಆರಂಭಿಸಿತು. ಜೊತೆಯಲ್ಲೇ ಗರುಡನೂ ಶಾಂತವಾಗಿ ಹಾರಾಟ ನಡೆಸುತ್ತಿತ್ತು. ಹಾರಾಟದ ಭರದಲ್ಲಿದ್ದ ಕಾಗೆಯು ಸಮುದ್ರದ ಮೇಲೆ ತುಂಬ ದೂರ ತಲುಪಿತು. ಬರಬರುತ್ತ ಅದು ಬಳಲಲಾರಂಭಿಸಿತು. ಅದರ ರೆಕ್ಕೆಗಳು ಸೋತು ಅದು ಹಾರಾಡಲಾರದೆ ಸಮುದ್ರಕ್ಕೆ ಬಿದ್ದಿತು. ಇನ್ನೇನು ಅದು ಸಾಯುತ್ತದೆ ಎನ್ನುವಷ್ಟರಲ್ಲಿ ಗರುಡನು ಹಾರಿ ಬಂದು ಅದನ್ನು ಕಾಲಿನಿಂದ ಎತ್ತಿಕೊಂಡು ಸಮುದ್ರದ ಕಿನಾರೆಯಲ್ಲಿ ಸ್ಪರ್ಧೆಯನ್ನು ನೋಡುತ್ತಿದ್ದ ಕಾಗೆಗಳ ಗುಂಪಿನ ಮಧ್ಯೆ ತಂದು ಹಾಕಿತು. ತುಂಬ ಉಪಚಾರ ಕ್ರಿಯೆಗಳ ಬಳಿಕ ಕಾಗೆಗೆ ಬಾಹ್ಯಜ್ಞಾನ ಬಂತು. ಅದರ ಗರ್ವವೆಲ್ಲ ಇಳಿದುಹೋಗಿತ್ತು.

**ನೀತಿ:** ಬಲಶಾಲಿಗಳೊಂದಿಗೆ ದುರ್ಬಲರು ಎಂದೂ ಸೆಣಸಬಾರದು.

## ಭಾಷಾಭ್ಯಾಸ

### ಪದವಿಂಗಡನೆ

ವಿದ್ಯಾರ್ಥಿಗಳು ಪದ್ಯದ ಆಶಯವನ್ನು ಈಗಾಗಲೇ ತಿಳಿದಿರುವರು. ನೀಡಿರುವ ಪದಗಳನ್ನು ಅರ್ಥಕ್ಕೆ ಚ್ಯುತಿ ಬರದಂತೆ ವಿಂಗಡಿಸಿ ಬರೆಯುವಂತೆ ಸೂಚಿಸುವುದು. ಒಂದೊಂದು ಪದದ ವಿಂಗಡನೆಯನ್ನು ಒಬ್ಬೊಬ್ಬ ವಿದ್ಯಾರ್ಥಿಯಿಂದಲೂ ಕರಿಹಲಗೆಯಲ್ಲಿ ಬರೆಸುವುದು. ತಪ್ಪು ಬರೆದಾಗ ಉಳಿದ ವಿದ್ಯಾರ್ಥಿಗಳಿಗೆ ಅವಕಾಶ ನೀಡಿ ಸರಿಪಡಿಸುವುದು. ಎಲ್ಲರೂ ತಪ್ಪಿದ್ದಲ್ಲಿ ಅಧ್ಯಾಪಕರು ಸರಿಪಡಿಸುವುದು.

ಧನಂ + ಇರ್ದೊಡೆ + ಏನು

ಬಂಧು + ಏತಕೆ + ಎಣಿಸಲ್

ಸ್ನೇಹವನು + ಆಂತವಂ

ಮಾನಿತರು + ಎಂದು

ದೊರೆಗಳ್ಗೆ + ಎತ್ತಣ

ಎಣಿಸುತ್ತ + ಎಲ್ಲರ

ಸಕ್ಕರೆಗೆ + ಉಪ್ಪಂ

## ಪರ್ಯಾಯ ಪದ

ವಿದ್ಯಾರ್ಥಿಗಳನ್ನು ಗುಂಪುಗಳನ್ನಾಗಿ ಮಾಡಿ ಪಾಠಭಾಗದಲ್ಲಿ ಬಂದಿರುವ ಮೊದಲ ಮೂರು ಪದ್ಯಗಳಿಂದ ಪರ್ಯಾಯ ಪದಗಳಿರುವ ಪದಗಳನ್ನು ಆಯ್ದು ಬರೆಯಲು ತಿಳಿಸುವುದು. ಒಂದು ಗುಂಪಿನವರಿಂದ ಅದನ್ನು ಓದಿಸುವುದು. ಅವರು ಸೂಚಿಸದೇ ಇರುವ ಪದಗಳನ್ನು ಉಳಿದ ಗುಂಪಿನವರು ಬರೆದಿದ್ದರೆ ಅವುಗಳನ್ನೂ ಗುರುತಿಸಲು ಹೇಳುವುದು. ಪರ್ಯಾಯ ಪದ ಬರೆಯಲು ಯೋಗ್ಯವಲ್ಲದ ಪದಗಳನ್ನು ಬರೆದಿದ್ದರೆ ಅದನ್ನು ಸೂಚಿಸುವುದು. ಹೀಗೆ ದೊರೆತ ಪದಗಳಿಗೆ ಎರಡೆರಡು ಪರ್ಯಾಯ ಪದಗಳನ್ನು ಪದಕೋಶದ ಸಹಾಯದಿಂದ ಬರೆಯಲು ಸೂಚಿಸುವುದು. ಬಳಿಕ ಪ್ರತಿ ಗುಂಪಿನಿಂದ ಮಂಡಿಸಲು ಹೇಳುವುದು.

ಮುಪ್ಪು – ಮುದಿತನ, ವೃದ್ಧಾಪ್ಯ, ಜರೆ

ಆಪತ್ತು – ಅಪಾಯ, ತೊಂದರೆ

ಬಂಧು – ಸಂಬಂಧಿಕ, ನೆಂಟ

ಕಾಲ – ಸಮಯ,ವೇಳೆ

ಪರ್ವತ – ಬೆಟ್ಟ, ಗಿರಿ, ಅಗ

ಸುರೆ – ಮದ್ಯ,ಹೆಂಡ

ಸ್ನೇಹ – ಗೆಳೆತನ,ಮೈತ್ರಿ

ಬಡವ – ದರಿದ್ರ, ದೀನ

ಪ್ರೀತಿ – ಪ್ರೇಮ, ಅನುರಾಗ,ಒಲವು

ದುರುಳ – ಕೆಟ್ಟವ, ನೀಚ, ದುಷ್ಟ

## ಸಮಾಸ

ಸಮಾಸದ ಕುರಿತು ವಿದ್ಯಾರ್ಥಿಗಳು ಹಿಂದಿನ ಪಠ್ಯಭಾಗದಲ್ಲಿ ವಿವರವಾಗಿ ಕಲಿತಿರುವರು. ಕರ್ಮಧಾರಯ ಸಮಾಸದ ನಿರ್ವಚನೆ ಮತ್ತು ಉದಾಹರಣೆಗಳನ್ನು ವಿದ್ಯಾರ್ಥಿಗಳಿಂದ ಹೇಳಿಸುವುದು. ಪಾಠಭಾಗದಲ್ಲಿ ಕರ್ಮಧಾರಯ ಸಮಾಸಕ್ಕೆ ಉದಾಹರಣೆಯಾಗಿ ನೀಡಬಹುದಾದ ಪದಗಳನ್ನು ಆರಿಸಿ ಬರೆಯಲು ಸೂಚಿಸುವುದು.

ಎಳಗರು–ಎಳೆಯ ಕರು

## ಧ್ವನಿ ವ್ಯತ್ಯಾಸ

'ಪ'ಕಾರವು 'ಹ' ಕಾರವಾಗಿ ಧ್ವನಿ ವ್ಯತ್ಯಾಸಗೊಳ್ಳುವ ಪದಗಳ ಪರಿಚಯವನ್ನು ಹಿಂದಿನ ತರಗತಿಗಳಲ್ಲಿ ವಿದ್ಯಾರ್ಥಿಗಳು ಪಡೆದಿರುತ್ತಾರೆ. ಅವರಿಗೆ ತಿಳಿದಿರುವಷ್ಟು ಅಂಥ ಪದಗಳನ್ನು ಬರೆಯುವಂತೆ ಸೂಚಿಸುವುದು. ಅತಿ ಹೆಚ್ಚು ಪದಗಳನ್ನು ಬರೆದ ವಿದ್ಯಾರ್ಥಿಯಿಂದ ಓದಿಸುವುದು. ಅವರು ಬರೆಯದೇ ಇರುವ ಪದಗಳು ಇದ್ದರೆ ಅವುಗಳನ್ನು ಉಳಿದ ವಿದ್ಯಾರ್ಥಿಗಳು ಸೂಚಿಸಲಿ. ಎಲ್ಲ ವಿದ್ಯಾರ್ಥಿಗಳೂ ಅವುಗಳನ್ನು ಬರೆದುಕೊಳ್ಳಲಿ.

ಪಲಗೆ > ಹಲಗೆ, ಪೆಣ್ಣು > ಹೆಣ್ಣು, ಪೂ>ಹೂ, ಪಾಲ್>ಹಾಲು, ಪೊಸತು >ಹೊಸತು, ಪರಸು>ಹರಸು, ಪೋಗು>ಹೋಗು, ಪಕ್ಕಿ>ಹಕ್ಕಿ, ಪಿಡಿ>ಹಿಡಿ, ಪೆಸರ್>ಹೆಸರು, ಪಸಿರು>ಹಸಿರು, ಪೊಕ್ಕು >ಹೊಕ್ಕು, ಪಶು>ಹಸು, ಪಲರ್>ಹಲವರು, ಪನಿ>ಹನಿ, ಪಳ್ಳಿ>ಹಳ್ಳಿ, ಪಾವು>ಹಾವು, ಪೇಳು>ಹೇಳು.

## ವಿಭಕ್ತಿ ಪ್ರತ್ಯಯ

ಹಳೆಗನ್ನಡ, ನಡುಗನ್ನಡಗಳಲ್ಲಿ ಬಳಕೆಯಾದ ಸಪ್ತ ವಿಭಕ್ತಿ ಪ್ರತ್ಯಯಗಳ ಕುರಿತು ವಿದ್ಯಾರ್ಥಿಗಳಲ್ಲಿ ಪ್ರಶ್ನಿಸುವುದು. ಭಾಷಾಭ್ಯಾಸದಲ್ಲಿ ನೀಡಿರುವ ವಿಭಕ್ತಿ ಪ್ರತ್ಯಯದಿಂದೊಡಗೂಡಿದ ಪದಗಳನ್ನು ಗಮನಿಸುವಂತೆ ವಿದ್ಯಾರ್ಥಿಗಳಿಗೆ ಸೂಚಿಸುವುದು. ಅವುಗಳ ಆಧಾರದಲ್ಲಿ ನೀಡಿರುವ ಪದಗಳ ವಿಭಕ್ತಿ ಪ್ರತ್ಯಯಗಳನ್ನು ವಿದ್ಯಾರ್ಥಿಗಳು ಗುರುತಿಸಿ ಬರೆಯಲಿ.

ಎಲ್ಲರ ಬಾಳ್ಗೆ (ಅ–ಷಷ್ಠಿ 'ವಿಭಕ್ತಿ ಪ್ರತ್ಯಯ, ಗೆ–ಚತುರ್ಥೀ ವಿಭಕ್ತಿ ಪ್ರತ್ಯಯ)

ಮಾರ್ಪಣಮಂ–(ಅಂ–ದ್ವಿತೀಯ ವಿಭಕ್ತಿ ಪ್ರತ್ಯಯ

ಸೂರ್ಯಗೆ (ಗೆ–ಚತುರ್ಥಿ ವಿಭಕ್ತಿ ಪ್ರತ್ಯಯ)

ಪಾೞ್ದಿನಂ (ಮ್–ಪ್ರಥಮಾ ವಿಭಕ್ತಿ ಪ್ರತ್ಯಯ)

ಪೈಶೂನ್ಯೋಕ್ತಿಯಿಂ (ಇಮ್–ತೃತೀಯಾ ವಿಭಕ್ತಿ ಪ್ರತ್ಯಯ)

ಅಱಿವಟ್ಟಿಗೆಯೊಳ್ (ಒಳ್–ಸಪ್ತಮೀ ವಿಭಕ್ತಿ ಪ್ರತ್ಯಯ)

## ಛಂದಸ್ಸು–ವರ್ಣವೃತ್ತ (ಅಕ್ಷರ ವೃತ್ತ)

ಪ್ರಸ್ತಾರ ಹಾಕುವ ವಿಧಾನವನ್ನು ವಿದ್ಯಾರ್ಥಿಗಳು ಈಗಾಗಲೇ ಕಲಿತಿರುತ್ತಾರೆ. ಕೆಲವು ಪದಗಳನ್ನು ಅಧ್ಯಾಪಕರು ನೀಡಿ ಪ್ರಸ್ತಾರ ಹಾಕಲು ಹೇಳುವುದು. ಅಕ್ಷರಗಣಗಳ ಲಕ್ಷಣವನ್ನು ಸೂಚಿಸುವ ಈ ಕಂದ ಪದ್ಯದ ಆಧಾರದಲ್ಲಿ ಎಂಟು ವರ್ಣಗಣಗಳನ್ನು ವಿದ್ಯಾರ್ಥಿಗಳಿಗೆ ಪರಿಚಯಿಸುವುದು.

ಗುರು ಲಘು ಮೂರಿರೆ ಮನಗಣ

ಗುರು ಲಘು ಮೊದಲಲ್ಲಿ ಬರಲು ಭಯಗಣ ಮತ್ತಾ

ಗುರು ಲಘು ನಡುವಿರೆ ಜರಗಣ

ಗುರು ಲಘು ಕಡೆಯಲ್ಲಿ ಬರಲು ಸತಗಣಮಕ್ಕುಂ

ಗುರು ಮೂರು ಬರಲು ಮಗಣ; ಲಘು ಮೂರು ಬರಲು ನಗಣ

ಗುರು ಮೊದಲಲ್ಲಿ ಬರಲು ಭಗಣ; ಲಘು ಮೊದಲಲ್ಲಿ ಬರಲು ಯಗಣ

ಗುರು ನಡುವಲ್ಲಿ ಬರಲು ಜಗಣ; ಲಘು ನಡುವಲ್ಲಿ ಬರಲು ರಗಣ

ಗುರು ಕೊನೆಯಲ್ಲಿ ಬರಲು ಸಗಣ; ಲಘು ಕೊನೆಯಲ್ಲಿ ಬರಲು ತಗಣ.

ವರ್ಣಗಣಗಳ ಸ್ವರೂಪವನ್ನು ಅತ್ಯಂತ ಸುಲಭವಾಗಿ ತಿಳಿಸುವ ಇನ್ನೊಂದು ಸೂತ್ರ 'ಯಮಾತಾರಾಜಭಾನಸಲಗಂ'. ಈ ಸೂತ್ರವಾಕ್ಯಕ್ಕೆ ವಿದ್ಯಾರ್ಥಿಗಳು ಪ್ರಸ್ತಾರ ಹಾಕಿ ಗಣ ವಿಭಾಗ ಮಾಡಲು ಹೇಳಿ, ಅದರ ಆಧಾರದಲ್ಲಿ ವರ್ಣವೃತ್ತದ ಎಂಟು ಗಣಗಳನ್ನು ಪರಿಚಯಿಸುವುದು. ಪಠ್ಯ ಭಾಗದ ಒಂದು ಪದ್ಯಕ್ಕೆ ಪ್ರಸ್ತಾರ ಹಾಕಲು ಹೇಳುವುದು. ಒಬ್ಬ ವಿದ್ಯಾರ್ಥಿಯು ಕರಿಹಲಗೆಯಲ್ಲಿ ಪದ್ಯಕ್ಕೆ ಪ್ರಸ್ತಾರ ಹಾಕಲಿ. ಅದರ ಸರಿ ತಪ್ಪುಗಳ ಕುರಿತು ವಿದ್ಯಾರ್ಥಿಗಳೇ ಚರ್ಚಿಸಿ ಸರಿಪಡಿಸಲಿ. ಅನಂತರ ಒಬ್ಬ ವಿದ್ಯಾರ್ಥಿ ಗಣ ವಿಭಾಗ ಮಾಡಿ ಗಣಗಳನ್ನು ಹೆಸರಿಸಲಿ. ಅಧ್ಯಾಪಕರು ಸೂಕ್ತ ರೀತಿಯಲ್ಲಿ ಮಾಹಿತಿ ನೀಡುವುದು., ಅದರ ಆಧಾರದಲ್ಲಿ ಮತ್ತೇಭವಿಕ್ರೀಡಿತದ ಲಕ್ಷಣವನ್ನು ಲಕ್ಷಣದೊಂದಿಗೆ ಸಮನ್ವಯಮಾಡಲು ಅಧ್ಯಾಪಕರು ತಿಳಿಸುವುದು.

# ತರುಣ ಸೂರ್ಯಂ ಕತ್ತಲೆಯನೆ ಹೊಕ್ಕಂತಾಯ್ತು

– ರಾಘವಾಂಕ

## ಪ್ರಸ್ತಾವನೆ

ಕನ್ನಡ ಸಾಹಿತ್ಯಕ್ಕೆ ಸುಮಾರು ಎರಡು ಸಾವಿರ ವರ್ಷಗಳ ಶ್ರೀಮಂತ ಪರಂಪರೆ ಇದೆ. ಭಾಷೆಯ ದೃಷ್ಟಿಯಿಂದ ಕನ್ನಡ ಭಾಷೆಯನ್ನು ಪ್ರಧಾನವಾಗಿ ನಾಲ್ಕು ಹಂತಗಳಾಗಿ ವಿಭಜಿಸಲಾಗಿದೆ. ಅವುಗಳು ಅನುಕ್ರಮವಾಗಿ ಪೂರ್ವದ ಹಳಗನ್ನಡ, ಹಳಗನ್ನಡ, ನಡುಗನ್ನಡ ಮತ್ತು ಹೊಸಗನ್ನಡ. ಕ್ರಿ.ಶ.ಸುಮಾರು 12ನೇ ಶತಮಾನದಿಂದ 19ನೇ ಶತಮಾನದವರೆಗಿನ ಕನ್ನಡ ಭಾಷಾರೂಪಕ್ಕೆ ನಡುಗನ್ನಡವೆಂದು ಹೆಸರು. ವಚನ, ತ್ರಿಪದಿ, ರಗಳೆ, ಶತಕ, ಷಟ್ಪದಿ, ಸಾಂಗತ್ಯಗಳಲ್ಲದೆ ಚಂಪೂ ಕೂಡ ನಡುಗನ್ನಡ ಕಾಲಘಟ್ಟದಲ್ಲಿ ರಚನೆಗೊಂಡಿದೆ.

ನಡುಗನ್ನಡ ಕಾಲದಲ್ಲಿ ಹೆಚ್ಚು ಜನಪ್ರಿಯವಾದ ಛಂದೋರೂಪಗಳಲ್ಲಿ ಪ್ರಮುಖವಾದುದು ಷಟ್ಪದಿ. ಆರು ಪಾದಗಳಿಂದ ಕೂಡಿರುವ ಈ ಛಂದೋರೂಪವು ಮಾತ್ರಾಗಣ ಪ್ರಧಾನವಾಗಿದೆ. ಶರ, ಕುಸುಮ,ಭೋಗ, ಭಾಮಿನಿ, ಪರಿವರ್ಧಿನಿ ಮತ್ತು ವಾರ್ಧಕ ಎಂಬ ಷಟ್ಪದಿಗಳಲ್ಲಿ ಅತ್ಯಂತ ಜನಪ್ರಿಯವೆನಿಸಿದವುಗಳು ಭಾಮಿನಿ ಮತ್ತು ವಾರ್ಧಕ. ರಾಘವಾಂಕ, ಭೀಮಕವಿ, ಲಕ್ಷ್ಮೀಶ, ಕುಮಾರವ್ಯಾಸ, ಚಾಮರಸ, ಕುಮಾರ ವಾಲ್ಮೀಕಿ ಮೊದಲಾದವರು ಷಟ್ಪದಿಯಲ್ಲಿ ರಸವತ್ತಾದ ಕೃತಿಗಳನ್ನು ರಚಿಸಿರುವರು.

ಕವಿ ರಾಘವಾಂಕನು ಷಟ್ಪದಿ ಛಂದಸ್ಸಿನಲ್ಲಿ ಕಾವ್ಯರಚನೆ ಮಾಡಿ 'ಷಟ್ಪದಿ ಬ್ರಹ್ಮ' ನೆಂಬ ಕೀರ್ತಿಗೆ ಪಾತ್ರನಾಗಿದ್ದಾನೆ. ಮಾತ್ರವಲ್ಲದೆ, ವಾರ್ಧಕ ಷಟ್ಪದಿಯಲ್ಲಿಯೇ ಕಾವ್ಯ ರಚನೆ ಮಾಡಿದವರಲ್ಲಿ ಮೊದಲಿಗನಾಗಿ, 'ಷಟ್ಪದಿ ಸಂಪ್ರದಾಯ ಪ್ರತಿಷ್ಠಾಪನಾಚಾರ್ಯ'ಎಂಬ ಬಿರುದಿಗೆ ಪಾತ್ರನಾಗಿದ್ದಾನೆ. ಕಾವ್ಯೇತಿಹಾಸದ ನಡೆಯನ್ನು ಅವಲೋಕನ ಮಾಡಿದಾಗ ಕವಿ ರಾಘವಾಂಕನ ಸಾಹಿತ್ಯ ಕೃತಿಗಳು ಗಮನಾರ್ಹವಾಗಿ ಕಾಣಿಸಿಕೊಳ್ಳುತ್ತವೆ.

ರಾಘವಾಂಕನು ಕಾವ್ಯ ಪರಂಪರೆಯ ಕೆಲವು ಅಂಶಗಳನ್ನಿರಿಸಿಕೊಂಡು 'ಹರಿಶ್ಚಂದ್ರ ಕಾವ್ಯ'ವನ್ನು ರಸವತ್ತಾಗಿ ನಿರೂಪಿಸಿದ್ದಾನೆ. ಹರ್ಷ, ವಿಷಾದ, ಶೋಕ, ಕ್ರೋಧ ಮುಂತಾದ ಚಿತ್ತ ವೃತ್ತಿಗಳನ್ನು ಮನೋಜ್ಞವಾಗಿ ವರ್ಣಿಸಿದ್ದಾನೆ. ಹರಿಶ್ಚಂದ್ರನ ಧೀರೋದಾತ್ತತೆ–ಸತ್ಯನಿಷ್ಠೆ, ಚಂದ್ರಮತಿಯ ಸೌಜನ್ಯ–ಸಚ್ಚಾರಿತ್ರ್ಯಗಳು, ವಿಶ್ವಾಮಿತ್ರನ ವಂಚನಾನೈಪುಣ್ಯ–ಛಲಗಳು ಓದುಗರ ಮನಸನ್ನಾಕರ್ಷಿಸಿ ತನ್ಮಯಗೊಳಿಸುತ್ತವೆ. ಪ್ರಕೃತಿ ಚಿತ್ರಣದಲ್ಲಿಯೂ ರಾಘವಾಂಕನು ಸಿದ್ಧಹಸ್ತ. ಮಾತಿಗೊಂದು ಮಾತಿನ ಕೊಂಡಿಯನ್ನಿಟ್ಟು ಸರಪಳಿಯಂತೆ ಸಂಭಾಷಣೆಯನ್ನು ಬೆಳೆಸುವ ಕವಿಯ ಚಾತುರ್ಯ ಮೆಚ್ಚುವಂತಹದು.

ಪೌರಾಣಿಕವಾದ ಕಥೆ ಇಲ್ಲಿ ಮಧುರವಾದ ಕಾವ್ಯವಾಗಿದೆ. ತಾನು ನಂಬಿದ ಮಹಾತತ್ತ್ವವಾದ ಸತ್ಯಕ್ಕಾಗಿ ಮಹತ್ತರವಾದ ವಿಪತ್ತನ್ನೂ ಎದುರಿಸಿ ಗೆದ್ದವನು ಹರಿಶ್ಚಂದ್ರ ಮಹಾರಾಜ. 'ಉತ್ತಮರ ಮುಂದೆ ಯಾವ ಠಕ್ಕೂ ನಿಲ್ಲಲಾರದು' ಎಂಬ ಪರಮ ಸತ್ಯವನ್ನು ಚಂದ್ರಮತಿಯ ಪಾತಿವ್ರತ್ಯದ ಮಹಿಮೆಯ ಮೂಲಕ ಇಲ್ಲಿ ಪ್ರತಿಪಾದಿಸಲಾಗಿದೆ. 'ತರುಣ ಸೂರ್ಯಂ ಕತ್ತಲೆಯನೆ ಹೊಕ್ಕಂತಾಯ್ತು'ಎಂಬ ಶೀರ್ಷಿಕೆಯ ಈ ಪದ್ಯಭಾಗವು 'ಸತ್ಯ, ಪರಿವ್ರತಾಧರ್ಮ, ನಿಷ್ಕಲ್ಮಶ ಮನೋಭಾವ ಇವುಗಳ ಮುಂದೆ ಯಾವ ವಂಚನೆಯೂ ನಿಲ್ಲುವುದಿಲ್ಲ' ಎಂಬ ಸಂದೇಶವನ್ನು ಸಾರುತ್ತದೆ.

**ಪಾಠಪ್ರವೇಶ**

ವಿದ್ಯಾರ್ಥಿಗಳ ಪೂರ್ವಜ್ಞಾನವನ್ನು ಪರೀಕ್ಷಿಸಲು ಕೆಲವೊಂದು ಪ್ರಶ್ನೆಗಳನ್ನು ಕೇಳುವುದು. ಸೀತೆ, ಮಂಡೋದರಿ, ಸಾವಿತ್ರಿಯರ ಕುರಿತು ಕೆಲವು ಪ್ರಶ್ನೆಗಳನ್ನು ಕೇಳುವುದು. ಆ ಮೂಲಕ ಪ್ರಕೃತ ಕಾವ್ಯದತ್ತ ಮಕ್ಕಳ ಗಮನ ಸೆಳೆಯುವುದು.ತದನಂದರ ಪ್ರಸ್ತುತ ಪದ್ಯಭಾಗವನ್ನು ವಿದ್ಯಾರ್ಥಿಗಳಿಂದ ಹಾಡಿಸುವುದು. ಅಡಕ ಮುದ್ರಿಕೆ ಲಭ್ಯವಿದ್ದಲ್ಲಿ ವಿದ್ಯಾರ್ಥಿಗಳಿಗೆ ಆಲಿಸಲು ಅವಕಾಶ ಮಾಡಿಕೊಡುವುದು. ಪಠ್ಯಭಾಗದಲ್ಲಿ ನೀಡಲಾದ ಪದವಿಂಗಡಣೆ, ಪದಗಳ ಅರ್ಥ–ಇವುಗಳನ್ನು ತಿಳಿದುಕೊಂಡು ಕಾವ್ಯಭಾಗವನ್ನು ಚೆನ್ನಾಗಿ ಅರ್ಥೈಸಿಕೊಳ್ಳಲು ಅವಕಾಶ ನೀಡುವುದು.

**ಸಾರಾಂಶ**

ಗುಂಪಿನ ಚಟುವಟಿಕೆಯ ಮೂಲಕ ಸಾರಾಂಶ ಹೇಳಿಸುವುದು. ಗುಂಪಿಗೆ 2 ಪದ್ಯಗಳಂತೆ ಚರ್ಚೆ ನಡೆಸಲು ಅವಕಾಶ ಕೊಡುವುದು ಅವರು ಸಾರಾಂಶವನ್ನು ಬಾಯ್ದೆರೆಯಾಗಿ ಹೇಳಿದ ಬಳಿಕ ಸರಿಪಡಿಸಿ ಬರೆಯಲು ಸೂಚಿಸುವುದು. ವಿದ್ಯಾರ್ಥಿಗಳಿಗೆ ಕಷ್ಟವಾಗುವ ಸಂದರ್ಭದಲ್ಲಿ ಅಧ್ಯಾಪಕರ ಸಹಾಯ ಅಗತ್ಯ.

**ಪದ್ಯ–1**

ತಲುಪಬೇಕಾದ ಕಾಶಿಯನ್ನು ಪ್ರವೇಶಿಸಿಲ್ಲ. ವಿಶ್ವಾಮಿತ್ರನ ಸಾಲವನ್ನು ಇನ್ನೂ ಕೊಟ್ಟಿಲ್ಲ. ದಾನ ಕೊಟ್ಟ ಭೂಮಿಯಿಂದ ಆಚೆ ಸರಿದಿಲ್ಲ. ಆಯುಷ್ಯ ಪೂರ್ಣಗೊಂಡು ಮಡಿದವನೂ ಅಲ್ಲ. ಅವೆಲ್ಲಾ ಹೋಗಲಿ. ಈಗ ನಾನೊಬ್ಬನೇ ಮರಣವನ್ನು ಹೊಂದುವುದೂ ಅಲ್ಲ. ಪತ್ನಿ, ಮಗ, ಮಂತ್ರಿ ಸಹಿತ ಎಲ್ಲರೂ ಅರಣ್ಯಮಧ್ಯದಲ್ಲಿ ದಳ್ಳುರಿ ಹೊಡೆದು ದುರ್ಮರಣಕ್ಕೆ ತುತ್ತಾಗುವಂತಾಗಿ ಬಿಟ್ಟಿತೇ?' ಎಂದು ಅರಸನು ಮರುಗಿದನು.

**ಪದ್ಯ – 2**

ಕರ್ಬೊಗೆಯಿಂದ ಕೂಡಿದ ಕಾಡ್ಗಿಚ್ಚು ಕೆಂಗಿಡಿಗಳನ್ನು ಕೆದರುತ್ತಾ ಮುನ್ನುಗ್ಗುತ್ತಿರಲು, ಈ ತೀವ್ರತರವಾದ ಅಗ್ನಿಯಲ್ಲಿ ಕುಸಿದು ಬಿದ್ದು, ಕೈಕಾಲು ಬೆಂದು, ಮಿಡುಮಿಡುಕುತ್ತಾ ರೋದಿಸುವ ಸತಿ–ಸುತರ ಅಳಿವನ್ನು ಕಣ್ಣಾರೆ ಕಂಡು, ಬಳಿಕ ನಾನಳಿವುದು ಸರಿಯಲ್ಲ. ಅವರಿಗಿಂತ ಮೊದಲೇ ನಾನು ಬೆಂಕಿಯನ್ನು ಪ್ರವೇಶಿಸುತ್ತೇನೆ. ಮಂತ್ರಿ ಸತ್ಯಕೀರ್ತಿಯೇ, ನೀನು ದುಃಖಿಸಬೇಡ ನನ್ನನ್ನು ತಡೆಯಬೇಡ ಎಂದು ಅರಸನು ಹೇಳಿದನು.

**ಪದ್ಯ –3**

'ಒಡೆಯನ ಅಳಿವನ್ನು ಕಾಣುವ ನಾನು ಪಾಪಿಯೇ ಸರಿ. ಇದಕ್ಕಿಂತ ಕೀಳಾದ ನರಕಿಗಳು ಬೇರೆ ಯಾರೂ ಇಲ್ಲ. ಒಡೆಯನ ಬಳಿಕ ಅಳಿದು ಫಲವೇನು? ಈ ಶರೀರವನ್ನು ಇಟ್ಟುಕೊಂಡು ನಾನಾದರೋ ಶಾಶ್ವತನಾಗಿ ಬದುಕುತ್ತೇನೆಯೆ?' ಒಡೆಯನಿಗಾಗಿ ಸೇವೆ ಸಲ್ಲಿಸುತ್ತಾ ಆತನ ಮುಂದೆ ಸಾವನ್ನಪ್ಪಿದಲ್ಲಿ ಪುಣ್ಯ ಮತ್ತು ಕೀರ್ತಿ ಪ್ರಾಪ್ತಿಯಾಗುತ್ತದೆ. ಬದಲಾಗಿ ಒಡೆಯನ ಸಾವನ್ನು ಕಾಣುವುದು ಅತ್ಯಂತ ಹೀನವಾದುದು. ಅರಸನ ಹಿತಕ್ಕಾಗಿ ಆಳುಗಳು ಮುಂದಿರಬೇಕು. ಹೊರತು, ವಿಪತ್ಕಾಲದಲ್ಲಿ ಅರಸನನ್ನೇ ಮುಂದೆ ಬಿಡುವುದೆ? ಆದುದರಿಂದ ಅಮಂಗಳದ ಮಾತುಗಳನ್ನಾಡದಿರು ತಂದೆಯೇ? ಎಂದು ಮಂತ್ರಿ ಸತ್ಯಕೀರ್ತಿಯು ರಾಜನ ಮುಂದೆ ಕೈಮುಗಿಯುತ್ತಾ ನುಡಿದನು'

**ಪದ್ಯ–4**

ಮಂತ್ರಿಯೇ, 'ನೀನು ಉತ್ತಮ ಕುಲದಲ್ಲಿ ಹುಟ್ಟಿದವನೂ ಬ್ರಾಹ್ಮಣೋತ್ತಮನೂ ವೇದ–ಶಾಸ್ತ್ರಗಳನ್ನು ಕರಗತ ಮಾಡಿಕೊಂಡವನೂ ಮಹಾಶಿವಭಕ್ತನೂ ಮಿಗಿಲಾಗಿ ವಯೋವೃದ್ಧನೂ ಅಗಿರುವೆ. ಇಂತಹ ನೀನು ನಿನ್ನ ಮನೆ –ಮಕ್ಕಳನ್ನು ಬಿಟ್ಟು, ನನ್ನನ್ನು ಅನುಸರಿಸಿಕೊಂಡು, ನಂಬಿ ಬಂದಿರುವೆ. ಮುನ್ನುಗ್ಗಿ ಬಂದಿರುವ ಕಾಡ್ಗಿಚ್ಚಿಗೆ ಇಂತಹ ನಿನ್ನನ್ನು ತಳ್ಳಿ ನರಕಕ್ಕೆ ಇಳಿಯಬೇಕಾದ ಪಾಪ ಕೆಲಸವನ್ನು ಕೈಗೊಂಡು, ಜಗತ್ತಿನ ಜನರೆಲ್ಲರೂ ತಿಳಿಯುವಂತೆ ಅಪಕೀರ್ತಿಗೆ ಪಾತ್ರನಾಗಲು ಸಿದ್ಧನಿಲ್ಲ. ನನ್ನಿಂದ ಮೊದಲೇ ನೀನು ದಾವಾಗ್ನಿಗೆ ಆಹುತಿಯಾಗುವೆಯಾದರೆ ನನ್ನಾಣೆ!' ಎಂದು ರಾಜನು ನುಡಿದನು.

**ಪದ್ಯ–5**

"ಲೌಕಿಕ ಜೀವನ ಸುಖವನ್ನು ಅನುಭವಿಸದ ತರುಣನನ್ನು 'ನಿಧಿಗೆ' ಸಮರ್ಪಿಸಲು ಆ ನಿಧಿಯು ಸಂತೃಪ್ತಿಗೊಂಡು ಎಲ್ಲರ ಮುಂದೆ ತೆರೆದುಕೊಳ್ಳುತ್ತದೆ" – ಎಂಬ ಮಾತಿದೆ. ಹಾಗೆ ಬಾಲಕನಾದ ನನ್ನನ್ನು ಆಹುತಿಕೊಟ್ಟರೆ ಈ ಕಾಡ್ಗಿಚ್ಚು ತೃಪ್ತವಾಗಿ ನಿಮ್ಮೆಲ್ಲರನ್ನೂ ಕಾಪಾಡುವುದು. ಅಪ್ಪಾ, ಆದಷ್ಟು ಬೇಗನೆ ನನಗೆ ಈ ಬೆಂಕಿಗೆ ಆಹುತಿಯಾಗಲು ಅಪ್ಪಣೆಯನ್ನು ನೀಡು"ಎಂದು ಲೋಹಿತಾಶ್ವನು ಬಿನ್ನವಿಸಿಕೊಳ್ಳುವನು. ಮಗನ ಈ ನುಡಿಯನ್ನು ಕೇಳಿ, "ಮಗನೇ. ನೀನಿನ್ನು ಬದುಕಿ ಬಾಳಬೇಕಾದವನು. ಸಾಮ್ರಾಜ್ಯದ ಸಂಪತ್ತನ್ನು ಅನುಭವಿಸಬೇಕಾದವನು. ಈಗಲೇ ಅಳಿಯುವುದು ಉಚಿತವಲ್ಲ"ಎಂದು ಆತನನ್ನು ತಡೆಯಲು ಪರಿಶ್ಚಂದ್ರನು ಮುಂದಾದಾಗ 'ನಮ್ಮ ರಾಜ್ಯದ ಒಡೆತನವು ಈಗಾಗಲೇ ಕೌಶಿಕನ ಪಾಲಾಗಿದೆ. ರಾಜನದ್ದಾಗಿದೆ. ಇನ್ನು ನಾನು ಆಳುವುದಾದರೂ ಏನನ್ನು?' ಎಂದು ಲೋಹಿತಾಶ್ವನು ಮರು ನುಡಿದನು.

**ಪದ್ಯ–6**

"ಮಗನೇ, ಉತ್ತಾನಪಾದ ಭೂಪಾಲನ ಮಗನಾದ ಧ್ರುವನು ತನ್ನ ಮಲತಾಯಿ ಸುರುಚಿಯ ನಿಂದನೆಗೆ ವೈರಾಗ್ಯವನ್ನು ತಾಳಿ, ಪರಮ ಶಿವನನ್ನು ಒಲಿಸಿ, ಬಹುಬೇಗನೇ ಉನ್ನತ ಪದವಿಗೇರಿ ಹದಿನಾಲ್ಕು ಲೋಕಗಳಿಗೂ ದಿಕ್ಕು ತೋರುವವನಾದನು. ಬೇಡಿದ್ದನ್ನು ನೀಡುವ ಶಿವನು ನಮಗೆ ಇದ್ದಾನೆ; ಆತನ ಅನುಗ್ರಹಕ್ಕೆ ಪಾತ್ರನಾಗುವ ಯೋಗ್ಯತೆಯನ್ನು ನೀನು ಹೊಂದಿರುವೆ. ಇದಕ್ಕೆ ಮಿಗಿಲಾಗಿ ರಾಜ್ಯವನ್ನು ಆಳುವ ಭಾಗ್ಯವೂ ನಿನಗಿದೆ. ಅಳಿಯಬೇಡ" ಎಂದು ಹರಿಶ್ಚಂದ್ರನು ಸುತನಿಗೆ ಬೋಧಿಸಿದನು.

**ಪದ್ಯ–7**

'ಪತಿದೇವಾ, ಕೆರಳಿ ವ್ಯಾಪಿಸಿಕೊಂಡು ಎಲ್ಲವನ್ನು ನುಂಗಿ ನೊಣೆಯುವ ಬೆಂಕಿಯು ಎಲ್ಲರನ್ನು ಒಂದಾಗಿ ಕೊಲ್ಲದೆ ನನ್ನೊಬ್ಬಳನ್ನೇ ಕೊಲ್ಲಲಾರದು.ನಿಮ್ಮ ಜೊತೆಯಲ್ಲಿ ಸಾವನ್ನಪ್ಪುವುದು ನನಗೆ ಉಚಿತವಲ್ಲ. ನಿಮ್ಮ ಬಳಿಕ ಸಾವನ್ನಪ್ಪುವುದು ಅತ್ಯಂತ ನಿಕೃಷ್ಟವಾದುದು. ಆದ್ದರಿಂದ ಮುತ್ತೈದೆಯಾಗಿ ಸ್ವಯಂ ಇಚ್ಛೆಯಿಂದ ಆಹುತಿಯಾಗುವೆನು. ಇದು ಅತ್ಯಂತ ಶ್ರೇಷ್ಠ ಮರಣ. ನನಗೆ ಅಪ್ಪಣೆಯನ್ನು ನೀಡು' ಎಂದು ಪತಿವ್ರತೆಯರ ಆನಂದ ನಿಧಿಯಾದ ಚಂದ್ರಮತಿಯು ಗಂಡನೊಡನೆ ವಿನೀತಳಾಗಿ ಬೇಡಿಕೊಂಡಳು.

## ಪದ್ಯ–8

ದಿಗ್ದೇವತೆಗಳಿಗೆ ವಂದಿಸಿ, ಕುಲದೈವಕ್ಕೆ ಬಾಗಿ, ರವಿಗೆ ನಮಸ್ಕರಿಸಿ, 'ಜನ್ಮಜನ್ಮಾಂತರಗಳಲ್ಲಿ ಹರಿಶ್ಚಂದ್ರ ರಾಜನೇ ನನಗೆ ಗಂಡನಾಗಲಿ, ಲೋಹಿತಾಶ್ವನೇ ಮಗನಾಗಲಿ, ಶ್ರೇಷ್ಠನಾದ ಸತ್ಯಕೀರ್ತಿಯೇ ಮಂತ್ರಿಯಾಗಲಿ, ಚಂದ್ರಶೇಖರನೇ ದೈವವಾಗಲಿ, ನಮ್ಮ ರಾಜ್ಯವನ್ನಾಳುವ ವಿಶ್ವಾಮಿತ್ರ ಚಿರಾಯುವಾಗಲಿ' ಎಂದು ಚಂದ್ರಮತಿಯು ಪ್ರಾರ್ಥಿಸಿ, ಬಳಿಕ ಮುಂದುವರಿಸಿ ಇಂತೆಂದಳು.

## ಪದ್ಯ–9

'ಹುಟ್ಟಿದ ಮತ್ತು ಹೊಕ್ಕ ಎರಡೂ ಕುಲ(ಮನೆ)ಗಳಲ್ಲೂ ನಾನು ಶುದ್ಧೆಯಲ್ಲದಿದ್ದರೆ, ನಿನ್ನನ್ನಲ್ಲದೆ ಬೇರೆಯವರನ್ನು ಗಣನೆಗೆ ತೆಗೆದುಕೊಂಡಿದ್ದರೆ, ಎಂದಾದರೂ ನಿನಗೆ ಒಂದನ್ನು ಕೊಟ್ಟು ನಾನು ಬೇರೊಂದನ್ನು ಉಂಡಿದ್ದರೆ, ತ್ರಿಕರಣ ಪೂರ್ವಕವಾಗಿ ಶಿವನನ್ನಲ್ಲದೆ ಅನ್ಯದೈವವನ್ನು ನಮಿಸಿದ್ದರೆ ಈ ದಾವಾಗ್ನಿಯು ನನ್ನನ್ನು ಹೊಡೆದು ಮುಕ್ಕುತ್ತದೆ. ಇಲ್ಲದಿದ್ದರೆ ಮುಂದೆ ಹೋಗಲು ದಾರಿ ಬಿಡುತ್ತದೆ' ಎಂದು ಗಟ್ಟಿಯಾಗಿ ಸಾರುತ್ತಿದ್ದಳು. ಆ ಸಂದರ್ಭವನ್ನು ಏನೆಂದು ವರ್ಣಿಸಲಿ ಎಂದು ಕವಿಯು ಹೇಳುತ್ತಾನೆ.

## ಪದ್ಯ–10

ಚಂದ್ರಮತಿಯು ದಿಗ್ಭ್ರಮೆಗೊಳ್ಳಲಿ ಎಂದು ದಾವಾನಲವು ಬಾನೆತ್ತರಕ್ಕೆ ನೆಗೆದು ಆವರಿಸಿತು. ಆಗ ಚಂದ್ರಮತಿಯು ಬೆದರದೆ ಆ ಕಿಚ್ಚನ್ನು ಪ್ರವೇಶಿಸಿದಳು. 'ತರುಣಸೂರ್ಯನು ಪ್ರವೇಶ ಮಾಡಿದಾಗ ಕತ್ತಲೆಯು ಮಾಯವಾಗುವಂತೆ' ದಾವಾಗ್ನಿಯು ಮಾಯವಾಗಿ ದಾರಿಯು ಸ್ಪಷ್ಟವಾಗಿ ಅವರಿಗೆ ಕಾಣಿಸಿತು. ಕೌಶಿಕನ ಕೃತಕಾಗ್ನಿಯು ಮಾಯವಾದ ಸನ್ನಿವೇಶದ ಕುರಿತು ಕವಿಯು 'ಶಿವಾ ಶಿವಾ ಮಹಾದೇವ'ಎಂದು ಉದ್ಗಾರವೆತ್ತಿ 'ಉತ್ತಮರ ಮುಂದೆ ಯಾವುದೇ ಕಪಟವೂ ನಡೆಯಲಾರದು'ಎಂಬ ಲೋಕ ಸತ್ಯವನ್ನು ಸಾರುತ್ತಾನೆ. 'ತರುಣ ಸೂರ್ಯ' ಎಂಬ ಕವಿಪ್ರಯೋಗದ ಔಚಿತ್ಯದ ಕುರಿತು ವಿದ್ಯಾರ್ಥಿಗಳು ಚರ್ಚಿಸಲಿ.

## ಪದ್ಯ–11

ಆ ಸಂದರ್ಭದಲ್ಲಿ ದೇವತೆಗಳು ಕರೆದ ಹೂಮಳೆಯ ತಂಪಿಗೆ ನೆಲದ ದಾವಾಗ್ನಿಯ ಬಿಸಿ ಆರಿಹೋಯಿತು. ಕಾಡ್ಗಿಚ್ಚಿನ ನೆಪದಲ್ಲಿ ಚಂದ್ರಮತಿಯ ಚಾರಿತ್ರ್ಯ ಶುದ್ಧಿ ಪ್ರಕಟವಾಯಿತು. ಹರಿಶ್ಚಂದ್ರನು ಸಂತೋಷದಿಂದ ಅವಳನ್ನು ಆಲಂಗಿಸಿದನು. ಮಂತ್ರಿಯು ಚಂದ್ರಮತಿಗೆ ನಮಸ್ಕರಿಸಿದನು. ಮಗ ಸಂತೋಷದಿಂದ ಕುಣಿದಾಡಿದನು. 'ಶಿವನ ಅನುಗ್ರಹದಿಂದ ಅಗ್ನಿಭಯವು ಹೇಗೋ ಪರಿಹಾರವಾಯಿತು. ಪ್ರಚಂಡ ಮುನಿ ವಿಶ್ವಾಮಿತ್ರನಿಗೆ ನಾನು ಕೊಟ್ಟ ಅವಧಿ ಹತ್ತಿರ ಬಂತು. ಇನ್ನು ತಡ ಮಾಡುವಂತಿಲ್ಲ. ನಡೆ, ನಡೆ, ಬೇಗ' ಎನ್ನುತ್ತ ಹರಿಶ್ಚಂದ್ರನು ಅವಸರಪಡಿಸಲು ಅವರು ಮುಂದುವರಿದು ವಿಂಧ್ಯ ಪರ್ವತವನ್ನು ದಾಟಿದರು.

## ವಿಶದೀಕರಣ

- 14 ಲೋಕಗಳು : ಊರ್ಧ್ವ ಲೋಕಗಳು–7
  ಅಧೋಲೋಕಗಳು–7

  ಊರ್ಧ್ವಲೋಕಗಳು : ಭೂಲೋಕ, ಭುವರ್ಲೋಕ, ಸುವರ್ಲೋಕ, ಮದರ್ಲೋಕ, ಜನೋಲೋಕ, ತಪೋಲೋಕ ಮತ್ತು ಸತ್ಯಲೋಕ (ದೇವಲೋಕ)

  ಅಧೋಲೋಕಗಳು : ಅತಳ, ವಿತಳ, ಸುತಳ, ರಸಾತಳ, ತಳಾತಳ, ಪಾತಾಳ, ಮಹಾತಳ.

- ‘ಭೋಗವಱಿಯದ ತರುಣನಂ ನಿಧಿಗೆ ಕೊಡೆ ತೃಪ್ತನಾಗಿ ತನ್ನಂ ಕೊಡುವುದೆಂಬಾಗಳ್’–

‘ನಿಧಿ ಒಲಿಯ ಬೇಕಾದರೆ ಜೀವ ಬಲಿಕೊಡಬೇಕು’ ಎಂಬುದು ಜನಪದರ ನಂಬಿಕೆ. ಕೆಲವೊಂದು ಸಂದರ್ಭದಲ್ಲಿ ಮುತ್ತೈದೆ, ಕನ್ನಿಕೆ, ಬಾಲಕ, ಅಂತೆಯೇ ಪ್ರಾಣಿ ಬಲಿ ನೀಡಲಾಗುವುದು.

### ಸಂದರ್ಭವನ್ನು ತಿಳಿಸುವುದು

ವಿದ್ಯಾರ್ಥಿಗಳು ಪದ್ಯದ ಆಶಯಗ್ರಹಣವನ್ನು ಮಾಡಿಕೊಂಡ ಬಳಿಕ ಪಠ್ಯದಲ್ಲಿ ನೀಡಿರುವ ಸಾಲುಗಳ ಸಂದರ್ಭವನ್ನು ಬರೆಯಲಿ. ಅದನ್ನು ಕೆಲವೊಂದು ವಿದ್ಯಾರ್ಥಿಗಳಿಂದ ಓದಿಸಿವುದು. ಬಳಿಕ ಸರಿಪಡಿಸಿ ಕಲಿಕಾ ಪುಸ್ತಕದಲ್ಲಿ ಬರೆಯಲಿ.

### ಸಂಕ್ಷಿಪ್ತವಾಗಿ ಉತ್ತರಿಸುವುದು

- ಸಾರಾಂಶವನ್ನು ತಿಳಿದು ಬರೆದ ವಿದ್ಯಾರ್ಥಿಗಳು ಈಗ ಸಂಕ್ಷಿಪ್ತವಾಗಿ ಉತ್ತರಿಸುವ ಪ್ರಶ್ನೆಗಳಿಗೆ ಉತ್ತರ ಬರೆಯಲಿ. ಮಕ್ಕಳು ಅನಂತರ ತಮ್ಮ ಕಲಿಕಾ ಪುಸ್ತಕದಲ್ಲಿ ಬರೆದುಕೊಳ್ಳಲಿ. ವಿದ್ಯಾರ್ಥಿಗಳಿಗೆ ತೊಡಕಾದ ಕಡೆಗಳಲ್ಲಿ ಸೂಕ್ತ ವಿವರಣೆಯನ್ನು ಅಧ್ಯಾಪಕರು ನೀಡುವುದು.
- ಕಾನನದಲ್ಲಿ ಎದುರಾದ ದಳ್ಳುರಿಯನ್ನು ಕಂಡು ಹರಿಶ್ಚಂದ್ರನು ತನ್ನ ಮನದಲ್ಲಿ ಮರುಗಿದ ಬಗೆಯನ್ನು ಮಕ್ಕಳು ಬಾಯ್ದೆರೆಯಾಗಿ ವಿವರಿಸಲಿ. ಬಳಿಕ ತಮ್ಮ ಪುಸ್ತಕದಲ್ಲಿ ಬರೆಯಲಿ.

### ಪಾತ್ರಗಳ ತ್ಯಾಗ ಮನೋಭಾವ ಕುರಿತು ಟಿಪ್ಪಣಿ

ಪ್ರಸ್ತುತ ಪದ್ಯಭಾಗದಲ್ಲಿ ಪ್ರಧಾನ ಪಾತ್ರವಾಗಿ ಕಂಡು ಬರುವ ಹರಿಶ್ಚಂದ್ರನು ‘ಕಾರ್ಯತತ್ಪರ’ನಾದರೆ ಇನ್ನುಳಿದ ಚಂದ್ರಮತಿ, ಸತ್ಯಕೀರ್ತಿ, ಲೋಹಿತಾಶ್ವ ಎಂಬೀ ಪಾತ್ರಗಳು ‘ತ್ಯಾಗತತ್ಪರ’ರು. ರಾಜ್ಯದ ವಿಚಾರದಲ್ಲಿ ರಾಜನಿಗಾಗಿ ಜೀವ ಮತ್ತು ಜೀವನ ಮೀಸಲು ಎನ್ನುವ ಮಂತ್ರಿಯ ಸ್ವಾಮಿ ನಿಷ್ಠೆ, ತ್ಯಾಗ ಮನೋಭಾವ ಗಮನೀಯವಾಗಿದೆ.

ರಾಜ್ಯದ ಅಧಿಕಾರವು ಮುಂದೆ ತನ್ನದಾಗುವುದಾದರೂ ಲೋಹಿತಾಶ್ವನು ಬಂದೊದಗಿದ ಆಪತ್ತನ್ನು ತಿಳಿದು ‘ಲೌಕಿಕ ಜೀವನದ ಸುಖವನ್ನು ಅನುಭವಿಸದ ತರುಣನನ್ನು ‘ನಿಧಿಗೆ’ ಸಮರ್ಪಿಸಲು, ಆ ನಿಧಿಯು ಸಂತೃಪ್ತಿಗೊಂಡು ಬಲಿಕೊಟ್ಟವರಿಗೆ ವಶವಾಗುತ್ತದೆ’ ಎಂಬ ಮಾತಿನಂತೆ ‘ಬಾಲಕನಾದ ನನ್ನನ್ನು ಈ ಕಾಡ್ಗಿಚ್ಚಿಗೆ ಆಹುತಿ ಕೊಟ್ಟರೆ ಅದು ತೃಪ್ತವಾಗಿ ನಿಮ್ಮೆಲ್ಲರನ್ನು ಕಾಪಾಡುವುದು’– ಎಂಬ ಅವನ ಮಾತು ಸಹೃದಯರ ಅಂತಃಕರಣ ಮಿಡಿಯುವಂತಹದು. ಇಲ್ಲಿ ಆತನಲ್ಲಿರುವ ತ್ಯಾಗ ಮನೋಭಾವವು ಪುಟಿದು ಮೇಲೆದ್ದು ತೋರುತ್ತದೆ.

ಪತಿ ಬದುಕಿದ್ದಂತೆ ತಾನು ಸಾಯುವ ‘ಮುತ್ತೈದೆ ಸಾವು’ ಉತ್ಕೃಷ್ಟವಾದುದು. ‘ಮುತ್ತೈದೆಯಾಗಿದ್ದುಕೊಂಡು ಸ್ವಯಂ ಇಚ್ಛೆಯಿಂದ ಬೆಂಕಿಗೆ ಆಹುತಿಯಾಗುವೆನು. ನನಗೆ ಅಪ್ಪಣೆ ನೀಡು’ ಎಂದು ಹರಿಶ್ಚಂದ್ರನಲ್ಲಿ ಬೇಡಿಕೊಳ್ಳುವ ಚಂದ್ರಮತಿಯ ಪತಿವ್ರತಾಧರ್ಮ, ತ್ಯಾಗ ಮನೋಭಾವ ಆಕೆಯ ಸಚ್ಚಾರಿತ್ರ್ಯಕ್ಕೆ ಹಿಡಿದ ಕೈಗನ್ನಡಿ ಎಂಬಂತಿದೆ.

### ಸಂಭಾಷಣೆ ಬರಯುವುದು

ವಿದ್ಯಾರ್ಥಿಗಳು ಈಗಾಗಲೇ ಸಂಭಾಷಣೆ ಬರೆಯುವ ಜಾಣ್ಮೆಯನ್ನು ರೂಢಿಸಿಕೊಂಡಿರುವರು. ಹರಿಶ್ಚಂದ್ರ ಮತ್ತು ಚಂದ್ರಮತಿ ಇವರು ಪರಸ್ಪರ ಆಡುವ ಮಾತುಗಳನ್ನು ವಿದ್ಯಾರ್ಥಿಗಳು ಗುಂಪಿನಲ್ಲಿ ಚರ್ಚಿಸಿ ಸಂಭಾಷಣೆ ರೂಪದಲ್ಲಿ ಬರೆಯಲಿ. ಅಭಿನಯದ ಮೂಲಕ ಪ್ರಸ್ತುತ ಪಡಿಸಲಿ. ಯಾವುದಾದರೂ ಶಾಲಾ ಸಮಾರಂಭ(ತರಗತಿಯಲ್ಲಿ) ದಲ್ಲಿ ವಿದ್ಯಾರ್ಥಿಗಳು ಅಭಿನಯಿಸಲಿ.

### ಭಾಷಾಭ್ಯಾಸ

ಮಾದರಿಯನ್ನು ಗಮನಿಸಿಕೊಂಡು ಇನ್ನುಳಿದ ಪದಗಳಿಗೆ ವಿದ್ಯಾರ್ಥಿಗಳು ಉತ್ತರ ಬರೆಯಲಿ.

### ಪರ್ಯಾಯ ಪದ

ಧುರ – ಯುದ್ಧ, ಸಂಗ್ರಾಮ, ರಣ, ಸಮರ, ಕಾಳಗ

ವಿಪ್ರ – ಬ್ರಾಹ್ಮಣ, ಭೂಸುರ, ದ್ವಿಜ, ಪಾರ್ವ

ಸುರ – ದೇವತೆ, ಅಮರ, ನಿರ್ಜರ, ತ್ರಿದಶ, ಅನಿಮಿಷ, ದಿವಿಜ

### ಪದವಿಂಗಡಣೆ

ಕೆಂಡಂಗಳಡಸಿ → ಕೆಂಡಂಗಳು + ಅಡಸಿ

ನರಕಾಳಿಗನಿಮಿತ್ತ → ನರಕ + ಆಳಿಗೆ + ಅನಿಮಿತ್ತ

ದೈವವಾಗಲೆಮ್ಮಿಳೆಯ → ದೈವವು + ಆಗಲಿ + ಎಮ್ಮ + ಇಳೆಯ

ಹೊಕ್ಕಳಿಲೆಲೆ → ಹೊಕ್ಕಳು + ಎಲೆ + ಎಲೆ

ತಕ್ಕಿರಲಾಪುದು → ತಕ್ಕು + ಇರಲು + ಆಪುದು

ಬಿಸಿಯಾಱಿತುರಿಯ → ಬಿಸಿ + ಆಱಿತು + ಉರಿಯ

### ವಿಂಗಡಣೆ

ಕೃತಕಾಗ್ನಿ → ಕೃತಕ + ಅಗ್ನಿ

ದಾವಾಗ್ನಿ → ದಾವ + ಅಗ್ನಿ

ದೈವಕ್ಕೆರಗಿ → ದೈವಕ್ಕೆ + ಎರಗಿ

ಸರ್ವಾಗಮ → ಸರ್ವ + ಆಗಮ

ನರಕಾಳಿ → ನರಕ + ಆಳಿ

**ವಿಗ್ರಹವಾಕ್ಯ – ಸಮಾಸ**

ಕರ್ಬೊಗೆ → ಕರಿದುಪೊಗೆ (ಕರ್ಮಧಾರಯ ಸಮಾಸ)

ಕೆಂಗಿಡಿ → ಕೆಂಪಾದ ಕಿಡಿ ಕೆಚ್ಚನೆ ಕಿಡಿ(ಕರ್ಮಧಾರಯ ಸಮಾಸ)

ಒಡಲುವಿಡಿ → ಒಡಲನ್ನು ಪಿಡಿ (ಕ್ರಿಯಾ ಸಮಾಸ)

ಬಟ್ಟೆಗೊಡು → ಬಟ್ಟೆಯನ್ನು ಕೊಡು (ಕ್ರಿಯಾ ಸಮಾಸ)

ಅಗ್ನಿಭಯ → ಅಗ್ನಿಯ ಭಯ (ತತ್ಪುರುಷ ಸಮಾಸ) ಅಗ್ನಿಯಿಂದ ಭಯ ವಸುಧೆಯ ಈಶ (ತತ್ಪುರುಷ ಸಮಾಸ)

ವಸುಧೇಶ → ವಸುಧೆಗೆ ಈಶ

**ಅಲಂಕಾರ**

ಚಂದ್ರಮತಿ ದಳ್ಳುರಿಯನ್ನು ಹರಿದು ಹೊಕ್ಕುದು

ತರುಣ ಸೂರ್ಯಂ ಕತ್ತಲೆಮನೆ ಹೊಕ್ಕಂತಾಯ್ತು – ಇಲ್ಲಿ ಕಂಡು ಬರುವ ಅಲಂಕಾರ – ಉಪಮಾ

ಉಪಮಾ ಅಲಂಕಾರವನ್ನು ಹಿಂದಿನ ತರಗತಿಗಳಲ್ಲಿ ಕಲಿತಿರುವರು. ಅಧ್ಯಾಪಕರು ವಿದ್ಯಾರ್ಥಿಗಳ ಪೂರ್ವಜ್ಞಾನವನ್ನು ಪರೀಕ್ಷಿಸುವುದು.

ಉಪಮೇಯ – ಚಂದ್ರಮತಿ ದಳ್ಳುರಿಯನ್ನು ಹೊಕ್ಕುದು

ಉಪಮಾನ – ತರುಣ ಸೂರ್ಯ ಕತ್ತಲೆಯನ್ನು ಹೊಕ್ಕುದು

ವಾಚಕ ಪದ – ಅಂತೆ

ಇಲ್ಲಿ ಸಮಾನ ಧರ್ಮವು ಲುಪ್ತವಾಗಿದೆ. ಆದುದರಿದ ಲುಪ್ತೋಪಮೆ. (ಹೆಚ್ಚಿನ ಮಾಹಿತಿಗೆ ಕನ್ನಡ ಕೈಪಿಡಿ ಸಂಪುಟ 1 ನೋಡುವುದು) ಅರ್ಥಾಂತರನ್ಯಾಸ ಅಲಂಕಾರದ ಬಗ್ಗೆ ಕೂಡಾ ಕನ್ನಡ ಕೈಪಿಡಿಯನ್ನು ನೋಡುವುದು.

**ಪ್ರಾಸ**

ಪ್ರಾಸದ ವಿಚಾರವಾಗಿ ವಿದ್ಯಾರ್ಥಿಗಳು ಈ ಹಿಂದಿನ ತರಗತಿಗಳಲ್ಲಿ ಕಲಿತಿರುವರು. ಪದ್ಯ ಒಂದರಲ್ಲಿ 'ಟ'ಅಕ್ಷರ ಆದಿ ಪ್ರಾಸವಾಗಿಯೂ ಪದ್ಯ ಐದರಲ್ಲಿ 'ಗ'ಅಕ್ಷರ ಆದಿಪ್ರಾಸವಾಗಿಯೂ ಪದ್ಯ ಎಂಟರಲ್ಲಿ 'ಸ'ಅಕ್ಷರ ಆದಿಪ್ರಾಸವಾಗಿಯೂ ಬಂದಿವೆ. ವಿದ್ಯಾರ್ಥಿಗಳು ಇತರ ಪ್ರಾಸಾಕ್ಷರಗಳನ್ನು ಗುರುತಿಸಿ ಬರೆಯಲಿ.

**ಛಂದಸ್ಸು**

ಸೂಚಿಸಿದ ಪದ್ಯದ ಸಾಲುಗಳನ್ನು ವಿದ್ಯಾರ್ಥಿಗಳು ಕರಿಹಲಗೆಯಲ್ಲಿ ಬರೆಯಲಿ. ಬಳಿಕ ಒಂದೊಂದು ಪದ್ಯದ ಸಾಲಿಗೆ ಒಬ್ಬೊಬ್ಬರಂತೆ ಪ್ರಸ್ತಾರ ಹಾಕಲು ಸೂಚಿಸುವುದು. ಇನ್ನು ಕೆಲವು ವಿದ್ಯಾರ್ಥಿಗಳಿಗೆ ಗಣ ವಿಭಾಗ ಮಾಡಲು ಹೇಳುವುದು. (ಐದು ಮಾತ್ರೆಗಳ ಗಣ)

∪ ∪ — ∪ | — ∪ ∪ ∪ | ∪ ∪ — ∪ | — ∪ —
ಪೂಡವೀಶ|ಕೇಳುಭಯ|ಕುಲಶುದ್ಧೆ|ಯಲ್ಲದಿ|

∪ ∪ — ∪ | — ∪ — | ∪ ∪ ∪ — | ∪ ∪ ∪ —
ರ್ದಡೆ ನಿನ್ನ|ನಲ್ಲದ|ನ್ಯರನು ಲೆ|ಕ್ಕಿಸಿದೆನಾ|

∪ ∪ — ∪ | ∪ ∪ — ∪ | — ∪ — | — ∪ — | ∪ ∪ — ∪ | ∪ ∪ ∪ ∪ ∪ | —
ದಡೆ ಹಿಂದೆ|ನಿನಗೊಂದ|ನಿಕ್ಕಿ ನಾ|ನೊಂದನುಂ|ಡಡೆ ಮೂಱು|ಕರಣವೞಿ|ಯೆ

ಬಳಿಕ ಇದು ವಾರ್ಧಕ ಷಟ್ಪದಿಯಲ್ಲಿದೆ ಎಂಬುದನ್ನು ಮಕ್ಕಳು ಸ್ಪಷ್ಟಪಡಿಸಲಿ.

# ಗುರುವಚನಮಲಂಘನೀಯಂ

## ಪ್ರವೇಶ

ಇದು ಲಾಕ್ಷಾಗೇಹದಾಹಕ್ಕಿದು ವಿಷಮ ವಿಷಾನ್ನಕ್ಕಿದಾ ನಾಡಜೂದಿಂ
ಗಿದು ಪಾಂಚಾಲೀ ಪ್ರಪಂಚಕ್ಕಿದು ಕೃತಕ ಸಭಾ ಲೋಕನ ಭ್ರಾಂತಿಗೆಂದೋ।
ವದೆ ಪೊಯ್ದಂ ಕಾಲ್ಗಳಂ ತೋಳ್ಗಳನಗಲ್ದುರಮಂ ಕೆನ್ನೆಯಂ ನೆತ್ತಿಯಂ ಕೋ
ಪದೊಳಯ್ದುಂದುರ್ನಯಕ್ಕಯ್ದೆಡೆಯನುರುಗದಾದಂಡದಿಂ ಭೀಮಸೇನಂ

ಮೇಲಿನ ಪದ್ಯದ ಸಾಲುಗಳನ್ನು ಅಧ್ಯಾಪಕರು ಭಾವಪೂರ್ಣವಾಗಿ ಸುಶ್ರಾವ್ಯವಾಗಿ ಹಾಡುವುದು. ವಿದ್ಯಾರ್ಥಿಗಳನ್ನುದ್ದೇಶಿಸಿ, “ಈ ಪದ್ಯದ ಸಾಲುಗಳನ್ನು ನೀವು ಕೇಳಿರುವಿರಾ?” ಎಂದು ಪ್ರಶ್ನಿಸುವುದು. ಆಗ ವಿದ್ಯಾರ್ಥಿಗಳು ಹಿಂದಿನ ತರಗತಿಯಲ್ಲಿ ತಾವು ಓದಿದ ಈ ಸಾಲುಗಳನ್ನು ನೆನಪಿಸಿಕೊಂಡು ಇದು ಕವಿ ರನ್ನನ 'ಗದಾಯುದ್ಧ' ಎಂಬ ಕೃತಿಯಿಂದ ಆಯ್ದ ಪದ್ಯ. 'ನೀರೊಳಗಿರ್ದುಂಬೆಮರ್ತನುರಗಪತಾಕಂ' ಪಾಠದಿಂದ ಆರಿಸಿರುವುದು ಎಂದು ಉತ್ತರಿಸುವರು.

ವಿದ್ಯಾರ್ಥಿಗಳ ಪೂರ್ವಾನುಭವವನ್ನು ಕೆದಕಿದ ಅಧ್ಯಾಪಕರು ಕವಿ ರನ್ನನ ಕಾಲ, ಕೃತಿ, ಕಾವ್ಯ ಧೋರಣೆ, ಕೃತಿಯ ವಿಶೇಷತೆ–ಮೊದಲಾದವುಗಳ ಬಗ್ಗೆ ವಿಶದ ವಿವರಣೆಯನ್ನು ನೀಡುವುದು.

ಕವಿ ರನ್ನನು ಹತ್ತನೆಯ ಶತಮಾನದ ಉತ್ತರಾರ್ಧದಲ್ಲಿ ಜೀವಿಸಿದ್ದನೆಂದು ತಿಳಿಯಲಾಗಿದೆ. ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಆತನ ಹೆಸರನ್ನು ಚಿರಸ್ಥಾಯಿಯಾಗುವಂತೆ ಮಾಡಿದುದು 'ಗದಾಯುದ್ಧ' ಎಂಬ ಕೃತಿ. ಇದಕ್ಕೆ 'ಸಾಹಸಭೀಮ ವಿಜಯ' ಎಂಬುದು ಕವಿ ನೀಡಿದ ಹೆಸರು. ಹದಿನೆಂಟು ದಿನಗಳ ಮಹಾಭಾರತ ಯುದ್ಧದ ಕೊನೆಯ ಅರ್ಧದಿನದ ಭೀಮ ದುರ್ಯೋಧನರ ಗದಾಯುದ್ಧವೇ ಇದರ ಕಥಾವಸ್ತು. ಹೀಗಿದ್ದರೂ ಸಿಂಹಾವಲೋಕನ ಕ್ರಮದಿಂದ ಮಹಾಭಾರತದ ಕಥೆಯನ್ನು ನಿರೂಪಿಸಿರುವುದು ಈ ಕೃತಿಯ/ಕವಿಯ ವಿಶೇಷತೆಯಾಗಿದೆ. ಹತ್ತು ಆಶ್ವಾಸಗಳಿಂದ ಕೂಡಿದ ಈ ಕೃತಿಯು ಒಂದು ಚಂಪೂ ಕಾವ್ಯವಾಗಿದೆ.

ಕನ್ನಡದ ಆದಿ ಕವಿಯೆಂದು ಪ್ರಸಿದ್ಧನಾದ ಪಂಪನು 'ಆದಿಪುರಾಣ' ಎಂಬ ಧಾರ್ಮಿಕ ಕಾವ್ಯ ಮತ್ತು 'ವಿಕ್ರಮಾರ್ಜುನ ವಿಜಯ' ಎಂಬ ಲೌಕಿಕ ಕಾವ್ಯಗಳನ್ನು ಬರೆದಂತೆ, ಕವಿ ರನ್ನನು ಅಜಿತ ಪುರಾಣ ಎಂಬ ಧಾರ್ಮಿಕ ಕಾವ್ಯವನ್ನೂ ಸಾಹಸಭೀಮ ವಿಜಯ ಎಂಬ ಲೌಕಿಕ ಕಾವ್ಯವನ್ನೂ ಬರೆದಿರುವನು. ಪಂಪನು ತನ್ನ ಆಶ್ರಯದಾತನಾದ ಚಾಲುಕ್ಯ ಎರಡನೇ ಅರಿಕೇಸರಿಯನ್ನು ಅರ್ಜುನನೊಂದಿಗೆ ಸಮೀಕರಿಸಿ 'ವಿಕ್ರಮಾರ್ಜುನ ವಿಜಯ'ವನ್ನು ಬರೆದಂತೆ ರನ್ನನು ತನ್ನ ಆಶ್ರಯದಾತನಾದ ಕಲ್ಯಾಣ ಚಾಲುಕ್ಯವಂಶದ ಸತ್ಯಾಶ್ರಯ ಇ...ವಬೆಡಂಗನನ್ನು ಭೀಮನೊಂದಿಗೆ ಹೋಲಿಸಿ 'ಸಾಹಸಬೀಮ ವಿಜಯ'ವನ್ನು ಬರೆದಿರುವನು. ರನ್ನ ಕವಿಯು 'ರತ್ನತ್ರಯರು' ಎಂದು ಪ್ರಸಿದ್ಧರಾದ ಮೂವರು (ಇನ್ನಿಬ್ಬರು: ಪಂಪ ಮತ್ತು ಪೊನ್ನ) ಕವಿಗಳಲ್ಲೊಬ್ಬನಾಗಿರುವನು. ಈತನು ಚಾಲುಕ್ಯ ಚಕ್ರವರ್ತಿ ತೈಲಪನಿಂದ (ಸತ್ಯಾಶ್ರಯನ ತಂದೆ) 'ಕವಿ ಚಕ್ರವರ್ತಿ' ಎಂಬ ಬಿರುದನ್ನು ಪಡೆದಿದ್ದನು.

ಪ್ರಕೃತ ಕಾವ್ಯಭಾಗದಲ್ಲಿ ವಯೋವೃದ್ಧರಾದ ಧೃತರಾಷ್ಟ್ರ ಗಾಂಧಾರಿಯರು (ಮಾತಾಪಿತರು) ಮಕ್ಕಳ ಕ್ಷೇಮಾಭ್ಯುದಯಕ್ಕಾಗಿ ಹಂಬಲಿಸುವ ಚಿತ್ರಣವು ಮನೋಜ್ಞವಾಗಿ ಮೂಡಿ ಬಂದುದನ್ನು ಕಾಣಬಹುದು. ಅಧ್ಯಾಪಕರು ಕಾವ್ಯಭಾಗವನ್ನು ಪದ ವಿಂಗಡಣೆ ಸಹಿತ ಮನದಟ್ಟಾಗುವಂತೆ ಓದುವುದು. ಅಡಕಮುದ್ರಿಕೆ ಲಭ್ಯವಾಗಿದ್ದಲ್ಲಿ ವಿದ್ಯಾರ್ಥಿಗಳಿಗೆ ಕೇಳಿಸುವುದು. ಪಠ್ಯದಲ್ಲಿ ನೀಡಿರುವ ಪದವಿಂಗಡಣೆ ಮತ್ತು ಪದಗಳ ಅರ್ಥಗಳನ್ನು ಗಮನಿಸಿ ಅಧ್ಯಾಪಕರ ಸಹಾಯದಿಂದ ಪಠ್ಯಭಾಗವನ್ನು ವಿದ್ಯಾರ್ಥಿಗಳು ಅರ್ಥಮಾಡಿಕೊಳ್ಳಲಿ. ವಿದ್ಯಾರ್ಥಿಗಳು ಪದ್ಯಭಾಗವನ್ನು ಭಾವಪೂರ್ಣವಾಗಿ, ಸ್ವರಭಾರಯುಕ್ತವಾಗಿ, ಹಾಡುವಂತೆ ಅಧ್ಯಾಪಕರು ಪ್ರೇರಪಣೆ ನೀಡುವುದು. ವಿದ್ಯಾರ್ಥಿಗಳಿಗೆ ಓದಿನಲ್ಲಿ ತೊಡಕು ಉಂಟಾದಾಗ ಅಧ್ಯಾಪಕರು ಸಹಾಯ ನೀಡುವುದು.

ವಿದ್ಯಾರ್ಥಿಗಳು ಪದ್ಯದ ಆಶಯಗ್ರಹಣ ಮಾಡಿಕೊಂಡಿರುವರೆಂಬುದನ್ನು ಖಚಿತ ಪಡಿಸಿಕೊಳ್ಳಲು ಅಧ್ಯಾಪಕರು ಆಶಯಗ್ರಹಣ ಪ್ರಶ್ನೆಗಳನ್ನು ಕೇಳುವುದು. ವಿದ್ಯಾರ್ಥಿಗಳು ನೀಡಿದ ಉತ್ತರ ಸಮರ್ಪಕವಾಗಿದ್ದಲ್ಲಿ ಮೆಚ್ಚುಗೆಯೊಂದಿಗೆ ಅದನ್ನು ಸ್ವೀಕರಿಸಿ, ವಿದ್ಯಾರ್ಥಿಗಳು ತಮ್ಮ 'ಲಾಗ್ ಬುಕ್‌ನಲ್ಲಿ ಬರೆದುಕೊಳ್ಳಲು ತಿಳಿಸುವುದು. ಉತ್ತರಗಳು ಸೂಕ್ತವಾಗಿರದಿದ್ದರೆ ಅಧ್ಯಾಪಕರು ಸೂಕ್ತವಾದ ತಿದ್ದುಪಡಿಯೊಂದಿಗೆ ಉತ್ತರವನ್ನು ಕ್ರಮಾನುಗತವಾಗಿ ಬರೆಯಲು ಸೂಚಿಸುವುದು. ಹಳೆಗನ್ನಡದ ಈ ಕಾವ್ಯಭಾಗವು ಕಷ್ಟವೆಂದು ವಿದ್ಯಾರ್ಥಿಗಳಿಗೆ ಕಂಡುಬಾರದಂತೆ ಅಧ್ಯಾಪಕರು ಪದ್ಯದ ಸಾರಾಂಶವನ್ನು ಒದಗಿಸುವುದು.

## ಸಾರಾಂಶ

### ಪದ್ಯ–1

ತನ್ನ ತಾಯ್ತಂದೆಯರು ಸುರಿಸುತ್ತಿರುವ ಆನಂದಬಾಷ್ಪವೇ ಸಿಂಪಡಿಸುವ ನೀರಾಗಲು, ಅವರು ಹೊರಹೊಮ್ಮಿಸುತ್ತಿರುವ ಸಮಾಧಾನದ ನಿಟ್ಟುಸಿರೇ ಬೀಸಣಿಗೆಯಿಂದ ಗಾಳಿ ಬೀಸಿದಂತಾಗಲು, ದುರ್ಯೋಧನನು ಮೂರ್ಛೆಯಿಂದ ಎಚ್ಚೆತ್ತನು.

(ದುರ್ಯೋಧನನು ಸತ್ತಿಲ್ಲ, ಕೇವಲ ಮೂರ್ಛೆಗೊಂಡಿದ್ದಾನಷ್ಟೆ; ಬೇಗನೆ ಚೇತರಿಸಿಕೊಳ್ಳುವನು ಎಂದು ಸಂಜಯನಾಡಿದ ಮಾತಿನಿಂದ ಅತ್ಯಾನಂದಗೊಂಡ ಧೃತರಾಷ್ಟ್ರ ಗಾಂಧಾರಿಯರ ಆನಂದಬಾಷ್ಪವೂ, ಸಮಾಧಾನದ ನಿಟ್ಟುಸಿರೂ ಮೂರ್ಛಿತನಾಗಿದ್ದ ದುರ್ಯೋಧನನಿಗೆ ಶಿಶಿರೋಪಚಾರವನ್ನು ಎಸಗಿದಂತಾಯಿತು.)

### ಪದ್ಯ–2

ಧರ್ಮರಾಯನು ಈಗಲೂ ನಮ್ಮ ಮಾತನ್ನು ಒಪ್ಪಿಕೊಳ್ಳುವನು. ಮಗನೇ! ನೀನೂ ನಮ್ಮ ಮಾತಿಗೆ ಒಪ್ಪಿಕೋ ನಿಮ್ಮೊಳಗೆ ಸಂಧಾನವನ್ನೇರ್ಪಡಿಸುವುದಕ್ಕೆ ಈಗಲೇ ಸಂಜಯವನ್ನು ಕಳುಹಿಸುತ್ತೇನೆ. ಭೀಮನ ಮೇಲಿರುವ ಬದ್ಧ ದ್ವೇಷವನ್ನು ಬಿಟ್ಟು ಬಿಡು. ಮಕ್ಕಳ ಮತ್ತು ತಮ್ಮಂದಿರ ಸಾವಿನಿಂದುಂಟಾದ ನೋವನ್ನು ನೋಡಬೇಡ. ಪಾಂಡವರಿಗೆ ಅರ್ಧರಾಜ್ಯವನ್ನು ಕೊಟ್ಟುಬಿಡು– ಹೀಗೆ ಹೇಳುತ್ತಾ ಧೃತರಾಷ್ಟ್ರನು ದುರ್ಯೋಧನನ ಕಾಲುಗಳನ್ನು ಹಿಡಿದುಕೊಂಡು ಬೇಡಿಕೊಂಡನು.

(ಮುಂದಿನ ಮಾತುಗಳು ಗಾಂಧಾರಿಯವು)

### ಪದ್ಯ–3

ಮಗನೇ! ನಾವಾದರೋ ಮುದುಕರು; ಎರಡು ಕಣ್ಣುಗಳೂ ಕಾಣಿಸವು. ಇಂಥ ನಾವು ಹೇಳುವ ಹಿತೋಕ್ತಿಯನ್ನು ಕೇಳುವುದು ನಿನಗೆ ಒಳ್ಳೆಯದು. ನಿನ್ನ ತಂದೆಯವರು ಹೇಳಿದ ಮಾತಿಗೆ ಒಪ್ಪಿಕೋ. ಏಕೆಂದರೆ 'ಗುರುಗಳ(ತಂದೆ ತಾಯ್ಗಳ) ಮಾತು ಮೀರತ್ತಕ್ಕದ್ದಲ್ಲ' (ಗುರುವಚನಮಲಂಘನೀಯಂ) ಎಂಬ ಉಕ್ತಿಯುಂಟಷ್ಟೆ.

### ಪದ್ಯ–4

ಮಗನೇ, ಇನ್ನಾದರೂ ಯುದ್ಧ ಮಾಡುವುದನ್ನು ನಿಲ್ಲಿಸಿ ಬೀಡಿಗೆ ಹಿಂತಿರುಗು. ನನ್ನ ಉಳಿದ ಮಕ್ಕಳು ಎಂತಿದ್ದರೂ ಸತ್ತು ಹೋದರು. ಅವರನ್ನು ಮರಳಿ ಪಡೆಯಲು ಸಾಧ್ಯವೇ? ನೀನೊಬ್ಬನಾದರೂ ನಮಗಿದ್ದರೆ ಸಾಕು. ನಿನ್ನನ್ನು ನೋಡಿ ಸತ್ತು ಹೋದ ಮಕ್ಕಳ ದುಃಖವನ್ನು ಹೇಗಾದರೂ ಮರೆಯುವೆವು.

(ಮುಂದಿನ ಮಾತುಗಳನ್ನು ಸಂಜಯನು ಆಡುತ್ತಾನೆ)

## ಪದ್ಯ–5

"ಪ್ರಿಯ ಪುತ್ರನಾದ ಈ ದುರ್ಯೋಧನನನ್ನು ಸಮಾಧಾನ ಪಡಿಸುವುದನ್ನು ಬಿಟ್ಟು ಧೀರಳಾದ ನೀನೇ ಹೀಗೆ ಶೋಕಾಕ್ರಾಂತಳಾಗಿ ರೋದಿಸುವುದೇ? ಹೀಗೆ ಅಳುತ್ತಾ ಕುಳಿತರೆ ವೃದ್ಧನಾದ ಧೃತರಾಷ್ಟ್ರನನ್ನೂ ದುಃಖತಪ್ತನಾದ ದುರ್ಯೋಧನನನ್ನೂ ಮತ್ತೆ ಇನ್ನಾರು ಸಂತಯಿಸುವರು? ಆದುದರಿಂದ ರೋದನವನ್ನು ನಿಲ್ಲಿಸಿ ತಂದೆ ಮಕ್ಕಳನ್ನು ಬೇಗನೆ ಸಮಾಧಾನ ಪಡಿಸು".

(ಧೃತರಾಷ್ಟ್ರನು ದುರ್ಯೋಧನನನ್ನು ಉದ್ದೇಶಿಸಿ ಹೇಳುವ ಮಾತು)

## ಪದ್ಯ–6

ನೂರು ಮಂದಿ ವೀರಪುತ್ರರ ಮಾತೆ ಎಂದು ಪ್ರಸಿದ್ಧಳಾದ ಗಾಂಧಾರಿ, ಕುರುರಾಜರೂ ದುಃಖ ಮಹಾಭಾರಕ್ಕೆ ಒಳಗಾಗಿ ಕ್ಲೇಶಗೊಂಡಿರುವುದರಿಂದ ಈಗ ಅವಳಿಗೆ ನೂರು ದುಃಖಗಳ ತಾಯಿ ಎಂಬ ಹೆಸರಾಯಿತು.

(ಈಮಾತನ್ನು ದುರ್ಯೋಧನನು ಆಡುವನು)

(ಮುಂದಿನ ಮಾತುಗಳನ್ನು ದುರ್ಯೋಧನನು ಆಡುತ್ತಾನೆ)

## ಪದ್ಯ–7

ಪ್ರಸಿದ್ಧರಾದ ತನ್ನ ಒಡಹುಟ್ಟಿದ ನಾಲ್ಕು ಮಂದಿ ತಮ್ಮಂದಿರಲ್ಲಿ ಒಬ್ಬನು ಸತ್ತರೂ ಧರ್ಮರಾಯನು ತನ್ನ ಪ್ರಾಣವನ್ನು ಅಗ್ನಿಗೆ ಅರ್ಪಿಸುತ್ತಾನಂತೆ! ಎಂದ ಬಳಿಕ ನನ್ನ ಒಡಹುಟ್ಟಿದ ಪ್ರಸಿದ್ಧರಾದ ನೂರು ಮಂದಿ ತಮ್ಮಂದಿರಲ್ಲಿ, ಒಬ್ಬನೂ ಉಳಿಯದಿರುವಾಗ ನಾನು ಬದುಕಿರಬೇಕೇ? ಬದುಕುತ್ತೇನೆಂಬ ಹೀನವಾದ ಆಸೆಯನ್ನು ಆಗಲೇ ಬಿಟ್ಟುಬಿಟ್ಟೆನು. ಇನ್ನು ಅವರಿಗಾದ ಗತಿಯನ್ನು ನಾನು ಹೊಂದದಿರುವೆನೇ?

## ಪದ್ಯ–8

ಭೀಮಾರ್ಜುನರೊಂದಿಗೆ ಹೋರಾಡುತ್ತೇನೆ. ಅವರ ಹೊಟ್ಟೆಯನ್ನು ಸೀಳಿ ದುಶ್ಶಾಸನ ಕರ್ಣರನ್ನು ಹೊರಕ್ಕೆ ತೆಗೆಯುತ್ತೇನೆ. ಇಷ್ಟನ್ನು ಸಾಧಿಸಿದ ಬಳಿಕ ನೀವೆಂದಂತೆ ಧರ್ಮರಾಯನೊಂದಿಗೆ ಕೂಡಿ ಬಾಳುತ್ತೇನೆ.

## ಪದ್ಯ–9

ನಾನು ನಿಮ್ಮ ಮಗನಾಗಿರುವಂತೆ ಧರ್ಮರಾಯನೂ ನಿಮಗೆ ಮಗನಲ್ಲವೇ? ಎಂದ ಮೇಲೆ ನೀವೂ ಅವರೂ ಅನ್ಯೋನ್ಯವಾಗಿದ್ದು ಸುಖವಾಗಿ ಬಾಳಿರಿ. ನಾನು ಮಾತ್ರ ನಿಮ್ಮ ಸಂಧಿಯ ಮಾತಿಗೆ ಎಂದಿಗೂ ಒಡಂಬಡುವವನಲ್ಲ.

## ಪಾತ್ರ ಚಿತ್ರಣ

ಪಾತ್ರಚಿತ್ರಣ ಮಾಡುವಾಗ ವಿದ್ಯಾರ್ಥಿಗಳು ಅನುಸರಿಸುವ ವಿಧಾನವನ್ನು ತಿಳಿಯಲು ಅಧ್ಯಾಪಕರು ಪ್ರಯತ್ನಿಸುವುದು ವಿದ್ಯಾರ್ಥಿಗಳಿಂದ ಬಂದ ಸೂಕ್ತ ಅಭಿಪ್ರಾಯಗಳನ್ನು ಗಮನಿಸುವುದು. ಪಾತ್ರಚಿತ್ರಣದಲ್ಲಿ ಬಳಸಬಹುದಾದ ವಿಧಾನವನ್ನು ತಿಳಿಸಿಕೊಡುವುದು.

### ಅನುಸರಿಸಬಹುದಾದ ವಿಧಾನ

- ಪಾತ್ರ ಚಿತ್ರಣ ಮಾಡುವಾಗ ಆಯಾ ಪಾತ್ರದ ಪರ ಮತ್ತು ವಿರೋಧ ಹೇಳಿಕೆಗಳನ್ನು ಬಳಸಿಕೊಂಡು ಗುಣ ವಿಶೇಷತೆಗಳನ್ನು ಪುಷ್ಟೀಕರಿಸುವುದು.
- ಪಾತ್ರದ ಬಗೆಗೆ ಕವಿ/ನಿರೂಪಕನ ಹೇಳಿಕೆಗಳನ್ನು ಬಳಸಿಕೊಳ್ಳುವುದು.
- ಕಾವ್ಯ ಭಾಗವನ್ನು ಓದಿದಾಗ ಓದುಗನಿಗೆ ಕಂಡುಬರುವ ಪೂರ್ವಗ್ರಹರಹಿತ ವಿಚಾರಗಳನ್ನು ಔಚಿತ್ಯ ಪೂರ್ಣವಾಗಿ ಸಾದರಪಡಿಸುವುದು.

### ☐ ಕಾವ್ಯಭಾಗದಲ್ಲಿ ಮೂಡಿಬಂದ ದುರ್ಯೋಧನನ ಪಾತ್ರಚಿತ್ರಣ–ಒಂದು ಮಾದರಿ.

ಧೃತರಾಷ್ಟ್ರಗಾಂಧಾರಿಯರು ರಣರಂಗಕ್ಕೆ ಆಗಮಿಸಿದ ವಾರ್ತೆಯನ್ನು ಸಂಜಯನ ಮೂಲಕ ತಿಳಿದ ದುರ್ಯೋಧನನು, 'ಸತ್ತುಹೋದ ತಮ್ಮಂದಿರ ಬಗ್ಗೆ ಅಮ್ಮನು ತನ್ನಲ್ಲಿ ಕೇಳಿದರೆ ಏನೆಂದು ಉತ್ತರಿಸಲಿ' ಎಂದು ಚಿಂತಿಸಿ, ಭೀತಿಗೊಳಗಾಗಿ ಮೂರ್ಛೆ ಹೋದುದನ್ನು ಕಾವ್ಯಭಾಗದ ಮೊದಲಲ್ಲಿ ಕಾಣುತ್ತೇವೆ.

ತಾಯ್ತಂದೆಯರ ಶಿಶಿರೋಪಚಾರದಿಂದಾಗಿ ಮೂರ್ಛೆಯಿಂದ ಎಚ್ಚತ್ತ ದುರ್ಯೋಧನನು ಅವರ ಕಾಲಿಗೆ ಎರಗಿ ವಿಧೇಯತೆಯನ್ನು ತೋರಿಸಲು ಪ್ರಯತ್ನಿಸುವನು. ಮಾತಾಪಿತರು ಈ ಸಂದರ್ಭದಲ್ಲಿ ಸಮರ ವಿಮುಖನಾಗಿ ಸಂಧಾನ ಮಾಡಲು ಮನವೊಲಿಸುವರು. ತಾಯ್ತಂದೆಯರ ಮಾತನ್ನು ದುರ್ಯೋಧನನು ನಿರಾಕರಿಸುತ್ತಾನೆ. "ಧರ್ಮರಾಯನು ತನ್ನ ತಮ್ಮಂದಿರಲ್ಲಿ ಒಬ್ಬನು ಮಡಿದರೂ ತನ್ನ ಪ್ರಾಣವನ್ನು ಅಗ್ನಿಗೆ ಸಮರ್ಪಿಸಿಕೊಳ್ಳುವೆನು ಎಂದು ವೇಳೆಗೊಂಡಿರುವನು. ಇಂತಲ್ಲಿ ವೀರರಾದ ನನ್ನ ನೂರು ಮಂದಿ ತಮ್ಮಂದಿರು ಅಳಿದು ಹೋದ ಬಳಿಕವೂ ನಾನು ಬದುಕಬೇಕೆಂಬ ಹೀನ ಆಸೆ ನನ್ನಲ್ಲಿಲ್ಲ. ಇನ್ನು ಅವರಿಗಾದ ಗತಿಯನ್ನು ಹೊಂದದಿರುವೆನೇ" ಎಂದು ಪ್ರತಿಕ್ರಿಯೆ ವ್ಯಕ್ತಪಡಿಸುವನು. ತಾನು ಅವರಂತೆ ವೀರರಮಣವನ್ನಪ್ಪುವೆನು ಎನ್ನುವನು.

ಇಷ್ಟರಿಂದ ತೃಪ್ತನಾಗದೆ ನನ್ನ ಆತ್ಮೀಯ ತಮ್ಮನಾದ ದುಶ್ಶಾಸನನನ್ನು ಕೊಂದ ಭೀಮ ಮತ್ತು ಆತ್ಮೀಯ ಮಿತ್ರನಾದ ಕರ್ಣನನ್ನು ಕೊಂದ ಅರ್ಜುನ–ಇವರನ್ನು ಕೊಂದ ಬಳಿಕ ನಿಮ್ಮ ಕೇಳಿಕೆಯಂತೆ ಸಂಧಾನಕ್ಕೆ ಮುಂದಾಗುವೆನು ಎನ್ನುವನು. ಬಳಿಕ ತಾಯ್ತಂದೆಯರನ್ನುದ್ದೇಶಿಸಿ, "ನಾನು ನಿಮಗೆಮಗನಾದಂತೆ ಧರ್ಮರಾಯನೂ ನಿಮಗೆ ಮಗನಾಗಿರುವನು. ಆತನೊಂದಿಗೆ ಸುಖವಾಗಿ ಬಾಳಿ ಬದುಕಬಹುದು" ಎಂದು ನುಡಿಯುತ್ತಾನೆ.

ಬಾಹ್ಯನೋಟಕ್ಕೆ ನಯ–ವಿನಯವುಳ್ಳ ವ್ಯಕ್ತಿಯಾಗಿ ದುರ್ಯೋಧನನು ಕಂಡುಬರುತ್ತಾನೆ; ಹಿರಿಯರ ಬಗೆಗೆ ಗೌರವ ತೋರುವ ಗುಣವನ್ನೂ ಕಾಣಬಹುದು. ಜೊತೆಗೆ ಕ್ಷತ್ರಿಯೋಚಿತವಾದ ಪೌರುಷ, ಛಲ, ಕಾಠಿಣ್ಯ ಇತ್ಯಾದಿಗಳನ್ನು ಆತನ ಮಾತು ಮತ್ತು ನಡತೆಗಳಲ್ಲಿ ಗುರುತಿಸಬಹುದು. ಶತ್ರುವಿನ ಮುಂದೆ ತಲೆಬಾಗದೆ, ಸಾವಿಗೆ ಹೆದರದೆ, ಭಾವಪರವಶನಾಗದೆ ಕರ್ತವ್ಯದ ದೃಷ್ಟಿಯಿಂದ ಅಚಲ ನಿರ್ಧಾರವನ್ನು ವ್ಯಕ್ತಪಡಿಸುತ್ತಾ ಸಾಹಸದಿಂದ ಮುನ್ನುಗ್ಗುವ ದುರ್ಯೋಧನನು ವೀರಕ್ಷತ್ರಿಯನಾಗಿರುವನು.

## ಚಟುವಟಿಕೆಗಳು

ವಿದ್ಯಾರ್ಥಿಗಳು ಕಾವ್ಯಭಾಗದ ಆಶಯವನ್ನು ಮನವರಿಕೆ ಮಾಡಿಕೊಂಡು ವಿವಿಧ ಚಟುವಟಿಕೆಗಳನ್ನು ಅಧ್ಯಾಪಕರ ಸಹಾಯದೊಂದಿಗೆ ಮಾಡುವರು. ಚಟುವಟಿಕೆಗಳನ್ನು ಸೂಕ್ತವಾದ ಕ್ರಮದಲ್ಲಿ ಚಟುವಟಿಕಾ ಪುಸ್ತಕದಲ್ಲಿ ಬರೆಯುವರು.

(ಕೆಲವು ಚಟುವಟಿಕೆಗಳನ್ನು ಇಲ್ಲಿ ವಿಸ್ತರಿಸಿ ನೀಡಲಾಗಿದೆ. ಇದನ್ನು ಮಾದರಿಯಾಗಿ ಎತ್ತಿಕೊಳ್ಳಬಹುದು.)

- **ಗಾಂಧಾರಿಯು ವೀರಶತಜನನಿ ಹಾಗೂ ಶತದುಃಖಜನನಿ ಆಗಿರುವಳು–ಸ್ಪಷ್ಟೀಕರಣ.**

ಗಾಂಧಾರಿಯು ಜನ್ಮ ನೀಡಿದ ದುರ್ಯೋಧನ ಮೊದಲ್ಗೊಂಡು ನೂರು ಜನ ಮಕ್ಕಳೂ ನುರಿತ ಗುರುಗಳಾದ ಕೃಪಾಚಾರ್ಯ ಮತ್ತು ದ್ರೋಣಾಚಾರ್ಯರಿಂದ ಶಸ್ತ್ರವಿದ್ಯಾಭ್ಯಾಸದ ಗರಡಿಯಲ್ಲಿ ಪಳಗಿದವರಾಗಿರುವರು. ಇದಲ್ಲದೆ ಶತ್ರುವಿಗೆ ಹೆದರದ, ಯುದ್ಧಕ್ಕೆ ಹಿಮ್ಮೆಟ್ಟದ ವೀರ ಪೌರುಷವನ್ನೂ ಅವರು ಮೈಗೂಡಿಸಿಕೊಂಡಿರುವರು. ಆದ್ದರಿಂದ ನೂರು ಮಕ್ಕಳ ತಾಯಿಯಾದ ಗಾಂಧಾರಿಯು 'ವೀರಶತಜನನಿ' ಎಂಬುದರಲ್ಲಿ ಎರಡು ಮಾತಿಲ್ಲ.

ಗಾಂಧಾರಿಯು ಕುರುಕ್ಷೇತ್ರ ಯುದ್ಧದಲ್ಲಿ ತೊಂಭತ್ತೊಂಭತ್ತು ಮಕ್ಕಳ ಸಾವಿನ ವಾರ್ತೆಯನ್ನು ಕೇಳಿ ಆಘಾತಕ್ಕೆ ಒಳಗಾಗಿದ್ದಳು. ಅತೀವ ದುಃಖಕ್ಕೆ ತುತ್ತಾದಳು. ಇದೀಗ ಬದುಕಿ ಉಳಿದಿರುವ ದುರ್ಯೋಧನನೂ "ಸಾವನ್ನೇ ಸ್ವೀಕರಿಸಲು ಮುಂದಾಗುತ್ತೇನೆ" ಎಂದು ಉದ್ಘಟತನದಿಂದ ನುಡಿದಾಗ ಆಕೆ ತನ್ನ ನೂರು ಜನ ಮಕ್ಕಳೂ ಸತ್ತು ಹೋದರು ಎಂದು ಅತಿಯಾದ ದುಃಖಕ್ಕೆ ಒಳಗಾಗುತ್ತಾಳೆ. ಆದ್ದರಿಂದ ಆಕೆ ಶತದುಃಖ ಜನನಿ ಎನಿಸಿದಳು.

- **"ಹೆತ್ತವರಿಗೆ ಹೆಗ್ಗಣ ಮುದ್ದು'– ಮಾತಿನ ಆಶಯ–ಇದು ಧೃತರಾಷ್ಟ್ರ–ಗಾಂಧಾರಿಯರ ನಡತೆಗೆ ಎಷ್ಟರ ಮಟ್ಟಿಗೆ ಒಪ್ಪುತ್ತದೆ? ಸಮರ್ಥನೆ.**

ಪ್ರೀತಿ–ವಾತ್ಸಲ್ಯವನ್ನು ಸಾರುವ/ ಸೂಚಿಸುವ ಗಾದೆ ಮಾತುಗಳನ್ನು ವಿದ್ಯಾರ್ಥಿಗಳಿಂದ ಹೇಳಲು ಅಧ್ಯಾಪಕರು ಶ್ರಮಿಸುವುದು. 'ಹೆತ್ತವರಿಗೆ ಹೆಗ್ಗಣ ಮುದ್ದು' ಎಂಬ ಗಾದೆ ಮಾತಿನ ಆಶಯವನ್ನು ಮನವರಿಕೆ ಮಾಡಲು ಅಧ್ಯಾಪಕರು ಸೂಕ್ತ ಸೂಚನೆಯನ್ನು ನೀಡುವುದು. ಇದರ ಆಧಾರದಲ್ಲಿ ಕಾವ್ಯ ಭಾಗದಲ್ಲಿ ಮೂಡಿಬಂದ ಧೃತರಾಷ್ಟ್ರ ಗಾಂಧಾರಿಯರು ನಡೆದುಕೊಂಡ ರೀತಿಯನ್ನು ಸ್ಪಷ್ಟಪಡಿಸುತ್ತಾ ಗಾದೆಯ ಅಂತರಾಳದಲ್ಲಿ ಅಡಗಿದ ವಿಚಾರವು ಎಷ್ಟರ ಮಟ್ಟಿಗೆ ಸೂಕ್ತವಾಗುತ್ತದೆ ಎಂಬುದರ ಬಗೆಗೆ ಚರ್ಚೆಗೆ ಅವಕಾಶವನ್ನು ನೀಡುವುದು. ವಿದ್ಯಾರ್ಥಿಗಳಿಂದ ಬಂದ ಉತ್ತರಗಳನ್ನು ಸೂಕ್ತವಾದ ರೀತಿಯಲ್ಲಿ ತಿದ್ದುಪಡಿಯೊಂದಿಗೆ ಬರೆದುಕೊಳ್ಳುವಂತೆ ಅಧ್ಯಾಪಕರು ಸೂಚಿಸುವುದು.

## ಹೆತ್ತವರಿಗೆ ಹೆಗ್ಗಣ ಮುದ್ದು–ಮಾದರಿ

ತಮ್ಮ ಮಗು/ಮಕ್ಕಳು ಎಷ್ಟೇ ಕುರೂಪಿಯೂ, ದುರ್ಗುಣಿಯೂ ಆಗಿದ್ದರೂ ತಾಯ್ತಂದೆಯರು ಅವನ/ಅವರ ಬಗ್ಗೆ ಅತಿಯಾದ ವಾತ್ಸಲ್ಯವನ್ನು ವ್ಯಕ್ತಪಡಿಸುತ್ತಾರೆ. ಮಗುವಿನ ತಪ್ಪುಗಳನ್ನು ಕಂಡೂ ಕಾಣದಂತೆ ಅವರ ಪರವಾಗಿ ಮಾತನಾಡುತ್ತಾರೆ. ಆದ್ದರಿಂದ 'ಹೆತ್ತವರಿಗೆ ಹೆಗ್ಗಣ ಮುದ್ದು' ಎಂಬ ಮಾತು ನೆಲೆ ನಿಂತಿದೆ.

ದುರ್ಯೋಧನನು ಬಾಲ್ಯದಿಂದಲೇ ದುಡುಕು ಸ್ವಭಾವವನ್ನು ಬೆಳೆಸಿಕೊಂಡವನು. ಪಾಂಡವರಹಿತ ಸಾಮ್ರಾಜ್ಯದ ಅಧಿಪತಿ ತಾನಾಗಬೇಕೆಂಬ, ರಾಜ್ಯವನ್ನು ಆಳಬೇಕೆಂಬ ಗಾಢ ಚಿಂತನೆಗೆ ಮುಂದಾದವನು. ತನ್ನ ತಮ್ಮಂದಿರ ಸಾವಿಗೆ ಕಾರಣ ಕರ್ತೃವಾದವನು. ತನ್ನ ನಡತೆಯಿಂದ ನಾಡು ಅಪಕೀರ್ತಿಗೆ ತುತ್ತಾದರೂ ಗಮನಿಸದೆ ಪಾಂಡವರ ಮೇಲೆ ಶತ್ರುಮನೋಭಾವವನ್ನು ತಾಳಿ ರಣರಂಗದಲ್ಲಿ ಅವರಿಗಾಗಿ ಹೊಂಚು ಹಾಕುತ್ತಿದ್ದವನು. –ಕೌರವನ ಈ ನಡತೆಗಳನ್ನು ಯಾರೂ ಮನ್ನಿಸಲಾರರು. ಅಂಗೀಕರಿಸಲಾರರು.

ಆದರೆ ಮಗನ ಮಹಾಪರಾಧವನ್ನು ಕ್ಷಮಿಸಿ, ತನ್ನ ಸ್ಥಾನ–ಮಾನವನ್ನು ನೋಡದೆ ಎಲ್ಲರೂ ನೋಡುತ್ತಿದ್ದಂತೆ ಆತನ ಕಾಲಿಗೆ ಎರಗುವ ಧೃತರಾಷ್ಟ್ರನ ನಡತೆಯು ಅತೀವವಾದ ಪುತ್ರವ್ಯಾಮೋಹದ ಪ್ರತೀಕವಾಗಿದೆ. "...ಸತ್ತ ಮಗಂದಿರ್ ಸತ್ತರ್....ನೀನೆಮಗುಳ್ಳೊಡೆ ಸಾಕು..." ಎಂಬ ಗಾಂಧಾರಿಯ ಮಾತಿನಲ್ಲೂ ಇದೇ ಆಶಯ ವ್ಯಕ್ತವಾಗುತ್ತದೆ. ಆದ್ದರಿಂದ ಧೃತರಾಷ್ಟ್ರ–ಗಾಂಧಾರಿಯರ ನಡತೆಯು 'ಹೆತ್ತವರಿಗೆ ಹೆಗ್ಗಣ ಮುದ್ದು' ಎಂಬುದನ್ನು ಸ್ಪಷ್ಟಪಡಿಸುತ್ತದೆ. ಇದು ಅವನು ಕೈಗೊಂಡ ನಿರ್ಧಾರ. ಇದೇ ಸನ್ನಿವೇಶವನ್ನು ಹೇಳುವಲ್ಲಿ ಪಂಪನು ತನ್ನ ವಿಕ್ರಮಾರ್ಜುನ ವಿಜಯದಲ್ಲಿ 'ಅನುಜರ್ ನಾಲ್ವರುಮಂ ಧರ್ಮನಂದನಂ ವೇಳೆಗೊಂಡು ಕಾವಂ" ಎಂದು ಹೇಳುತ್ತಾನೆ. ವೇಳೆಗೊಳ್ ಎಂದರೆ ಒಡೆಯನು ಮರಣ ಹೊಂದಿದರೆ ಸೇವಕನು ಅಥವಾ ಆಶ್ರಿತನು ತಾನೂ ಸಾಯುವುದಾಗಿ ಪ್ರತಿಜ್ಞೆ ಕೈಗೊಳ್ಳುವುದು. ತಮ್ಮಂದಿರ ಪ್ರಾಣಕ್ಕೆ ಅಪಾಯವುಂಟಾದರೆ ಧರ್ಮರಾಯನು ಮತ್ತೆ ಬದುಕಲಾರ ಎಂಬುದು ಇಲ್ಲಿನ ತಾತ್ಪರ್ಯ.

## ವಿಶದಪಡಿಸುವುದು

ಪಠ್ಯಭಾಗದಲ್ಲಿ ನೀಡಿರುವ ಮಾತುಗಳಲ್ಲಿ ಅಡಗಿರುವ ವಿಶೇಷ, ಅರ್ಥಗಳನ್ನು ವಿಶದೀಕರಿಸಿರಿ– ಎಂಬ ಚಟುವಟಿಕೆಯಲ್ಲಿ ವಿದ್ಯಾರ್ಥಿಗಳಿಗೆ ಅಗತ್ಯವಾದ ಮಾಹಿತಿಯನ್ನು ಅಧ್ಯಾಪಕರು ಒದಗಿಸುವುದು. ವಿದ್ಯಾರ್ಥಿಗಳು ಅವುಗಳನ್ನು ಮನವರಿಕೆ ಮಾಡಿಕೊಂಡು ಪದ್ಯದ ಆಶಯವನ್ನು ತಿಳಿಯಲು ಸಮರ್ಥರಾಗುವಂತೆ ವಿವರಣೆಗಳನ್ನು ನೀಡುವುದು.

- ಕುರಕುಲ ಚೂಡಾಮಣಿ

ಚೂಡಾಮಣಿ ಎಂದರೆ ಶಿರೋರತ್ನ–ಶಿರದಲ್ಲಿ ಧರಿಸುವ ಆಭರಣ. ಧೃತರಾಷ್ಟ್ರ–ಗಾಂಧಾರಿಯರ ಹಿರಿಯ ಪುತ್ರನಾದ ದುರ್ಯೋಧನನನ್ನು ಕವಿ ರನ್ನನು 'ಕುರುಕುಲ ಚೂಡಾಮಣಿ' ಎಂದು ಸಂಬೋಧಿಸಿರುವನು.

- ತನ್ನೊಡವುಟ್ಟಿದರ್ ಪೆಸರ ನಾಲ್ವರೊಳೊರ್ವರುಮಿಲ್ಲದಿರ್ದೊಡಂ।

ತನ್ನಸುವಂ ನಿವೇದಿಸುವನಗ್ನಿಗೆ ಧರ್ಮತನೂಜನ್।

ಮಹಾಭಾರತ ಸಂಗ್ರಾಮದಲ್ಲಿ ತನ್ನ ನಾಲ್ಕು ಜನ ತಮ್ಮಂದಿರಲ್ಲಿ (ಭೀಮ, ಅರ್ಜುನ, ನಕುಲ, ಸಹದೇವ) ಒಬ್ಬನು ಸತ್ತು ಹೋದರೂ ಧರ್ಮರಾಯನು ತಾನು ತನ್ನ ಪ್ರಾಣವನ್ನು ಅಗ್ನಿಗೆ ಸಮರ್ಪಿಸುವನು. ಪ್ರಾಚೀನ ಕಾಲದಲ್ಲಿ ರಾಜನಿಗಾಗಿ ತಮ್ಮ ಜೀವವನ್ನು ಮುಡಿಪಾಗಿರಿಸುವ ಭಟರಿದ್ದರು. ಇವರನ್ನು 'ವೇಳೆ ವಾಳಿ'ಗಳೆಂದು ಕರೆಯುತ್ತಿದ್ದ. ಕೆಲವು ಕಡೆಗಳಲ್ಲಿ ಇಂಥವರನ್ನು ಗರುಡರೆಂದೂ ಕರೆಯುತ್ತಿದ್ದರು. ಕುಮಾರರಾಮನಿಗಾಗಿ ತಮ್ಮ ಜೀವವನ್ನು ಮುಡಿಪಾಗಿರಿಸಿದ ಅನೇಕ ಗರುಡರಿದ್ದರೆಂದು ಕುಮಾರರಾಮನ ಸಾಂಗತ್ಯದಿಂದ ತಿಳಿದುಬರುತ್ತದೆ. ಒಟ್ಟಿನಲ್ಲಿ ವೇಳೆ ವಾಳಿ, ಗರುಡ–ಎಂಬದು ಒಂದು ಸಂಪ್ರದಾಯ ಎಂಬಂತೆ ಕನ್ನಡ ನಾಡಿನಲ್ಲಿ ಬೆಳೆದು ಬಂದಿದೆ ಎನ್ನಬಹುದು.

- ಆಂ ಬೆಸಕೆಯ್ಯೆಂ

ನಾನು ಆಜ್ಞೆಯನ್ನು ಪಾಲಿಸಲಾರೆ, ನಾನು ಅನುಸರಿಸಲಾರೆ ಎಂಬ ಅರ್ಥವನ್ನು ಮೇಲಿನ ನುಡಿ ನೀಡುತ್ತದೆ. ಹಳೆಗನ್ನಡ ಕಾವ್ಯಗಳಲ್ಲಿ 'ನಾನು' ಎಂಬ ಪದ 'ಆಂ' ಎಂದು ಪ್ರಯೋಗವಾದುದನ್ನು ಕಾಣುತ್ತೇವೆ.

ತಂದೆತಾಯಿಯರ ಬೇಡಿಕೆಯನ್ನು(ಸಂಧಾನದ ಕುರಿತಾಗಿ) ನಾನು ಪಾಲಿಸಲಾರೆ ಎಂಬ ದುರ್ಯೋಧನನು–'ಆಂ ಬೆಸಕೆಯ್ಯೆಂ' ಎಂದು ನುಡಿದಿರುವನು. ಬೆಸಕೆಯ್ಯೆಂ ಎಂಬುದು ಒಂದು ನಿಷೇಧಕ್ರಿಯಾರೂಪ.

- ಎರಡು ಕಣ್ಣುಗಳೂ ಕಾಣಿಸದ ಕುರುಡರಾಗಿದ್ದೇವೆ ಎಂಬುದು ಈ ಮಾತಿನ ಅರ್ಥವಾಗಿದೆ. ದುರ್ಯೋಧನನು ಸಂಧಾನಕ್ಕೆ ಒಪ್ಪುವುದು ಅನಿವಾರ್ಯ ಎಂಬುದನ್ನು ಪುಷ್ಟೀಕರಿಸಲು ಈ ಮಾತನ್ನು ಬಳಸಲಾಗಿದೆ. ಕುರುಡರ್ ಎಂದರೆ ಅಂಧರು, ಕುರುಡರೆಂ ಎಂದರೆ ಅಂಧರಾಗಿದ್ದೇವೆ ಎಂದರ್ಥ. ಕುರುಡರೆಂ ಎಂಬುದು ಹಳಗನ್ನಡಕ್ಕೆ ವಿಶಿಷ್ಟವಾದ ಒಂದು ಕ್ರಿಯಾರೂಪ.

ವಯೋವೃದ್ಧರಾದ ನಮ್ಮ ಕಣ್ಣುಗಳೆರಡೂ ಕುರುಡಾಗಿವೆ ಎಂದು ಗಾಂಧಾರಿಯು ಈ ಮೇಲಿನಂತೆ ನುಡಿಯುವಳು. ಧೃತರಾಷ್ಟ್ರನು ಹುಟ್ಟುಗುರುಡನಾಗಿದ್ದು ವೃದ್ಧನಾಗಿರುವನು. ತಾಯಿಯಾದ ಗಾಂಧಾರಿಯು ಕಣ್ಣಿಗೆ ಬಟ್ಟೆಯನ್ನು ಕಟ್ಟಿ ಕುರುಡುತನವನ್ನು ಗಳಿಸಿಕೊಂಡಿರುವಳು. ಜೊತೆಯಲ್ಲಿ ವೃದ್ಧಾಪ್ಯದ ಕುರುಡತನಕ್ಕೂ ಒಳಗಾಗಿರುವಳು–ಎಂಬ ಅರ್ಥವನ್ನು ಮೇಲಿನ ಪದವು ನೀಡುತ್ತದೆ.

## ಭಾಷಾಭ್ಯಾಸ

ಹಳೆಗನ್ನಡ ಗದ್ಯಭಾಗವನ್ನು ಹೊಸಗನ್ನಡಕ್ಕೆ ರೂಪಾಂತರಿಸುವ ಅಗತ್ಯವನ್ನು ಅಧ್ಯಾಪಕರು ವಿದ್ಯಾರ್ಥಿಗಳಿಗೆ ಮನವರಿಕೆ ಮಾಡಿ ಕೊಡುವುದು. ನಾವು ನಮ್ಮ ದಿನನಿತ್ಯದ ಆಟ–ಪಾಠಗಳಲ್ಲಿ ಬಾಲ್ಯದ ಘಟನೆಗಳನ್ನು ನೆನಪಿಸಿಕೊಳ್ಳುತ್ತೇವೆ. ಆ ನೆನಪಿನಿಂದ ಆನಂದಕ್ಕೆ ಒಳಗಾಗುತ್ತೇವೆ. ಅಂತೆಯೇ, ನಾವು ಓದುವ ಇಂದಿನ ಕನ್ನಡ ಭಾಷೆಯು ಹತ್ತನೇ ಶತಮಾನದಲ್ಲಿ ಹೇಗಿತ್ತು ಎಂದು ತಿಳಿದು ಕೊಳ್ಳಲು, ಹಳೆಗನ್ನಡ ಸಾಹಿತ್ಯ ಕೃತಿಗಳಲ್ಲಿನ ರಸವತ್ತಾದ ಭಾಗಗಳನ್ನು ತಿಳಿಯಲು ಈ ಚಟುವಟಿಕೆಯು ಸಹಾಯ ಮಾಡುತ್ತದೆ ಎಂದು ಅಧ್ಯಾಪಕರು ವಿದ್ಯಾರ್ಥಿಗಳಿಗೆ ತಿಳಿಸುವುದು.

- ಅಧ್ಯಾಪಕರ ಸಹಾಯದಿಂದ/ವಿದ್ಯಾರ್ಥಿಗಳು ಸ್ವ ಪ್ರಯತ್ನದಿಂದ ಪತ್ಯದಲ್ಲಿ ನೀಡಿರುವ ಹಳೆಗನ್ನಡ ಗದ್ಯಭಾಗವನ್ನು ಹೊಸಗನ್ನಡಕ್ಕೆ ರೂಪಾಂತರಿಸಿ–ತಿದ್ದುಪಡಿಯೊಂದಿಗೆ ತರಗತಿಯಲ್ಲಿ ಮಂಡಿಸಲಿ.
- ಹಳೆಗನ್ನಡದಲ್ಲಿ ಪದ್ಯ ಸಾಹಿತ್ಯ ವಿಫಲವಾಗಿತ್ತೆಂದೂ, ಒಂದು ಘಟನೆ, ಕಥೆ ಮೊದಲಾದವುಗಳನ್ನು ಥಕ್ಕನೆ ಹೇಳಿ ಮುಗಿಸುವುದಕ್ಕೆ ಪದ್ಯಗಳ ನಡುವೆ ಗದ್ಯವನ್ನು 'ವಚನ' ಎಂಬ ಹೆಸರಲ್ಲಿ ಚಂಪೂ ಸಾಹಿತ್ಯ ಕೃತಿಗಳಲ್ಲಿ ಬಳಕೆ ಮಾಡುತ್ತಿದ್ದರೆಂದೂ, ವಡ್ಡಾರಾಧನೆ, ಚಾವುಂಡರಾಯ ಪುರಾಣ ಮೊದಲಾದ ಕೃತಿಗಳು ಗದ್ಯದಲ್ಲೇ ಬರೆಯಲ್ಪಟ್ಟ ಹಳೆಗನ್ನಡ ಕೃತಿಗಳಾಗಿವೆ ಎಂದೂ ಅಧ್ಯಾಪಕರು ವಿದ್ಯಾರ್ಥಿಗಳಿಗೆ ಈ ಸಂದರ್ಭದಲ್ಲಿ ತಿಳಿಸುವುದು.

## ಪದ ಪ್ರಯೋಗ

ಸಂಖ್ಯಾ ವಾಚಕಗಳು ಹಳೆಗನ್ನಡ ಕಾವ್ಯಗಳಲ್ಲಿ ಹೇಗೆ ಬಳಕೆಯಾಗುತ್ತಿದ್ದುವು ಎಂಬುದನ್ನು ಅಧ್ಯಾಪಕರು ವಿದ್ಯಾರ್ಥಿಗಳಿಗೆ ತಿಳಿಸಿಕೊಡುವುದು. ನಾಲ್ವರ್, ನೂರ್ವರ್ ಎಂಬ ಪ್ರಯೋಗಗಳ ವೈಶಿಷ್ಟ್ಯಗಳನ್ನು ತಿಳಿಸುವುದು. ಒಂದು, ಎರಡು, ಮೂರು, ಐದು, ನೂಱು ಇತ್ಯಾದಿ ಸಂಖ್ಯಾವಾಚಕಗಳು ನಪುಂಸಕ ಲಿಂಗದ ನಾಮಗಳಿಗೆ ವಿಶೇಷಣಗಳಾಗಿ ಬರುತ್ತವೆ. ಪುಲ್ಲಿಂಗ, ಸ್ತ್ರೀಲಿಂಗ ನಾಮಗಳಿಗೆ ವಿಶೇಷಣಗಳಾಗಿ ಬರುವಾಗ'ವ' ಎಂಬ ಪ್ರತ್ಯಯವನ್ನೂ ಬಹುವಚನದಲ್ಲಿ, ಅದರ ಮುಂದೆ 'ಅರ್' ಪ್ರತ್ಯಯವನ್ನೂ ಪಡೆಯುತ್ತವೆ.

ಒರ್ವ (ಒರ್+ವ) ತಮ್ಮ

ಇರ್ವರ್ (ಇರ್+ವ+ಅರ್)ಅಣ್ಣಂದಿರ್

## ಸಂಧಿ

ಎರಡು/ಅನೇಕ ಪದಗಳು ಕಾಲ ವಿಳಂಬವಿಲ್ಲದೆ ಸೇರಿ ಸಂಧಿಯಾಗುವ ಪ್ರಕ್ರಿಯೆಯನ್ನು ವಿದ್ಯಾರ್ಥಿಗಳು ಹಿಂದಿನ ತರಗತಿಗಳಲ್ಲಿ ತಿಳಿದು ಕೊಂಡಿರುವರು. ವಿದ್ಯಾರ್ಥಿಗಳು ಕಲಿತ 'ಸಂಧಿ'ಗಳನ್ನು ನೆನಪಿಸುವಂತೆ ಮಾಡಿ ಪಠ್ಯದಲ್ಲಿ ನೀಡಿರುವ ಸಂಧಿ ಪದಗಳನ್ನು ಗುರುತಿಸಿ ಅವು ಯಾವ ಸಂಧಿಯಾಗುತ್ತವೆ ಎಂದು ತರಗತಿಯಲ್ಲಿ (ವಿದ್ಯಾರ್ಥಿಗಳಿಂದ) ಹೇಳಿಸುವುದು. ತಪ್ಪಾಗಿದ್ದಲ್ಲಿ ಸರಿಗೊಳಿಸಿ ಬರೆದುಕೊಳ್ಳಲು ಅಧ್ಯಾಪಕರು ಸೂಚಿಸುವುದು.

## ಛಂದಸ್ಸು

ಚಂಪೂ ಕಾವ್ಯಗಳಲ್ಲಿ ಕನ್ನಡದ ಕವಿಗಳು ಚಂಪಕಮಾಲಾವೃತ್ತ, ಉತ್ಪಲಮಾಲಾವೃತ್ತ, ಮತ್ತೇಭವಿಕ್ರೀಡಿತ ವೃತ್ತ, ಶಾರ್ದೂಲ ವಿಕ್ರೀಡಿತ ವೃತ್ತ, ಸ್ರಗ್ಧರಾ ವೃತ್ತ, ಮಹಾಸ್ರಗ್ಧರಾ ವೃತ್ತ – ಎಂಬ ಆರು ವೃತ್ತಗಳನ್ನು ಹಲವು ಸಂದರ್ಭಗಳಲ್ಲಿ ಬಳಸಿಕೊಂಡಿರುವರು. ಕನ್ನಡದ ಕವಿಗಳಿಗೆ / ಕನ್ನಡಿಗರಿಗೆ ಪ್ರಿಯವಾದ ಈ ಆರು ವೃತ್ತಗಳು ಕರ್ನಾಟಕದಲ್ಲಿ ಪ್ರಸಿದ್ಧವಾದ – ಎಂಬ ಅರ್ಥದಲ್ಲಿ 'ಖ್ಯಾತ ಕರ್ನಾಟಕ' ಎಂದು ಜನಜನಿತವಾಗಿವೆ – ಎಂದು ಅಧ್ಯಾಪಕರು ತಿಳಿಸುವುದು.

ಪಠ್ಯದಲ್ಲಿ ಕೊಡಲಾದ ಸೂತ್ರವಾಕ್ಯಗಳ ಆಧಾರದಲ್ಲಿ ಹಾಗೂ ಕೆಳ ತರಗತಿಗಳಲ್ಲಿ ಕಲಿತ ಛಂದಸ್ಸಿನ ನಿಯಮಗಳ ಆಧಾರದಲ್ಲಿ ವಿದ್ಯಾರ್ಥಿಗಳು ಪದ್ಯದ ಸಾಲುಗಳಿಗೆ ಪ್ರಸ್ತಾರ ಹಾಕಿ, ಗಣ ವಿಭಜನೆ ಮಾಡಿ, ಗಣಗಳನ್ನು ಗುರುತಿಸಿ, ಛಂದಸ್ಸನ್ನು ಅಧ್ಯಾಪಕರ ಸಹಾಯದೊಂದಿಗೆ (ಅಗತ್ಯವಿದ್ದಲ್ಲಿ) ಹೆಸರಿಸಲು ಶ್ರಮಿಸಲಿ. ಸೂಕ್ತ ಚಟುವಟಿಕೆಯನ್ನು ಅಧ್ಯಾಪಕರು ನೀಡುವುದು.

## ಅಲಂಕಾರ

ಉಪಮಾ, ರೂಪಕ ಅಲಂಕಾರಗಳ ಬಗೆಗೆ ವಿದ್ಯಾರ್ಥಿಗಳು ತಿಳಿದುಕೊಂಡಿರುವರು. ಪದ್ಯದ ಸಾಲುಗಳಲ್ಲಿ ಮೂಡಿಬಂದ ಅಲಂಕಾರವನ್ನು ವಿದ್ಯಾರ್ಥಿಗಳು ಗುರಿತಿಸುವಂತೆ ಅಧ್ಯಾಪಕರು ಸೂಚಿಸುವುದು. ವಿದ್ಯಾರ್ಥಿಗಳು ಅದನ್ನು ಮನವರಿಕೆ ಮಾಡಿಕೊಂಡು 'ಲೋಗ್ ಪುಸ್ತಕ'ದಲ್ಲಿ ದಾಖಲಿಸಲಿ.

## ಹೆಚ್ಚಿನ ಓದಿಗೆ

- ಗದಾಯುದ್ಧ ದರ್ಪಣ – ಪ್ರೊ. ಸುಬ್ರಾಯ ಭಟ್
- ಗದಾಯುದ್ಧ ಸಂಗ್ರಹ – ತೀ.ನಂ.ಶ್ರೀ.
- ಸರಳ ಗದಾಯುದ್ಧ – ಎಲ್. ಬಸವರಾಜು

# SAMPLE QUESTION PAPER

## HSE - II

## KANNADA - LANGUAGE

**Set - I**

Time : 2.30 Hrs.
Cool off time : 15 mts.
Max. Marks : 80

**ಸೂಚನೆಗಳು :**

- 15 ನಿಮಿಷಗಳ 'ಕೂಲ್ ಆಫ್ ಟೈಮ್' ನೀಡಲಾಗಿದೆ. ಉತ್ತರ ಬರೆಯಲು ಎರಡೂವರೆ ಗಂಟೆಗಳ ಕಾಲಾವಕಾಶವಿದೆ.
- 'ಕೂಲ್ ಆಫ್ ಟೈಮ್'ನಲ್ಲಿ ವಿದ್ಯಾರ್ಥಿಗಳು ಉತ್ತರಗಳನ್ನು ಬರೆಯುವುದಾಗಲೀ ಇತರರೊಂದಿಗೆ ಚರ್ಚಿಸುವುದಾಗಲೀ ಮಾಡಬಾರದು.
- ಉತ್ತರಗಳನ್ನು ಬರೆಯುವುದಕ್ಕೆ ಮೊದಲು ಪ್ರಶ್ನೆಗಳನ್ನು ಸೂಕ್ಷ್ಮವಾಗಿ ಓದಿರಿ.
- ಎಲ್ಲಾ ಪ್ರಶ್ನೆಗಳು ಕಡ್ಡಾಯವಾಗಿವೆ. ಅವುಗಳಲ್ಲಿ ಆಯ್ಕೆಗಳಿದ್ದರೆ ಯಾವುದಾದರೂ ಒಂದನ್ನು ಉತ್ತರಿಸತಕ್ಕದ್ದು.
- ನೀವು ಒಂದು ಪ್ರಶ್ನೆಯನ್ನು ಆಯ್ಕೆ ಮಾಡಿದಾಗ ಅದರದ್ದೇ ಆದ ಬಿಡಿ ಪ್ರಶ್ನೆಗಳನ್ನು ಉತ್ತರಿಸಬೇಕು.

**ಒಂದರಿಂದ ನಾಲ್ಕರ ವರೆಗಿನ ಪ್ರಶ್ನೆಗಳಿಗೆ ಆವರಣದಿಂದ ಸರಿಯಾದ ಉತ್ತರವನ್ನು ಆರಿಸಿ ಬರೆಯಿರಿ.**

1. 'ಊರ್ಮಿಳಾ' ಕೃತಿಯನ್ನು ಕಯ್ಯಾರ ಕಿಞ್ಞಣ್ಣ ರೈಗಳ ಯಾವ ಕೃತಿಯಿಂದ ಆಯ್ದುಕೊಳ್ಳಲಾಗಿದೆ? (1)
(ಐಕ್ಯಗಾನ, ಪುನರ್ನವ, ಶ್ರೀಮುಖ, ಚೇತನ)

2. 'ಸೂರ್ಯೋದಯ'– ಇಲ್ಲಿನ ಸಂಧಿ (1)
(ಸವರ್ಣದೀರ್ಘ ಸಂಧಿ, ಲೋಪ ಸಂಧಿ, ಆದೇಶ ಸಂಧಿ, ಗುಣ ಸಂಧಿ)

3. 'ಗುರುವಚನಮಲಂಘನೀಯಮ್' ಎಂದು ಧುರ್ಯೋಧನನಲ್ಲಿ ಭಿನ್ನವಿಸಿಕೊಂಡವರು ಯಾರು? (1)
(ಸಂಜಯ, ಭೀಷ್ಮ, ಗಾಂಧಾರಿ, ಧೃತರಾಷ್ಟ್ರ)

4. ಈ ಕೆಳಗಿನವುಗಳಲ್ಲಿ ಸಾಂಗತ್ಯ ಕೃತಿ ಯಾವುದು? (1)
(ರಾಮನಾಥ ಚರಿತೆ, ಶರಭ ಚಾರಿತ್ರ್ಯ, ವೀರೇಶ ಚರಿತೆ, ಸಾಹಸಭೀಮ ವಿಜಯ)

5. ಸರಿಹೊಂದಿಸಿ ಬರೆಯಿರಿ. (4×1=4)

| ಅ ವಿಭಾಗ | ಆ ವಿಭಾಗ |
|---|---|
| ಜಿ.ಎಸ್.ಶಿವರುದ್ರಪ್ಪ | ಮೆರವಣಿಗೆ |
| ಆರ್.ಎನ್.ಜಯಗೋಪಾಲ್ | ಕಡಲಿಗೆಷ್ಟೊಂದು ಬಾಗಿಲು |
| ಡಾ.ಸಿದ್ಧಲಿಂಗಯ್ಯ | ಬಾಳೊಂದು ಭಾವಗೀತೆ |
| ರೂಪ ಹಾಸನ | ಸೌಂದರ್ಯ ಸಮೀಕ್ಷೆ |

**ಆರರಿಂದ ಹದಿನೈದರ ಪ್ರಶ್ನೆಗಳಿಗೆ ಸೂಚನೆಯಂತೆ ಉತ್ತರಿಸಿರಿ.**

6. ಉಡುರಾಜ–ಈ ಪದದ ಅರ್ಥವನ್ನು ಬರೆಯಿರಿ. (1)

7. ಆಡು–ಈ ಪದದ ಎರಡು ನಿಷೇದಾರ್ಥಗಳನ್ನು ತಿಳಿಸಿರಿ. (1)

8. 'ಮನೋಜ'– ಈ ಪದದ ಎರಡು ಪರ್ಯಾಯ ಪದಗಳನ್ನು ಬರೆಯಿರಿ. (1)

9. ಮೈದೊಳೆ–ವಿಗ್ರಹವಾಕ್ಯ ಬರೆದು ಸಮಾಸ ಹೆಸರಿಸಿರಿ. (1)

10. 'ನೆರೆ' ಎಂಬ ಪದ ನಾಮ ಪದವಾಗಿಯೂ ಕ್ರಿಯಾ ಪದವಾಗಿಯೂ ಬರುವಂತೆ ವಾಕ್ಯಗಳನ್ನು ರಚಿಸಿರಿ. (2)

11. ಕೆಳಗೆ ಕೊಟ್ಟಿರುವ ಗದ್ಯಭಾಗಕ್ಕೆ ಸೂಕ್ತ ಲೇಖನ ಚಿಹ್ನೆಗಳನ್ನು ಅಳವಡಿಸಿರಿ. (2)

ಮುಟ್ಟೋ ಹಂಗಿಲ್ಲ ದುರ್ವಾಸನೆಕೊಡ್ತಿದೆ ಎಂದು ಬೆರಳಿನಲ್ಲಿ ಮುಚ್ಚಿ ಪ್ಯಾರ ಹೇಳಿದ ಹೋಗೋ ಹೋಗೋ ನೀನೇ ವಾಸನೆ ಕೊಟ್ಟು ಅದರ ಮೇಲೆ ಹೇಳಿದ್ದೀಯ ಅಷ್ಟೆ ಎಂದು ಆಶ್ಚರ್ಯದಿಂದ ನುಡಿದೆ ನಾನು

12. ಕೆಳಗೆ ಕೊಟ್ಟಿರುವವುಗಳಲ್ಲಿ ಒಂದರ ಕುರಿತು ಟಿಪ್ಪಣಿ ಬರೆಯಿರಿ. (3)

ಅ) ಸಿನೆಮಾ ಚಿತ್ರಕಥೆ

ಆ) ಛಾಯಾಗ್ರಹಣ

13. ಕೆಳಗಿನ ತ್ರಿಪದಿಯ ಆಶಯವನ್ನು ಬರೆಯಿರಿ. (4)

ತನ್ನ ನೋಡಲಿ ಎಂದು ಕನ್ನಡಿಯು ಕರೆವುದೆ?
ತನ್ನಲ್ಲಿ ಜ್ಞಾನ ವುದಿಸಿದ–ಮಹಾತ್ಮನು
ಕನ್ನಡಿಯು ಜಗಕೆ ಸರ್ವಜ್ಞ

14. ಕೆಳಗೆ ಕೊಟ್ಟಿರುವ ಗದ್ಯಭಾಗವನ್ನು ಓದಿ ಮೂರು ಅಥವಾ ನಾಲ್ಕು ವಾಕ್ಯಗಳಲ್ಲಿ ಸಂಕ್ಷೇಪಿಸಿ ಬರೆಯಿರಿ. (4)

ನಮ್ಮ ನಟರನ್ನು ಸಾಮಾನ್ಯವಾಗಿ ವಿಲಾಯಿತಿಯ ನಟರಿಗೆ ಹೋಲಿಸುವುದುಂಟು. ವೀರಣ್ಣನವರನ್ನು 'ಕರ್ನಾಟಕದ ಚಾರ್ಲಿ ಚಾಪ್ಲಿನ್'ಎಂದು ಕೆಲವರು ಕರೆದಿದ್ದಾರೆ. ಚಾರ್ಲಿ ಶ್ರೇಷ್ಠ ದರ್ಜೆಯ ಹಾಸ್ಯಗಾರ. ಕರುಣಾಮಯ ಹಾಸ್ಯೋತ್ಪಾದನೆಯಲ್ಲಿ ಅವನು ಪರಮಸಿದ್ಧ. ಆದರೆ ವೀರಣ್ಣನವರ ವಿವಿಧತೆ ಅವನಲ್ಲಿಲ್ಲ. ಮಾಣವಕ, ಕಳ್ಳ, ಬ್ರಾಹ್ಮಣ, ವೈಶ್ಯ, ವಿರೋಚನ ಪಾತ್ರಗಳು ಒಂದೊಂದೂ ಒಂದೊಂದು ಬಗೆ, ಸಂಪ್ರದಾಯಕ್ಕೆ ಸೇರಿದವು. ಚಾರ್ಲಿ ಒಬ್ಬ ಹಾದಿಹೋಕನ ಪಾತ್ರದಲ್ಲಿ ತನ್ನೆಲ್ಲ ಸಿದ್ಧಾಂತ, ಅನುಭವಗಳನ್ನು ಅಡಗಿಸಿಬಿಡುತ್ತಾನೆ. ಸಮಾಜದ ವಿವಿಧ ವರ್ಗದ ವ್ಯಕ್ತಿಗಳನ್ನು ಅವನು ಚಿತ್ರಿಸಲಾರ. ಅವನಲ್ಲಿ ವಿಸ್ತಾರವಿಲ್ಲ, ಆಳವಿದೆ. ವೀರಣ್ಣನವರಲ್ಲಿ ಆಳ, ವಿಸ್ತಾರಗಳೆರಡರ ಸಂಗಮವಿದೆ.

15. ಅಬ್ಬಕ್ಕಳಿಗೆ ತಾನು ಅಪರಾಧಿ ಎಂಬ ಭಾವನೆ ಪದೇ ಪದೇ ಮೂಡಿ ಬರಲು ಕಾರಣವೇನು? ವಿಶದಪಡಿಸಿರಿ. (4)

16. ಕೆಳಗೆ ನೀಡಿರುವ ಸಾಲುಗಳಿಗೆ ಪ್ರಸ್ತಾರ ಹಾಕಿ, ಗಣ ವಿಭಾಗ ಮಾಡಿ ಛಂದಸ್ಸನ್ನು ಹೆಸರಿಸಿರಿ (4)

ಒಡೆಯನಳಿವಂ ಕಾಣ್ಬ ಪಾಪಿಯೆನ್ನಿಂದಾರು
ಕಡೆಯ ನರಕಿಗಳು ಬಳಿಕಳಿದಲ್ಲಿಫಲವಾವು
ದೊಡಲುವಿಡಿದಾನೊಮ್ಮೆ ಮಡಿಯದಿಹುದಿಲ್ಲಿಲ್ಲ ಮಡಿಯುತ್ತ ಪತಿಯ ಮುಂದೆ

**ಹದಿನೇಳರಿಂದ ಇಪ್ಪತ್ತೆರಡರವರೆಗಿನ ಪ್ರಶ್ನೆಗಳಿಗೆ ಸಂಕ್ಷಿಪ್ತವಾಗಿ ಉತ್ತರಿಸಿರಿ.**

17. ಪುರಂದರದಾಸರು ಜಾಲಿಯ ಮರವನ್ನು ದುರ್ಜನರಿಗೆ ಸಮೀಕರಿಸಿ ಹೇಳಿರುವುದರ ಔಚಿತ್ಯದ ಕುರಿತು ಟಿಪ್ಪಣಿ ಬರೆಯಿರಿ. (4)

18. ಸಣ್ಣಕಥೆಯೊಂದು ನಿರ್ದೇಶಕನ ಜಾಣ್ಮೆಯಿಂದ ಸಿನೆಮಾವಾಗಿ ರೂಪುಗೊಂಡು ಯಶಸ್ಸನ್ನು ಪಡೆದ ಬಗೆಯನ್ನು 'ಬೂತಯ್ಯನ ಮಗ ಅಯ್ಯು' ಪಾಠಭಾಗದ ಆಧಾರದಲ್ಲಿ ವಿವರಿಸಿರಿ. (5)

19. 'ಅವರವರ ದಾರಿ' ಕವಿತೆಯ ಆಶಯವನ್ನು ವಿಶದಪಡಿಸಿರಿ. (5)

20. ಹಿಂದೆ ಇದ್ದ ಅದೆಷ್ಟೋ ಜೀವಿಗಳು ಇದೀಗ ಕಣ್ಮರೆಯಾಗಿವೆ ಇಲ್ಲವೇ ವಿನಾಶದಂಚಿನಲ್ಲಿವೆ. ಇದಕ್ಕೆ ಕಾರಣವಾದ ಅಂಶಗಳನ್ನು ವಿವರಿಸಿಕೊಂಡು 'ವಿನಾಶದಂಚಿನಲ್ಲಿರುವ ಜೀವಸಂಕುಲ' ಎಂಬ ವಿಷಯದ ಮೇಲೆ ಪ್ರಬಂಧವೊಂದನ್ನು ಬರೆಯಿರಿ. (5)

21. ಮೂಕಪ್ರಾಣಿಯೊಂದರ ಅಸಹಾಯಕತೆಯ ಕೂಗು 'ನೆರೆ' ಕಥೆಯಲ್ಲಿ ಪ್ರತಿಬಿಂಬಿತವಾದ ಬಗೆಯನ್ನು ವಿವರಿಸಿರಿ. (5)

22. ಕನ್ನಡ ನಾಡಿನ ವೈಭವದ ಕುರಿತು 'ನಾಡಸಿರಿ' ಕಾವ್ಯಭಾಗದಲ್ಲಿ ಹೇಳಿರುವ ವಿಚಾರಗಳನ್ನು ಸಂಗ್ರಹವಾಗಿ ಬರೆಯಿರಿ. (5)

**ಒಂದುವರೆ ಪುಟಕ್ಕೆ ಮೀರದಂತೆ ಬರೆಯಿರಿ.**

23. ಸುಬ್ಬಣ್ಣ ಓರ್ವ ಕಲಾವಿದನಾಗಿ ತನ್ನ ಬದುಕನ್ನು ಸಾರ್ಥಕಪಡಿಸಿಕೊಂಡ ಬಗೆಯನ್ನು ನಿರೂಪಿಸಿರಿ.

**ಅಥವಾ**

'ಸಿನಿಮಾ ಒಂದು ಜನಪ್ರಿಯ ದೃಶ್ಯ ಮಾಧ್ಯಮ' ಎಂಬ ವಿಷಯದ ಮೇಲೆ ವಿಚಾರಗೋಷ್ಠಿಯಲ್ಲಿ ಮಂಡಿಸಲು ಪ್ರಬಂಧವೊಂದನ್ನು ಸಿದ್ಧಪಡಿಸಿರಿ. (8)

24. ನೀವು ಓದಿದ ಶತಕ ಪದ್ಯಗಳಲ್ಲಿ ವ್ಯಕ್ತವಾಗುವ ಸಾಮಾಜಿಕ ನೀತಿಯ ಕುರಿತು ವಿಮರ್ಶಾತ್ಮಕ ಲೇಖನವೊಂದನ್ನು ಬರೆಯಿರಿ.

**ಅಥವಾ**

ಧರ್ಮರಾಯನೊಂದಿಗೆ ಸಂಧಿ ಮಾಡಿಕೊಳ್ಳುವಂತೆ ಧುರ್ಯೋಧನನಿಗೆ ಧೃತರಾಷ್ಟ್ರನು ಭಿನ್ನವಿಸಿಕೊಳ್ಳಲು ಕಾರಣವೇನು? ಅದಕ್ಕೆ ಅವನ ಪ್ರತಿಕ್ರಿಯೆ ಏನಾಗಿತ್ತು? ವಿವರಿಸಿರಿ. (8)

* * *

# SAMPLE QUESTION PAPER

## HSE - II

## KANNADA - LANGUAGE

**Set - II**

Time : 2.30 Hrs.
Cool off time : 15 mts.
Max. Marks : 80

**ಸೂಚನೆಗಳು :**

- 15 ನಿಮಿಷಗಳ 'ಕೂಲ್ ಆಫ್ ಟೈಮ್' ನೀಡಲಾಗಿದೆ. ಉತ್ತರ ಬರೆಯಲು ಎರಡೂವರೆ ಗಂಟೆಗಳ ಕಾಲಾವಕಾಶವಿದೆ.
- 'ಕೂಲ್ ಆಫ್ ಟೈಮ್'ನಲ್ಲಿ ವಿದ್ಯಾರ್ಥಿಗಳು ಉತ್ತರಗಳನ್ನು ಬರೆಯುವುದಾಗಲೀ ಇತರರೊಂದಿಗೆ ಚರ್ಚಿಸುವುದಾಗಲೀ ಮಾಡಬಾರದು.
- ಉತ್ತರಗಳನ್ನು ಬರೆಯುವುದಕ್ಕೆ ಮೊದಲು ಪ್ರಶ್ನೆಗಳನ್ನು ಸೂಕ್ಷ್ಮವಾಗಿ ಓದಿರಿ.
- ಎಲ್ಲಾ ಪ್ರಶ್ನೆಗಳು ಕಡ್ಡಾಯವಾಗಿವೆ. ಅವುಗಳಲ್ಲಿ ಆಯ್ಕೆಗಳಿದ್ದರೆ ಯಾವುದಾದರೂ ಒಂದನ್ನು ಉತ್ತರಿಸತಕ್ಕದ್ದು.
- ನೀವು ಒಂದು ಪ್ರಶ್ನೆಯನ್ನು ಆಯ್ಕೆ ಮಾಡಿದಾಗ ಅದರದ್ದೇ ಆದ ಬಿಡಿ ಪ್ರಶ್ನೆಗಳನ್ನು ಉತ್ತರಿಸಬೇಕು.

**ಆವರಣದಿಂದ ಸರಿಯಾದ ಉತ್ತರವನ್ನು ಆರಿಸಿ ಬರೆಯಿರಿ.**

1. 'ಉಭಯಕವಿ ಕಮಲರವಿ' ಎಂಬ ಬಿರುದಿಗೆ ಪಾತ್ರನಾದ ಕವಿ (1)
   (ನಂಜುಂಡ ಕವಿ, ರಾಘವಾಂಕ, ರನ್ನ, ಹರಿಹರ)

2. ಮಾಸ್ತಿ ವೆಂಕಟೇಶ ಅಯ್ಯಂಗಾರರ ಯಾವ ಕೃತಿಗೆ ಜ್ಞಾನಪೀಠ ಪ್ರಶಸ್ತಿ ದೊರಕಿದೆ? (1)
   (ಕಾಕನ ಕೋಟೆ, ಚೆನ್ನಬಸವನಾಯಕ, ಚಿಕವೀರರಾಜೇಂದ್ರ, ಸುಬ್ಬಣ್ಣ)

3. 'ಆಗದು ಎಂದು...' ಎಂಬ ಚಿತ್ರಗೀತೆ ಯಾವ ಚಲನಚಿತ್ರದ್ದಾಗಿದೆ? (1)
   (ಬೂತಯ್ಯನ ಮಗ ಅಯ್ಯು, ಬಂಗಾರದ ಮನುಷ್ಯ, ದೂರದ ಬೆಟ್ಟ, ವಂಶವೃಕ್ಷ)

4. 'ಅಪ್ಪನೂ ಒಲೆಯುರಿಯೂ'ಪದ್ಯವನ್ನು ಯಾವ ಕವನ ಸಂಕಲನದಿಂದ ಆಯ್ದುಕೊಳ್ಳಲಾಗಿದೆ? (1)
   (ಹೇಮೆಯೊಡಲಲ್ಲಿ, ಒಂದಿಷ್ಟು ಹಸಿಮಣ್ಣು, ಬಾಗಿಲಾಚೆಯ ಮೌನ, ಕಡಲಿಗೆಷ್ಟೊಂದು ಬಾಗಿಲು)

**ಒಂದೊಂದು ವಾಕ್ಯದಲ್ಲಿ ಉತ್ತರಿಸಿರಿ.**

5. ಅವರವರ ದಾರಿ– ಈ ಕವಿತೆಯನ್ನು ಬರೆದವರು ಯಾರು? (1)

6. ಪುರಂದರದಾಸರು ತಮ್ಮ ಕೀರ್ತನೆಯಲ್ಲಿ ಜಾಲಿಯ ಮರವನ್ನು ಯಾರಿಗೆ ಸಮೀಕರಿಸಿ ಹೇಳಿರುವರು? (1)

7. ಚಲನಚಿತ್ರವಾದ ಗೊರೂರು ರಾಮಸ್ವಾಮಿ ಅಯ್ಯಂಗಾರರ ಸಣ್ಣಕತೆ ಯಾವುದು? (1)

**ಸೂಚನೆಯಂತೆ ಉತ್ತರಿಸಿರಿ.**

8. ವರ್ಣ, ಆಶ್ಚರ್ಯ– ಈ ಪದಗಳ ತದ್ಭವ ರೂಪಗಳನ್ನು ಬರೆಯಿರಿ. (1)

9. ಬಾಣ – ಈ ಪದದ ಪರ್ಯಾಯ ಪದಗಳನ್ನು ಬರೆಯಿರಿ. (1)

10. ಪ್ರೀತಿದೋರು – ಸಂಧಿ ವಿಂಗಡಿಸಿ ಹೆಸರಿಸಿರಿ. (1)

11. ಕೈಮುಗಿ – ವಿಗ್ರಹವಾಕ್ಯ ಬರೆದು ಸಮಾಸವನ್ನು ಹೆಸರಿಸಿರಿ. (1)

12. ಕಂಕಣಬದ್ಧ – ಈ ನುಡಿಗಟ್ಟನ್ನು ಉಪಯೋಗಿಸಿಕೊಂಡು ವಾಕ್ಯವೊಂದನ್ನು ರಚಿಸಿರಿ. (1)

13. ಕೆಳಗೆ ನೀಡಿರುವ ಸಾಲುಗಳ ಸ್ವಾರಸ್ಯವನ್ನು ಬರೆಯಿರಿ. (2)

ಇವರು ಬಾಯಿ ಬಿಟ್ಟೊಡನೆ
ಅವರ ಬಾಯಿ ಕಟ್ಟಿತು
ಇವರ ಕಂಠ ಕೇಳಿದೊಡನೆ
ಅವರ ದನಿ ಇಂಗಿತು

14. 'ಮಹಾತ್ಮನು ಕನ್ನಡಿ ಜಗಕೆ' ಹೇಗೆ? (2)

15. ಕೆಳಗೆ ಕೊಟ್ಟಿರುವ ಮಿಶ್ರವಾಕ್ಯವನ್ನು ಸರಳ ವಾಕ್ಯಗಳನ್ನಾಗಿ ಬರೆಯಿರಿ. (2)

ತನ್ನ ಮಹತ್ತರ ಸಂಶೋಧನೆಗಳ ಮೂಲಕ ಆದಾಗಲೇ ಪಿಯರ್ ಹೆಸರು ಗಳಿಸಿದ್ದರೂ ಅವನ ಮೇಧಾವಿತನ ಸ್ಪಷ್ಟವಾಗಿತ್ತಾದರೂ ಸೋರ್ಬನ್ ವಿಶ್ವವಿದ್ಯಾನಿಲಯದಲ್ಲಿ ಒಂದು ಪ್ರೊಫೆಸರ್ ಹುದ್ದೆ ದಕ್ಕುವುದು ಸುಲಭದ ಮಾತಾಗಿರಲ್ಲಿಲ್ಲ.

16. ಕೆಳಗೆ ನೀಡಿರುವ ಜೀವನ ಚರಿತ್ರೆಯ ಭಾಗವನ್ನು ಆತ್ಮಕಥೆಯಾಗಿ ಪರಿವರ್ತಿಸಿ ಬರೆಯಿರಿ. (3)

ಒಂದು ದಿನ ವೀರಣ್ಣನವರು ಕಛೇರಿಯಲ್ಲಿ ಮಾತನಾಡುತ್ತ ಕುಳಿತ್ತಿದ್ದಂತೆ ನಾಟಕ ಕಂಪೆನಿಯ ಗಂಧರ್ವರು ಬಂದರು. ವೀರಣ್ಣನವರು ಅತ್ಯಂತ ಗೌರವಾದರಗಳಿಂದ ಅವರನ್ನು ಬರಮಾಡಿಕೊಂಡರು. ಅವರ ಕರುಣ ಕಥೆಯನ್ನು ಕೇಳಿದರು. 'ದಯವಿಟ್ಟು ಸಾಮಾನು ಕೊಡಿಸಿದರೆ ಮುಂದಿನ ಕ್ಯಾಂಪಿನಲ್ಲಿ ನಾಟಕ ಮಾಡಿ ಹಣ ಕಳುಹಿಸುತ್ತೇನೆ' ಎಂದರು ಗಂಧರ್ವ. ಅವರ ಕಥೆ ಕೇಳಿ ವೀರಣ್ಣನವರ ಕಣ್ಣುಗಳು ತೇವಗೊಂಡಿದ್ದವು. ಕೂಡಲೇ ಗಂಧರ್ವರ ಕೈ ಹಿಡಿದು 'ನೀವು ಏನೂ ಕೊಡಬೇಡಿ. ಸಾಮಾನುಗಳನ್ನು ಆವಶ್ಯಕ ತೆಗೆದುಕೊಂಡು ಹೋಗಿ, ನಾಟಕ ಕಲೆಗೆ ನೀವು ಮಾಡಿರುವ ಸೇವೆಗೆ ಇಷ್ಟಾದರೂ ಗೌರವ ತೋರಿಸಬೇಡವೇ' ಎಂದು ಹೇಳಿದರು.

17. ಭಾವಾರ್ಥ ಬರೆಯಿರಿ. (3)

ಕೈ ಕೆಸರಾದರೆ ಬಾಯ್ ಮೊಸರೆಂಬ
ಹಿರಿಯರ ಅನುಭವ ಸತ್ಯ। ಇದ ನೆನಪಿಡಬೇಕು ನಿತ್ಯ
ದುಡಿಮೆಯ ನಂಬಿ ಬದುಕು। ಅದರೆಲೆ ದೇವರ ಹುಡುಕು
ಬಾಳಲಿ ಬರುವುದು ಬೆಳಕು
ನಮ್ಮ ಬಾಳಲಿ ಬರುವುದು ಬೆಳಕು

18. ಆಂಗ್ಲ ಭಾಷೆಯಲ್ಲಿನ ಗದ್ಯಭಾಗವನ್ನು ಕನ್ನಡಕ್ಕೆ ಭಾಷಾಂತರಿಸಿರಿ. (4)

Hot summer days remind me of my childhood in a little village. There was a large banyan tree right in the middle of the village, and I would spend many hours playing under it during my holidays. The tree was like a massive umbrella with its branches providing much needed shade and succour.

(Banyan Tree - ಆಲದ ಮರ, Succour - ಆಶ್ರಯ)

19. ಕೆಳಗೆ ಕೊಟ್ಟಿರುವ ಪದ್ಯದ ಸಾಲಿಗೆ ಪ್ರಸ್ತಾರ ಹಾಕಿ, ಗಣ ವಿಭಜಿಸಿ, ಛಂದಸ್ಸನ್ನು ಬರೆಯಿರಿ.

ಅಣು ಮಾತ್ರಂ ಕೊಸರಿಲ್ಲದಾಳ್ದನೆಡೆಯೊಳ್ ಲಂಚಕ್ಕೊಡಂಬಟ್ಟು ಮಾ

**ಸಂಕ್ಷಿಪ್ತವಾಗಿ ಬರೆಯಿರಿ.**

20. ಕೆಳಗೆ ಕೊಟ್ಟಿರುವ ಮಾತುಗಳ ಸಂದರ್ಭವನ್ನು ತಿಳಿಸಿ ಸ್ವಾರಸ್ಯವನ್ನು ಬರೆಯಿರಿ. 2X2=4

ಅ) ಆಳ್ ಮುಂದೆ ನಡೆದುದಲ್ಲದೆ ಅರಸು ನಡೆವನೆ

ಆ) ಗುರುವಚನಮಲಂಘನೀಯಮ್

21. ರೇಡಿಯಂ ತಯಾರಿಕೆಯ ವೇಳೆ ಮೇರಿ ಕ್ಯೂರಿಗೆ ಎದುರಾದ ತೊಡಕುಗಳೇನು? ಅವುಗಳನ್ನು ನಿಭಾಯಿಸಿದ ಬಗೆ ಹೇಗೆ? ವಿವರಿಸಿರಿ. (4)

22. 'ನೆರೆ' ಕಥೆಯಲ್ಲಿ ಮಾನವನ ಕೃತಘ್ನ ಸ್ವಭಾವವನ್ನು ವಿಡಂಬಿಸಲಾಗಿದೆಯೇ? ನಿಮ್ಮ ಅಭಿಪ್ರಾಯಗಳನ್ನು ಸಮರ್ಥಿಸಿ ಬರೆಯಿರಿ. (4)

23. ನೀವು ಓದಿದ ಪಾಠಭಾಗದಲ್ಲಿ ಸುಬ್ಬಣ್ಣನ ದ್ವಂದ್ವ ಸ್ವಭಾವ ಪ್ರತಿಫಲಿಸಿದ ಬಗೆಯನ್ನು ತಿಳಿಸಿರಿ. (5)

24. ಆಸ್ವಾದನ ಟಿಪ್ಪಣಿ ಬರೆಯಿರಿ. (5)

ದಿನದ ಮೂಡಣ ರವಿಯ ಕಿತ್ತೆಸೆದು ನಮ್ಮ ಹೊಸ
ರವಿಯ ಪಡುವಣದಿ ಮೂಡಿಸಲು ಬೇಕು
ಹಳೆಯ ಪ್ರಕೃತಿಯ ತುರುಬ ಜಗ್ಗಿ ಆಚೆಗೆ ನೂಕಿ
ನಮ್ಮ ಹೊಸ ಋತು ನಿಮಯ ತಿರುಗಬೇಕು
ಹರಿವ ಗ್ರಹಗಳನೆಲ್ಲ ತರುಬಿ ನವ ಜಗವನ್ನು
ನೆರಳಾಗಿ ಸುತ್ತುವೊಲು ಮಾಡಬೇಕು
ಮುದುಕ ದಿಕ್ಕುಗಳ ಸೊಣಕನು ಮುರಿದು ಹೊಸ ದಿಕ್ಕು
ಗಳ ಮೇಲೆ ಹೊಸ ಬಾನ ಹೇರಬೇಕು

(ತುರುಬು–ಜಡೆ, ತರುಬು– ನಿಲ್ಲಿಸು, ಸೊಣಕ–ಸೊಂಟ)

25. ಪ್ರತಿಯೊಬ್ಬರು ತಮ್ಮ ತಮ್ಮ ಸುತ್ತುಮುತ್ತಲಿನ ಪರಿಸರವನ್ನು ಸ್ವಚ್ಛವಾಗಿರಿಸುವುದು ಅತೀ ಅಗತ್ಯ. ಪರಿಸರ ಸ್ವಚ್ಛತೆಯ ಮಹತ್ವನ್ನು ತಿಳಿಯಪಡಿಸುವ ಲೇಖನವೊಂದನ್ನು ಬರೆಯಿರಿ. (5)

26. ಧರ್ಮರಾಯನೊಂದಿಗೆ ಸಂಧಿ ಮಾಡಿಕೊಳ್ಳುವಂತೆ ಭಿನ್ನವಿಸಿಕೊಂಡ ಧೃತರಾಷ್ಟ್ರನಿಗೆ ಧುರ್ಯೋಧನನು ನೀಡಿದ ಪ್ರತಿಕ್ರಿಯೆ ಏನು? ವಿವರಿಸಿರಿ. (5)

**ಒಂದೂವರೆ ಪುಟಕ್ಕೆ ಮೀರದಂತೆ ಬರೆಯಿರಿ.**

27. 'ತಾಯಿ' ಕಥೆಯಲ್ಲಿ ಕಥೆಗಾರ ಬಹುಸಂಗ್ರಹವಾಗಿ, ಸೂಚ್ಯವಾಗಿ ಮಾತೃ ಹೃದಯದ ಸಮರ್ಪಕ ಚಿತ್ರವನ್ನು ಬಿತ್ತರಿಸಿದ್ದಾರೆ – ಈ ಹೇಳಿಕೆಯನ್ನು ಆಧರಿಸಿ ನಿಮ್ಮ ಅಭಿಪ್ರಾಯಗಳನ್ನು ಒಳಗೊಂಡ ವಿಮರ್ಶಾತ್ಮಕ ಲೇಖನವೊಂದನ್ನು ಬರೆಯಿರಿ. (8)

**ಅಥವಾ**

ಒಂದು ಚಲನಚಿತ್ರದ ಯಶಸ್ಸಿನಲ್ಲಿ ಚಿತ್ರಕಥೆ, ಸಂಭಾಷಣೆ ಮತ್ತು ಹಾಡುಗಳ ಪ್ರಾಧಾನ್ಯವನ್ನು ಸೋದಾಹರಣವಾಗಿ ವಿಶದಪಡಿಸಿರಿ.

28. ನಾಡಸಿರಿ ಕಾವ್ಯಭಾಗದಲ್ಲಿ ವರ್ಣಿತವಾದ ಕನ್ನಡ ನಾಡಿನ ಪ್ರಾಕೃತಿಕ ಸೌಂದರ್ಯವನ್ನು ನಿಮ್ಮ ಮಾತುಗಳಲ್ಲಿ ಬಣ್ಣಿಸಿರಿ. (8)

**ಅಥವಾ**

'ತರುಣ ಸೂರ್ಯಂ ಕತ್ತಲೆಯನೆ ಹೊಕ್ಕಂತಾಯ್ತು' ಕಾವ್ಯಭಾಗದಲ್ಲಿ ಬರುವ ಪ್ರತಿಯೊಂದು ಪಾತ್ರವೂ ತಮ್ಮ ತಮ್ಮ ತ್ಯಾಗ ಮನೋಭಾವಗಳನ್ನು ಪ್ರದರ್ಶಿಸುತ್ತವೆ – ಈ ಮಾತನ್ನು ಸಮರ್ಥಿಸಿಕೊಂಡು ವಿವರವಾದ ಪ್ರಬಂಧವೊಂದನ್ನು ಬರೆಯಿರಿ.

* * *